Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 144
ಸೋಮವಾರ,25 ಮೇ 2026 | ಪುಟಗಳು: 16 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

19ನೇ ರೋಜ್‌ಗಾರ್ ಮೇಳದಲ್ಲಿ 51 ಸಾವಿರ ನೇಮಕಾತಿ ಪತ್ರ ವಿತರಿಸಿದ ಪ್ರಧಾನಿ ಮೋದಿ

ಪಶ್ಚಿಮ ಬಂಗಾಳದ ಫಾಲ್ತಾ ವಿಧಾನಸಭೆ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ದೇಬಾಂಶು ಪಾಂಡಾಗೆ ದಾಖಲೆಯ 1.9 ಲಕ್ಷ ಮತಗಳ ಅಂತರದ ಗೆಲುವು

ವೇಗಿ ಜಸ್‌ಪ್ರೀತ್ ಅವರನ್ನು 'ಫುಟ್ಬಾಲ್ ಆಟಗಾರ' ಎಂದಿದ್ದಕ್ಕೆ ಕ್ಷಮೆ ಕೋರಿದ ರಾಮ್‌ಚರಣ್

ವಿಕ ಹೊಂಗಿರಣ

ಪ್ರಯತ್ನ ಯಾವಾಗಲೂ ರಹಸ್ಯವಾಗಿರಲಿ, ಬೆಳೆದ ಫಲ ಮಾತ್ರ ಜನರಿಗೆ ಕಾಣಿಸಲಿ.
- ದ.ರಾ. ಬೇಂದ್ರೆ

SBI
The banker to every Indian
ಗೃಹ ಸಾಲ
• ಯಾವುದೇ ಮರೆಮಾಚಲಾದ ಶುಲ್ಕಗಳಿಲ್ಲ
• ಯಾವುದೇ ಸಂಸ್ಕರಣಾ ಶುಲ್ಕಗಳಿಲ್ಲ
• ಸ್ಪರ್ಧಾತ್ಮಕ ಬಡ್ಡಿದರಗಳು
ಭೇಟಿ ನೀಡಿ: homeloans.sbi
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 | 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹105/- ಕೋಲಾರ 103/- ತುಮಕೂರು 103/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹145/-
ಕೋಲಾರ 143/- ತುಮಕೂರು 143/-
ವಿಥ್ ಸ್ಕಿನ್ ₹204/- ಕೋಲಾರ 202/- ತುಮಕೂರು 202/-
ವಿಥೌಟ್ ಸ್ಕಿನ್ ₹233/- ಕೋಲಾರ 230/- ತುಮಕೂರು 230/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಪಂದ್ಯದ ವೇಳೆ ಹೃದಯಾಘಾತದಿಂದ ಕ್ರಿಕೆಟಿಗ ಅಕ್ಷಯ್ ನಿಧನ »08

ಭಟ್ಕಳದಲ್ಲಿ ಉದ್ವಿಗ್ನ ವಾತಾವರಣ »05

ಶೀಘ್ರ ಅಮೆರಿಕ–ಇರಾನ್ ಒಪ್ಪಂದ | ಸದ್ಯದಲ್ಲೇ ಶುಭ ಸುದ್ದಿ ಎಂದ ರೂಬಿಯೊ

ವಿಶ್ವದ ಪ್ರಮುಖ ಜಲಮಾರ್ಗದಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ

ಹರ್ಮುಜ್ ಬಿಕ್ಕಟ್ಟು ಅಂತ್ಯ?

ವಾಷಿಂಗ್ಟನ್/ಟೆಹರಾನ್: ಮಧ್ಯಪ್ರಾಚ್ಯ ಸಂಘರ್ಷ ಕೊನೆಗಾಣಿಸಲು ಅಮೆರಿಕ–ಇರಾನ್ ಮಧ್ಯೆ ನಡೆಯುತ್ತಿರುವ ರಾಜತಾಂತ್ರಿಕ ಮಾತುಕತೆಗಳು ಪ್ರಗತಿ ಸಾಧಿಸಿದ್ದು, ಶೀಘ್ರದಲ್ಲೇ ಶಾಂತಿ ಒಪ್ಪಂದ ಘೋಷಣೆಯಾಗುವ ಸಾಧ್ಯತೆಗಳಿವೆ. ಒಪ್ಪಂದ ಅಂತಿಮಗೊಂಡಲ್ಲಿ ಕಳೆದ ಮೂರು ತಿಂಗಳಿಂದ ಜಾಗತಿಕ ಇಂಧನ ಬಿಕ್ಕಟ್ಟಿಗೆ ದಾರಿಯಾಗಿದ್ದ ಹರ್ಮುಜ್ ಜಲಮಾರ್ಗ ಸಂಪೂರ್ಣ ಮುಕ್ತಗೊಳ್ಳುವ ಲಕ್ಷಣಗಳು ಗೋಚರಿಸಿವೆ.

ಫೆ.28ರಂದು ಆರಂಭವಾದ ಯುದ್ಧದ ಬಳಿಕ ಜಲಸಂಧಿ ನಿರ್ಬಂಧಿಸಿದ ಇರಾನ್ ಕ್ರಮದಿಂದ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಅಲ್ಲೋಲ–ಕಲ್ಲೋಲ ಉಂಟಾಗಿದೆ. ಕಚ್ಚಾ ತೈಲ ಬೆಲೆ 70 ಡಾಲರ್‌ಗಳಿಂದ 110 ಡಾಲರ್‌ಗೆ ಏರಿಕೆಯಾಗಿದೆ. ಭಾರತ ಸೇರಿದಂತೆ ವಿಶ್ವದ ಬಹುತೇಕ ದೇಶಗಳಲ್ಲಿ ಇಂಧನ ಬೆಲೆ ಏರಿಕೆಗೆ ದಾರಿ ಮಾಡಿಕೊಟ್ಟಿತು.

''ಸುದೀರ್ಘ ಮಾತುಕತೆ ಬಳಿಕ ಅಮೆರಿಕ–ಇರಾನ್ ನಡುವೆ ಶಾಂತಿ ಒಪ್ಪಂದ ಏರ್ಪಡುತ್ತಿದೆ,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪೋಸ್ಟ್ ಬೆನ್ನಿಗೆ ಭಾರತ ಪ್ರವಾಸದಲ್ಲಿರುವ ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರೂಬಿಯೊ, ''ಪಶ್ಚಿಮ ಏಷ್ಯಾ ಬಿಕ್ಕಟ್ಟು ಅಂತ್ಯಗೊಳಿಸುವ ಕಾಲ ಸನ್ನಿಹಿತವಾಗಿದೆ. ಶೀಘ್ರವೇ ಸಿಹಿ ಸುದ್ದಿ ಹೊರ ಬೀಳಲಿದೆ,'' ಎಂದು ಹೇಳಿದ್ದು, ಒಪ್ಪಂದ ಅಂತಿಮಗೊಳ್ಳುವ ಸುಳಿವು ನೀಡಿದ್ದಾರೆ.

ಹರ್ಮುಜ್ ಜಲಸಂಧಿಯನ್ನು ಸಂಪೂರ್ಣ ಮುಕ್ತಗೊಳಿಸುವ ವಿಷಯ ಸೇರಿದಂತೆ ಸಂಭವನೀಯ ಶಾಂತಿ ಒಪ್ಪಂದದ ವಿಸ್ತೃತ ಅಂಶಗಳ ಬಗ್ಗೆ ಅಂತಿಮ ಹಂತದ ಚರ್ಚೆ ನಡೆಸಲಾಗುತ್ತಿದೆ. ಉಭಯ ದೇಶಗಳ ನಡುವೆ ಸಂಧಾನ ಮಾತುಕತೆಗೆ ಅಡ್ಡಿಯಾಗಿರುವ ಇರಾನ್ ಪರಮಾಣು ಕಾರ್ಯಕ್ರಮ ಕುರಿತಂತೆಯೂ ಸಮಾಲೋಚಿಸಲಾಗುತ್ತಿದೆ. 60 ದಿನಗಳ ಕದನ ವಿರಾಮ ಒಪ್ಪಂದೊಂದಿಗೆ ಯುದ್ಧ ಕೊನೆಗಾಣಿಸುವ ಕುರಿತು ಅಂತಿಮ ಮಾತುಕತೆ ನಡೆಯುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಮಿಲಿಟರಿ ಆಯ್ಕೆಯೂ ಮುಕ್ತ

ಇರಾನ್–ಅಮೆರಿಕ ಸಂಘರ್ಷ ಕೊನೆಗಾಣಿಸಲು ಟ್ರಂಪ್ ಆಡಳಿತದ ಮೊದಲ ಆದ್ಯತೆಯು ರಾಜತಾಂತ್ರಿಕ ಮಾತುಕತೆಯಾಗಿದೆ. ಆದರೆ ಮಾತುಕತೆ ವಿಫಲವಾದಲ್ಲಿ ಮಿಲಿಟರಿ ಆಯ್ಕೆಯೂ ಮುಕ್ತವಾಗಿರಲಿದೆ ಎಂದು ಮಾರ್ಕೊ ರೂಬಿಯೊ ಆಂಗ್ಲ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಇರಾನ್ ಎಂದಿಗೂ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಬಾರದು ಎಂಬುದನ್ನು ಅಮೆರಿಕ ಬಯಸುತ್ತದೆ ಎಂದಿದ್ದಾರೆ.

ಅಮೆರಿಕ–ಭಾರತ ಬಾಂಧವ್ಯವು ವಾಷಿಂಗ್ಟನ್‌ನ ಅತ್ಯಂತ ಮಹತ್ವದ ಆಯಕಟ್ಟಿನ ಪಾಲುದಾರಿಕೆಗಳಲ್ಲಿ ಒಂದಾಗಿದೆ. ಭಾರತ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಜತೆಗೆ ಮಧ್ಯಪ್ರಾಚ್ಯ ಬಿಕ್ಕಟ್ಟು ಸೇರಿ ಹಲವು ವಿಚಾರಗಳನ್ನು ಚರ್ಚಿಸಿದ್ದೇನೆ. ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದಕ್ಕೆ ಶೀಘ್ರವೇ ಸಹಿ ಬೀಳಲಿದೆ.
- **ಮಾರ್ಕೊ ರೂಬಿಯೊ** ಅಮೆರಿಕ ವಿದೇಶಾಂಗ ಸಚಿವ

ಒಪ್ಪಂದದ ಕರಡಿನಲ್ಲೇನಿದೆ?

ಅಮೆರಿಕ–ಇರಾನ್ ನಡುವಿನ ಶಾಂತಿ ಸಂಧಾನದ ಕರಡಿನಲ್ಲಿ ಒಪ್ಪಂದ ಬಳಿಕ ಹರ್ಮುಜ್ ಜಲಮಾರ್ಗವನ್ನು ಯುದ್ಧದ ಮೊದಲಿನ ಸ್ಥಿತಿಗೆ ತರುವುದು, ಜಲಸಂಧಿ ಸುತ್ತ ವಿಧಿಸಲಾದ ದಿಗ್ಬಂಧನ ತೆರವುಗೊಳಿಸುವುದು, ಮುಂದಿನ ಒಂದು ತಿಂಗಳಲ್ಲಿ (30 ದಿನ) ಜಲಮಾರ್ಗದಲ್ಲಿನ ಸಂಚಾರವನ್ನು ಸಹಜ ಸ್ಥಿತಿಗೆ ತರುವುದು ಪ್ರಮುಖ ಅಂಶವಾಗಿದೆ. ಇರಾನ್‌ನ ನಿರ್ಬಂಧಿತ ವಿದೇಶಿ ಆಸ್ತಿಗಳನ್ನು ಭಾಗಶಃ ಬಿಡುಗಡೆ ಮಾಡುವುದು, ಇರಾನ್ ಮೇಲಿನ ಅಮೆರಿಕ ದಿಗ್ಬಂಧನ ತೆರವು, ಇರಾನ್ ತೈಲ ರಫ್ತಿಗೆ ಅವಕಾಶ, ಪ್ರಾದೇಶಿಕ ಭದ್ರತೆ (ಲೆಬನಾನ್ ಮೇಲಿನ ದಾಳಿ ಸ್ಥಗಿತ) ಸ್ಥಿರತೆ ಹಾಗೂ ಶಾಂತಿ ಕಾಪಾಡುವ ಅಂಶಗಳನ್ನೂ ಕರಡು ಒಪ್ಪಂದ ಒಳಗೊಂಡಿದೆ ಎನ್ನಲಾಗಿದೆ.

ಒಂದೇ ಮನೆತನದ 10 ಮಂದಿ ಜಲಸಮಾಧಿ

ಭಟ್ಕಳದಲ್ಲಿ ಕಪ್ಪೆಚಿಪ್ಪು ಆರಿಸಲು ಹೋದ ಮಹಿಳೆಯರ ಸಾವು

■ **ವಿಕ ಸುದ್ದಿಲೋಕ** ಭಟ್ಕಳ/ಕಾರವಾರ

ಅದು ಎಂದಿನಂತೆ ಮತ್ತೊಂದು ಸಾಮಾನ್ಯ ಭಾನುವಾರವಾಗಿತ್ತು. ಮನೆಯವರೆಲ್ಲರೂ ಒಟ್ಟಾಗಿ ನಗುತ್ತಾ, ಮಾತನಾಡುತ್ತಾ ಕಡಲತೀರಕ್ಕೆ ಹೊರಟಿದ್ದರು. ಆದರೆ, ವಿಧಿಯ ಆಟ ಬೇರೆಯೇ ಇತ್ತು. ಕರಾವಳಿಯ ಬಡ ಮನೆತನವೊಂದರ ಪಾಲಿಗೆ ಅದು ಕೊನೆಯ ದಿನವಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ.

ಒಬ್ಬರನ್ನೊಬ್ಬರು ರಕ್ಷಿಸಲು ಹೋಗಿ ಒಟ್ಟಿಗೆ ಮುಳುಗಿಹೋದರೆ ?

ಭಟ್ಕಳ ತಾಲೂಕಿನ ವೆಂಕಟಾಪುರ ನದಿಯ ತಟ್ಟೆಹಕ್ಕಲು ಅಳಿವೆ ಪ್ರದೇಶದಲ್ಲಿ ಕಪ್ಪೆಚಿಪ್ಪು ಸಂಗ್ರಹಿಸಲು ಹೋಗಿದ್ದ ಸೋದರ ಸಂಬಂಧಿಯ ಎಂಟು ಮಹಿಳೆಯರು ಸೇರಿ ಹತ್ತು ಮಂದಿ ನೀರಿನ ಭೀಕರ ಸೆಳತಕ್ಕೆ ಸಿಲುಕಿ ದಾರುಣವಾಗಿ ಅಂತ್ಯ ಕಂಡಿದ್ದಾರೆ. ಒಬ್ಬರು ಇನ್ನೂ ನಾಪತ್ತೆಯಾಗಿದ್ದು, ಇಡೀ ಪಡಶಿರಾಲಿ ಗ್ರಾಮವೇ ಕಣ್ಣೀರಲ್ಲಿ ಮುಳುಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ.ಗಳ ಪರಿಹಾರ ಘೋಷಿಸಿದ್ದಾರೆ. ಆದರೆ, ಹಣದಿಂದ ತುಂಬಲಾಗದ ಶೂನ್ಯವೊಂದು ಆ ಮನೆಯಲ್ಲಿ ಆವರಿಸಿದೆ. »06

ಭಟ್ಕಳದಲ್ಲಿ ಸರಕಾರಿ ಆಸ್ಪತ್ರೆ ಶವಾಗಾರದ ಎದುರು ಜಮಾಯಿಸಿದ ಸಾರ್ವಜನಿಕರು.

ಏನಾಯಿತು ಆ ಕ್ಷಣದಲ್ಲಿ?

ಕರಾವಳಿ ಭಾಗದ ಜನರಿಗೆ ಬೇಸಿಗೆಯಲ್ಲಿ ಕಪ್ಪೆಚಿಪ್ಪು (ಚಿಪ್ಪು ಮೀನು) ಆರಿಸುವುದು ಅವರ ಬದುಕಿನ ಒಂದು ಭಾಗ. ನದಿಯಲ್ಲಿ ನೀರು ಕಡಿಮೆಯಾದಾಗ ಇಳಿದು, ಉಬ್ಬರ ಬರುವ ಮುನ್ನವೇ ದಡ ಸೇರಬೇಕು. ಆದರೆ ವಿಧಿಯ ಆಟ ನದಿಯ ರೂಪದಲ್ಲಿ ಬಂದಿತ್ತು. ಮಧ್ಯಾಹ್ನದ ವೇಳೆಗೆ ನೀರಿನಲ್ಲಿ ಮುಳುಗಿ ಚಿಪ್ಪು ಆರಿಸುತ್ತಿದ್ದ ಈ ಕುಟುಂಬಕ್ಕೆ ಕಡಲ ಉಬ್ಬರದ ಸಮಯ ಅಂದಾಜಿಸುವಲ್ಲಿ ಸಣ್ಣದೊಂದು ವ್ಯತ್ಯಾಸವಾಯಿತು. ಅಷ್ಟರಲ್ಲೇ ನದಿಗೆ ಉಬ್ಬರದ ನೀರು ಒಂದೇ ಸಮನೆ ನುಗ್ಗಿ ಬಂದಿದೆ. ನೀರಿನ ವೇಗಕ್ಕೆ ಕಾಲಿನ ಕೆಳಗಿನ ಮರಳು ಜಾರಿ, ನೆಲೆ ತಪ್ಪಿದೆ. ಎಲ್ಲರೂ ಒಬ್ಬರನ್ನೊಬ್ಬರು ಹಿಡಿದುಕೊಂಡಿದ್ದರಿಂದ ಗುಂಪಾಗಿ ಕೊಚ್ಚಿ ಹೋಗಲಾರಂಭಿಸಿದರು ಎಂದು ಪ್ರಾಥಮಿಕ ವರದಿಗಳು ಹೇಳಿವೆ.

ಭಟ್ಕಳ ನದಿ ದುರಂತದಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು. ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸುವೆ. ಮೃತರ ವಾರಸುದಾರರಿಗೆ ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ ತಲಾ 50,000 ರೂ. ಪರಿಹಾರ ಘೋಷಿಸಲಾಗಿದೆ.
- **ನರೇಂದ್ರ ಮೋದಿ** ಪ್ರಧಾನಿ

ಉಕ್ರೇನ್ ಮೇಲೆ ರಷ್ಯಾ ಕ್ಷಿಪಣಿ, ಡ್ರೋನ್ ಸುರಿಮಳೆ

ಭೀಕರ ದಾಳಿಗೆ ನಾಲ್ವರು ಬಲಿ

ಕೀವ್: ಮಾಸ್ಕೊ ಮೇಲಿನ ದಾಳಿಗೆ ಪ್ರತೀಕಾರವಾಗಿ ಉಕ್ರೇನ್‌ನ ಕೀವ್ ಪ್ರಾಂತ್ಯದ ಮೇಲೆ ರಷ್ಯಾ ಭಾನುವಾರ ಭೀಕರ ವಾಯುದಾಳಿ ನಡೆಸಿದೆ.

90ಕ್ಕೂ ಹೆಚ್ಚು ಕ್ಷಿಪಣಿ, 600 ಡ್ರೋನ್‌ಗಳ ಮೂಲಕ ಕೀವ್ ಮೇಲೆ ರಷ್ಯಾ ಮೇಲೆ ದಾಳಿ ನಡೆಸಿದ್ದು, ನಾಲ್ವರು ನಾಗರಿಕರು ಮೃತಪಟ್ಟಿರುವುದು ವರದಿಯಾಗಿದೆ. ದಾಳಿಯಲ್ಲಿ ಲೂಕಿಯಾನಿವ್ಸ್ಕಾ ಪ್ರದೇಶದ ಮೆಟ್ರೊ ನಿಲ್ದಾಣ ಬಳಿ ಇರುವ ಮಾರುಕಟ್ಟೆ, ವ್ಯಾಪಾರ ಕೇಂದ್ರ ಸಂಪೂರ್ಣ ಧ್ವಂಸಗೊಂಡಿದೆ. ದಾಳಿಯಲ್ಲಿ 80ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಇತ್ತೀಚಿನ ವಾರಗಳಲ್ಲಿ ನಡೆದ ಅತ್ಯಂತ ವಿನಾಶಕಾರಿ ದಾಳಿ ಇದಾಗಿದೆ.

ದಾಳಿಯಲ್ಲಿ ಅರ್ಸೆನಿಕ್ ಹೈಪರ್‌ಸಾನಿಕ್ ಬ್ಯಾಲೆಸ್ಟಿಕ್ ಕ್ಷಿಪಣಿ ಬಳಸಿರುವುದನ್ನು ರಷ್ಯಾ ದೃಢಪಡಿಸಿದೆ. ಉಕ್ರೇನ್‌ನಲ್ಲಿರುವ ಅಲ್ಬೇನಿಯನ್ ರಾಯಭಾರಿ ನಿವಾಸದ ಕಚೇರಿಯೂ ಹಾನಿಗೆ ಒಳಗಾಗಿದೆ.

ಕ್ಷಿಪಣಿಗಳು ಮತ್ತು ಡ್ರೋನ್‌ಗಳು ನಗರವನ್ನು ಅಪ್ಪಳಿಸುತ್ತಿದ್ದಂತೆ ನಿವಾಸಿಗಳು ಸುರಕ್ಷತೆಗಾಗಿ ಮೆಟ್ರೊ ನಿಲ್ದಾಣಗಳು ಮತ್ತು ಭೂಗತ ಆಶ್ರಯ ತಾಣಗಳಿಗೆ ಧಾವಿಸಿದರು. ದಾಳಿಯ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ.

ಆಫ್ರಿಕಾ ಪ್ರಯಾಣ ಕೈಗೊಳ್ಳದಂತೆ ಕೇಂದ್ರ ಸರಕಾರ ಸಲಹೆ

ಎಬೋಲಾ ಸೋಂಕು ಭೀತಿ

ಹೊಸದಿಲ್ಲಿ: ಮಾರಣಾಂತಿಕ ಎಬೋಲಾ ಸೋಂಕು ಆಫ್ರಿಕಾ ಖಂಡದಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಆಫ್ರಿಕಾದ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ದಿ ಕಾಂಗೊ, ಉಗಾಂಡ ಮತ್ತು ದಕ್ಷಿಣ ಸುಡಾನ್ ರಾಷ್ಟ್ರಗಳಿಗೆ ಪ್ರಯಾಣ ಕೈಗೊಳ್ಳದಂತೆ ಸಾರ್ವಜನಿಕರಿಗೆ ಕೇಂದ್ರ ಸರಕಾರ ಸಲಹೆ ನೀಡಿದೆ. ಮೇ 17ರಂದು ವಿಶ್ವ ಆರೋಗ್ಯ ಸಂಸ್ಥೆಯು ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸಿದ ಬೆನ್ನಲ್ಲೇ ಸರಕಾರ ಈ ಕ್ರಮ ಕೈಗೊಂಡಿದೆ. ಭಾರತೀಯರ ಸುರಕ್ಷತೆಗಾಗಿ ಸರಕಾರವು ತಕ್ಷಣದಿಂದಲೇ ಜಾರಿಗೆ ಬರುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ.

'ಬುಂದಿಬುಗ್ಯೋ' ತಳಿಯ ಎಬೋಲಾ ವೈರಸ್‌ನ ಯಾವುದೇ ಪ್ರಕರಣ ಇದುವರೆಗೆ ಭಾರತದಲ್ಲಿ ವರದಿಯಾಗಿಲ್ಲ ಎಂದು ಆರೋಗ್ಯ ಸಚಿವಾಲಯ ಸ್ಪಷ್ಟಪಡಿಸಿದೆ. ಆಫ್ರಿಕಾದ ಬಾಧಿತ ಪ್ರದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ತೀವ್ರ ನಿಗಾ ಇಡಲಾಗಿದೆ. ವಿಮಾನ ನಿಲ್ದಾಣಗಳು ಮತ್ತು ಪ್ರವೇಶ ದ್ವಾರಗಳಲ್ಲಿ ಜ್ವರ ಅಥವಾ ಇತರ ಅನಾರೋಗ್ಯದ ಲಕ್ಷಣಗಳಿರುವವರನ್ನು ಪತ್ತೆ ಹಚ್ಚಲು ಥರ್ಮಲ್ ಸ್ಕ್ರೀನಿಂಗ್ ಮತ್ತು ಕಠಿಣ ತಪಾಸಣೆಯನ್ನು ಆರಂಭಿಸಲಾಗಿದೆ. ಆಂಧ್ರಪ್ರದೇಶದ ಅಮರಾವತಿ ಮತ್ತು ತಮಿಳುನಾಡಿನ ಚೆನ್ನೈ ಏರ್‌ಪೋರ್ಟ್‌ಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

Bennett & Coleman
THE TIMES OF INDIA

ಸಂಪಾದಕೀಯ EDITORIAL

ಕಾರ್ಮಿಕ ಸ್ನೇಹಿ ನಡೆ

ಕನಿಷ್ಠ ವೇತನದ ಬಂಪರ್ ಆಸರೆ

ರಾಜ್ಯದ 99 ಅಧಿಸೂಚಿತ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಅಸಂಘಟಿತ ಮತ್ತು ಸಂಘಟಿತ ವಲಯದ ಕಾರ್ಮಿಕರ ಕನಿಷ್ಠ ವೇತನವನ್ನು ಸರಾಸರಿ ಶೇ. 60ರಷ್ಟು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿ ರಾಜ್ಯ ಸರಕಾರ ಹೊರಡಿಸಿರುವ ಅಂತಿಮ ಅಧಿಸೂಚನೆ ಅತ್ಯಂತ ಸ್ವಾಗತಾರ್ಹ. ಬೆಲೆ ಏರಿಕೆ, ಹಣದುಬ್ಬರ ಹಾಗೂ ದೈನಂದಿನ ಜೀವನಾವಶ್ಯಕ ವಸ್ತುಗಳ ದರ ಗಗನಕ್ಕೇರಿ ತತ್ತರಿಸುತ್ತಿದ್ದ ರಾಜ್ಯದ ಸುಮಾರು ಒಂದೂವರೆ ಕೋಟಿಗೂ ಅಧಿಕ ಕಾರ್ಮಿಕರ ಪಾಲಿಗೆ ಈ ನಿರ್ಧಾರ ನಿಜಕ್ಕೂ ದೊಡ್ಡ ಆಸರೆಯಾಗಿದೆ. ಕರಡು ಅಧಿಸೂಚನೆ ಹೊರಬಂದು ಒಂದೂವರೆ ವರ್ಷ ಕಳೆದರೂ ಅಂತಿಮಗೊಳ್ಳದೆ ನನೆಗುದಿಗೆ ಬಿದ್ದಿದ್ದ ಪ್ರಕ್ರಿಯೆಗೆ ಈಗ ತಾರ್ಕಿಕ ಅಂತ್ಯ ಸಿಕ್ಕಿರುವುದು ಶ್ರಮಿಕ ವರ್ಗದಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ.

ಈ ಹಿಂದೆ 2016-17ರಲ್ಲಿ ವೇತನ ಪರಿಷ್ಕರಣೆಯಾದ ಬಳಿಕ, ನಿಯಮಾವಳಿಗಳ ಪ್ರಕಾರ 2022ರಲ್ಲೇ ಇದು ನಡೆಯಬೇಕಿತ್ತು. ಆದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಪ್ರಕ್ರಿಯೆ ವಿಳಂಬವಾಯಿತು. ಕೇವಲ ಶೇ. 10ರಷ್ಟು ವೇತನ ಹೆಚ್ಚಳ ಮಾಡಿದ್ದ ಹಿಂದಿನ ಸರಕಾರದ ಅಪೂರ್ಣ ಕ್ರಮವನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆಗಳು ನ್ಯಾಯಾಲಯದ ಮೆಟ್ಟಿಲೇರಿದ್ದವು. ಹೈಕೋರ್ಟ್ ನಿರ್ದೇಶನದ ಬೆನ್ನಲ್ಲೇ ಎಚ್ಚೆತ್ತ ಕಾರ್ಮಿಕ ಇಲಾಖೆ, ಉದ್ಯಮಿಗಳು ಹಾಗೂ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸರಣಿ ಸಭೆ ನಡೆಸಿ, ಸುಪ್ರೀಂಕೋರ್ಟ್‌ನ 'ರೆಪ್ಟಕೋಸ್ ಬ್ರೆಟ್' ಮಾನದಂಡದನ್ವಯ ವೈಜ್ಞಾನಿಕವಾಗಿ ವೇತನ ನಿಗದಿಪಡಿಸಿರುವುದು ಶ್ಲಾಘನೀಯ. ಈ ವೈಜ್ಞಾನಿಕ ಕ್ರಮದಿಂದಾಗಿಯೇ ಇಂದು ಕನಿಷ್ಠ ಮಾಸಿಕ ವೇತನವು ಕೌಶಲಕ್ಕನುಗುಣವಾಗಿ 19,300 ರೂ.ಗಳಿಂದ 31,100 ರೂ.ಗಳವರೆಗೆ ಏರಿಕೆಯಾಗಲು ಸಾಧ್ಯವಾಗಿದೆ. ಕಾಲ ಬದಲಾದಂತೆ ಉದ್ಯೋಗದ ಸ್ವರೂಪವೂ ಬದಲಾಗಿದೆ. ಇದನ್ನು ಮನಗಂಡು ಇತಿಹಾಸದಲ್ಲೇ ಮೊದಲ ಬಾರಿಗೆ ಇ-ಕಾಮರ್ಸ್, ಕೊರಿಯರ್ ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳ ಬೋಧಕೇತರ ಸಿಬ್ಬಂದಿ, ಮೊಬೈಲ್ ಟವರ್ ಹಾಗೂ ಧಾರ್ಮಿಕ ಸಂಸ್ಥೆಗಳ ನೌಕರರೂ ಸೇರಿದಂತೆ ಹೊಸದಾಗಿ 18 ಉದ್ದಿಮೆಗಳನ್ನು ಕನಿಷ್ಠ ವೇತನದ ವ್ಯಾಪ್ತಿಗೆ ತಂದಿರುವುದು ಸರಕಾರದ ಪ್ರಬುದ್ಧ ಹಾಗೂ ದೂರದರ್ಶಿತ್ವದ ನಡೆಯಾಗಿದೆ. ಇದುವರೆಗೆ ಯಾವುದೇ ಕಾಯಿದೆಗಳ ರಕ್ಷಣೆಯಿಲ್ಲದೆ ಶೋಷಣೆಗೆ ಒಳಗಾಗುತ್ತಿದ್ದ ಡಿಜಿಟಲ್ ಯುಗದ ಹೊಸ ಕಾರ್ಮಿಕರಿಗೆ ಇದರಿಂದ ಕಾನೂನಾತ್ಮಕ ಭದ್ರತೆ ಸಿಕ್ಕಂತಾಗಿದೆ. ನಾಲ್ಕು ವಲಯಗಳ ಗೊಂದಲವನ್ನು ಮೂರು ವಲಯಗಳಿಗೆ ಸೀಮಿತಗೊಳಿಸಿ, ಕಳೆದ ಎರಡು ವರ್ಷಗಳ ತುಟ್ಟಿ ಭತ್ಯೆಯನ್ನು ಮೂಲ ವೇತನಕ್ಕೆ ಸೇರಿಸಿರುವುದು ಲೆಕ್ಕಾಚಾರವನ್ನು ಸರಳಗೊಳಿಸಿದೆ.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ವಿಶ್ಲೇಷಿಸಿರುವಂತೆ, ಈ ವೇತನ ಹೆಚ್ಚಳವು ಕೇವಲ ಕಾರ್ಮಿಕರ ಹಿತ ಕಾಯುವುದಷ್ಟೇ ಅಲ್ಲ, ರಾಜ್ಯದ ಒಟ್ಟಾರೆ ಆರ್ಥಿಕತೆಗೂ ಭಾರಿ ಉತ್ತೇಜನ ನೀಡಲಿದೆ. ತಳಮಟ್ಟದ ದುಡಿಯುವ ವರ್ಗದ ಕೈಗೆ ಹಣ ಬಂದಾಗ ಮಾರುಕಟ್ಟೆಯಲ್ಲಿ ಖರೀದಿ ಸಾಮರ್ಥ್ಯ ಹೆಚ್ಚುತ್ತದೆ. ಇದು ಸರಕು ಮತ್ತು ಸೇವೆಗಳ ಬೇಡಿಕೆಯನ್ನು ಸೃಷ್ಟಿಸಿ, ಆರ್ಥಿಕ ಚಟುವಟಿಕೆಗಳು ಚುರುಕಾಗಲು ಹಾಗೂ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲು ಕಾರಣವಾಗುತ್ತದೆ. ಆದರೆ, ಕೇವಲ ಅಧಿಸೂಚನೆ ಹೊರಡಿಸುವುದರಿಂದಲೇ ಸರಕಾರದ ಜವಾಬ್ದಾರಿ ಮುಗಿಯುವುದಿಲ್ಲ, ಕಾಗದದ ಮೇಲಿರುವ ಈ ಕಾನೂನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬರಬೇಕಿದೆ. ವಿಶೇಷವಾಗಿ ಅಸಂಘಟಿತ ವಲಯದ ಸಣ್ಣ ಕೈಗಾರಿಕೆಗಳು ಹಾಗೂ ಖಾಸಗಿ ಸಂಸ್ಥೆಗಳು ಈ ಪರಿಷ್ಕೃತ ವೇತನ ನೀಡದಿದ್ದಲ್ಲಿ, ಕಠಿಣ ಕ್ರಮ ಜರುಗಿಸುವ ನಿಗಾ ವ್ಯವಸ್ಥೆ ಕಾರ್ಮಿಕ ಇಲಾಖೆಯಿಂದ ಆಗಬೇಕಿದೆ. ಮಾಲೀಕರು ಆರ್ಥಿಕ ಹೊರೆಯ ನೆಪವೊಡ್ಡಿ ಕಾರ್ಮಿಕರನ್ನು ಕೆಲಸದಿಂದ ತೆಗೆಯದಂತೆ ಅಥವಾ ಶೋಷಿಸದಂತೆ ನೋಡಿಕೊಳ್ಳುವುದು ಇಂದಿನ ತುರ್ತು ಅಗತ್ಯ. 'ಶ್ರಮೇವ ಜಯತೇ' ಎಂಬ ಘೋಷಣೆ ಕೇವಲ ಮಾತಾಗಿ ಉಳಿಯದೆ ಕೃತಿಯಾಗಬೇಕಾದರೆ, ಈ ಆದೇಶ ತಕ್ಷಣದಿಂದಲೇ ಜಾರಿಗೆ ಬರಬೇಕು. ಶ್ರಮಿಕರ ಬೆವರಿನ ಬೆಲೆಗೆ ನ್ಯಾಯ ಒದಗಿಸಿದ ಸರಕಾರದ ಈ ಜನಪರ ನಿರ್ಧಾರ ಮುತ್ಸದ್ದಿತನದಿಂದ ಕೂಡಿದೆ.

ಬೋಧಿ ವೃಕ್ಷ

ಪ್ರಣಯಿಗಳ ದುಃಖ ಪರಿಹಾರ

ಕುಂದದಾಮಕೃತಕೌತುಕವೇಷೋ
ಗೋಪಗೋಧನವೃತೋ ಯಮುನಾಯಾಮ್।
ನಂದಸೂನುರನಘೇ ತವ ವತ್ಸೋ
ನರ್ಮದಃ ಪ್ರಣಯಿನಾಂ ವಿಜಹಾರ ॥

ಯಶೋದೆಯೇ! ನಿನ್ನ ಮಗ ಯಾರು ಪ್ರಣಯಿಗಳೋ, ಅವರ ಎಲ್ಲ ದುಃಖವನ್ನು ಪರಿಹರಿಸುತ್ತಾನೆ. ಮಲ್ಲಿಗೆ ಹೂವಿನ ಮಾಲೆಗಳಿಂದ ಅಲಂಕರಿಸಿಕೊಂಡು ಎಲ್ಲರನ್ನು ಸಂತೋಷಪಡಿಸುತ್ತಾನೆ. ಗೋಪಾಲಕರ ಜೊತೆ ಗೋವುಗಳನ್ನು ಕಾಯುತ್ತಾ, ಯಮುನಾತೀರದಲ್ಲಿ ವಿಹರಿಸುತ್ತಾನೆ.

ಮಂದವಾಯುರುಪವಾತ್ಯನುಲೂಲಂ ಮಾನಯನ್ಮಲಯಜಸ್ಪರ್ಶೇನ।
ಬಂದಿನಸ್ತಮುಪದೇವಗಣಾ ಯೇ ವಾದ್ಯಗೀತ ಬಲಿಭಿಃ ಪರಿವವ್ರುಃ ॥

ಶ್ರೀಕೃಷ್ಣನು ವಿಹಾರ ಮಾಡುವ ಸಂದರ್ಭದಲ್ಲಿ ಮಂದಮಾರುತವು ಅವನಿಗೆ ತುಂತುರು ಹನಿಗಳಿಂದ ಸತ್ಕರಿಸುತ್ತಿತ್ತು. ಸುಗಂಧವಾದ ಪರಿಮಳವನ್ನು ಸೂಸುತ್ತಿತ್ತು. ಹಿತವಾಗಿ ಬೀಸುತ್ತಾ, ಶ್ರೀಕೃಷ್ಣನು ತನ್ನ ವಿಷಯದಲ್ಲಿ ಸಂತೋಷಪಡುವಂತೆ ಪ್ರಯತ್ನ ಪಡುತ್ತಿತ್ತು. ಗಂಧರ್ವರು ವಾದ್ಯಘೋಷ ಸಂಗೀತಗಳನ್ನು ಕಾಣಿಕೆಯಾಗಿ ಶ್ರೀಕೃಷ್ಣನಿಗೆ ಸಮರ್ಪಿಸುತ್ತಾ ಅವನನ್ನೇ ಸುತ್ತುವರಿಯುತ್ತಿದ್ದರು.

ವತ್ಸಲೋ ವ್ರಜಗವಾಂ ಯದಗಾಧೋ ವಂದ್ಯಮಾನಚರಣಃ ಪಥಿ ವೃದ್ಧೈಃ।
ಕೃತ್ಸ್ನ ಗೋಧನಮುಪೋಹ್ಯ ದಿನಾಂತೇ ಗೀತವೇಣುರನುಗೇಡ್ಯಕೀರ್ತಿಃ ॥

ಶ್ರೀಕೃಷ್ಣನಿಗೆ ಗೋಕುಲದ ಜನರ ಮೇಲೆ ಬಹಳ ವಾತ್ಸಲ್ಯ. ಗೋವುಗಳ ಮೇಲೂ ಅಷ್ಟೇ ವಾತ್ಸಲ್ಯ. ಆದ್ದರಿಂದ ಅವನ ಮಹಿಮೆ ಬಲು ಅಚಿಂತ್ಯ. ಬಾಲಕನಾದ ಶ್ರೀಕೃಷ್ಣನು ಗೋಕುಲದಲ್ಲಿ ಓಡಾಡುವಾಗ ವಯೋವೃದ್ಧರು, ಜ್ಞಾನವೃದ್ಧರೂ ಕೂಡ ಅವನ ಕಾಲು ಮುಟ್ಟಿನಮಿಸಿ ಆನಂದಬಾಷ್ಪಸುರಿಸುತ್ತಾರೆ. ಸಂಜೆಯ ಹೊತ್ತಿನಲ್ಲಿ ಗೋವುಗಳ ಜೊತೆ ಕೊಳಲನ್ನು ಊದುತ್ತಾ ಅವನು ಕಾಡಿನಿಂದ ಬರುತ್ತಿದ್ದರೆ ಗೋಪಾಲಕರು ಅವನ ಕೀರ್ತಿಯನ್ನು, ಅವನ ಚರಿತ್ರೆಯನ್ನು ಹಾಡುತ್ತಾ, ಪಾಡುತ್ತಾ ಪ್ರಫುಲ್ಲ ಮನಸ್ಸಿನಿಂದ ಆಗಮಿಸುತ್ತಾರೆ. ಈ ದೃಶ್ಯವನ್ನು ನೋಡುವುದೇ ನಮ್ಮೆಲ್ಲರಿಗೆ ಬಲು ಕಾತರ.

ಉತ್ಸವಂ ಶ್ರಮಮಪೋಹ್ಯ ದೃಶೀನಾಮುದ್ವಹನ್ ಖುರರಜಶ್ಛುರಿತಸ್ರಕ್।
ದಿತ್ಸಯೈತಿ ಸುಹೃದಾಶಿಷ ಏಷ ದೇವಕೀಜಠರಭೂರುಡುರಾಜಃ ॥

ಶ್ರೀಕೃಷ್ಣನು ಸುಗಂಧಭರಿತವಾದ ವನಮಾಲೆಯನ್ನು ಕಂಠದಲ್ಲಿ ಧರಿಸಿದ್ದರೆ, ಹಸುಗಳ ಗೊರಸುಗಳ ಧೂಳಿನಿಂದ ಅದು ಮುಚ್ಚಿಹೋಗಿರುತ್ತಿತ್ತು. ಶ್ರೀಕೃಷ್ಣನು ದೇವಕಿಯ ಗರ್ಭಾಂಬುಧಿಯಲ್ಲಿ ಚಂದ್ರನಂತೆ ಅವತರಿಸಿದವನು. ಆದ್ದರಿಂದ ಚಂದ್ರನಂತೆಯೇ ನೋಡುಗರ ಕಣ್ಣುಗಳಿಗೆ ತಾಪವನ್ನು ಕಳೆದು ಆನಂದ ನೀಡುವನು. ಬಂಧುಗಳಿಗೂ ಇಷ್ಟಾರ್ಥ ನೀಡಿ, ಸಂತೈಸುತ್ತಿದ್ದನು. ಅನಂತರ ನಮ್ಮ ಬಳಿಗೆ ಬಂದು ನಮ್ಮನ್ನು ಆನಂದಸಮುದ್ರದಲ್ಲಿ ಮುಳುಗಿಸುತ್ತಿದ್ದನು. **(ಗೋಪಿಗೀತೆ ವೇಣುಗೀತೆ**

ಶ್ರೀ ಸುಬುಧೇಂದ್ರತೀರ್ಥ ಸ್ವಾಮೀಜಿ, ಮಂತ್ರಾಲಯ

ವಿಕ ತಗೋ ಕನ್ನಡ

ಜಕೇರಿ,

• ಜಕೇರಿ • ಜಖೇರಿ

ಇದಕ್ಕೆ 'ದಾಸ್ತಾನು, ಸಂಗ್ರಹ' ಎಂಬ ಅರ್ಥವಿದ್ದರೂ ಮಾತಿನಲ್ಲಿ 'ಚೌಕಾಸಿ ಮಾಡುವುದು', 'ವ್ಯಾಪಾರ, ವ್ಯವಹಾರಗಳಲ್ಲಿ ಬೆಲೆ ಕಡಿಮೆ ಮಾಡುವಂತೆ ಒತ್ತಾಯಿಸುವುದು' ಎನ್ನುವಂತೆ ಬಳಕೆಯಲ್ಲಿದೆ. ಚೌಕಾಸಿಗೆ ಬೇರೆಬೇರೆ ಅರ್ಥಗಳಿದ್ದರೂ ಇಲ್ಲಿ 'ಹೆಚ್ಚು ಸರಕಿಗೆ ಕಡಿಮೆ ಬೆಲೆ'; 'ಪಡೆದ ಸೇವೆಗೆ ಕಡಿಮೆ ಕೂಲಿ' ನೀಡಲು ಮಾತುಕತೆ ಎಂದೇ ಅರ್ಥ. ಅನೇಕರಿಗೆ ಜಕೇರಿ ಮಾಡದಿದ್ದರೆ ಸರಕನ್ನು ಕೊಂಡ ಸಂತೋಷವೇ ಇರುವುದಿಲ್ಲ, ಗಿರಾಕಿಯ ಮುಖ ನೋಡಿ ಈತ 'ಚೌಕಾಸಿ ಮನುಷ್ಯ' ಎಂದು ಗುರುತಿಸುವ ಜಾಣ್ಮೆ ವ್ಯಾಪಾರಿಗಳಿಗಿರುತ್ತದೆ. ಬೇಂದ್ರೆಯವರು ಚಪ್ಪಲಿ ಹೊಲೆಯುವವನಿಗೆ ಛತ್ರಿ ಹಿಡಿದ ಪ್ರಸಂಗದಲ್ಲಿ 'ಜಕೀರಿ' ಅಡಕವಾಗಿದೆ. ರಿಪೇರಿಗೆ ಕೂಲಿ ಎಷ್ಟೆಂದು ಬೇಂದ್ರೆಯವರು ವಿಚಾರಿಸಿದರು. 'ಈ ಮುದುಕ ಜಕೀರಿ ಮಾಡುತ್ತಾನೆ' ಎಂದು ಆತ ಹೆಚ್ಚು ಬೆಲೆ ಹೇಳಿದ. ಆತನ ಕೈಗೆ ಹತ್ತು ರೂಪಾಯಿ ಬಂದಾಗ 'ಜಕೀರಿ' ಮಾಡಬಹುದೆಂದು ಹೆಚ್ಚು ಹಣ ಕೇಳಿದ್ದ ಅವನಿಗೆ ನಾಚಿಕೆಯಾಯಿತಂತೆ.

- ಜಿ.ವಿ. ಅರುಣ

– ಪದ ಸೂಚಿಸಿದವರು: ಇಂದಿರಾ ಮೋಟೆಬೆನ್ನೂರ ಬೆಳಗಾವಿ

ಬತ್ತಳಿಕೆ

ಯೂರಿಯಾ ನಿರ್ಬಂಧಿಸುವ ಮೂಲಕ ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳುವ ಮತ್ತು ಸಬ್ಸಿಡಿ ದುರ್ಬಳಕೆ ತಡೆಯುವ ಸರಕಾರದ ಆಶಯವೇನೋ ಸರಿ. ಆದರೆ ಪ್ರದೇಶವಾರು ಕೃಷಿ ವೈವಿಧ್ಯತೆ, ತಾಂತ್ರಿಕ ಅಡಚಣೆ ಹಾಗೂ ಬಗರ್‌ಹುಕುಂ ರೈತರ ವಾಸ್ತವಿಕ ಸಮಸ್ಯೆಗಳನ್ನು ಪರಿಗಣಿಸದೆ ಜಾರಿಯಾದ ಏಕರೂಪದ ಯೂರಿಯಾ ನಿಯಂತ್ರಣ ನೀತಿ ಮುಂಗಾರಿನ ಹೊತ್ತಲ್ಲೇ ಕೃಷಿ ವಲಯದಲ್ಲಿ ಹೊಸ ಸಂಘರ್ಷಕ್ಕೆ ನಾಂದಿ ಹಾಡಿದೆ. ಈ ತಲ್ಲಣಗಳ ಸಂಪೂರ್ಣ ವಿಶ್ಲೇಷಣೆ ಇಲ್ಲಿದೆ.

ಯೂರಿಯಾ ತಲ್ಲಣ

ಮಣ್ಣಿನ ಆರೋಗ್ಯದ ಕಾಳಜಿಯೋ, ರೈತರ ಸಂಕಷ್ಟವೋ?

ವಿಕ ಫೋಕಸ್

• ಗುರುದತ್ತ ಭಟ್

ರಾಜ್ಯದಲ್ಲಿ ಮುಂಗಾರು ಹಂಗಾಮು ಆರಂಭದ ಹೊತ್ತಲ್ಲೇ ಕೃಷಿ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿರುವುದು ರಸಗೊಬ್ಬರ ವಿತರಣೆ ಕುರಿತ ಹೊಸ ನಿಯಮಗಳು. ಯೂರಿಯಾ ಗೊಬ್ಬರದ ಅತಿಯಾದ ಬಳಕೆಗೆ ಕಡಿವಾಣ ಹಾಕಲು ರಾಜ್ಯ ಸರಕಾರ ಕೈಗೊಂಡಿರುವ ಕ್ರಮಗಳು ರೈತರಲ್ಲಿ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿವೆ. ಹಿಂದೆ ಹಲವಾರು ರೈತರು ಮುಂಗಾರು ಆರಂಭಕ್ಕೂ ಮೊದಲು ಕ್ವಿಂಟಾಲ್ ಲೆಕ್ಕದಲ್ಲಿ ಯೂರಿಯಾ ಖರೀದಿಸಿ ಸಂಗ್ರಹಿಸುತ್ತಿದ್ದರು. ಕೆಲವೆಡೆ ಅಕ್ರಮ ಸಂಗ್ರಹ ಮತ್ತು ಕಾಳ ಸಂತೆಯ ಆರೋಪಗಳೂ ಕೇಳಿಬಂದಿದ್ದವು.

ಪ್ರಸಕ್ತ ವರ್ಷ ಗೊಬ್ಬರ ಖರೀದಿಗೆ ಸರಕಾರ ಬಿಗಿ ನಿಯಮಗಳನ್ನು ಜಾರಿಗೊಳಿಸಿದೆ. ರೈತರು ಕಡ್ಡಾಯವಾಗಿ ಎಫ್‌ಐಡಿ ಸಲ್ಲಿಸಬೇಕು, ಒಂದು ಎಕರೆಗೆ ಒಂದು ಬ್ಯಾಗ್ (45 ಕೆಜಿ) ಯೂರಿಯಾ ಮಾತ್ರ ಖರೀದಿಸಲು ಅವಕಾಶ ಮತ್ತು ಗೊಬ್ಬರ ಖರೀದಿಗೆ ಡಿಜಿಟಲ್ ಲಿಂಕ್ ವ್ಯವಸ್ಥೆ ಕೈಗೊಂಡಿರುವುದು ಸರಕಾರದ ಹೊಸ ನಿಯಮ. ಈ ಕ್ರಮಗಳ ಹಿಂದೆ ಮಣ್ಣಿನ ಆರೋಗ್ಯ ಉಳಿಸುವ ಉದ್ದೇಶವಿದ್ದರೂ, ಗೊಬ್ಬರ ಕೊರತೆ, ತಾಂತ್ರಿಕ ಸಮಸ್ಯೆಗಳು ಮತ್ತು ಪ್ರದೇಶವಾರು ಕೃಷಿ ವೈವಿಧ್ಯತೆಯ ನಡುವೆ ರೈತ ಸಮುದಾಯದಲ್ಲಿ ಅಸಮಾಧಾನ ತೀವ್ರಗೊಳ್ಳುತ್ತಿದೆ.

ಯೂರಿಯಾ ಬಳಕೆಗೆ ಕಡಿವಾಣ ಏಕೆ?

ರಾಜ್ಯದಲ್ಲಿ ಹಲವು ವರ್ಷಗಳಿಂದ ಯೂರಿಯಾ ಗೊಬ್ಬರದ ಅತಿಯಾದ ಬಳಕೆ ನಡೆಯುತ್ತಿದೆ ಎಂಬುದು ಕೃಷಿ ಇಲಾಖೆಯ ಅಭಿಪ್ರಾಯ. ಕೆಲ ಜಿಲ್ಲೆಗಳಲ್ಲಿ ಶಿಫಾರಸಿಗಿಂತ ಎರಡು ಪಟ್ಟು ಹೆಚ್ಚು ಸಾರಜನಕ ಬಳಕೆಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ.

ಸಾಮಾನ್ಯವಾಗಿ ಸಮತೋಲನ ಗೊಬ್ಬರ ಬಳಕೆಯ ಅನುಪಾತ 4:2:1 (ಸಾರಜನಕ:ರಂಜಕ:ಪೊಟ್ಯಾಷ್) ಇರಬೇಕು ಎಂಬ ಕೃಷಿ ವಿಜ್ಞಾನಿಗಳ ಸಲಹೆಯನ್ನು ಅಧಿಕಾರಿಗಳು ಮುಂದಿಡುತ್ತಾರೆ. ಜತೆಗೆ, ಇದರಿಂದ ಅಡ್ಡಪರಿಣಾಮಗಳು ಇರುವುದನ್ನು ತಳ್ಳಿಹಾಕುವಂತಿಲ್ಲ. ಬಹುತೇಕ ಕಡೆ ರೈತರು ಯೂರಿಯಾ ಮೇಲೆಯೇ ಹೆಚ್ಚು ಅವಲಂಬಿತರಾಗಿದ್ದಾರೆ. ಇದರಿಂದ ಮಣ್ಣು ಆಮ್ಲೀಯ ಸ್ವಭಾವಕ್ಕೆ ತಿರುಗುತ್ತಿದ್ದು, ಫಲವತ್ತತೆ ಕುಸಿಯುತ್ತಿದೆ. ಕೀಟ ಹಾಗೂ ಶಿಲೀಂಧ್ರ ರೋಗಗಳು ಹೆಚ್ಚುತ್ತಿವೆ. ಅತಿಯಾದ ರಾಸಾಯನಿಕಗಳು ಅಂತರ್ಜಲ ಸೇರಿ ನೀರು ಮಲಿನವಾಗುತ್ತಿದೆ. ಬೇಸಿಗೆಯಲ್ಲಿ ಬೆಳೆ ಸುಡುವ ಸಮಸ್ಯೆಯೂ ವ್ಯಾಪಕವಾಗಿದೆ.

ಕೈಗಾರಿಕೆಗಳ ಪಾಲಾಗುತ್ತಿದ್ದ ಸಬ್ಸಿಡಿ ಲೂಟಿಗೆ ಬ್ರೇಕ್

ಪ್ರತಿ ಚೀಲ ಯೂರಿಯಾ ಗೊಬ್ಬರದ ಮಾರುಕಟ್ಟೆ ಬೆಲೆ 2 ಸಾವಿರ ರೂ. ಮೀರುತ್ತದೆ. ಕೇಂದ್ರ ಸರಕಾರ ಸುಮಾರು ಶೇ.90 ರಷ್ಟು ಸಬ್ಸಿಡಿ ನೀಡುವುದರಿಂದ ರೈತರಿಗೆ ಕೇವಲ 265 ರೂ.ಗೆ ದೊರೆಯುತ್ತಿದೆ. ಆದರೆ, ಈ ರಿಯಾಯಿತಿ ದರದ ಯೂರಿಯಾವನ್ನು ಪ್ಲೈವುಡ್ ಕೈಗಾರಿಕೆ, ಅಂಟು ತಯಾರಿಕೆ ಹಾಗೂ ಕಲಬೆರಕೆ ಹಾಲು ಉತ್ಪಾದನೆಗೆ ಅಕ್ರಮವಾಗಿ ಸಾಗಿಸಲಾಗುತ್ತಿತ್ತು. ರೈತರ ಹೆಸರಿನಲ್ಲಿ ನಡೆಯುವ ಈ ಕೋಟ್ಯಂತರ ರೂಪಾಯಿಗಳ ಸಬ್ಸಿಡಿ ಲೂಟಿಯನ್ನು ತಡೆಯುವುದು ಸರಕಾರದ ಡಿಜಿಟಲೀಕರಣದ ಪ್ರಮುಖ ಉದ್ದೇಶವಾಗಿದೆ.

ಏಕರೂಪ ನೀತಿಗೆ ರೈತರ ವಿರೋಧವೇಕೆ?

ಸರಕಾರದ ನೀತಿ ಇಡೀ ರಾಜ್ಯಕ್ಕೆ ಒಂದೇ ತರಹ ಜಾರಿಯಾಗುತ್ತಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ. ಹಾವೇರಿ, ಬೆಳಗಾವಿ, ಧಾರವಾಡ ಸೇರಿದಂತೆ ಹೆಚ್ಚು ಮಳೆಯಾಗುವ ಮಲೆನಾಡು ಮತ್ತು ಅರೆಮಲೆನಾಡು ಭಾಗಗಳಲ್ಲಿ ಮಣ್ಣಿನ ಪೋಷಕಾಂಶಗಳು ಮಳೆಗೆ ಕೊಚ್ಚಿಹೋಗುತ್ತವೆ. ಹೀಗಾಗಿ ಇಲ್ಲಿ ಮಧ್ಯಂತರ ಅವಧಿಯಲ್ಲಿ ಹೆಚ್ಚುವರಿ ಗೊಬ್ಬರ ಬೇಕಾಗುತ್ತದೆ.

ಮೆಕ್ಕೆಜೋಳ, ಹತ್ತಿ, ಮೆಣಸಿನಕಾಯಿ ಹಾಗೂ ಭತ್ತದ ಬೆಳೆಗಳಿಗೆ ಒಂದಕ್ಕಿಂತ ಹೆಚ್ಚು ಬಾರಿ ಯೂರಿಯಾ ಕೊಡುವ ಪದ್ಧತಿ ಇದೆ. ಗದಗ ಭಾಗದಲ್ಲಿ ಹೆಸರು ಬೆಳೆಗೆ ಬೇರೆ ರೀತಿಯ ಪೋಷಕಾಂಶ ಬೇಕು. ಇಂತಹ ಕೃಷಿ ವೈವಿಧ್ಯತೆಯನ್ನು ಪರಿಗಣಿಸದೆ, 'ಎಕರೆಗೆ ಒಂದೇ ಬ್ಯಾಗ್' ಎಂಬ ಏಕರೂಪದ ನಿಯಮ ಹೇರಿದರೆ ಇಳುವರಿ ತೀವ್ರವಾಗಿ ಕುಸಿಯಬಹುದು ಎನ್ನುತ್ತಾರೆ ರೈತರು.

ಬಗರ್‌ಹುಕುಂ ಹಾಗೂ ತಾಂತ್ರಿಕ ಸಂಕಷ್ಟಗಳು

ಹೊಸ ವ್ಯವಸ್ಥೆಯಲ್ಲಿ ಜಮೀನು ದಾಖಲೆ (ಎಫ್‌ಐಡಿ) ಕಡ್ಡಾಯವಾಗಿರುವುದರಿಂದ ಲಕ್ಷಾಂತರ ಬಗರ್ ಹುಕುಂ (ಅಧಿಕೃತ ಪಟ್ಟಾ ಇಲ್ಲದ) ಸಾಗುವಳಿದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಲೆಮಾರುಗಳಿಂದ ಕೃಷಿ ಮಾಡುತ್ತಿದ್ದರೂ ಸೂಕ್ತ ದಾಖಲೆ ಇಲ್ಲದ ಕಾರಣ ಇವರಿಗೆ ಎಫ್‌ಐಡಿ ಸಿಗುತ್ತಿಲ್ಲ, ಪರಿಣಾಮವಾಗಿ ಗೊಬ್ಬರವೂ ಸಿಗುತ್ತಿಲ್ಲ. ಇದರೊಂದಿಗೆ ಗ್ರಾಮೀಣ ಭಾಗದಲ್ಲಿ ಸರ್ವರ್ ಸಮಸ್ಯೆ ಇರುವುದರಿಂದ ಸಕಾಲಕ್ಕೆ ಗೊಬ್ಬರ ಸಿಗದೆ ರೈತರು ದಿನಗಟ್ಟಲೆ ಕಾಯಬೇಕಾಗಿದೆ.

2008ರ ಕರಾಳ ನೆನಪು

ಯೂರಿಯಾ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳು ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಆಮದಾಗುತ್ತವೆ. ಪ್ರಸ್ತುತ ಜಾಗತಿಕ ಯುದ್ಧ ಮತ್ತು ಸರಬರಾಜು ವ್ಯತ್ಯಯದಿಂದಾಗಿ ಯೂರಿಯಾ ಪೂರೈಕೆಯಲ್ಲಿ ಕೊರತೆಯಿದೆ. ಇದು ಹೀಗೆಯೇ ಮುಂದುವರಿದರೆ ಹಿಂಗಾರು ಹಂಗಾಮಿನಲ್ಲಿ ಕಾಳಸಂತೆ ತೀವ್ರವಾಗಬಹುದು. 2008ರಲ್ಲಿ ಗೊಬ್ಬರ ಕೊರತೆಯಿಂದಾಗಿ ಹಾವೇರಿಯಲ್ಲಿ ನಡೆದ ಗೋಲಿಬಾರ್ ಘಟನೆಯನ್ನು ನೆನಪಿಸಿಕೊಳ್ಳುವ ರೈತ ಮುಖಂಡರು, ಸರಕಾರವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿಭಾಯಿಸಬೇಕು ಎಂದು ಎಚ್ಚರಿಸಿದ್ದಾರೆ.

ಕೃಷಿ ಇಲಾಖೆ ಲಕ್ಷ್ಯ ವಹಿಸಲಿ

- ಇಡೀ ರಾಜ್ಯಕ್ಕೆ 'ಎಕರೆಗೆ ಒಂದು ಬ್ಯಾಗ್' ಎನ್ನುವ ಬದಲು, ಮಣ್ಣಿನ ಗುಣ ಹಾಗೂ ಬೆಳೆಯುವ ಬೆಳೆಗೆ ಅನುಗುಣವಾಗಿ ಗೊಬ್ಬರದ ಪ್ರಮಾಣ ನಿಗದಿಪಡಿಸಬೇಕು. ಉದಾಹರಣೆಗೆ, ಭತ್ತ ಅಥವಾ ಮೆಕ್ಕೆಜೋಳಕ್ಕೆ ಹತ್ತಿ ಅಥವಾ ದ್ವಿದಳ ಧಾನ್ಯಗಳಿಗಿಂತ ಹೆಚ್ಚು ಯೂರಿಯಾ ಬೇಕಾಗುತ್ತದೆ.
- ಕಂದಾಯ ಇಲಾಖೆಯ ಸಹಯೋಗದೊಂದಿಗೆ, ಸ್ಥಳೀಯ ಗ್ರಾಮ ಆಡಳಿತ ಅಧಿಕಾರಿಗಳ ದೃಢೀಕರಣ ಪತ್ರದ ಆಧಾರದ ಮೇಲೆ ಬಗರ್‌ಹುಕುಂ ರೈತರಿಗೂ ತಾತ್ಕಾಲಿಕವಾಗಿ ಗೊಬ್ಬರ ಖರೀದಿಸಲು ಅವಕಾಶ ನೀಡಬೇಕು.
- ಪ್ರಸಕ್ತ ಹಂಗಾಮಿನಲ್ಲಿ ಎಫ್‌ಐಡಿ ನಿಯಮವನ್ನು ಕಡ್ಡಾಯ ಮಾಡುವ ಬದಲು ಶೇ.50ರಷ್ಟು ವಿನಾಯಿತಿ ನೀಡಿ, ಮುಂದಿನ ವರ್ಷದೊಳಗೆ ಎಲ್ಲ ತಾಂತ್ರಿಕ ಲೋಪಗಳನ್ನು ಸರಿಪಡಿಸಿ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಬೇಕು.
- ಸಾಂಪ್ರದಾಯಿಕ ಯೂರಿಯಾ ಬ್ಯಾಗ್‌ಗಳ ಕೊರತೆಗೆ ಪರ್ಯಾಯವಾಗಿ ಇಫ್ಕೋ ಅಭಿವೃದ್ಧಿಪಡಿಸಿರುವ 'ನ್ಯಾನೋ ಯೂರಿಯಾ' ದ್ರವದ ಬಳಕೆಯನ್ನು ರೈತರಲ್ಲಿ ಪ್ರಚಾರ ಮಾಡಬೇಕು. ಇದು ಸಾಗಾಟಕ್ಕೆ ಸುಲಭ ಮತ್ತು ಮಣ್ಣಿನ ಆರೋಗ್ಯಕ್ಕೂ ಪೂರಕ.
- ರೈತ ಸಂಪರ್ಕ ಕೇಂದ್ರಗಳಲ್ಲಿ ರಾತ್ರಿಯಿಡೀ ಕಾಯುವುದನ್ನು ತಪ್ಪಿಸಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಹಳ್ಳಿ ಮಟ್ಟದಲ್ಲೇ ವಿತರಣೆ ವಿಕೇಂದ್ರೀಕರಣಗೊಳ್ಳಬೇಕು. ಬೀಜ / ಗೊಬ್ಬರ ವಿತರಣಾ ಕೇಂದ್ರಗಳ ಹೆಚ್ಚಳವಾದರೆ ಗಲಾಟೆ ನಿಲ್ಲುತ್ತದೆ.

ರೈತರೇನು ಮಾಡಬಹುದು?

- ಕೇವಲ ಯೂರಿಯಾ ಮೇಲೆ ಅವಲಂಬಿತವಾಗದೆ, ಕೃಷಿ ಅಧಿಕಾರಿಗಳ ನೆರವು ಪಡೆದು ಮಣ್ಣಿನ ಪರೀಕ್ಷೆ ಮಾಡಿಸಿ, ಭೂಮಿಗೆ ಯಾವ ಪೋಷಕಾಂಶದ ಕೊರತೆ ಇದೆಯೋ ಅದನ್ನು ಮಾತ್ರ ನೀಡಬೇಕು.
- ರಾಸಾಯನಿಕ ಗೊಬ್ಬರದ ಜೊತೆಗೆ ಹಸಿರೆಲೆ ಗೊಬ್ಬರ, ಕೊಟ್ಟಿಗೆ ಗೊಬ್ಬರ ಅಥವಾ ವರ್ಮಿಕಾಂಪೋಸ್ಟ್ ಅನ್ನು ಬಳಸುವುದರಿಂದ ಯೂರಿಯಾದ ಮೇಲಿನ ಅವಲಂಬನೆ ಮತ್ತು ವೆಚ್ಚ ಎರಡೂ ಕಡಿಮೆಯಾಗುತ್ತದೆ.

ಪ್ರಾಯೋಗಿಕ ತೊಂದರೆ ಆಲಿಸಿ

ಯೂರಿಯಾ ನಿಯಂತ್ರಣ ಕೃಷಿಯ ಭವಿಷ್ಯಕ್ಕಾಗಿ ಮತ್ತು ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳಲು ಅಗತ್ಯವಾದ ಕ್ರಮವೇ ಹೌದು. ಆದರೆ ರೈತರ ಪ್ರಾಯೋಗಿಕ ತೊಂದರೆಗಳನ್ನು ಆಲಿಸದೆ, ಏಕಾಏಕಿ ಕಟ್ಟುನಿಟ್ಟಿನ ನಿಯಮ ಜಾರಿಗೊಳಿಸಿದರೆ ಅದು ಕೃಷಿ ಬಿಕ್ಕಟ್ಟಿಗೆ ಕಾರಣವಾಗಬಹುದು. ಸರಕಾರವು ನಿಯಮಗಳ ಜಾರಿಯ ಜೊತೆಗೆ ರೈತರಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೆ ಆದ್ಯತೆ ನೀಡಬೇಕಿದೆ.

ಯಾವ ಬೆಳೆಗೆ ಎಷ್ಟು ಗೊಬ್ಬರ ಹಾಕಬೇಕು ಎಂಬುದು ರೈತನಿಗೆ ಗೊತ್ತು. ಸರಕಾರದ ಕೆಲಸ ಸಮರ್ಪಕ ಪೂರೈಕೆ ಮಾಡುವುದು. ನಿಯಮಗಳನ್ನು ಏಕಾಏಕಿ ಜಾರಿಗೆ ತರುವುದು ಸರಿಯಲ್ಲ, ಹಂತ ಹಂತವಾಗಿ ಜಾರಿ ಮಾಡಲಿ. ರೈತ ಸಂಘಟನೆಗಳು ಎಫ್‌ಐಡಿ ವ್ಯವಸ್ಥೆಯನ್ನು ಸಂಪೂರ್ಣ ವಿರೋಧಿಸುತ್ತಿಲ್ಲ, ಆದರೆ ತಕ್ಷಣ ಜಾರಿಗೊಳಿಸುವುದಕ್ಕೆ ವಿರೋಧ ವ್ಯಕ್ತಪಡಿಸುತ್ತೇವೆ.

- ಭುವನೇಶ್ವರ ಶಿಡ್ಲಾಪುರ ರೈತ ಮುಖಂಡ, ಸಂಗೂರು, ಹಾವೇರಿ

gurudatta.bhat@timesofindia.com

ಸ್ವರ್ಗದಲ್ಲಿ ನಿಶ್ಚಯವಾಗುವ ಮದುವೆಗಳು ಛತ್ರದಲ್ಲೇ ಅಂತ್ಯ ಕಾಣುವುದೇಕೆ?

ಮದುವೆ ಮುರಿದು ಬೀಳಲು ಕಾರಣಗಳೇನು?

ಬೆಟ್ಟದ ದಾರಿ

ರಾಜೇಶ ಮುಂಡಿಗೇಸರ

ಹಿಂದೊಂದು ಮಾತಿತ್ತು, 'ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗುತ್ತವೆ' ಎಂದು. ಈಗ ಅದು ಹೊಸ ರೂಪದಲ್ಲಿ ಚಾಲ್ತಿಗೆ ಬಂದಿದೆ, 'ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗುತ್ತವೆ, ಕಲ್ಯಾಣ ಮಂಟಪದಲ್ಲಿ ಮುರಿದು ಬೀಳುತ್ತವೆ'.

ಇತ್ತೀಚೆಗೆ ಮಾಧ್ಯಮಗಳಲ್ಲಿ ಅತಿಹೆಚ್ಚು ವರದಿಯಾಗುವ, ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆಗೆ ಕಾರಣವಾಗುವ ಸಂಗತಿ ಎಂದರೆ ಮದುವೆ ಮತ್ತು ವಿಚ್ಛೇದನ. ಶ್ರೀಸಾಮಾನ್ಯರಿಂದ ಹಿಡಿದು ಗಣ್ಯಾತಿಗಣ್ಯರ ಕೌಟುಂಬಿಕ ಜೀವನ ಖಾಸಗಿತನದ ಪರಿಧಿಯಿಂದ ಹೊರಬಂದಿದೆ. ಹಿಂದೆಲ್ಲ ವಧು-ವರರ ಕಡೆಯವರ ಹೊಡೆದಾಟದಿಂದ ಮದುವೆ ನಿಂತಿತು, ಬೀಗರ ನಡುವಿನ ಮನಸ್ತಾಪದಿಂದ ವಿವಾಹ ನಡೆಯಲಿಲ್ಲ ಎಂಬಂತಹ ವರದಿಗಳು ಪ್ರಕಟವಾಗುತ್ತಿದ್ದವು. ಈಗ, ಕಲ್ಯಾಣ ಮಂಟಪದಿಂದ ವಧು ಪರಾರಿ, ತಾಳಿ ಕಟ್ಟುವ ಸಮಯದಲ್ಲಿ ವರನಿಗೆ ಕೈಕೊಟ್ಟ ಕನ್ಯೆ ಇಂತಹ ಸಮಾಚಾರಗಳೇ ಕಾಣಿಸುತ್ತಿವೆ. ಗಣ್ಯರಂತೂ ಮದುವೆಯಾದರೂ ಸುದ್ದಿ, ಬೇರ್ಪಟ್ಟರೂ ಸುದ್ದಿ.

ನ್ಯಾಯಾಲಯಗಳಿಗೂ ಈಗ ಡಿವೋರ್ಸ್ ಅರ್ಜಿಗಳನ್ನು ಇತ್ಯರ್ಥಪಡಿಸುವುದೇ ದೊಡ್ಡ ತಲೆನೋವು. ತ್ವರಿತ ಇತ್ಯರ್ಥಕ್ಕೆ ಆರು ತಿಂಗಳಿನಿಂದ ಒಂದು ವರ್ಷದವರೆಗಿನ ಕಡ್ಡಾಯ ಪ್ರತ್ಯೇಕ ವಾಸದಂತಹ ನಿಯಮಗಳನ್ನು ಕೈಬಿಡಲಾಗಿದೆ. ಪರಸ್ಪರ ಸಮ್ಮತಿಯ ವಿಚ್ಛೇದನ ಅರ್ಜಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ಬಗೆಹರಿಸಲಾಗುತ್ತಿದೆ. ಆದರೂ ಎಷ್ಟೇ ವೇಗವಾಗಿ ವಿಚಾರಣೆ ನಡೆಸಿದರೂ ಹೊಸದಾಗಿ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಇತ್ತೀಚಿನ ವರದಿಗಳ ಪ್ರಕಾರ, ಅತಿಹೆಚ್ಚು ಡಿವೋರ್ಸ್ ಪ್ರಕರಣಗಳು ದಾಖಲಾಗುವ ಅಗ್ರ ಆರು ರಾಜ್ಯಗಳಲ್ಲಿ ಪ್ರಬಲ ಕೌಟುಂಬಿಕ ವ್ಯವಸ್ಥೆ ಹೊಂದಿರುವ ದಕ್ಷಿಣ ಭಾರತದ ರಾಜ್ಯಗಳೇ ಮುಂದಿವೆ ಎನ್ನುವುದು ಕಳವಳಕಾರಿ. ಅದರಲ್ಲಿಯೂ ಕರ್ನಾಟಕ ಎರಡನೇ ಸ್ಥಾನದಲ್ಲಿದೆ (11.7%). ಮಹಾರಾಷ್ಟ್ರ (18.7%) ಮೊದಲ ಸ್ಥಾನದಲ್ಲಿದ್ದರೆ; ಉತ್ತರ ಪ್ರದೇಶ (8.8%), ಪಶ್ಚಿಮ ಬಂಗಾಳ (8.1%), ತಮಿಳುನಾಡು (7.1%), ತೆಲಂಗಾಣ (6.7%) ನಂತರದ ಸ್ಥಾನಗಳಲ್ಲಿವೆ. ಭಾರತದಲ್ಲಿ ಕಳೆದ ವರ್ಷ ಸಲ್ಲಿಕೆಯಾದ ವಿಚ್ಛೇದನ ಅರ್ಜಿಗಳ ಸಂಖ್ಯೆ ಬರೋಬ್ಬರಿ 8.27 ಲಕ್ಷ. ಆ ಪೈಕಿ ಶೇ.33ರಷ್ಟು ಅರ್ಜಿಗಳು ಪರಸ್ಪರ ಸಮ್ಮತಿಯ ವಿಚ್ಛೇದನಕ್ಕೆ ಸಂಬಂಧಿಸಿದವು. ಉಳಿದ ಸುಮಾರು 5.54 ಲಕ್ಷ ಅರ್ಜಿಗಳು ವಿಚಾರಣೆ ಮೂಲಕವೇ ಇತ್ಯರ್ಥವಾಗಬೇಕು! ಕೇವಲ 165 ದಿನ ಬಾಳ್ವೆ ನಡೆಸಿದ್ದ ದಂಪತಿಯ ವಿಚ್ಛೇದನ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ 13 ವರ್ಷದ ಬಳಿಕ ವಿಲೇವಾರಿ ಮಾಡಿದೆ! ಕರ್ನಾಟಕದಲ್ಲಿ ಬೆಂಗಳೂರಿನಲ್ಲಿಯೇ ಅತಿಹೆಚ್ಚು ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಈ ಮಹಾನಗರದಲ್ಲಿ 2022ರಲ್ಲಿ 66,000 ಅರ್ಜಿಗಳು ಸಲ್ಲಿಕೆಯಾಗಿದ್ದರೆ, 2024ರಲ್ಲಿ 37,000 ಅರ್ಜಿಗಳು ಸಲ್ಲಿಕೆಯಾಗಿವೆ.

ದಶಕಗಳ ಹಿಂದೆ ಕೌಟುಂಬಿಕ ದೌರ್ಜನ್ಯ ವಿಚ್ಛೇದನಕ್ಕೆ ಪ್ರಮುಖ ಕಾರಣವಾಗಿತ್ತು. ಈಗ ವಕೀಲರನ್ನು ಮಾತನಾಡಿಸಿದರೆ ಕೇಳಿಬರುವ ಪ್ರಮುಖ ವಿಚಾರ ಎಂದರೆ ಲೈಂಗಿಕ ಅತೃಪ್ತಿ ಮತ್ತು ಸಂವಹನದ ಕೊರತೆ. ಕೌನ್ಸೆಲಿಂಗ್ ಸಂದರ್ಭದಲ್ಲಿ ಬಹುತೇಕ ಹೆಣ್ಣುಮಕ್ಕಳ ಪ್ರಮುಖ ಆರೋಪವೇ ತನ್ನನ್ನು ತೃಪ್ತಿಪಡಿಸುವ ಶಕ್ತಿ ಗಂಡನಿಗೆ ಇಲ್ಲ, ಮದುವೆ ಬಳಿಕ ಪತಿಗೆ ಲೈಂಗಿಕ ಆಸಕ್ತಿಯೇ ಇಲ್ಲ ಮತ್ತು ಪತಿ ತನಗಾಗಿ ಸಮಯ ನೀಡುತ್ತಿಲ್ಲ ಎನ್ನುವುದು. ಹೆಂಡತಿಗೆ ಕಾಮಾಸಕ್ತಿಯೇ ಇಲ್ಲ ಎನ್ನುವ ಗಂಡಂದಿರೂ ಇದ್ದಾರೆ, ಆದರೆ ಪ್ರಮಾಣ ಕಡಿಮೆ. ಇಲ್ಲೊಂದು ಸೂಕ್ಷ್ಮವೂ ಇದೆ. ಹಿಂದೂ ವಿವಾಹ ಕಾಯಿದೆ 1955ರ ಪ್ರಕಾರ, ಸಂಗಾತಿಗೆ ಲೈಂಗಿಕ ಸುಖದ ನಿರಾಕರಣೆ ಮಾನಸಿಕ ಕ್ರೌರ್ಯಕ್ಕೆ ಸಮ. ನ್ಯಾಯಾಲಯಗಳು ವಿಚ್ಛೇದನ ಮಂಜೂರು ಮಾಡಲು ಇದೂ ಪ್ರಮುಖ ಕಾರಣವಾಗಬಹುದು. ಅಲ್ಲದೆ, ಬಹುತೇಕ ಸಂದರ್ಭಗಳಲ್ಲಿ ಪತಿ ಹಾಗೂ ಆತನ ಕುಟುಂಬದವರು 'ಸಾಮಾಜಿಕ ಕಳಂಕ'ದ ಭೀತಿಯಿಂದ, 'ಅಸಾಮರ್ಥ್ಯ ಸಾಬೀತು' ಪಡಿಸಬೇಕೆಂಬ ಸವಾಲು ಹಾಕದೇ ವಿಚ್ಛೇದನಕ್ಕೆ ಸಮ್ಮತಿಸುತ್ತಾರೆ. ಹಿಂದಿನ ಕಾಲದಲ್ಲಿ ವಧು ಪರೀಕ್ಷೆಗೆ ಹೋದಾಗ ಹಿರಿಯರು ತಮ್ಮದೇ ಕೆಲವು ಮಾನದಂಡಗಳ (ಬೆರಳುಗಳ ಉದ್ದ, ಬೆರಳುಗಳ ನಡುವಿನ ಅಂತರ, ಹೆಜ್ಜೆಗಳ ನಡುವಿನ ಅಂತರ ಇತ್ಯಾದಿ) ಮೂಲಕ ಹುಡುಗಿಯ ಫಲವಂತಿಕೆಯನ್ನು ಅಳೆಯುತ್ತಿದ್ದರಂತೆ. ಅದು ಎಷ್ಟು ವೈಜ್ಞಾನಿಕ ಎನ್ನುವುದು ಬೇರೆ ಮಾತು. ''ಕೊಡು-ಕೊಳ್ಳುವ ಮಾತುಕತೆಗೆ ಮುನ್ನವೇ ಇಬ್ಬರನ್ನೂ ಪರೀಕ್ಷೆಗೆ ಒಳಪಡಿಸಿ ಹುಡುಗನ ಲೈಂಗಿಕ ಸಾಮರ್ಥ್ಯ ಮತ್ತು ಹುಡುಗಿಯ ಫಲವಂತಿಕೆ ಕುರಿತು ಖಚಿತಪಡಿಸಿಕೊಳ್ಳುವುದು ಒಳ್ಳೆಯದು,'' ಎನ್ನುವ ಅಭಿಪ್ರಾಯ ಮನಃಶ್ಶಾಸ್ತ್ರಜ್ಞರು, ವಕೀಲರಿಂದಲೇ ಬರುತ್ತಿವೆ. ಅದನ್ನು ಖಂಡಿತವಾಗಲೂ ಕಡೆಗಣಿಸುವಂತಿಲ್ಲ.

ಈಗಿನ ತಲೆಮಾರೇ ಮಹತ್ವಾಕಾಂಕ್ಷೆಯದು. ಅಲ್ಲಿ ಯುವಕ, ಯುವತಿ ಎಂಬ ಭೇದವಿಲ್ಲ, ಎಲ್ಲರಿಗೂ ವೃತ್ತಿ ಬದುಕಿನ ಔನ್ನತ್ಯವೇ ಗುರಿ. ಅದರ ಸಾಧನೆಯ ಮೆಟ್ಟಿಲು ಏರುವ ಭರದಲ್ಲಿ ತಾವೇನು ಕಳೆದುಕೊಳ್ಳುತ್ತಿದ್ದೇವೆ ಎನ್ನುವ ಅರಿವು ಬಹುತೇಕರಿಗೆ ಇಲ್ಲದಿರುವುದೇ ಸಮಸ್ಯೆಯ ಮೂಲ. ಹೆಚ್ಚಿನವರು ಎಡವುತ್ತಿರುವುದು ಕೆಲಸ ಮತ್ತು ಕುಟುಂಬದ ನಡುವೆ ಸಮತೋಲನ ಸಾಧಿಸುವಲ್ಲಿ, ಜತೆಗೆ, ತಾವೇ ದೊಡ್ಡವರೆಂಬ ಅಹಂಕಾರ ಬದಿಗಿಟ್ಟು ಮುಕ್ತವಾಗಿ ಮಾತನಾಡಿಕೊಳ್ಳುವುದರಲ್ಲಿ. ವಿವಾಹ ನಿಶ್ಚಯವಾದ ತಕ್ಷಣ ವೃತ್ತಿ ಬದುಕು, ಹಣಕಾಸು ಸ್ವಾವಲಂಬನೆ, ಕುಟುಂಬ ಯೋಜನೆ ಮೊದಲಾದ ವೈಯಕ್ತಿಕ ವಿಚಾರಗಳ ಬಗ್ಗೆ ಮನಸ್ಸುಬಿಚ್ಚಿ ಮಾತನಾಡಿಕೊಳ್ಳುವುದೇ ಇಲ್ಲ, ಒತ್ತಡದ ಬದುಕು, ಜೀವನಶೈಲಿಗಳೂ ಮದುವೆ ಮುರಿದು ಬೀಳಲು ಕೊಡುಗೆ ನೀಡುತ್ತಿವೆ. ಗಂಡ ರಾತ್ರಿ ಪಾಳಿಯಲ್ಲಿ, ಹೆಂಡತಿ ಹಗಲು ಪಾಳಿಯಲ್ಲಿ ಕೆಲಸ ನಿರ್ವಹಿಸುವ ಎಷ್ಟೋ ನಿದರ್ಶನಗಳಿವೆ. ಅನೇಕ ಪ್ರಕರಣಗಳಲ್ಲಿ ಮದುವೆಯಾದ ತಿಂಗಳಲ್ಲಿಯೇ, 'ಎರಡು ವರ್ಷ ಮಗು ಬೇಡ' ಎಂಬಲ್ಲಿಂದ ಆರಂಭವಾಗುವ ಮನಸ್ತಾಪ ವಿಚ್ಛೇದನದ ಹಂತಕ್ಕೆ ತಲುಪುತ್ತದೆ.

''ದೈಹಿಕ ಆಕರ್ಷಣೆ ಮತ್ತು ದೈಹಿಕ ಸಂಪರ್ಕಗಳ ಕಾರಣದಿಂದ ನಡೆಯುವ ವಿವಾಹಗಳ ಸಂಖ್ಯೆಯೂ ಹೆಚ್ಚುತ್ತಿದೆ. ಅಂತಹ ಮದುವೆಗಳಲ್ಲಿ ದೀರ್ಘ ಕಾಲ ಬಾಳುವಂತಹವು ಬಹಳ ಕಡಿಮೆ,'' ಎನ್ನುತ್ತಾರೆ ಬೆಂಗಳೂರಿನ ಕೌನ್ಸೆಲರ್ ಒಬ್ಬರು.

ಹಾಗಾದರೆ ಹಿಂದಿನ ಕಾಲದಲ್ಲಿ ಡಿವೋರ್ಸ್ ಪ್ರಕರಣಗಳು ಇರಲಿಲ್ಲವೆ? ಬಹಿರಂಗಗೊಳ್ಳುತ್ತಿದ್ದ ಪ್ರಕರಣಗಳು ಕಡಿಮೆ ಇದ್ದವಷ್ಟೆ. ಒಂದೇ ಮನೆಯಲ್ಲಿದ್ದರೂ, ಹೊರಗಡೆ ಗಂಡ-ಹೆಂಡತಿಯಂತೆ ತೋರಿಸಿಕೊಂಡರೂ, ಪ್ರತ್ಯೇಕವಾಗಿಯೇ ಇರುತ್ತಿದ್ದರು. ಸಾಮಾಜಿಕ ಕಳಂಕದ ಭೀತಿಯೋ, ಮನೆತನದ ಪ್ರತಿಷ್ಠೆಯೋ ಅವರನ್ನು ಕಾಡುತ್ತಿತ್ತು. ಕೋರ್ಟ್ ಕಟಕಟೆ ಹತ್ತುವ ಬದಲು ಮನೆಯಂಗಳದಲ್ಲಿಯೇ ಇತ್ಯರ್ಥವಾಗುತ್ತಿದ್ದ ಕೇಸ್‌ಗಳೇ ಅಧಿಕ. ಬಹುತೇಕ ಪ್ರಸಂಗಗಳಲ್ಲಿ ಎರಡೂ ಕಡೆಯ ಹಿರಿಯರು ದಂಪತಿಯನ್ನು ಕೂರಿಸಿ ಬುದ್ಧಿ ಹೇಳುತ್ತಿದ್ದರು, ಹೊಂದಾಣಿಕೆಯ ಸೂತ್ರಗಳನ್ನು ಹೇಳಿಕೊಡುತ್ತಿದ್ದರು. ಮದುವೆ ಎನ್ನುವುದು ಕೂಡ ಆಗ ವೈಯಕ್ತಿಕ ಸಂಗತಿಯಾಗಿರದೇ, ಸಾಮಾಜಿಕ ಘಟನೆಯಾಗಿತ್ತು. ವಿವಾಹ ಸಮಾರಂಭಗಳಲ್ಲಿ ಕನ್ಯೆಯನ್ನು ವರನಿಗೆ ಧಾರೆ ಎರೆದು ಕೊಟ್ಟ ಬಳಿಕ, ಹೆಣ್ಣು ಒಪ್ಪಿಸುವ ಶಾಸ್ತ್ರ ಎಂಬುದಿತ್ತು. ಮದುವೆಗೆ ಬಂದಿರುವ ನೆಂಟರಿಷ್ಟರ ಸಮ್ಮುಖದಲ್ಲಿ ಹುಡುಗಿಯ ಕುಟುಂಬ ಸದಸ್ಯರು ಮತ್ತು ಹತ್ತಿರದ ಬಂಧುಗಳು ವರ ಮತ್ತು ಆತನ ಕುಟುಂಬ ಸದಸ್ಯರಿಗೆ 'ನಮ್ಮ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ' ಎಂಬ ಮನವಿಯೊಂದಿಗೆ ಎಲ್ಲರ ಸಮ್ಮುಖದಲ್ಲಿ ವಧುವನ್ನು ಒಪ್ಪಿಸಿಕೊಡುತ್ತಿದ್ದರು. ಗಂಡಿನ ಮನೆಯವರು ಕೂಡ, 'ಈಕೆ ನಮ್ಮ ಮನೆಯ ಸೊಸೆಯಲ್ಲ, ಮಗಳಂತೆಯೇ ಕಾಣುತ್ತೇವೆ' ಎಂಬ ವಾಗ್ದಾನ ನೀಡಿ ಮನೆ ತುಂಬಿಸಿಕೊಳ್ಳುತ್ತಿದ್ದರು. ಅಗ್ನಿ ಸಾಕ್ಷಿಯಾಗಿ ಮಂಟಪದಲ್ಲಿ ತಾಳಿ ಕಟ್ಟಿದರೆ, ಸಭೆಯ ಮಧ್ಯೆ, ನೆರೆದವರ ಸಾಕ್ಷಿಯಾಗಿ ಹೆಣ್ಣೊಪ್ಪಿಸುವ-ಒಪ್ಪಿಸಿಕೊಳ್ಳುವ ಕಾರ್ಯಕ್ರಮ ನಡೆಯಬೇಕಿತ್ತು. ದಂಪತಿ ಮಧ್ಯೆ ಏನಾದರೂ ಮನಸ್ತಾಪ ಬಂದಲ್ಲಿ ಸರಿಪಡಿಸುವ ಬಾಧ್ಯತೆ ಈ ಎಲ್ಲರದೂ ಇರುತ್ತಿತ್ತು.

ಎರಡ್ಮೂರು ದಶಕದಿಂದ ಈಚೆಗೆ ಕುಟುಂಬಗಳ ಸ್ವರೂಪವೂ ಬದಲಾಗಿದೆ. ಒಬ್ಬನೇ ಮಗ ಅಥವಾ ಮಗಳು, ಹೆಚ್ಚೆಂದರೆ ಇಬ್ಬರು ಮಕ್ಕಳನ್ನು ಹೊಂದುವುದು ಸಾಮಾನ್ಯವಾಗಿದೆ. ಇಡೀ ಪ್ರೀತಿಯನ್ನು ಅವರಿಗೇ ಹಂಚುವುದರಿಂದ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದು, ಸಹನೆ, ಸಾಮರಸ್ಯ, ಹೊಂದಾಣಿಕೆಯಂತಹ ಮೌಲ್ಯಗಳ ಬಗ್ಗೆ ತಿಳಿಸಿಕೊಡುವುದೂ ಕಡಿಮೆಯಾಗಿದೆ. ಪರಿಣಾಮವಾಗಿ ಯಾವುದೇ ವಿಚಾರದಲ್ಲಿ ಮತ್ತೊಬ್ಬರ ಸಲಹೆ, ಕಿವಿಮಾತನ್ನು ಈಗಿನ ತಲೆಮಾರು ಒಪ್ಪಿಕೊಳ್ಳುವುದಿಲ್ಲ, ಹೀಗಾಗಿ ಹಿರಿಯರು ಬೆಸುಗೆ ಹಾಕಲು ಪ್ರಯತ್ನ ನಡೆಸುವ ಅವಕಾಶವೂ ಇರುವುದಿಲ್ಲ.

ತಮ್ಮಲ್ಲಿನ ವೈಮನಸ್ಸನ್ನು ತಾವೇ ಸರಿಪಡಿಸಿಕೊಳ್ಳುತ್ತೇವೆ ಎಂಬ ಯುವಪೀಳಿಗೆಯ ಅಭಿಪ್ರಾಯವನ್ನೂ ಗೌರವಿಸೋಣ. 'ಧರ್ಮೇಚ ಅರ್ಥೇಚ ಕಾಮೇಚ ನಾತಿ ಚರಾಮಿ' (ಧರ್ಮ, ಅರ್ಥ, ಕಾಮ ಮೂರರಲ್ಲಿಯೂ ಸರಿಸಮರಾಗಿ ಹೆಜ್ಜೆ ಹಾಕುತ್ತೇವೆ) ಎಂಬ ಸಂಕಲ್ಪದೊಂದಿಗೇ ಹೊಸ ಜೋಡಿ ಸಪ್ತಪದಿ ತುಳಿದಿರುತ್ತದೆ. ಈ ಮೂರು ವಿಷಯಗಳಲ್ಲಿ ಯಾರೂ ಮೇಲಲ್ಲ, ಯಾರೂ ಕೆಳಗಲ್ಲ ಎಂಬುದನ್ನು ನಮ್ಮ ಹಿರಿಯರು ಬಹಳ ಹಿಂದೆಯೇ ಸ್ಪಷ್ಟವಾಗಿ ಹೇಳಿದ್ದಾರೆ. ದಾಂಪತ್ಯ ಬದುಕಿನ ಹೊಸ್ತಿಲಲ್ಲಿ ನಿಂತು ಪರಸ್ಪರರು ನೀಡಿಕೊಂಡಿರುವ ವಚನವನ್ನು ಒಮ್ಮೆ ನೆನಪಿಸಿಕೊಂಡರೂ, ಎಷ್ಟೋ ಜೋಡಿ ಬೇರ್ಪಡುವುದು ತಪ್ಪಬಹುದು.

(ಲೇಖಕರು: ವಿಕ ಸಹಾಯಕ ಸಂಪಾದಕ)

rajesh.hegde@timesofindia.com

ವಾಚಕರ ವಿಜಯ

ಕಾನೂನು ಸುವ್ಯವಸ್ಥೆ ಪಾಲನೆಯಾಗಲಿ

''ಭ್ರಷ್ಟಾಚಾರದ ಪಟ್ಟಿಯಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದೆ. ಈ ಪಿಡುಗನ್ನು ತಡೆಯದಿದ್ದರೆ ಭವಿಷ್ಯದಲ್ಲಿ ಭೀಕರ ಅಪಾಯ ಕಟ್ಟಿಟ್ಟ ಬುತ್ತಿ. ಬ್ರಿಟಿಷರ ಆಡಳಿತಾವಧಿಯಲ್ಲಿನ ಸ್ಥಿತಿ ಮರುಕಳಿಸಲಿದೆ,'' ಎಂದು ರಾಜ್ಯ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪನವರು ಆತಂಕ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲ. ''ರಾಯಚೂರಿಗೆ ಭೇಟಿ ನೀಡಿದ್ದಾಗ ದುಷ್ಕರ್ಮಿಗಳ ಗುಂಪು ನನ್ನ ಮೇಲೆ ರೌಡಿಸಂ ಮಾಡಲು ಬಂದಿತ್ತು. ಇತ್ತೀಚೆಗೆ ಬೆದರಿಕೆ ಕರೆಗಳು ಬರುತ್ತಿವೆ. ಆತ್ಮರಕ್ಷಣೆಗಾಗಿ ಪಿಸ್ತೂಲ್ ಜತೆಯಲ್ಲಿಟ್ಟುಕೊಂಡು ಓಡಾಡುತ್ತಿದ್ದೇನೆ,'' ಎಂದೂ ಅವರು ಹೇಳಿರುವುದು ಗಂಭೀರ ಸಂಗತಿಯಾಗಿದೆ. ಕಾನೂನು ಪಾಲಕರಿಗೇ ಇಂಥಾ ದುಃಸ್ಥಿತಿ ಬಂದರೆ ಇನ್ನು ಜನಸಾಮಾನ್ಯರ ಪಾಡೇನು?

- ಪಿ.ಜೆ.ರಾಘವೇಂದ್ರ ಮೈಸೂರು

ಕ್ರೀಡಾಂಗಣಕ್ಕೆ ಅಂಬೇಡ್ಕರ್ ಹೆಸರು

ಬೆಂಗಳೂರಿನ ಆನೇಕಲ್ ತಾಲೂಕಿನ ಸೂರ್ಯನಗರದಲ್ಲಿ ನಿರ್ಮಾಣಗೊಳ್ಳಲಿರುವ ದೇಶದ ಎರಡನೇ ಅತಿದೊಡ್ಡ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ರಾಜ್ಯ ಸರಕಾರ ಶಂಕುಸ್ಥಾಪನೆ ನೆರವೇರಿಸಿದ್ದು ಸರಿಯಷ್ಟೇ. ಸದ್ಯ, ದೇಶದಲ್ಲಿ ಒಟ್ಟಾರೆಯಾಗಿ 80 ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಗಳು ಇದ್ದು ಹಲವಾರು ಮೈದಾನಗಳ ಹೆಸರು ಅದ್ವಿತೀಯ ಸಾಧನೆ ತೋರಿರುವ ರಾಷ್ಟ್ರ ನಾಯಕರ ಹೆಸರಿನಲ್ಲೂ ಇವೆ. ಅಂಬೇಡ್ಕರ್ ಹೆಸರಿನಲ್ಲಿ ಕ್ರಿಕೆಟ್ ಕ್ರೀಡೆಗೆ ಸಂಬಂಧಿಸಿದ ಒಂದೇ ಒಂದು ಅಂತಾರಾಷ್ಟ್ರೀಯ ಮೈದಾನ ದೇಶದಲ್ಲಿ ಕಾಣ ಸಿಗುವುದಿಲ್ಲ. ನೂತನ ಕ್ರೀಡಾಂಗಣಕ್ಕೆ ಡಾ. ಅಂಬೇಡ್ಕರ್ ಅವರ ಹೆಸರು ಇಡುವ ಮೂಲಕ ಸಾಮಾಜಿಕ ನ್ಯಾಯದ ಪರ ಜೀವನಪರ್ಯಂತ ಹೋರಾಡಿದ ದಿವ್ಯ ಚೇತನ ಬಾಬಾಸಾಹೇಬರಿಗೆ ಗೌರವ ತೋರುವ ಕೆಲಸಕ್ಕೆ ಸರಕಾರ ಮುಂದಾಗಲಿ.

- ಅನಿಲ್ ಕುಮಾರ್ ನಂಜನಗೂಡು

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. **Whatsapp: 63664 22240 E-mail:** editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. **ಕಚೇರಿ ವಿಳಾಸ:-** ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 144
ಸೋಮವಾರ,25 ಮೇ 2026 | ಪುಟಗಳು: 16 | ಬೆಲೆ: ₹ 5.00
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಉದ್ಘಾಟನಾ ಕಾರ್ಯಕ್ರಮ :

ರಾಷ್ಟ್ರದಲ್ಲೇ 1 ಸರ್ಕಾರಿ ಸ್ವಾಮ್ಯದ ಅತ್ಯಾಧುನಿಕ ಮಾದರಿಯ ಸಮಗ್ರ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್

108 ಆರೋಗ್ಯ ಕವಚ ಮತ್ತು 104 ಆರೋಗ್ಯ ಸಹಾಯ ವಾಣಿ | **ಒಂದು ಕರೆ ನಮಗೆ, ತುರ್ತು ಸೇವೆ ನಿಮಗೆ.**

ಯೋಜನೆಯ ಪ್ರಮುಖಾಂಶಗಳು:

ಸರ್ಕಾರದ ಒಡೆತನದ ಸಮಗ್ರ ತುರ್ತು ಆರೋಗ್ಯಜಾಲ

ತುರ್ತು ಆಂಬುಲೆನ್ಸ್ ಸೇವೆಗಳಾದ 108 ಆರೋಗ್ಯಕವಚ, ನಗು-ಮಗು ಮತ್ತು ಇತರ ಆಂಬ್ಯುಲೆನ್ಸ್‌ಗಳ ಸುಗಮ ಕಾರ್ಯಾಚರಣೆಗಾಗಿ ಕರ್ನಾಟಕ ಸರ್ಕಾರವು ಅತ್ಯಾಧುನಿಕ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಅನ್ನು ಪರಿಚಯಿಸುತ್ತಿದೆ.

ಆರೋಗ್ಯ ಸಂಸ್ಥೆಗಳ ಡಿಜಿಟಲ್ ಮ್ಯಾಪಿಂಗ್

- ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಜಿಐಎಸ್ (GIS) ಮ್ಯಾಪಿಂಗ್
- ಸಮೀಪದ ಸೂಕ್ತ ಚಿಕಿತ್ಸಾ ಸೌಲಭ್ಯವಿರುವ ಆರೋಗ್ಯ ಸಂಸ್ಥೆಗಳ ಗುರುತಿಸುವಿಕೆ.

ಸದೃಢ ಮತ್ತು ಸುರಕ್ಷಿತ ಮೂಲಭೂತ ಸೌಕರ್ಯಗಳು

- ಕರ್ನಾಟಕ ರಾಜ್ಯ ಡೇಟಾ ಸೆಂಟರ್ (KSDC) ಸುರಕ್ಷಿತ ಸರ್ವರ್‌ಗಳಲ್ಲಿ ಅನುಷ್ಠಾನ ಮಾಡಲಾಗಿದೆ.
- ಕರ್ನಾಟಕ ರಾಜ್ಯ ವೈಡ್ ಏರಿಯಾ ನೆಟ್‌ವರ್ಕ್ (KSWAN) ಮತ್ತು ಡ್ಯುಯಲ್ SIP ಟ್ರಂಕ್ ಲೈನ್‌ಗಳ ಮೂಲಕ ವಿಶ್ವಾಸಾರ್ಹ ಮತ್ತು ಅನಿಯಮಿತ ಸಂಪರ್ಕ ಜಾಲ.

ರಿಯಲ್ ಟೈಮ್ ಆಂಬುಲೆನ್ಸ್ ಟ್ರಾಕಿಂಗ್

- ಸ್ವಯಂಚಾಲಿತವಾಗಿ ವಾಹನಗಳ ಸಂಚಲನೆಯ ಸ್ಥಳ ಪತ್ತೆ ಮತ್ತು ಅನುಸರಣಾ ವ್ಯವಸ್ಥೆಯನ್ನು ಹೊಂದಿರುವ ಆಂಬುಲೆನ್ಸ್‌ಗಳು.
- ತಲುಪುವ ನಿರೀಕ್ಷಿತ ಸಮಯಕ್ಕೆ (ETA) ಅನುಗುಣವಾಗಿ ಸಮೀಪದ ಆಂಬುಲೆನ್ಸ್ ವ್ಯವಸ್ಥೆ.
- ಕಿರು ಸಂದೇಶಗಳ ಮೂಲಕ ಆಂಬುಲೆನ್ಸ್‌ಗಳ ಸಂಚಲನೆಯ ಅನುಸರಣಾ ವಿವರಗಳುಳ್ಳ ಮಾಹಿತಿ ರವಾನೆ.
- ಮೊಬೈಲ್ ಡೇಟಾ ಟರ್ಮಿನಲ್ (MDT) ಸಾಧನಗಳನ್ನು ಬಳಸಿಕೊಂಡು ಡಿಜಿಟಲ್ ಪೇಷಂಟ್ ಕೇರ್ ರೆಕಾರ್ಡ್ ಮೂಲಕ ರೋಗಿಯ ಪ್ರಮುಖ ಆರೋಗ್ಯ ಮಾಹಿತಿಯ ದಾಖಲಾತಿ.



*ಕರ್ನಾಟಕದ ಜಿಲ್ಲಾವಾರು ಅಂಬುಲೆನ್ಸ್‌ಗಳು

ತುರ್ತು ಸಂದರ್ಭಗಳಲ್ಲಿ ತ್ವರಿತ ಸ್ಪಂದನೆ

- ತುರ್ತು ಕರೆಗಳಿಗೆ 5 ಸೆಕೆಂಡುಗಳ ಒಳಗೆ ಪ್ರತಿಕ್ರಿಯೆ.
- ಕರೆ ಮಾಡಿದವರ ನಿಖರ ಸ್ಥಳವನ್ನು ಗುರುತಿಸಲು ಸ್ವಯಂಚಾಲಿತ ಸ್ಥಳ ಆಧಾರಿತ ವ್ಯವಸ್ಥೆ (LBS).
- ಅಮೂಲ್ಯವಾದ ಸಮಯವನ್ನು ಉಳಿಸಲು ತ್ವರಿತವಾಗಿ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗುವುದು.

ತಂತ್ರಜ್ಞಾನ ಆಧಾರಿತ ವೈದ್ಯಕೀಯ ಬೆಂಬಲ ವ್ಯವಸ್ಥೆ

- ಆಸ್ಪತ್ರೆಗೆ ದಾಖಲಿಸುವ ಮುನ್ನ ತಜ್ಞ ವೈದ್ಯರ ಮಾರ್ಗದರ್ಶನದಿಂದ ತುರ್ತು ಆರೈಕೆ.
- MDT ಸಾಧನಗಳ ಮೂಲಕ ನೈಜ-ಸಮಯದ (Real-time) ಸಮಾಲೋಚನೆ.
- ತುರ್ತು ಸಮಯದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಗಳಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸಂದೇಶ ರವಾನೆ.

ಜೀವ ರಕ್ಷಣೆಗೆ ಬದ್ಧತೆ

- **ಸಕಾಲದಲ್ಲಿ ತುರ್ತು ವೈದ್ಯಕೀಯ ಆರೈಕೆಯನ್ನು ಒದಗಿಸುವುದು:**
- ಗರ್ಭಿಣಿಯರು
- ಅಪಘಾತದ ಸಂತ್ರಸ್ತರು
- ಆರೋಗ್ಯ ವಿಪತ್ತಿನ ತುರ್ತು ಪರಿಸ್ಥಿತಿಗಳು
- ತುರ್ತು ಚಿಕಿತ್ಸೆಯ ಅಗತ್ಯವಿರುವ ರೋಗಿಗಳು

ಬೃಹತ್ ಮತ್ತು ಸಮಗ್ರ ತುರ್ತು ವಾಹನಗಳ ಸಮೂಹ

- ಆರೋಗ್ಯ ಮತ್ತು ಆರೋಗ್ಯ ಸಂಬಂಧಿ ಇಲಾಖೆಗಳ ವ್ಯಾಪ್ತಿಯಲ್ಲಿರುವ ಆಂಬುಲೆನ್ಸ್‌ಗಳ ಕೇಂದ್ರೀಕೃತ ಕಾರ್ಯಾಚರಣೆ.
- 104 ಆರೋಗ್ಯ ಸಹಾಯವಾಣಿ, 112 ERSS, 181 ಮಹಿಳಾ ಮತ್ತು ಮಕ್ಕಳ ಸಹಾಯವಾಣಿ ಹಾಗೂ ಇನ್ನಿತರ ಸೇವೆಗಳೊಂದಿಗೆ ಸಂಯೋಜನೆ.
- '112 ಇಂಡಿಯಾ' ಮೊಬೈಲ್ ಅಪ್ಲಿಕೇಷನ್ ಮೂಲಕ ತುರ್ತು ವೈದ್ಯಕೀಯ ನೆರವು.

ಕರುನಾಡಿನ ಜನತೆಯ ಆರೋಗ್ಯ ರಕ್ಷಣೆಗೆ ತಂತ್ರಜ್ಞಾನ ಆಧಾರಿತ ಸ್ಪಂದನೆ ಮತ್ತು ತುರ್ತು ಆರೈಕೆಯ ಮೂಲಕ ತ್ವರಿತ ಕ್ರಮ.

ಉದ್ಘಾಟನೆ :
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ಗೌರವ ಉಪಸ್ಥಿತಿ :
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ಮುಖ್ಯ ಅತಿಥಿ :
ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು,
ಕರ್ನಾಟಕ ಸರ್ಕಾರ.

ದಿನಾಂಕ :
25 ಮೇ 2026

ಸಮಯ :
ಬೆಳಿಗ್ಗೆ 11:00 ಗಂಟೆಗೆ

ಸ್ಥಳ :
ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್
ಬಸವೇಶ್ವರ ನಗರ, ಬೆಂಗಳೂರು-560079.

ಅಧ್ಯಕ್ಷತೆ :
ಶ್ರೀ ಎಸ್. ಸುರೇಶ್ ಕುಮಾರ್
ಮಾನ್ಯ ಶಾಸಕರು,
ರಾಜಾಜಿನಗರ ವಿಧಾನಸಭಾ ಕ್ಷೇತ್ರ.

ಘನ ಉಪಸ್ಥಿತಿ :
ಶ್ರೀ ಪ್ರಿಯಕೃಷ್ಣ
ಮಾನ್ಯ ಶಾಸಕರು,
ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ.

ತ್ವರಿತ ಸ್ಪಂದನೆ. ತಂತ್ರಜ್ಞಾನ ಆಧಾರಿತ ವೈದ್ಯಕೀಯ ಆರೈಕೆ. ಜೀವರಕ್ಷಣೆ 24X7.

108 ಕ್ಕೆ ಕರೆ ಮಾಡಿ | ಉಚಿತ ತುರ್ತು ಸೇವೆ | 24X7 ಲಭ್ಯ

ಸನ್ಮಾನ್ಯ ಮುಖ್ಯಮಂತ್ರಿಗಳು, **ಶ್ರೀ ಸಿದ್ದರಾಮಯ್ಯ** ರವರು ಹಾಗೂ **ಶ್ರೀ ದಿನೇಶ್ ಗುಂಡೂರಾವ್** ಮಾನ್ಯ ಆರೋಗ್ಯ ಸಚಿವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | **ನಿಮ್ಮ ಆರೋಗ್ಯ, ನಮ್ಮ ಆದ್ಯತೆ**

ಪಿಂಚಣಿಗಾಗಿ ಬ್ಯಾಂಕ್‌ಗೆ ಅತ್ತೆಯನ್ನು ಹೆಗಲ ಮೇಲೆ ಹೊತ್ತ ಮಹಿಳೆ!

90 ವರ್ಷದ ಅತ್ತೆಯನ್ನು ಹೊತ್ತು 9 ಕಿ.ಮೀ ನಡೆದು ಬಂದ ಮಹಿಳೆ | ಒಡಿಶಾದಲ್ಲಿ ಸಹೋದರಿಯ ಅಸ್ಥಿಪಂಜರ ತಂದ ಘಟನೆ ಬಳಿಕ ಮತ್ತೊಂದು ಘಟನೆ ಬೆಳಕಿಗೆ

ರಾಯಪುರ: ಛತ್ತೀಸ್‌ಗಢದ ಸುರ್ಗುಜಾದ ಬುಡಕಟ್ಟು ಮಹಿಳೆಯೊಬ್ಬರು ಪಿಂಚಣಿ ಹಣ ಪಡೆಯಲು ತನ್ನ 90 ವರ್ಷದ ಅತ್ತೆಯನ್ನು ಹೆಗಲ ಮೇಲೆ ಹೊತ್ತುಕೊಂಡು ಬಿಸಿಲಿನ ಬೇಗೆಯಲ್ಲಿ 9 ಕಿ.ಮೀ ನಡೆದುಕೊಂಡು ಬ್ಯಾಂಕ್ ತಲುಪಿದ ಘಟನೆ ಬೆಳಕಿಗೆ ಬಂದಿದೆ. ಸುಖ್ಮನಿಯಾ ಬಾಯಿ ಎಂಬ ಮಹಿಳೆ ಮತ್ತು ಅವರ ಕುಟುಂಬ ಸದಸ್ಯರು ಕುನ್ಸ್ವಾ ಪ್ರದೇಶದ ಜಂಗಲ್‌ಪಾರ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಮನೆಯಿಂದ ಸುಮಾರು 1.5 ಕಿ.ಮೀ ದೂರದಲ್ಲಿರುವ ಹೊಳೆಯೊಂದು ಹರಿಯುವುದರಿಂದ ಗ್ರಾಮಕ್ಕೆ ವಾಹನಗಳು ಪ್ರವೇಶಿಸಲು ಸಾಧ್ಯವಿಲ್ಲ. ಹೀಗಾಗಿ, ಬೇರೆ ವ್ಯವಸ್ಥೆ ಇಲ್ಲದೇ, ಸುಖ್ಮನಿಯಾ ಬಾಯಿ ಅವರು ತನ್ನ ಅತ್ತೆ ಸೋನ್ವಾರಿ ಅವರನ್ನು ಹೆಗಲ ಮೇಲೆ ಹೊತ್ತುಕೊಂಡು ಬ್ಯಾಂಕ್‌ಗೆ ಕರೆದೊಯ್ದಿದ್ದಾರೆ. ಈ ವಿಡಿಯೊ ವೈರಲ್ ಆಗಿದೆ.

ಸೋನ್ವಾರಿಯ ಅವರ ಮೂರು ತಿಂಗಳ ಪಿಂಚಣಿ ಮೊತ್ತವಾದ 1,500 ರೂ.ಗಳನ್ನು ಬ್ಯಾಂಕ್‌ನಿಂದ ಪಡೆದಿದ್ದಾರೆ. ಆ ವೇಳೆ ಬ್ಯಾಂಕ್ ಸಿಬ್ಬಂದಿಯೊಬ್ಬರು ಪಿಂಚಣಿ ನೀಡಲು ತಮ್ಮ ಮನೆಗೆ ಭೇಟಿ ನೀಡುತ್ತಿದ್ದರು. ಇದು ಕುಟುಂಬದ ಕೆಲಸವನ್ನು ಸುಲಭಗೊಳಿಸಿತ್ತು. ಆದರೆ, ಕಳೆದ ಕೆಲವು ತಿಂಗಳುಗಳಿಂದ ಅವರು ಭೇಟಿ ನೀಡಿಲ್ಲ, ಹಾಗಾಗಿ ಪಿಂಚಣಿ ಸಿಗದೆಯೇ ಮಹಿಳೆಯರಿಬ್ಬರೂ ಜೀವನ ಸಾಗಿಸಲು ಕಷ್ಟ ಎದುರಿಸುವಂತಾಗಿದೆ.

ಫಲಾನುಭವಿಯ ಕೆವೈಸಿ ಆಗಿರದ ಕಾರಣ ಪಿಂಚಣಿ ಪಾವತಿಯು ಹಲವಾರು ತಿಂಗಳುಗಳಿಂದ ಬಾಕಿ ಇದೆ ಎಂಬ ವಿಷಯವು ಸುಖ್ಮನಿಯಾ ಬಾಯಿಗೆ ಗ್ರಾಮಸ್ಥರಿಂದ ತಿಳಿದುಬಂದಿದೆ. ಹೀಗಾಗಿ, ಸುಖ್ಮನಿಯಾ ಅವರು ತಮ್ಮ ವೃದ್ಧ ಅತ್ತೆಯನ್ನು ಬೆನ್ನಿನ ಮೇಲೆ ಹೊತ್ತುಕೊಂಡು ನರ್ಮದಾಪುರದ ಬ್ಯಾಂಕ್ ಶಾಖೆಗೆ ನಡೆದು ಕೊಂಡು ಹೋಗಿ ಕೆವೈಸಿ ಅಪ್‌ಡೇಟ್ ಮಾಡಿಸಿ, ಪಿಂಚಣಿ ಮೊತ್ತ ಪಡೆಯಲು ಹರಸಾಹಸಪಟ್ಟಿದ್ದಾರೆ. ಸುಮಾರು ಮೂರು ತಿಂಗಳ ಕಾಲ ಅವರು ಕೆವೈಸಿ ನವೀಕರಣಕ್ಕೆ ಬ್ಯಾಂಕ್‌ಗೆ ಅಲೆದಾಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಅತ್ತೆಯನ್ನು ಹೊತ್ತು ಸಾಗುವ ವಿಡಿಯೊ ವೈರಲ್ ಆಗಿ ಗ್ರಾಮಸ್ಥರಿಂದ ಆಕ್ರೋಶ ವ್ಯಕ್ತವಾದ ಬೆನ್ನಿಗೇ ಬ್ಯಾಂಕ್ ಮಿತ್ರ ಇನ್ನು ಮುಂದೆ ಪಿಂಚಣಿ ಮೊತ್ತವನ್ನು ನೇರವಾಗಿ ಅವರ ಮನೆಗೆ ತಲುಪಿಸಲಿದ್ದು, ಮುಂದಿನ ದಿನಗಳಲ್ಲಿ ವೃದ್ಧೆಯನ್ನು ಬ್ಯಾಂಕಿಗೆ ಕರೆತರುವ ಅಗತ್ಯವಿಲ್ಲ ಎಂದು ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ ಎಂದು ವರದಿಯಾಗಿದೆ.

ಇತ್ತೀಚೆಗೆ, ಮೃತ ಸಹೋದರಿಯ ಬ್ಯಾಂಕ್ ಖಾತೆಯಿಂದ ಹಣ ನೀಡಲು ಅಲ್ಲಿನ ಸಿಬ್ಬಂದಿ ಸತಾಯಿಸಿದ ಹಿನ್ನೆಲೆಯಲ್ಲಿ, ಒಡಿಶಾದ ಕಿಯೋಂಜಾರ್‌ನ ಬುಡಕಟ್ಟು ವ್ಯಕ್ತಿಯೊಬ್ಬ ಆಕೆಯ ಅಸ್ಥಿಪಂಜರವನ್ನೇ ಹೊತ್ತು ತಂದ ಘಟನೆ ನಡೆದಿತ್ತು.

ಭಾರತ ಮೊದಲು ಎಂಬುದೇ ಸರಕಾರದ ನೀತಿ | ಸಚಿವ ಜೈಶಂಕರ್ ಸ್ಪಷ್ಟೋಕ್ತಿ

ವಿಶ್ವದ ಎಲ್ಲಿಂದಾದರೂ ತೈಲ ಖರೀದಿ

ಹೊಸದಿಲ್ಲಿ: ''ದೇಶದ ಇಂಧನ ಅಗತ್ಯತೆ ಪೂರೈಸಲು ವಿಶ್ವಾಸಾರ್ಹ ಮೂಲಗಳಿಂದ ತೈಲ ಖರೀದಿಸಲು ಭಾರತ ಬದ್ಧವಾಗಿದೆ. ಯಾವುದೇ ಪರಿಸ್ಥಿತಿಯಲ್ಲೂ ದೇಶದ ಹಿತಾಸಕ್ತಿ ರಕ್ಷಣೆಯೇ ನಮ್ಮ ಮೊದಲ ಆದ್ಯತೆಯಾಗಿದ್ದು, ಭಾರತ ಮೊದಲು ಎಂಬ ನೀತಿ ಹೊಂದಿದೆ,'' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಪ್ರತಿಪಾದಿಸಿದ್ದಾರೆ.

ಹೊಸದಿಲ್ಲಿಯಲ್ಲಿ ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರೂಬಿಯೊ ಜತೆ ನಡೆದ ದ್ವಿಪಕ್ಷೀಯ ಮಾತುಕತೆ ಬಳಿಕ ನಡೆದ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಜೈಶಂಕರ್, ''ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟು ತಲೆದೋರಿದೆ. ಪೂರೈಕೆ ಸರಪಳಿ ಅಡಚಣೆಯಿಂದ ತೈಲ ಸರಬರಾಜು ಏರುಪೇರಾಗಿದೆ. ಆದರೆ, ದೇಶದ 140 ಕೋಟಿ ಜನರ ಹಿತ ರಕ್ಷಿಸಲು ವಿಶ್ವದ ಯಾವುದೇ ಭಾಗದಿಂದ ಕೈಗೆಟುಕುವ ದರದಲ್ಲಿ ತೈಲ ಖರೀದಿಸಲು ಭಾರತ ಸಿದ್ಧವಿದೆ. ದೇಶದ ಇಂಧನ ಅಗತ್ಯತೆ ಪೂರೈಸಲು ಸರಕಾರ ಭಾರತ ಮೊದಲು ಎಂಬ ನೀತಿ ಅಳವಡಿಸಿಕೊಂಡಿದೆ. ಇಂಧನ ಭದ್ರತೆ ವಿಷಯದಲ್ಲಿ ದೇಶದ ಹಿತಾಸಕ್ತಿಗೆ ಮೊದಲ ಆದ್ಯತೆ ನೀಡಿದೆ,'' ಎಂದು ಹೇಳಿದರು.

''ದೇಶದ ಇಂಧನ ಭದ್ರತೆ ಖಚಿತಪಡಿಸಲು ಬಹು ಮೂಲಗಳನ್ನು ಹುಡುಕಲಾಗುತ್ತಿದೆ. ಕಡಿಮೆ ಬೆಲೆಯಲ್ಲಿ ದೊಡ್ಡ ಮಟ್ಟದ ಇಂಧನ ಪೂರೈಕೆ ಮಾಡುವ ಮೂಲಗಳ ಮೇಲೆ ಗಮನ ನೀಡಲಾಗಿದೆ,'' ಎಂದು ಸಚಿವ ಜೈಶಂಕರ್ ಹೇಳಿದರು.

ಕಾರ್ಯತಂತ್ರ ಪಾಲುದಾರಿಕೆ: ''ಡೊನಾಲ್ಡ್ ಟ್ರಂಪ್ ಆಡಳಿತ ಅಮೆರಿಕ ಮೊದಲು ಎಂಬ ನೀತಿ ಹೊಂದಿದಂತೆ ನಮ್ಮ ಸರಕಾರವೂ ಭಾರತ ಮೊದಲು ಎಂಬ ನೀತಿ ಹೊಂದಿದೆ. ನಮ್ಮ ರಾಷ್ಟ್ರೀಯ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಲಾಗುತ್ತಿದೆ. ಉಭಯ ದೇಶಗಳು ಒಗ್ಗೂಡಿ ಕೆಲಸ ಮಾಡುವ ಕ್ಷೇತ್ರಗಳಿವೆ. ಕಾರ್ಯತಂತ್ರ ಪಾಲುದಾರಿಕೆ ಅಡಿಯಲ್ಲಿ ಒಟ್ಟಾಗಿ ಕೆಲಸ ಮಾಡುತ್ತೇವೆ,'' ಎಂದು ಹೇಳಿದರು.



ಭಾರತ-ಅಮೆರಿಕ ಬಂಧ ನಿರ್ಣಾಯಕ

''ಭಾರತ-ಅಮೆರಿಕ ಬಾಂಧವ್ಯ ನಿರ್ಣಾಯಕ ಕಾರ್ಯತಂತ್ರ ಪಾಲುದಾರಿಕೆ ಭಾಗವಾಗಿದ್ದು, ಜಾಗತಿಕ ಹಿತಾಸಕ್ತಿ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಲಿದೆ,'' ಎಂದು ಮಾರ್ಕೊ ರೂಬಿಯೊ ಹೇಳಿದ್ದಾರೆ. ಸಚಿವ ಜೈಶಂಕರ್ ಜತೆ ನಡೆದ ದ್ವಿಪಕ್ಷೀಯ ಮಾತುಕತೆ ವೇಳೆ, ''ಭಾರತ-ಅಮೆರಿಕ ಕೇವಲ ಮಿತ್ರ ರಾಷ್ಟ್ರಗಳಲ್ಲ, ಕಾರ್ಯತಂತ್ರ ಪಾಲುದಾರಿಕೆ ಮಿತ್ರರು. ಸಂಘರ್ಷದ ಕಾಲಘಟ್ಟದಲ್ಲಿ ಪ್ರಾದೇಶಿಕ ಹಿತ ಕಾಯುವ ಜತೆಗೆ ಜಾಗತಿಕ ಒಳಿತಿಗೆ ಕೆಲಸ ಮಾಡಲಿವೆ,'' ಎಂದು ವಿಶ್ಲೇಷಣೆ ಮಾಡಿದರು. ''ಭಾರತ-ಅಮೆರಿಕ ವಿಶ್ವದ ಎರಡು ಅತಿದೊಡ್ಡ ಪ್ರಜಾಪ್ರಭುತ್ವ ದೇಶಗಳು. ಸಹಕಾರ ಮನೋಭಾವದಡಿ ಒಟ್ಟಿಗೆ ಕೆಲಸ ಮಾಡುತ್ತಿವೆ,'' ಎಂದು ರೂಬಿಯೊ ಹೇಳಿದರು.

'ಐ ಲವ್ ಇಂಡಿಯಾ' ನಾನು ಮೋದಿ ಫ್ಯಾನ್

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಹಾಗೂ ಪ್ರಧಾನಿ ನರೇಂದ್ರ ಮೋದಿ ಜತೆಗಿನ ಸ್ನೇಹವನ್ನು ಕೊಂಡಾಡಿದ್ದಾರೆ. ಭಾನುವಾರ ಭಾರತದಲ್ಲಿರುವ ಅಮೆರಿಕ ರಾಯಭಾರಿ ಸರ್ಗಿಯೊ ಗೋರ್ ಅವರಿಗೆ ಕರೆ ಮಾಡಿದ್ದ ಟ್ರಂಪ್ ಅವರು ''ಐ ಲವ್ ಇಂಡಿಯಾ, 'ಐ ಲವ್ ಪಿಎಂ ಮೋದಿ,'' ಎಂದು ಹೇಳಿದ್ದಾರೆ. '' ಮೋದಿ ಜತೆಗಿನ ಸ್ನೇಹ ಅಮೂಲ್ಯವಾದುದು. ಮೋದಿ ಗ್ರೇಟ್ ಲೀಡರ್. ನಾನು ಮೋದಿ ಅಭಿಮಾನಿ,'' ಎಂದು ಹೇಳಿಕೊಂಡಿದ್ದಾರೆ. ಅಮೆರಿಕದ 250ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಯಭಾರಿ ಕಚೇರಿ ಅಧಿಕಾರಿಗಳಿಗೆ ಶುಭ ಕೋರಿದ ಟ್ರಂಪ್, ''ಭಾರತ- ಅಮೆರಿಕ ಬಾಂಧವ್ಯ, ಮೋದಿ ಹಾಗೂ ನನ್ನ ನಡುವಿನ ಸ್ನೇಹ ಶಾಶ್ವತವಾದುದು,'' ಎಂದು ಹೇಳಿದ್ದಾರೆ. ಈ ಕುರಿತು ವಿಷಯ ವಿನಿಮಯ ಮಾಡಿಕೊಂಡ ಗೋರ್, ''ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಧಾನಿ ಮೋದಿ ಅವರ ಸಾರಥ್ಯದಲ್ಲಿ ಉಭಯ ದೇಶಗಳ ಪಾಲುದಾರಿಕೆ ಬಾಂಧವ್ಯ ಮತ್ತಷ್ಟು ಬಲಗೊಳ್ಳಲಿದೆ,'' ಎಂದು ಹೇಳಿದರು.

ಕ್ಯಾಲಿಫೋರ್ನಿಯಾದಲ್ಲಿ ರಾಸಾಯನಿಕ ಸೋರಿಕೆ

40 ಸಾವಿರ ಜನರ ಸ್ಥಳಾಂತರ

ನ್ಯೂಯಾರ್ಕ್: ಕ್ಯಾಲಿಫೋರ್ನಿಯಾದ ಗಾರ್ಡನ್ ಗ್ರೋವ್‌ನಲ್ಲಿರುವ ಏರೋಸ್ಪೇಸ್ ಪ್ಲಾಸ್ಟಿಕ್ ಕಾರ್ಖಾನೆಯ ಟ್ಯಾಂಕ್‌ನಲ್ಲಿ ರಾಸಾಯನಿಕ ಸೋರಿಕೆ ಆಗುತ್ತಿದ್ದು, ಸುತ್ತಲಿನ ಪ್ರದೇಶಗಳಲ್ಲಿರುವ 40 ಸಾವಿರ ಜನರನ್ನು ಸ್ಥಳಾಂತರಿಸಲು ಅಲ್ಲಿನ ಸ್ಥಳೀಯ ಆಡಳಿತವು ಆದೇಶಿಸಿದೆ. ಬೃಹತ್ ಟ್ಯಾಂಕ್‌ನಲ್ಲಿದ್ದ 22,700 ಲೀಟರ್ ಮಿಥೈಲ್ ಮೆಥಾಕ್ರಿಲೇಟ್ ಆವಿಯಾಗಿ ಗಾಳಿಯಲ್ಲಿ ಸೇರಿಕೊಳ್ಳುತ್ತಿದೆ. ರಾಸಾಯನಿಕ ಸೋರಿಕೆ ತಡೆಯಲು ಸಾಧ್ಯವಾಗುತ್ತಿಲ್ಲ.

''ಕೆಮಿಕಲ್ ಗಾಳಿಯ ಜೊತೆ ಸೇರುತ್ತಿರುವುದರಿಂದ ಅಲ್ಲಿನ ಪರಿಸ್ಥಿತಿ ಹದಗೆಟ್ಟಿದೆ. ಈಗ ಉಳಿದಿರುವುದು ಎರಡು ಆಯ್ಕೆಗಳು ಮಾತ್ರ, ಟ್ಯಾಂಕ್ ವಿಫಲಗೊಳಿಸುವುದು ಅಥವಾ ಅದಾಗಿಯೇ ಸ್ಫೋಟಗೊಳ್ಳುವವರೆಗೆ ಕಾಯುವುದು. ಈ ಎರಡಕ್ಕೂ ನಾವು ತಯಾರಿ ಮಾಡಿಕೊಂಡಿದ್ದೇವೆ. ಈಗಾಗಲೇ ಜನರ ಸ್ಥಳಾಂತರ ಮಾಡಲಾಗುತ್ತಿದೆ,'' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಕಾರ್ಖಾನೆ ಸುತ್ತಲಿನ 12ಕ್ಕೂ ಹೆಚ್ಚು ಶಾಲೆಗಳು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಯೋಧರಿಂದ ಸ್ವಚ್ಛ ಭಾರತ

ಲಡಾಕ್‌ನ ಪ್ಯಾಂಗಾಂಗ್ ಸರೋವರದ ಬಳಿ ಇಂಡೊ-ಟಿಬೆಟಿಯನ್ ಬಾರ್ಡರ್ ಪೊಲೀಸ್ ಸಿಬ್ಬಂದಿ (ಐಟಿಬಿಪಿ) ಭಾನುವಾರ ಸ್ವಚ್ಛತಾ ಕಾರ್ಯ ಕೈಗೊಂಡರು.

12 ದಿನಗಳ ನಂತರ ಟ್ವಿಶಾ ಶರ್ಮಾ ಅಂತ್ಯಕ್ರಿಯೆ

ಭೋಪಾಲ್: ನಟಿ ಟ್ವಿಶಾ ಶರ್ಮಾ ಅವರ ಅಂತ್ಯಕ್ರಿಯೆಯು ಮರಣದ 12 ದಿನಗಳ ನಂತರ ಭಾನುವಾರ ಭೋಪಾಲ್‌ನ ಭದ್‌ಭದಾ ಚಿತಾಗಾರದಲ್ಲಿ ನೆರವೇರಿತು. ಅವರ ಸಹೋದರ ಮೇಜರ್ ಹರ್ಷಿತ್ ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು.

ಭಾನುವಾರ ಬೆಳಗ್ಗೆ ದಿಲ್ಲಿಯ ಏಮ್ಸ್ ವೈದ್ಯರ ತಂಡವು ಭೋಪಾಲ್ ಏಮ್ಸ್‌ನಲ್ಲಿ ಟ್ವಿಶಾ ಅವರ ಮೃತದೇಹದ ಎರಡನೇ ಮರಣೋತ್ತರ ಪರೀಕ್ಷೆಯನ್ನು ನಡೆಸಿತು. ವೈದ್ಯರ ತಂಡವು ತನ್ನ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಿದೆ.

ಮೇ 12ರ ರಾತ್ರಿ ಭೋಪಾಲ್‌ನ ಕಟಾರಾ ಹಿಲ್ಸ್‌ನಲ್ಲಿ ಟ್ವಿಶಾ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟರು. ಅವರ ಪತಿ ಮತ್ತು ಅತ್ತೆಯ ಮನೆಯವರು ಇದನ್ನು ಆತ್ಮಹತ್ಯೆ ಎಂದು ಹೇಳುತ್ತಿದ್ದರೆ, ನಟಿಯ ತವರು ಮನೆಯವರು ಇದು ಕೊಲೆ ಎಂದು ಆರೋಪಿಸಿ ಪತಿ ಹಾಗೂ ಅತ್ತೆಯ ವಿರುದ್ಧ ದೂರು ನೀಡಿದ್ದಾರೆ. ಟ್ವಿಶಾ ಶರ್ಮಾ ಪ್ರಕರಣವನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಿದ್ದು, ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಪೀಠವು ಸೋಮವಾರ ಈ ವಿಷಯದ ವಿಚಾರಣೆ ನಡೆಸಲಿದೆ. ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್ ಅವರು ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ, ಆದೇಶಿಸಿದ್ದಾರೆ.

ಇನ್‌ಸ್ಟಾ ಖಾತೆ ಮರಳಿ ಪಡೆದ ಕಾಕ್ರೋಚ್

ಹೊಸದಿಲ್ಲಿ: ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ)ದ ವೆಬ್‌ಸೈಟ್, ಸಾಮಾಜಿಕ ಜಾಲತಾಣದ ಖಾತೆಗಳ ನಿರ್ಬಂಧ ಬಳಿಕ ಇನ್‌ಸ್ಟಾಗ್ರಾಂ ಖಾತೆಯನ್ನು ಮರಳಿ ಪಡೆದಿರುವುದಾಗಿ ಪಕ್ಷದ ಸಂಸ್ಥಾಪಕ ಅಭಿಜಿತ್ ದೀಪ್ಕೆ ಹೇಳಿದ್ದಾರೆ.

ಕಳೆದ ಮೂರು ದಿನಗಳ ಬೆಳವಣಿಗೆ, ಸಿಜೆಪಿ ನಿಯಂತ್ರಿಸಲು ನಡೆಯುತ್ತಿರುವ ಪ್ರಯತ್ನಗಳ ಕುರಿತು ದೀಪ್ಕೆ ಇನ್‌ಸ್ಟಾದಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ. ''ನಾವು ಹಿಂದಿರುಗಿದ್ದೇವೆ, ಬದುಕಲು ಏನು ಬೇಕಾದರೂ ಮಾಡುತ್ತೇವೆ. ನಾವು ಏನು ಎಂಬುದನ್ನು ನೀವು ಮರೆತಿದ್ದೀರಿ,'' ಎಂದು ಜಿರಳೆ (ಕಾಕ್ರೋಚ್) ಚಿತ್ರದೊಂದಿಗೆ ಪೋಸ್ಟ್ ಮಾಡಿದ್ದಾರೆ.

ಮತ್ತೊಂದು ಪೋಸ್ಟ್‌ನಲ್ಲಿ ಸಿಜೆಪಿ ಫಾಲೋವರ್ಸ್ ಕುರಿತು ದತ್ತಾಂಶ ಹಂಚಿಕೊಂಡಿದ್ದಾರೆ. ''ಶೇ.94 ರಷ್ಟು ಭಾರತೀಯ ಯುವಕರು ಸಿಜೆಪಿ ಪಕ್ಷವನ್ನು ಫಾಲೋ ಮಾಡುತ್ತಿದ್ದಾರೆ,'' ಎಂದು ದೀಪ್ಕೆ ಹೇಳಿಕೊಂಡಿದ್ದಾರೆ. ಆ ಮೂಲಕ ಸಿಜೆಪಿ ಫಾಲೋವರ್ಸ್‌ಗಳಲ್ಲಿ ಪಾಕಿಸ್ತಾನಿಯರು ಹೆಚ್ಚು ಎಂಬ ಕೇಂದ್ರ ಸಚಿವ ಕಿರಣ್ ರಿಜಿಜು ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

ಆನ್‌ಲೈನ್ ವೇದಿಕೆಯಲ್ಲಿ ಸಂಚಲನ ಮೂಡಿಸಿದ್ದ ಸಿಜೆಪಿ ಕುರಿತು 'ಎಕ್ಸ್'ನಲ್ಲಿ ವ್ಯಂಗ್ಯ ಮಾಡಿದ್ದ ರಿಜಿಜು,''ಪಾಕಿಸ್ತಾನ ಹಾಗೂ ಜಾರ್ಜ್ ಸೋರಸ್ ಗ್ಯಾಂಗ್ ಜಾಲತಾಣದಲ್ಲಿ ತಮ್ಮ ಫಾಲೋವರ್ಸ್ ಹುಡುಕುವ ಬಗ್ಗೆ ವಿಷಾದವಿದೆ. ನಿಜವಾದ ಅನುಯಾಯಿಗಳಾಗಲು ಭಾರತದಲ್ಲಿ ಸಾಕಷ್ಟು ಉತ್ಸಾಹಭರಿತ ಯುವಕರಿದ್ದಾರೆ. ಭಾರತ ವಿರೋಧಿ ಗುಂಪುಗಳ ಸಹಾಯ ಪಡೆಯುವ ಅಗತ್ಯವಿಲ್ಲ'' ಎಂದು ಹೇಳಿದ್ದರು.

ಪೋಷಕರ ಮನೆಗೆ ಭದ್ರತೆ: ಸಾಮಾಜಿಕ ಜಾಲತಾಣದಲ್ಲಿ ಸಿಜೆಪಿ ಹೆಸರಲ್ಲಿ ದೀಪ್ಕೆ ವಿಡಂಬನಾತ್ಮಕ ಚಳವಳಿ ಆರಂಭಿಸದ ಬಳಿಕ ಮಹಾರಾಷ್ಟ್ರದಲ್ಲಿರುವ ಪೋಷಕರಿಗೆ ಬೆದರಿಕೆ ಕರೆ ಹಿನ್ನೆಲೆಯಲ್ಲಿ ನಿವಾಸಕ್ಕೆ ಭದ್ರತೆ ನೀಡಲಾಗಿದೆ. ಛತ್ರಪತಿ ಸಂಭಾಜಿ ನಗರದಲ್ಲಿರುವ ದೀಪ್ಕೆ ಪೋಷಕರಾದ ಭಗವಾನ್ ಹಾಗೂ ಅನಿತಾ ದೀಪ್ಕೆ ವಾಸವಿರುವ ನಿವಾಸಕ್ಕೆ ಸೂಕ್ತ ಭದ್ರತೆ ನೀಡಿರುವ ಪೊಲೀಸರು, ಮನೆಯ ಬಳಿ ಹೆಚ್ಚಿನ ಜನ ಸೇರದಂತೆ ಬ್ಯಾರಿಕೇಡ್ ಅಳವಡಿಸಿದ್ದಾರೆ. ''ಸಿಜೆಪಿ ಹೆಸರಲ್ಲಿ ಚಳವಳಿ ಆರಂಭಿಸಿದ ಬಳಿಕ ಜೀವ ಬೆದರಿಕೆ ಕರೆ ಬರುತ್ತಿವೆ. ಪೋಷಕರಿಗೂ ಬೆದರಿಸಲಾಗುತ್ತಿದೆ ಎಂಬ ದೀಪ್ಕೆ ಹೇಳಿಕೆ ಹಿನ್ನೆಲೆಯಲ್ಲಿ ಭದ್ರತೆ ಕಲ್ಪಿಸಲಾಗಿದೆ,'' ಎಂದು ಡಿಸಿಪಿ ಪಂಕಜ್ ಅತುಲ್ಕರ್ ಹೇಳಿದ್ದಾರೆ.

2.27 ಕೋಟಿ ದಾಟಿದ ಫಾಲೋವರ್ಸ್

ಕೆಲವು ಜಾಲತಾಣ ವೇದಿಕೆಗಳ ಖಾತೆ ನಿರ್ಬಂಧ ಬಳಿಕವೂ ಇನ್‌ಸ್ಟಾದಲ್ಲಿ ಸಿಜೆಪಿ ಫಾಲೋವರ್ಸ್ ಸಂಖ್ಯೆ 2.27 ಕೋಟಿ ದಾಟಿದೆ. ಅಭಿಜಿತ್ ದೀಪ್ಕೆ ವೈಯಕ್ತಿಕವಾಗಿ 2.18 ಕೋಟಿ ಫಾಲೋವರ್ಸ್ ಹೊಂದಿದ್ದಾರೆ.

ಗುರುವಾಯೂರಿನಲ್ಲಿ ಬೆಣ್ಣೆ ತುಲಾಭಾರ ಸೇವೆ ಸಲ್ಲಿಸಿದ ಕೇರಳ ಸಿಎಂ ಸತೀಶನ್



ಕೇರಳ ಸಿಎಂ ವಿ.ಡಿ.ಸತೀಶನ್ ಅವರು ಭಾನುವಾರ ಗುರುವಾಯೂರು ದೇಗುಲದಲ್ಲಿ ಬೆಣ್ಣೆ ತುಲಾಭಾರ ಸೇವೆ ಸಲ್ಲಿಸಿದರು.

ಗುರುವಾಯೂರು: ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಭಾನುವಾರ ಗುರುವಾಯೂರು ದೇಗುಲಕ್ಕೆ ಭೇಟಿ ನೀಡಿ ಗುರುವಾಯೂರಪ್ಪನ ದರ್ಶನ ಪಡೆದು ಬೆಣ್ಣೆಯಿಂದ ತುಲಾಭಾರ ಸೇವೆ ಪೂರೈಸಿದರು. ಬೆಳಗ್ಗೆ 7ಕ್ಕೆ ದೇಗುಲಕ್ಕೆ ಆಗಮಿಸಿದ ಮುಖ್ಯಮಂತ್ರಿಗಳನ್ನು ದೇವಸ್ವಂ ಅಧ್ಯಕ್ಷ ಎ.ವಿ.ಗೋಪಿನಾಥ್ ಹಾಗೂ ಆಡಳಿತಾಧಿಕಾರಿ ಓ.ಬಿ.ಅರುಣ್‌ಕುಮಾರ್ ಬರ ಮಾಡಿಕೊಂಡರು. ತಿಂಗಳಿಗೊಮ್ಮೆ ಗುರುವಾಯೂರು ದೇವಸ್ಥಾನಕ್ಕೆ ಭೇಟಿ ನೀಡುವ ವಿ.ಡಿ.ಸತೀಶನ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಗುರುವಾಯೂರಿಗೆ ಆಗಮಿಸಿದ್ದರು. ವಿ.ಡಿ.ಸತೀಶನ್ ಅವರ ತುಲಾಭಾರ ಸೇವೆಗೆ 71 ಕೆಜಿ ಬೆಣ್ಣೆ ಬಳಕೆ ಮಾಡಲಾಗಿದೆ. ಬಳಿಕ ಕಂದಾಯ ಸಚಿವ ಎ.ಪಿ.ಅನಿಲ್ ಕುಮಾರ್ ಅವರ ಪುತ್ರನ ವಿವಾಹ ಸಮಾರಂಭದಲ್ಲೂ ಮುಖ್ಯಮಂತ್ರಿ ಭಾಗವಹಿಸಿದ್ದರು.

ಬಾಂಬ್ ತಯಾರಿಕೆಗೆ ಎಐ ಬಳಸಿದ್ದ ದಿಲ್ಲಿ ಕಾರು ಸ್ಫೋಟ ಪ್ರಕರಣದ ಆರೋಪಿಗಳು!

ಹೊಸದಿಲ್ಲಿ: ರಾಷ್ಟ್ರರಾಜಧಾನಿ ದಿಲ್ಲಿಯ ಕೆಂಪುಕೋಟೆ ಬಳಿ ನಡೆದ ಕಾರು ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಆರೋಪಿಗಳು ಭಯೋತ್ಪಾದನೆಗೆ ಕೃತಕ ಬುದ್ಧಿಮತ್ತೆಯನ್ನು ದುರ್ಬಳಕೆ ಮಾಡಿಕೊಂಡಿದ್ದರು ಎಂಬ ಅಂಶ ಹೊರಹಾಕಿದೆ.

ಆರೋಪಿಗಳು ಜಾಗತಿಕ ಉಗ್ರ ಸಂಘಟನೆ ಅಲ್-ಖೈದಾ ಜತೆ ಸಂಪರ್ಕ ಹೊಂದಿದ್ದರು. ಬಾಂಬ್ ತಯಾರಿಕೆಗೆ ಚಾಟ್ ಜಿಪಿಟಿ ಹಾಗೂ ಯುಟ್ಯೂಬ್ ಜಾಲಾಡಿದ್ದರು. ರಾಕೆಟ್ ಸುಧಾರಿತ ಸ್ಫೋಟಕಗಳನ್ನು ತಯಾರಿಸಿದ್ದು, ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಖಾಜಿಗುಂಡ್ ಅರಣ್ಯ ಪ್ರದೇಶದಲ್ಲಿ ಪರೀಕ್ಷಿಸಿದ್ದರು ಎಂದು ಎನ್‌ಐಎ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಕಳೆದ ವರ್ಷ ನವೆಂಬರ್10 ರಂದು ರಾಷ್ಟ್ರ ರಾಜಧಾನಿಯನ್ನು ಬೆಚ್ಚಿಬೀಳಿಸಿದ್ದ ತೀವ್ರ ಸ್ವರೂಪದ ಕಾರು ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಮೇ 14ರಂದು ಕೋರ್ಟ್‌ಗೆ ಸಲ್ಲಿಸಿದ 7,500 ಪುಟಗಳ ಬೃಹತ್ ಚಾರ್ಜ್‌ಶೀಟ್‌ನಲ್ಲಿ ಈ ಅಂಶಗಳು ಉಲ್ಲೇಖವಾಗಿವೆ. ಸ್ಫೋಟಕಗಳ ತಯಾರಿಕೆ ಮತ್ತು ಬಳಕೆಯಲ್ಲಿ ಆರೋಪಿಗಳು ಅಳವಡಿಸಿಕೊಂಡಿದ್ದ 'ಪ್ರಯೋಗಾಲಯ ಮಟ್ಟದ' ನಿಖರವಾದ ವಿಧಾನಗಳನ್ನು ಇದು ವಿವರಿಸುತ್ತದೆ. ಒಬ್ಬ ಆರೋಪಿಯು ಭಾರತ ಉಪಖಂಡದಲ್ಲಿ ಅಲ್ ಖೈದಾಗೆ ಸೇರಿದ 'ಅಂಸಾರ್ ಘಜ್ವತ್-ಉಲ್-ಹಿಂದ್' ಸಂಘಟನೆಯ 'ಇನ್ ಹೌಸ್ ಎಂಜಿನಿಯರ್' ಆಗಿದ್ದ ಎಂಬ ಸಂಗತಿಯೂ ಚಾರ್ಜ್‌ಶೀಟ್‌ನಲ್ಲಿದೆ.

ಹೈದರಾಬಾದ್ ರೋಗಿಗೆ ಚೀನಾದಿಂದ ಆಪರೇಷನ್!

ಹೈದರಾಬಾದ್: ಮೂತ್ರಕೋಶ ಸೋಂಕಿನಿಂದ ಬಳಲುತ್ತಿದ್ದ ಹೈದರಾಬಾದ್‌ನ ರೋಗಿಗೆ ಚೀನಾದ ವುಹಾನ್‌ನಿಂದ ರೊಬಾಟ್ ನೆರವಿನೊಂದಿಗೆ ಮೂತ್ರಕೋಶ ಮರುಸಂಯೋಜನೆ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ. ಗಡಿಯಾಚೆಗಿನ ಆರೋಗ್ಯ ಸೇವೆ ಮತ್ತು ಟೆಲಿಮೆಡಿಸಿನ್ ಕ್ಷೇತ್ರದಲ್ಲಿ ಈ ಸಾಧನೆ ಪ್ರಮುಖ ಮೈಲುಗಲ್ಲಾಗಿದೆ.

ಆರೋಗ್ಯ ಸಮ್ಮೇಳನದಲ್ಲಿ ಭಾಗವಹಿಸಲು ವುಹಾನ್‌ಗೆ ತೆರಳಿರುವ ಭಾರತದ ಮೂತ್ರಪಿಂಡ ತಜ್ಞ ಡಾ.ಸೈಯದ್ ಮೊಹಮ್ಮದ್ ಗೌಸ್ ಅವರು ಈ ಶಸ್ತ್ರಚಿಕಿತ್ಸೆ ನೆರವೇರಿಸಿದ್ದಾರೆ. ''ಚೀನಾದಲ್ಲಿ ಅಭಿವೃದ್ಧಿಪಡಿಸಲಾದ ರೊಬಾಟಿಕ್ ತಂತ್ರಜ್ಞಾನ ಮತ್ತು ಅಲ್ಟ್ರಾ-ಫಾಸ್ಟ್ 5ಜಿ ಇಂಟರ್ನೆಟ್ ಸಂಪರ್ಕವನ್ನು ಬಳಸಿ ಈ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಸುಮಾರು 90 ನಿಮಿಷ ನಡೆದ ಶಸ್ತ್ರಚಿಕಿತ್ಸೆಯನ್ನು ವುಹಾನ್‌ನ ಟಾಂಗ್‌ಜಿ ಆಸ್ಪತ್ರೆಯ ವೈದ್ಯರು ಮತ್ತು ಹೈದರಾಬಾದ್‌ನ ವೈದ್ಯಕೀಯ ತಂಡ ಜಂಟಿಯಾಗಿ ನಡೆಸಿದವು,'' ಎಂದು 'ಚೀನಾ ಡೈಲಿ' ವರದಿ ಮಾಡಿದೆ. ಈ ಅಪೂರ್ವ ಸಾಧನೆಯನ್ನು ಭಾರತದಲ್ಲಿನ ಚೀನಾ ರಾಯಭಾರ ಕಚೇರಿಯ ವಕ್ತಾರೆ ಯು ಜಿಂಗ್ ಅವರು 'ಎಕ್ಸ್' ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ''3,000 ಕಿ.ಮೀ ದೂರದ ವುಹಾನ್‌ನಿಂದ ಹೈದರಾಬಾದ್‌ನ ರೋಗಿಗೆ ಕೇವಲ 90 ನಿಮಿಷಗಳಲ್ಲಿ ಯಶಸ್ವಿ ರೊಬಾಟ್ ಆಧಾರಿತ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಗಡಿಗಳನ್ನು ಮೀರಿದ ಜೀವ ರಕ್ಷಕ ಸೇವೆ ಇದಾಗಿದೆ,'' ಎಂದು ಅವರು ಬರೆದುಕೊಂಡಿದ್ದಾರೆ.

ಶಸ್ತ್ರಚಿಕಿತ್ಸೆ ನಡೆದಿದ್ದು ಹೇಗೆ?: ಆಪರೇಷನ್‌ಗೂ ಮುನ್ನ ವುಹಾನ್ ಮತ್ತು ಹೈದರಾಬಾದ್‌ನ ವೈದ್ಯರು ಆನ್‌ಲೈನ್ ಮೂಲಕ ರೋಗಿಯ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿದರು. ರೊಬಾಟಿಕ್ ಕೈಗಳ ಚಲನೆಯ ವೇಗವನ್ನು ಯೋಜಿಸಿ, ಪರೀಕ್ಷಿಸಲಾಯಿತು. ಹೈದರಾಬಾದ್‌ನ ವೈದ್ಯರು ರೋಗಿಗೆ ಅರಿವಳಿಕೆ ನೀಡಿ ಆಪರೇಷನ್ ಥಿಯೇಟರ್‌ನಲ್ಲಿ ರೊಬಾಟಿಕ್ ಉಪಕರಣಗಳನ್ನು ಸಿದ್ಧಪಡಿಸಿದರು. ಈ ರೊಬಾಟಿಕ್ ವ್ಯವಸ್ಥೆಯು ಅತ್ಯಂತ ಸೂಕ್ಷ್ಮವಾದ ಶಸ್ತ್ರಚಿಕಿತ್ಸಾ ಉಪಕರಣಗಳು ಮತ್ತು ಹೈ-ಡೆಫಿನಿಷನ್ 3ಡಿ ಕ್ಯಾಮೆರಾಗಳನ್ನು ಒಳಗೊಂಡಿತ್ತು. ಇದು ವುಹಾನ್‌ನಲ್ಲಿದ್ದ ಡಾ.ಗೌಸ್ ಅವರಿಗೆ ನೇರ ದೃಶ್ಯಗಳನ್ನು ರವಾನಿಸುತ್ತಿತ್ತು. ಟಾಂಗ್‌ಜಿ ಆಸ್ಪತ್ರೆಯ ಕನ್ಸೋಲ್‌ನಲ್ಲಿ ಕುಳಿತ ವೈದ್ಯರು, ಹೈದರಾಬಾದ್‌ನ 3ಡಿ ಚಿತ್ರಗಳನ್ನು ಗಮನಿಸುತ್ತ ರೊಬಾಟಿಕ್ ಕೈಗಳನ್ನು ದೂರದಿಂದಲೇ ನಿಯಂತ್ರಿಸಿದರು.

ವರದಿಯ ಪ್ರಕಾರ, 5ಜಿ ನೆಟ್‌ವರ್ಕ್ ಕೇವಲ 200 ಮಿಲಿ ಸೆಕೆಂಡ್‌ಗಳಲ್ಲಿ ಸೂಚನೆಗಳನ್ನು ರವಾನಿಸುತ್ತಿದ್ದರಿಂದ, ವೈದ್ಯರ ಕೈಚಲನೆಗೆ ತಕ್ಕಂತೆ ರೊಬಾಟಿಕ್ ಕೈಗಳು ವಿಳಂಬವಿಲ್ಲದೆ ತಕ್ಷಣವೇ ಸ್ಪಂದಿಸಿದವು. ಯಾವುದೇ ತುರ್ತು ಪರಿಸ್ಥಿತಿ ಎದುರಾದರೆ ತಕ್ಷಣ ಮಧ್ಯಪ್ರವೇಶಿಸಲು ಹೈದರಾಬಾದ್‌ನ ವೈದ್ಯರ ತಂಡವು ಆಪರೇಷನ್ ಥಿಯೇಟರ್‌ನಲ್ಲೇ ಸನ್ನದ್ಧವಾಗಿತ್ತು.

3,000 ಕಿ.ಮೀ ದೂರದ ವುಹಾನ್‌ನಿಂದ ರೋಗಿಗೆ ಕೇವಲ 90 ನಿಮಿಷಗಳಲ್ಲಿ ಯಶಸ್ವಿ ರೊಬಾಟ್ ಶಸ್ತ್ರಚಿಕಿತ್ಸೆ

ವಿಕ ವಾರೆವಾ! ಈ ಜಗ ಬಲು ಸೋಜಿಗ

■ ಧೀರಜ್ ಪೊಯ್ಯೆಕಂಡ

ಬ್ಯಾಗ್ ಹಿಡಿದುಕೊಳ್ಳಲು ಜನ ಬೇಕೇ?

ಶಾಪಿಂಗ್‌ಗೆ ಹೋದರೆ ಹತ್ತಾರು ಬ್ಯಾಗುಗಳು. ಒಮ್ಮೊಮ್ಮೆ ಈ ಬ್ಯಾಗುಗಳನ್ನು ಹೊತ್ತುಕೊಂಡು ಸುತ್ತಾಡಬೇಕಲ್ಲಾ ಎಂದು ಕೆಲವು ಅಂಗಡಿಗಳಿಗೆ ಭೇಟಿ ನೀಡದೆ, ಇನ್ನೊಮ್ಮೆ ಬಂದರಾಯಿತು ಎಂದು ವಾಪಾಸ್ ಬರುವುದುಂಟು. ಆದರೆ, ದಿಲ್ಲಿಯ ಜನರಿಗೆ ಇನ್ನು ಮುಂದೆ ಈ ಸಮಸ್ಯೆ ಇಲ್ಲ. ಆರಾಮವಾಗಿ ಎಷ್ಟು ಬೇಕೋ ಅಷ್ಟು ಅಂಗಡಿ ಮಳಿಗೆಗಳಿಗೆ ಹೋಗಿ ಸುತ್ತಾಡಿಕೊಂಡು ಬರಬಹುದು. ಯಾಕೆಂದರೆ, ದಿಲ್ಲಿಯ ಲಜ್‌ಪತ್ ನಗರದಲ್ಲಿ ಒಂದು ವಿಶೇಷವಾದ ಸ್ಟಾರ್ಟಪ್ ಆರಂಭವಾಗಿದೆ. ಗಂಟೆಗೆ 149 ರೂಪಾಯಿ ಕೊಟ್ಟರೆ ಆಯಿತು. ನೀವು ಶಾಪಿಂಗ್‌ಗಾಗಿ ಅಂಗಡಿಯಿಂದ ಅಂಗಡಿಗೆ ಸುತ್ತಾಡುವಾಗ 'ಕ್ಯಾರಿಮೆನ್' ಟೀ ಶರ್ಟ್ ಹಾಕಿರುವ ಒಬ್ಬರು ನಿಮ್ಮ ಬ್ಯಾಗ್‌ಗಳನ್ನು ಹಿಡಿದುಕೊಂಡು ಹಿಂದಿಂದೆಯೇ ಬರುತ್ತಾರೆ. ಅಷ್ಟೇ ಅಲ್ಲ, ನಿಮಗೋಸ್ಕರ ಅವರು ಫುಡ್ ಕೋರ್ಟ್‌ಗಳಲ್ಲಿ ಸರತಿ ಸಾಲಿನಲ್ಲಿ ನಿಲ್ಲುತ್ತಾರೆ, ಕುಳಿತುಕೊಳ್ಳುವುದಕ್ಕೆ ಸ್ಥಳ ಹುಡುಕುತ್ತಾರೆ, ಮೆಟ್ರೋ ತನಕ ಬಿಟ್ಟು ಬಾಯ್ ಹೇಳುತ್ತಾರೆ. ಈ ಸುದ್ದಿಯನ್ನು ಓದಿದ ಮಹಿಳೆಯರು, 'ಇನ್ನು ಗಂಡಂದಿರ ಕಿರಿಕಿರಿಯಿಲ್ಲದೆ ಶಾಪಿಂಗ್ ಮಾಡಬಹುದು' ಎಂದು ಹೇಳಿದರೆ, ಗಂಡಸರು, 'ಇನ್ಮೇಲೆ ಒಂದು ಚಪ್ಪಲಿಗೆ ಆರು ಅಂಗಡಿ ಸುತ್ತುವ ಕಷ್ಟವಿಲ್ಲ' ಎಂದು ನಿಟ್ಟುಸಿರುಬಿಟ್ಟಿದ್ದಾರೆ.

ಮದರ್ ಶೆಂಗ್‌ಗೆ ಮಿಲಿಯನ್ ಫಾಲೋವರ್ಸ್

ಆಕೆಯ ಹೆಸರು ಶೆಂಗ್ ಹೈಲಿನ್. ಚೀನಾದ ಅನ್ಹುಯಿ ಪ್ರಾಂತ್ಯದ ಮಹಿಳೆ. 2009ರಲ್ಲಿ ನಡೆದ ದುರಂತವೊಂದರಲ್ಲಿ ಶೆಂಗ್‌ರ ಏಕೈಕ ಮಗಳು ಹಾಗೂ ಅಳಿಯ ಜೀವ ಕಳೆದುಕೊಂಡಿದ್ದರು. ಆಗ ಶೆಂಗ್‌ಗೆ ವಯಸ್ಸು 60. ಮಗಳ ಸಾವು ಮತ್ತು ಖಾಲಿತನದ ನೋವಿನಿಂದ ಹೊರಬರಲು ಆಕೆ ಐವಿಎಫ್ ಮೂಲಕ ಮಗು ಪಡೆದುಕೊಳ್ಳಲು ಮುಂದಾದರು. ಮೆಡಿಕಲ್ ಮಿರಾಕಲ್ ಎಂಬಂತೆ ಶೆಂಗ್ 2010ರಲ್ಲಿ ಅವಳಿ ಹೆಣ್ಣುಮಕ್ಕಳಿಗೆ ಜನ್ಮ ನೀಡಿದರು. ಈ ಮೂಲಕ ಚೀನಾದ ಅತ್ಯಂತ ಹಿರಿಯ ತಾಯಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವಳಿ ಮಕ್ಕಳೊಂದಿಗೆ ಸುಖವಾಗಿದ್ದ ಶೆಂಗ್ ವಿಚಾರದಲ್ಲಿ ಬದುಕು ಮಾತು ಮಾತ್ರ ನಿರ್ದಯಿಯಾಗಿತ್ತು. 2016ರಲ್ಲಿ ಪಾರ್ಶ್ವವಾಯುವಿಗೆ ತುತ್ತಾದ ಪತಿ 2022ರಲ್ಲಿ ಕೊನೆಯುಸಿರೆಳೆದರು. 2023ರಲ್ಲಿ ಹೂಡಿಕೆಯ ಆಮಿಷವೊಡ್ಡಿ ಮಹಿಳೆಯೊಬ್ಬಳು ಲಕ್ಷಾಂತರ ರೂ.ಗಳನ್ನು ಲೂಟಿ ಮಾಡಿದಳು. ಇಷ್ಟೆಲ್ಲಾ ಹೊಡೆತಗಳ ನಡುವೆಯೂ ಧೃತಿಗೆಡದ ಶೆಂಗ್ ಸಾಮಾಜಿಕ ಜಾಲತಾಣದ ಮೂಲಕ ಹೊಸ ಬದುಕನ್ನು ಕಂಡುಕೊಂಡಿದ್ದಾರೆ. ತಮ್ಮ 73ನೇ ವಯಸ್ಸಿಗೆ ಡಿಜಿಟಲ್ ಲೋಕಕ್ಕೆ ಕಾಲಿಟ್ಟ ಶೆಂಗ್ ಲೈವ್ ಸ್ಟ್ರೀಮಿಂಗ್ ಮೂಲಕ ಅಡುಗೆ, ಪೋಷಕರ ಜವಾಬ್ದಾರಿಗಳ ಬಗ್ಗೆ ಟಿಪ್ಸ್ ಕೊಡುತ್ತಾ, ಗೃಹೋಪಯೋಗಿ ವಸ್ತುಗಳನ್ನು ಮಾರುತ್ತಾ ಬದುಕು ಸಾಗಿಸುತ್ತಿದ್ದಾರೆ. ಈಗ ಅವರಿಗೆ ಹತ್ತು ಲಕ್ಷಕ್ಕೂ ಅಧಿಕ ಫಾಲೋವರ್‌ಗಳಿದ್ದಾರೆ. ನಾನು ನೂರು ವರ್ಷ ಬದುಕುತ್ತೇನೆ ಎಂದು ತುಂಬು ವಿಶ್ವಾಸದಿಂದ ಹೇಳುವ ಶೆಂಗ್ ಅಭಿಮಾನಿಗಳ ಪಾಲಿಗೆ 'ಮದರ್ ಶೆಂಗ್' ಆಗಿದ್ದಾರೆ.

ಚ್ಯೂಯಿಂಗ್ ಗಮ್ ಉಗುಳಿ ಸಿಕ್ಕಿಬಿದ್ದ ಕೊಲೆಗಾರ

ಅಮೆರಿಕದ ವಾಷಿಂಗ್ಟನ್‌ನ ಎವರೆಟ್‌ನಲ್ಲಿ ಸುಮಾರು 40 ವರ್ಷಗಳ ಹಿಂದೆ ನಡೆದಿದ್ದ ಎರಡು ಭೀಕರ ಕೊಲೆ ಮತ್ತು ಅತ್ಯಾಚಾರ ಪ್ರಕರಣಗಳನ್ನು ಪೊಲೀಸರು ಚ್ಯೂಯಿಂಗ್ ಗಮ್‌ನ ಸಹಾಯದಿಂದ ಭೇದಿಸಿದ್ದಾರೆ. ತಾನು ಉಗುಳಿದ ಚ್ಯೂಯಿಂಗ್ ಗಮ್‌ನ ತುಣುಕು ಅಪರಾಧಿಗೆ ಶಿಕ್ಷೆಯಾಗುವಂತೆ ಮಾಡಿದೆ.

ನಡೆದಿರುವುದು ಇಷ್ಟು: 1980ರ ಜುಲೈನಲ್ಲಿ ಸುಸಾನ್ ವೆಸ್ಸೆ ಎಂಬ ಮಹಿಳೆಯನ್ನು ಅತ್ಯಾಚಾರ ಮಾಡಿ ಕೊಲೆಮಾಡಲಾಗಿತ್ತು. 1984ರ ಜೂನ್‌ನಲ್ಲಿ ಜೂಡಿ ವೀವರ್ ಎಂಬ ಮಹಿಳೆಯೂ ಹೀಗೆಯೇ ಜೀವ ಕಳೆದುಕೊಂಡಿದ್ದರು. ಭೀಕರ ಕೊಲೆಗಳಾಗಿದ್ದರೂ ಹಲವು ದಶಕಗಳ ಕಾಲ ಕೊಲೆಗಾರ ಯಾರು ಎಂಬುದು ನಿಗೂಢವಾಗಿ ಉಳಿದಿತ್ತು. ಆದರೆ, ಇತ್ತೀಚೆಗೆ ಪೊಲೀಸರು ಆಧುನಿಕ ಡಿಎನ್‌ಎ ತಂತ್ರಜ್ಞಾನದ ಸಹಾಯದಿಂದ ಈ ಕೊಲೆಗಳನ್ನು ಮಿಚೆಲ್ ಗ್ರ್ಯಾಫ್ (68 ವರ್ಷ) ಎಂಬ ವ್ಯಕ್ತಿ ಮಾಡಿರಬಹುದು ಎಂಬ ಅನುಮಾನಕ್ಕೆ ಬಂದಿದ್ದಾರೆ. ಆದರೆ, ಇದನ್ನು ಕೋರ್ಟ್‌ನಲ್ಲಿ ಸಾಬೀತುಪಡಿಸಲು ಆತನ ಡಿಎನ್‌ಎ ಮಾದರಿ ಅತ್ಯಗತ್ಯವಾಗಿತ್ತು. ಇದಕ್ಕಾಗಿ ಮೂವರು ಅಂಡರ್ ಕವರ್ ಏಜೆಂಟ್‌ಗಳು ಶಂಕಿತನನ್ನು ಹಿಂಬಾಲಿಸಲು ಆರಂಭಿಸಿದರು. ಮಿಚೆಲ್ ಸಾರ್ವಜನಿಕ ಸ್ಥಳವೊಂದರಲ್ಲಿ ಚೂಯಿಂಗ್ ಗಮ್ ಅಗಿದು, ಅದನ್ನು ಕೆಳಗೆ ಉಗುಳುವುದನ್ನು ಕಂಡ ಪೊಲೀಸರು ತಕ್ಷಣವೇ ಅಲ್ಲಿಗೆ ಧಾವಿಸಿ ಚ್ಯೂಯಿಂಗ್ ಗಮ್ ವಶಪಡಿಸಿಕೊಂಡಿದ್ದಾರೆ. ಚ್ಯೂಯಿಂಗ್ ಗಂನ ಡಿಎನ್‌ಎ ಪರೀಕ್ಷೆ ಬಳಿಕ ಎರಡೂ ಕೊಲೆಗಳ ಸ್ಥಳದಲ್ಲಿ ಪತ್ತೆಯಾದ ಡಿಎನ್‌ಎ ಮಾದರಿಗೆ ಮಿಚೆಲ್ ಗ್ರ್ಯಾಫ್‌ನ ಡಿಎನ್‌ಎ ಹೊಂದಾಣಿಕೆಯಾಗಿದೆ. ಬಲವಾದ ಸಾಕ್ಷ್ಯ ಲಭಿಸಿದ್ದರಿಂದ ಪೊಲೀಸರು ಸರಿಯಾಗಿಯೇ 'ವಿಚಾರಣೆ' ಮಾಡಿದ್ದಾರೆ. ಈ ಸಂದರ್ಭ ಮಿಚೆಲ್ ತಾನೇ ಕೊಲೆಗಾರ ಎಂದು ಒಪ್ಪಿದ್ದಾನೆ. ನ್ಯಾಯಾಲಯದ ವಿಚಾರಣೆ ಬಳಿಕ ಆತನಿಗೆ ಮೇ 13ರಂದು ಜೀವಿತಾವಧಿಯವರೆಗೆ ಜೈಲಿನಲ್ಲಿರುವ ಶಿಕ್ಷೆ ವಿಧಿಸಲಾಗಿದೆ.

ಬಂಗಾಳದ ಫಾಲ್ತಾ ಕ್ಷೇತ್ರದಲ್ಲಿ ಬಿಜೆಪಿಗೆ ಭರ್ಜರಿ ಗೆಲುವು

ಕೋಲ್ಕೊತಾ: ತೀವ್ರ ಕುತೂಹಲ ಮೂಡಿಸಿದ್ದ ಪಶ್ಚಿಮ ಬಂಗಾಳದ ಫಾಲ್ತಾ ವಿಧಾನಸಭಾ ಕ್ಷೇತ್ರವನ್ನು ಬಿಜೆಪಿ ಭಾರಿ ಅಂತರದಿಂದ ಗೆದ್ದುಕೊಂಡಿದೆ. ಬಿಜೆಪಿ ಅಭ್ಯರ್ಥಿ ದೇಭಾಂಶು ಪಾಂಡಾ ಅವರು ದಾಖಲೆಯ 1.9 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ದೇಭಾಂಶುಗೆ ದಾಖಲೆಯ 1.9 ಲಕ್ಷ ಮತಗಳ ಅಂತರದ ಜಯ

ಒಟ್ಟು 1,49,666 ಮತಗಳನ್ನು ಪಡೆದುಕೊಂಡ ಬಿಜೆಪಿ ಅಭ್ಯರ್ಥಿ ಪಾಂಡಾ ಅವರು 40,645 ಮತ ಪಡೆದ ಸಿಪಿಐ(ಎಂ) ಅಭ್ಯರ್ಥಿ ಶಂಭುನಾಥ್ ಕುರ್ಮಿ ಅವರನ್ನು 1,09,021 ಮತಗಳ ಅಂತರದಿಂದ ಸೋಲಿಸಿದರು. ಕೊನೆಕ್ಷಣದಲ್ಲಿ ಚುನಾವಣಾ ಕದನದಿಂದ ಹಿಂದೆ ಸರಿದಿದ್ದ ಟಿಎಂಸಿ ಅಭ್ಯರ್ಥಿ ಜಹಂಗೀರ್ ಖಾನ್ 7,783 ಮತಗಳನ್ನು ಪಡೆದುಕೊಂಡು, ಠೇವಣಿ ಕಳೆದುಕೊಂಡಿದ್ದಾರೆ. ಕಾಂಗ್ರೆಸ್‌ನ ಅಬ್ದುಲ್ ರಜಾಕ್ 10,084 ಮತ ಪಡೆದಿದ್ದಾರೆ.

ಫಾಲ್ತಾ ವಿಧಾನಸಭೆ ಕ್ಷೇತ್ರದ ಜಯದೊಂದಿಗೆ ವಿಧಾನಸಭೆಯಲ್ಲಿ ಬಿಜೆಪಿ ಸಂಖ್ಯಾಬಲ 208ಕ್ಕೆ ಏರಿಕೆಯಾಗಿದೆ. ಮೇ 4 ರಂದು ಪ್ರಕಟವಾದ ಫಲಿತಾಂಶದಲ್ಲಿ ಬಿಜೆಪಿ 207, ಟಿಎಂಸಿ 80 ಸ್ಥಾನ ಪಡೆದಿದ್ದವು. ''ಫಾಲ್ತಾ ಕ್ಷೇತ್ರದಲ್ಲಿ ಬಿಜೆಪಿಗೆ ಸಿಕ್ಕ ದೊಡ್ಡ ಗೆಲುವು ರಾಜ್ಯದಲ್ಲಿ ಜನ ಪರಿವರ್ತನೆ ಬಯಸಿರುವುದಕ್ಕೆ ಸಾಕ್ಷಿಯಾಗಿದೆ,'' ಎಂದು ಬಿಜೆಪಿ ಮುಖಂಡ ತಪಸ್ ರಾಯ್ ವಿಶ್ಲೇಷಿಸಿದ್ದಾರೆ.

ಫಾಲ್ತಾ ಕ್ಷೇತ್ರಕ್ಕೆ ಏಪ್ರಿಲ್ 29 ರಂದು ನಡೆದ ಮತದಾನದ ವೇಳೆ ಅಕ್ರಮ ನಡೆದಿದೆ. ಮತದಾರರಿಗೆ ಬೆದರಿಕೆ ಹಾಕಲಾಗಿದೆ. ಬಿಜೆಪಿ ಚಿಹ್ನೆಯನ್ನು ಮುಚ್ಚಲಾಗಿದೆ ಎಂಬ ಆರೋಪ ಹಿನ್ನೆಲೆಯಲ್ಲಿ ಮರು ಚುನಾವಣೆಗೆ ಆದೇಶ ನೀಡಲಾಗಿತ್ತು. ಮೇ 21 ರಂದು ನಡೆದ ಮರು ಮತದಾನದ ವೇಳೆ ಶೇ.88ರಷ್ಟು ಮತದಾನವಾಗಿತ್ತು.

ಫಾಲ್ತಾ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಮರು ಮತದಾನದ ವೇಳೆ ಬಿಜೆಪಿ ಚುನಾವಣಾ ಅಕ್ರಮ ನಡೆಸಿದೆ. ಇವಿಎಂಗಳನ್ನು ತಿರುಚಲಾಗಿದೆ. ಮತಗಳನ್ನು ಕಳ್ಳತನ ಮಾಡಲಾಗಿದೆ. ಅನೈತಿಕ ಮಾರ್ಗದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

- ಮಮತಾ ಬ್ಯಾನರ್ಜಿ ಟಿಎಂಸಿ ವರಿಷ್ಠ ನಾಯಕಿ

Bennett & Coleman
THE TIMES OF INDIA
www.vijaykarnataka.com
ಸೋಮವಾರ,25 ಮೇ 2026 | ಪುಟಗಳು: 16 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 144
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA



ಏಲಿಯನ್ ಕಥೆ ಆಧಾರಿತ ಥ್ರಿಲ್ಲರ್ ಮೂವಿ 'ಸಮುಕ್' ನಲ್ಲಿ ನಾಯಕನಾಗಿ ನಟಿಸಲಿರುವ ಅಕ್ಷಯ್‌ಕುಮಾರ್

ಕಾನ್ಸ್ ಚಲನಚಿತ್ರೋತ್ಸವದಲ್ಲಿ ಐಶ್ವರ್ಯಾ ಮೆಲೊಡಿ
ಲವಲVK ನೋಡಿ

ಐಪಿಎಲ್: ಮುಂಬಯಿ ವಿರುದ್ಧ ರಾಜಸ್ಥಾನ ರಾಯಲ್ಸ್‌ಗೆ 30 ರನ್ಸ್ ಜಯ, ಪ್ಲೇಆಫ್‌ಗೆ ಲಗ್ಗೆ

ಸ್ಕೂಲ್ ಬಿಲ್ಡಿಂಗ್‌ಗಳಿಗೆ ಭದ್ರತೆ

48 ಸಾವಿರ ಸರಕಾರಿ ಶಾಲಾ ಕಟ್ಟಡಗಳಿಗೆ 640 ಕೋಟಿ ರೂ. ಬಜೆಟ್ ಕವಚ

ರಾಷ್ಟ್ರೀಯ ಸಂಹಿತೆಯಡಿ ಕೊಠಡಿಗಳ ಹೈಟೆಕ್ ನವೀಕರಣಕ್ಕೆ ಶಿಕ್ಷಣ ಇಲಾಖೆ ಸಜ್ಜು

■ **ಶಾಂತಮೂರ್ತಿ** ಬೆಂಗಳೂರು
shantha.a@timesofindia.com

ಮುರಿದು ಬಿದ್ದ ಗೋಡೆ, ಶಿಥಿಲ ಚಾವಣಿ, ಮಳೆ ಬಂದರೆ ಸೋರುವ ತರಗತಿ ಕೊಠಡಿಗಳು- ಹೀಗೆ ಸಾಲುಸಾಲು ಸಮಸ್ಯೆಗಳ ಸರಮಾಲೆ ಹೊತ್ತ ರಾಜ್ಯದ ಸರಕಾರಿ ಶಾಲೆಗಳಿಗೆ ಹೊಸ ರೂಪ ನೀಡಲು ಸರಕಾರ ಈಗ ಸಜ್ಜಾಗಿದೆ. ಸರಕಾರಿ ಶಾಲೆಗಳ ಕಟ್ಟಡಗಳನ್ನು ಸದೃಢಗೊಳಿಸುವ ಮೂಲಕ ವಿದ್ಯಾರ್ಥಿಗಳಿಗೆ ಭದ್ರತೆಯ ಭರವಸೆ ನೀಡಲು ತಯಾರಿ ನಡೆದಿದೆ.

'ಸುರಕ್ಷಿತ ಕಲಿಕೆ-ಸುಭದ್ರ ಭವಿಷ್ಯ' ಎಂಬ ಧ್ಯೇಯವಾಕ್ಯದಡಿ ರಾಜ್ಯದ ಸರಕಾರಿ ಶಾಲೆಗಳ ಕಟ್ಟಡಗಳನ್ನು ನವೀಕರಣಗೊಳಿಸಲು ಯೋಜನೆ ರೂಪಿಸಿದ್ದು, ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆ-2016 ಮಾನದಂಡ ಅನುಸರಿಸಿ ಶಾಲಾ ಕಟ್ಟಡಗಳಿಗೆ ಹೊಸ ರೂಪ ನೀಡಲು ಸಿದ್ಧತೆ ನಡೆದಿದೆ.

ರಾಜ್ಯದಲ್ಲಿ 48,436 ಸರಕಾರಿ ಶಾಲೆಗಳಿದ್ದು, ಈ ಪೈಕಿ 43,500 ಪ್ರಾಥಮಿಕ ಶಾಲೆಗಳು ಹಾಗೂ 4,872 ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಶಿಕ್ಷಣ ಇಲಾಖೆಯ ಇತ್ತೀಚಿನ ವರದಿಗಳ ಪ್ರಕಾರ, 3,300 ಶಾಲೆಗಳು ನೂರು ವರ್ಷ ಪೂರೈಸಿವೆ. ಶತಮಾನ ಪೂರೈಸಿದ ಶಾಲೆಗಳನ್ನು ಪಾರಂಪರಿಕ ಶಾಲೆಗಳು ಎಂದು ಗುರುತಿಸಿ ಅವುಗಳ ಅಭಿವೃದ್ಧಿಗೆ ಶಿಕ್ಷಣ ಇಲಾಖೆ ಈಗಾಗಲೇ ಯೋಜನೆ ರೂಪಿಸಿದೆ. ರಾಜ್ಯದ ಬಹುತೇಕ ಸರಕಾರಿ ಶಾಲೆಗಳು ಶಿಥಿಲಗೊಂಡ ಕಟ್ಟಡಗಳು, ಅಸುರಕ್ಷಿತ ಗೋಡೆಗಳಿಂದ ಕೂಡಿದ್ದು, ಅಂತಹ ಕಟ್ಟಡಗಳನ್ನು ನವೀಕರಿಸುವ ಜತೆಗೆ, ಭೂಕಂಪ ನಿರೋಧಕ ಹಾಗೂ ಅಗ್ನಿ ನಿರೋಧಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಕೂಡ ಇಲಾಖೆ ಚಿಂತನೆ ನಡೆಸಿದೆ.

ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದರ ಜತೆಗೆ, ಪ್ರತಿ ಮೂರು ತಿಂಗಳಿಗೊಮ್ಮೆ ಮಾಕ್ ಡ್ರಿಲ್ ನಡೆಸುವ ಮೂಲಕ ವಿದ್ಯಾರ್ಥಿಗಳ ಸುರಕ್ಷತೆಗೆ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ರಾಜ್ಯದ ಸರಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಕಟ್ಟಡಗಳ ನವೀಕರಣಕ್ಕಾಗಿ ಸರಕಾರ ಪ್ರತಿ ಬಾರಿ ಬಜೆಟ್‌ನಲ್ಲಿ ಅನುದಾನ ಮೀಸಲಿಡುವ ಮೂಲಕ ಗಮನಹರಿಸುತ್ತಿದೆ. 2026-27ನೇ ಸಾಲಿನ ಬಜೆಟ್‌ನಲ್ಲಿ 565 ಕೋಟಿ ರೂ. ಅನುದಾನವನ್ನು ಸರಕಾರಿ ಶಾಲೆಗಳ ತರಗತಿ ಕೊಠಡಿಗಳ ನಿರ್ಮಾಣಕ್ಕೆ ಮೀಸಲಿಡಲಾಗಿದೆ. »06

- **ಬಜೆಟ್ ಕವಚ:** 640 ಕೋಟಿ ರೂ. ಬೃಹತ್ ಹೂಡಿಕೆ
- **ತರಗತಿ ಕೊಠಡಿಗಳ ನಿರ್ಮಾಣ:** 565 ಕೋಟಿ ರೂ.
- **ಸ್ವಚ್ಛ-ಸುರಕ್ಷಿತ ಟಾಯ್ಲೆಟ್‌ಗಳಿಗೆ:** 75 ಕೋಟಿ ರೂ.
- **ಹೆಚ್ಚುವರಿ ಬೇಕಾದರೆ:** ಸಿಎಸ್‌ಆರ್ ನಿಧಿ ಬಳಕೆ

ಏನಿದು ಕಟ್ಟಡ ಸಂಹಿತೆ?

ಈ ಮಾರ್ಗಸೂಚಿಯಲ್ಲಿ ಶಾಲೆಗಳ ಕಟ್ಟಡದ ಸುರಕ್ಷತೆ ಮಾನದಂಡಗಳು ಹಾಗೂ ಕಟ್ಟಡಗಳ ವಿನ್ಯಾಸದ ಬಗ್ಗೆ ನಿಯಮಗಳನ್ನು ರೂಪಿಸಲಾಗಿದೆ. ತರಗತಿ ಕೊಠಡಿಗಳ ಚಾವಣಿ ನೆಲಮಟ್ಟದಿಂದ ಕನಿಷ್ಠ 3.6 ಮೀಟರ್ ಎತ್ತರವಿರಬೇಕು. ನಿರ್ಗಮನ ದ್ವಾರಗಳು ಕನಿಷ್ಠ 1000 (3.28 ಅಡಿ) ಮಿ.ಮೀ. ಅಗಲ ಹಾಗೂ 2000 (6.56 ಅಡಿ) ಮಿ.ಮೀ. ಉದ್ದ ಇರಬೇಕು ಎಂಬುದರ ಜತೆಗೆ, ಹಲವು ನಿಯಮಗಳನ್ನು ಒಳಗೊಂಡಿದೆ. ಕಟ್ಟಡದ ವಿನ್ಯಾಸದ ಜತೆಗೆ, ಸುರಕ್ಷಿತ ಅಗ್ನಿ ನಿರೋಧಕ ಸಾಧನಗಳ ಅಳವಡಿಕೆ, ಪ್ರಕೃತಿ ವಿಕೋಪಗಳನ್ನು ತಡೆಯಬಲ್ಲ ಪರಿಸರಸ್ನೇಹಿ ಕಟ್ಟಡಗಳಿಗೆ ಈ ಮಾರ್ಗಸೂಚಿಯಲ್ಲಿ ಆದ್ಯತೆ ನೀಡಲಾಗಿದೆ.

ರಾಜ್ಯ ಬಿಜೆಪಿಗೆ ನಿತಿನ್ ಪಂಚತಂತ್ರ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಕರ್ನಾಟಕಕ್ಕೆ ಆಗಮಿಸಿದ ನಿತಿನ್ ನವೀನ್, ರಾಜ್ಯದಲ್ಲಿ ಪಕ್ಷದ ಬಲವರ್ಧನೆಗೆ ಸ್ಪಷ್ಟ 'ನೀಲನಕ್ಷೆ' ನೀಡಿದ್ದಾರೆ. ಪಕ್ಷದೊಳಗಿನ ಭಿನ್ನಮತಕ್ಕೆ ಬ್ರೇಕ್ ಹಾಕಲು 'ಒಗ್ಗಟ್ಟಿನ ಸೂತ್ರ' ಪ್ರಕಟಿಸಿರುವ ಅವರು, 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮರಳಿ ಅಧಿಕಾರಕ್ಕೆ ತರುವುದೇ ಏಕೈಕ ಗುರಿ ಎಂದು ಸ್ಪಷ್ಟಪಡಿಸಿದ್ದಾರೆ.

ಶನಿವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದ್ದ ನಿತಿನ್ ನವೀನ್, ಭಾನುವಾರ ಬೆಳಗ್ಗೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ನಿವಾಸದಲ್ಲಿ ಹಿರಿಯ ನಾಯಕರೊಂದಿಗೆ ಉಪಹಾರ ಕೂಟದ ಮೂಲಕ ಅನೌಪಚಾರಿಕ ಮಾತುಕತೆ ನಡೆಸಿದರು. ಅನಂತರ ರಾಜ್ಯ ಬಿಜೆಪಿ ಕಚೇರಿ 'ಜಗನ್ನಾಥ ಭವನ'ದಲ್ಲಿ ನಡೆದ ಕೋರ್‌ಕಮಿಟಿ ಸಭೆ ಸೇರಿದಂತೆ ಸರಣಿ ಸಭೆಗಳ ನೇತೃತ್ವ ವಹಿಸಿ, ಸಂಜೆ ಬೆಂಗಳೂರು ಉತ್ತರ ಜಿಲ್ಲಾ ವಿಭಾಗದ ಪ್ರಶಿಕ್ಷಣ ವರ್ಗದ ಸಮಾರೋಪದಲ್ಲಿ ಭಾಗಿಯಾದರು. ಶಿಸ್ತು, ಒಗ್ಗಟ್ಟು, ಸಮನ್ವಯ, ವ್ಯಕ್ತಿ ಪ್ರತಿಷ್ಠೆ ಬಿಟ್ಟು ಪಕ್ಷದ ಕೆಲಸಕ್ಕೆ ಸಮರ್ಪಿಸಿಕೊಳ್ಳುವಂತೆ ನಿತಿನ್ ನವೀನ್ ವಿಶೇಷ ಒತ್ತು ಕೊಟ್ಟು ಹೇಳಿರುವುದು ರಾಜ್ಯ ಬಿಜೆಗೆ ಮಹತ್ವದ ಸಂದೇಶವಾಗಿದೆ. »06

ಕರ್ನಾಟಕ ಬಿಜೆಪಿ ಮುಖಂಡರಿಂದ ರಾಷ್ಟ್ರಾಧ್ಯಕ್ಷ ನಿತಿನ್ ಅವರಿಗೆ ನೆನಪಿನ ಕಾಣಿಕೆ.

ತಂತ್ರ 1 ತಮಿಳುನಾಡು ರಿಸಲ್ಟ್‌ನಿಂದ ಪಾಠ ಕಲಿಯಿರಿ !

''ರಾಜ್ಯದಲ್ಲಿ ಜನರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಸಚಿವರುಗಳ ಮೇಲೆ ಭ್ರಷ್ಟಾಚಾರದ ಆರೋಪವಿದೆ. ಮುಖ್ಯಮಂತ್ರಿಯವರ ವಿರುದ್ಧವೂ ಆಪಾದನೆಯಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಜನರ ಬದುಕಿಗೆ ಗ್ಯಾರಂಟಿ ಇಲ್ಲದಾಗಿದೆ. ಮಹಿಳೆಯರ ನಾಪತ್ತೆ ಪ್ರಕರಣ ನಡೆದಿದೆ. ಇದೊಂದೇ ಅಂಶ ಬಿಜೆಪಿ ಅಧಿಕಾರಕ್ಕೆ ಬರಲು ಸಹಾಯಕವಾಗದು. ಮುಂದೆ ಬಿಜೆಪಿಯದ್ದೇ ಅಧಿಕಾರವೆಂಬ ಭ್ರಮೆಯಲ್ಲಿ ಇರಬಾರದು. ತಮಿಳುನಾಡಿನಲ್ಲಿ ಡಿಎಂಕೆ ವೈಫಲ್ಯ ಎದ್ದು ಕಾಣುತ್ತಿತ್ತು. ಹಾಗಾಗಿ ಎಐಎಡಿಎಂಕೆ ಅಧಿಕಾರಕ್ಕೆ ಬರುತ್ತದೆ ಎಂದು ಭಾವಿಸಲಾಗಿತ್ತು. ಆದರೆ, ಟಿವಿಕೆ ಅಧಿಕಾರಕ್ಕೆ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ದೇಶದಲ್ಲಿ ಕಾಂಗ್ರೆಸ್‌ಗೆ ಬಿಜೆಪಿಯನ್ನು ಪರ್ಯಾಯವಾಗಿ ಹೇಗೆ ಕೊಟ್ಟರೋ ಅದೇ ರೀತಿಯಲ್ಲಿ ಕರ್ನಾಟಕದಲ್ಲೂ ಕಾಂಗ್ರೆಸ್‌ಗೆ ಉತ್ತಮ ಪರ್ಯಾಯವಾಗಿ ಬಿಜೆಪಿ ಹೊರಹೊಮ್ಮಬೇಕು.

- ರಾಷ್ಟ್ರೀಯ ಅಧ್ಯಕ್ಷರ ಮೊದಲ ಕರ್ನಾಟಕ ಪ್ರವಾಸ
- 2028ರ ಗದ್ದುಗೆ ಹಿಡಿಯಲು 'ಮಾಸ್ಟರ್ ಪ್ಲಾನ್' ನೀಡಿದ ನವೀನ್
- ಕಾಂಗ್ರೆಸ್ ವಿರೋಧಿ ಅಲೆಯ ಭ್ರಮೆ ಬೇಡ
- ಎಸಿ ಕಚೇರಿ ಬಿಟ್ಟು ಜನರ ಬಳಿಗೆ ಹೋಗಲು ನಾಯಕರಿಗೆ ಸಲಹೆ
- ವ್ಯಕ್ತಿ ಪ್ರತಿಷ್ಠೆ ಬಿಟ್ಟು ಒಗ್ಗಟ್ಟಿನ ಸೂತ್ರ ಹಿಡಿದರಷ್ಟೇ ಅಧಿಕಾರ ಗದ್ದುಗೆ
- ರಾಜ್ಯ ಸರಕಾರದ 3 ವರ್ಷಗಳ 'ಚಾರ್ಜ್‌ಶೀಟ್' ಹಿಡಿದು ಹೋರಾಡಿ

ಕರ್ನಾಟಕ ಸರ್ಕಾರ
ಗ್ಯಾರಂಟಿ ಹಬ್ಬ
4ನೇ ವರ್ಷಕ್ಕೆ ಪಾದಾರ್ಪಣೆ

ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್
ಕರ್ನಾಟಕದ ಗ್ಯಾರಂಟಿ ಸರ್ಕಾರವು ಕಳೆದ ಮೂರು ವರ್ಷಗಳಿಂದ ಪ್ರತಿ ಮನೆಗೂ ಉಚಿತ ವಿದ್ಯುತ್ ನೀಡುವ ಮೂಲಕ ಆರ್ಥಿಕ ಹೊರೆ ತಗ್ಗಿಸಿ, ಜನರ ಬದುಕಿನಲ್ಲಿ ಸುಸ್ಥಿರ ಭವಿಷ್ಯದ ಬೆಳಕು ಚೆಲ್ಲಿದೆ
ಗೃಹಜ್ಯೋತಿ ಯೋಜನೆಯಡಿ ಈವರೆಗೆ
₹26,115 ಕೋಟಿ
ಅನುದಾನವನ್ನು ವಿನಿಯೋಗಿಸಲಾಗಿದ್ದು, ಇದರಿಂದ ರಾಜ್ಯದ ಜನರ ಬದುಕು ಬೆಳಗುತ್ತಿದೆ
ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಗೃಹಜ್ಯೋತಿ ಯೋಜನೆಯ ಮೂಲಕ ರಾಜ್ಯದ
1.64 ಕೋಟಿ ಮನೆಗಳಲ್ಲಿ
ಉಚಿತ ವಿದ್ಯುತ್ ಬೆಳಗುತ್ತಿದ್ದು, ಉಳಿಕೆ ಹಣವು ಜನರ ಬದುಕನ್ನು ಸುಭದ್ರಗೊಳಿಸುತ್ತಿದೆ
ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಶಕ್ತಿ | ಅನ್ನಭಾಗ್ಯ | ಗೃಹಲಕ್ಷ್ಮಿ | ಯುವನಿಧಿ
'ಗೃಹಜ್ಯೋತಿ'ಯಿಂದಾಗಿರುವ ಬದಲಾವಣೆ ತಿಳಿಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
CMofKarnataka https://dipr.karnataka.gov.in/
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
ಕರ್ನಾಟಕ ವಾರ್ತೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾನ್ಯ ಸಚಿವರಾದ ಶ್ರೀ ಕೆ.ಜೆ. ಜಾರ್ಜ್ ಅವರು

SIR ವಿರುದ್ಧ ಕೈ ಜನಜಾಗೃತಿ

ಸುರ್ಜೇವಾಲಾ ನೇತೃತ್ವದ ಸಭೆಯಲ್ಲಿ ಸಿಎಂ, ಡಿಸಿಎಂ ಭಾಗಿ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುಂದಿನ 2 ತಿಂಗಳ ಕಾಲ ಕಟ್ಟೆಚ್ಚರ ವಹಿಸಲು ಕಾಂಗ್ರೆಸ್ ನಿರ್ಧರಿಸಿದೆ. ಎಸ್‌ಐಆರ್‌ನಿಂದ ಉಂಟಾಗುವ ವ್ಯತ್ಯಾಸಗಳ ಬಗ್ಗೆ ಜನಜಾಗೃತಿಗೆ ಪಕ್ಷದ ಜನಪ್ರತಿನಿಧಿಗಳು, ಮುಖಂಡರನ್ನು ನಿಯೋಜಿಸುವ ತೀರ್ಮಾನಕ್ಕೆ ಬರಲಾಗಿದೆ. ಸಚಿವರಿಗೂ ಟಾಸ್ಕ್ ಗೊತ್ತುಪಡಿಸಲಾಗಿದೆ.

ದೇವನಹಳ್ಳಿ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆಸಲಾದ ಮುಖಂಡರ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖ ನಡೆದ ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಂಪುಟದ ಸದಸ್ಯರು, ಶಾಸಕರು, ಸಂಸದರು ಪಾಲ್ಗೊಂಡಿದ್ದರು.

ಎಸ್‌ಐಆರ್ ಪ್ರಕ್ರಿಯೆಯನ್ನು ಕೇಂದ್ರದ ಬಿಜೆಪಿ ಸರಕಾರ ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಆರೋಪಿಸುತ್ತಿವೆ. ಬಿಹಾರ, ಪಶ್ಚಿಮ ಬಂಗಾಳದ ಮಾದರಿಯಲ್ಲಿ ರಾಜ್ಯದಲ್ಲೂ ಎಸ್‌ಐಆರ್ ಹೆಸರಿನಲ್ಲಿ ಲಕ್ಷಾಂತರ ಮತದಾರರ ಹೆಸರು ಕೈಬಿಡಲು ಚುನಾವಣೆ ಆಯೋಗದ ಮೂಲಕ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದು ಕಳೆದ ವಾರದ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು. ವಿವರ»02

ದಾವಣಗೆರೆ ವಿವಿ ಕಂಪ್ಯೂಟರ್ ಹಗರಣ

ಇತಿಹಾಸ ಸೇರಿದ 7ನೇ ಜನರೇಷನ್ ಸಿಸ್ಟಮ್‌ಗಳನ್ನೇ ಖರೀದಿಸಿದರು !

ಮಾರುಕಟ್ಟೆಯಲ್ಲೇ ಇಲ್ಲದ ಹಳೆ ಕಂಪ್ಯೂಟರ್‌ನಿಂದ ಪ್ರಯೋಜನವೇನು?

■ **ಯಳನಾಡು ಮಂಜು** ದಾವಣಗೆರೆ
manjunath.lokanath@timesofindia.com

ಜ್ಞಾನದ ದೇಗುಲವಾಗಬೇಕಿದ್ದ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಈಗ 'ಹೈಟೆಕ್ ಕಂಪ್ಯೂಟರ್ ಹಗರಣ'ವೊಂದು ಬಯಲಿಗೆ ಬಂದಿದೆ. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಅತ್ಯಾಧುನಿಕ ಕಂಪ್ಯೂಟರ್‌ಲ್ಯಾಬ್ ನಿರ್ಮಿಸುವ ನೆಪದಲ್ಲಿ, ಮಾರುಕಟ್ಟೆಯಿಂದಲೇ ಕಣ್ಮರೆಯಾಗಿರುವ ಹಳೆಯದಾದ 160 ಕಂಪ್ಯೂಟರ್‌ಗಳನ್ನು ಖರೀದಿಸಿ ಲಕ್ಷಾಂತರ ರೂಪಾಯಿ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ಉನ್ನತ ಮಟ್ಟದ ತನಿಖೆಗೆ ಒತ್ತಾಯ ವ್ಯಕ್ತವಾಗಿದೆ. ಈ ಕುರಿತು ಸಾಮಾಜಿಕ ಕಾರ್ಯಕರ್ತರ ಗುಂಪೊಂದು ವಿವಿಗೆ ದೂರು ನೀಡಿದೆ.

ಗಣಿತಶಾಸ್ತ್ರ, ಗಣಕ ವಿಜ್ಞಾನ ಮತ್ತು ಎಂಸಿಎ ವಿಭಾಗಗಳ ಕಂಪ್ಯೂಟರ್‌ಲ್ಯಾಬ್‌ಗಳು, ವಾರ್ಷಿಕ ನಿರ್ವಹಣಾ ಗುತ್ತಿಗೆ ಹಾಗೂ ಐಟಿ ಉಪಕರಣಗಳ ಖರೀದಿಯಲ್ಲಿ ಈ ಅವ್ಯವಹಾರ ನಡೆದಿದೆ. ದಾವಣಗೆರೆಯ ಖಾಸಗಿ ಸಂಸ್ಥೆಗೆ ಈ ಗುತ್ತಿಗೆ ನೀಡಲಾಗಿದ್ದು, ಟೆಂಡರ್‌ನ ನಿಯಮಗಳೇ ಹಗರಣಕ್ಕೆ ದಾರಿ ಮಾಡಿಕೊಟ್ಟಿವೆ.

ಗಣಿತ ಮತ್ತು ಎಂಸಿಎ ವಿಭಾಗದ ಎರಡೂ ಲ್ಯಾಬ್‌ಗಳಿಗಾಗಿ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿಲ್ಲದ ಇಂಟೆಲ್ ಕೋರ್ ಐ7 (7ನೇ ಜನರೇಷನ್) ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲು ಟೆಂಡರ್‌ನಲ್ಲಿ ಕೇಳಲಾಗಿತ್ತು. ಪ್ರಸ್ತುತ ಮಾರುಕಟ್ಟೆಯಲ್ಲಿ 13 ಮತ್ತು 14ನೇ ಜನರೇಷನ್ ಕಂಪ್ಯೂಟರ್‌ಗಳು ಲಭ್ಯವಿರುವಾಗ, ತೀರಾ ಹಳೆಯ ಮಾಡೆಲ್‌ಗೆ ಬೇಡಿಕೆ ಇಟ್ಟಿರುವುದೇ ದೊಡ್ಡ ಅನುಮಾನ ಮೂಡಿಸಿದೆ.

ಇಂಟೆಲ್ ಕೋರ್ ಐ7 ಮಾದರಿಯ ಕಂಪ್ಯೂಟರ್‌ನ್ನು 2017ರಲ್ಲಿ ಬಿಡುಗಡೆ ಮಾಡಿದ ಕಂಪನಿ, 2020ರ ಅಕ್ಟೋಬರ್‌ನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುವುದನ್ನು ನಿಲ್ಲಿಸಿದೆ. ಮಾರ್ಚ್ 31, 2024ಕ್ಕೆ ಸರ್ವೀಸಿಂಗ್ ಡೆಡ್‌ಲೈನ್ ಕೂಡ ಕೊನೆಗೊಳಿಸಿದೆ. ಹೀಗೆ ಮಾರುಕಟ್ಟೆಯಲ್ಲಿ ಲಭ್ಯವಿರದ ಕಂಪ್ಯೂಟರ್‌ನ್ನು ಸರಬರಾಜು ಮಾಡಲು ಟೆಂಡರ್‌ನಲ್ಲಿ ಕೇಳಿರುವುದೇ ಅನುಮಾನ ಹುಟ್ಟಿಸಿದೆ.

ಹಳೆಯ ಕಂಪ್ಯೂಟರ್ ಲ್ಯಾಬ್ ಒಡೆದು ಹಾಕಿರುವುದು.

ಈ ಎರಡೂ ಲ್ಯಾಬ್‌ಗೆ 88,888 ರೂ.ಬೆಲೆಯಂತೆ 110 ಕಂಪ್ಯೂಟರ್ ಖರೀದಿಸಲಾಗಿದೆ. ಇನ್ನಿತರೆ ಸಾಮಾಗ್ರಿ ಸೇರಿ ಒಟ್ಟು ಒಂದು ಲ್ಯಾಬ್‌ಗೆ 80 ಲಕ್ಷದಂತೆ ಎರಡು ಲ್ಯಾಬ್‌ಗೆ 1.60 ಕೋಟಿ ರೂ. ಖರ್ಚು ಮಾಡಲಾಗಿದೆ. ಇದರ ಜತೆಗೆ ಸುಸಜ್ಜಿತ ಮತ್ತು ಗಟ್ಟಿಮುಟ್ಟಾಗಿದ್ದ ಇನ್ನೂ ಹಲವಾರು ವರ್ಷ ಬಾಳಿಕೆಗೆ ಬರುವಂತಿದ್ದ ಗಣಿತ ವಿಭಾಗದ ಕಂಪ್ಯೂಟರ್ ಲ್ಯಾಬ್‌ನ್ನು ಒಡೆದು ಹಾಕಿ ಈಗ ಕಳಪೆ ಗುಣಮಟ್ಟದ ಪಾರ್ಟಿಕಲ್ ಬೋರ್ಡ್‌ನಿಂದ ಲ್ಯಾಬ್ ನಿರ್ಮಿಸಲಾಗಿದೆ ಎಂಬ ಆರೋಪವೂ ಇದೆ. ಗಣಕ ವಿಜ್ಞಾನ ವಿಭಾಗ ಕಂಪ್ಯೂಟರ್ ವಿಭಾಗದಲ್ಲೂ ಇದೇ ರೀತಿ ಆಗಿದೆ. ಈ ಲ್ಯಾಬ್ ನಿರ್ಮಾಣಕ್ಕೆ ಸಂಬಂಧಿಸಿದಂತೆ 80 ಲಕ್ಷ ರೂ.ಗಳ ಬಿಲ್ ಕೂಡ ಪಾವತಿಯಾಗಿದೆ.

ವಿವಿಗೆ ದೂರು

ಕಂಪ್ಯೂಟರ್ ಹಗರಣದ ಬಗ್ಗೆ ತನಿಖೆ ನಡೆಸಿ, ಆರ್ಥಿಕ ನಷ್ಟ ಉಂಟು ಮಾಡಿರುವ ಮತ್ತು ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸಾಮಾಜಿಕ ಕಾರ್ಯಕರ್ತರ ಗುಂಪು ವಿವಿಗೆ ಮನವಿಯನ್ನೂ ಸಲ್ಲಿಸಿದೆ.

ಕಂಪ್ಯೂಟರ್‌ಗಳು ಪ್ರಮುಖ ಬ್ರ್ಯಾಂಡ್‌ನ ಮೂಲ ಸಿಸ್ಟಮ್‌ಗಳಲ್ಲ, ಬದಲಿಗೆ ಅಸೆಂಬಲ್ಡ್ ಕಳಪೆ ಕಂಪ್ಯೂಟರ್‌ಗಳು ಎಂಬ ಆರೋಪವಿದೆ. ಆಯಾ ವಿಭಾಗಗಳಿಗೆ ಬೇಕಾದ ಕಂಪ್ಯೂಟರ್‌ಗಳು ಟೆಂಡರ್ ಮೂಲಕ ಸರಬರಾಜಾಗಿವೆ. ತಜ್ಞರ ಸಮಿತಿ ನೇಮಕ ಮಾಡಿ ಕ್ರಮ ಕೈಗೊಳ್ಳಲಾಗುವುದು.

- ಪ್ರೊ.ಬಿ.ಡಿ. ಕುಂಬಾರ್, ಕುಲಪತಿ, ದಾವಿವಿ.

ಪ್ರಶ್ನೆ: ಬಹಳ ಕಷ್ಟದ ದಿನಗಳನ್ನು ನೋಡುತ್ತಿದ್ದೇನೆ ಗುರೂಜಿ

ಜನ್ಮದಿನಾಂಕ: 11.01.1983 **ನಕ್ಷತ್ರ:** ಪುಷ್ಯ

ಪರಿಹಾರ: ದೇವರು ನಮಗೆ ಏನೂ ನೀಡಿಲ್ಲ ಎಂದು ಭಾವಿಸಬಾರದು. ಅನ್ನ, ನೀರು, ವಸ್ತ್ರ, ಆಶ್ರಯ ನೀಡಿದ್ದಾನೆ. ನಾವು ಯಾವ ಬಾಡಿಗೆಯನ್ನೂ ಅವನಿಗೆ ನೀಡುವುದಿಲ್ಲ, ಕೇವಲ ಸ್ತುತಿಸ ಮಾತ್ರದಿಂದಲೇ ಭಗವಂತ ಸಂತೃಪ್ತನಾಗುತ್ತಾನೆ. ಅನನ್ಯವಾಗಿ ಶ್ರೀಕೃಷ್ಣನನ್ನು ಪ್ರಾರ್ಥಿಸಿ. ಮುಂದಿನ ದಿನಗಳಲ್ಲಿ ದೇವರು ನೀಡುವ ಒಳ್ಳೆಯ ಫಲವನ್ನು ಅನುಭವಿಸಲು ಸಿದ್ಧರಾಗಿ.

ನೀವೂ ಪ್ರಶ್ನೆ ಕೇಳಬಹುದು...

ನೀವು ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. ರಾಜಗುರು ಬಿ.ಎಸ್. ದ್ವಾರಕಾನಾಥ್ ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ-ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ. ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 25-05-2026

ಪರಾಭವ ನಾಮ ಸಂವತ್ಸರ
ಆಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಶುಕ್ಲ. **ಮಳೆ ನಕ್ಷತ್ರ:** ಕೃತ್ತಿಕಾ. **ನಿತ್ಯನಕ್ಷತ್ರ:** ಉತ್ತರಾ. **ತಿಥಿ:** ದಶಮಿ. **ಯೋಗ:** ವಜ್ರ. **ಕರಣ:** ತೈತಿಲ. **ವಾರ:** ಸೋಮವಾರ.

ರಾಹು ಕಾಲ: ಬೆ. 7.30-9.00
ಗುಳಿಕ ಕಾಲ: ಮ. 1.30-3.00
ಯಮಗಂಡ ಕಾಲ: ಬೆ. 10.30-12.00
ಸೂರ್ಯ ಉದಯ: ಬೆ. 5.53
ಸೂರ್ಯ ಅಸ್ತ: ಸಂ. 6.39

ಮುಖಂಡರ ಸಭೆಯಲ್ಲಿ ವಿಸ್ತೃತ ಚರ್ಚೆ | ಜನಜಾಗೃತಿ ಮೂಡಿಸಲು ತೀರ್ಮಾನ | ಸಚಿವರಿಗೂ ಟಾಸ್ಕ್

ಎಸ್‌ಐಆರ್ ವಿರುದ್ಧ ಕಾಂಗ್ರೆಸ್ ಕಟ್ಟೆಚ್ಚರ

■ **ವಿಕ ಸುದ್ದಿಲೋಕ** ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುಂದಿನ 2 ತಿಂಗಳ ಕಾಲ ಕಟ್ಟೆಚ್ಚರ ವಹಿಸಲು ಕಾಂಗ್ರೆಸ್ ನಿರ್ಧರಿಸಿದೆ. ಎಸ್‌ಐಆರ್‌ನಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಜನಜಾಗೃತಿಗೆ ಪಕ್ಷದ ಜನಪ್ರತಿನಿಧಿಗಳು, ಮುಖಂಡರನ್ನು ನಿಯೋಜಿಸುವ ತೀರ್ಮಾನಕ್ಕೆ ಬರಲಾಗಿದೆ. ಸಚಿವರಿಗೂ ಟಾಸ್ಕ್ ಗೊತ್ತುಪಡಿಸಲಾಗಿದೆ.

ಎಸ್‌ಐಆರ್ ಬಹಳ ಆತಂಕಕಾರಿ. ಈ ಪ್ರಕ್ರಿಯೆಯನ್ನು ಕೇಂದ್ರದ ಬಿಜೆಪಿ ಸರಕಾರ ಅಸ್ತ್ರವಾಗಿ ಬಳಸಿಕೊಳ್ಳುತ್ತದೆ ಎನ್ನುವುದು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಆರೋಪ. ಈ ಬಗ್ಗೆ ಕಳೆದ ವಾರದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿತ್ತು. ಬಿಹಾರ, ಪಶ್ಚಿಮ ಬಂಗಾಳದ ಮಾದರಿಯಲ್ಲಿ ರಾಜ್ಯದಲ್ಲೂ ಎಸ್‌ಐಆರ್ ಹೆಸರಿನಲ್ಲಿ ಲಕ್ಷಾಂತರ ಮತದಾರರ ಹೆಸರು ಕೈಬಿಡಲು ಚುನಾವಣೆ ಆಯೋಗದ ಮೂಲಕ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದು ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಬಳಿಕ ಈ ಬಗ್ಗೆ ಪಕ್ಷದಿಂದ ಹೋರಾಟ ರೂಪಿಸಲು ಸಭೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿತ್ತು.

ಅದರಂತೆ ದೇವನಹಳ್ಳಿ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆಸಲಾದ ಸಭೆಯಲ್ಲಿ ಈ ಬಗ್ಗೆ ವಿಸ್ತೃತ ಸಮಾಲೋಚನೆ ನಡೆಸಲಾಯಿತು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖ ನಡೆದ ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಂಪುಟದ ಸದಸ್ಯರು, ಶಾಸಕರು, ಸಂಸದರು ಪಾಲ್ಗೊಂಡಿದ್ದರು.

ಸಚಿವರಿಗೆ ಜವಾಬ್ದಾರಿ: ಎಸ್‌ಐಆರ್ ಪ್ರಕ್ರಿಯೆ ನಡೆಯುವಾಗ ಪಕ್ಷದಿಂದಲೇ ಎಚ್ಚರ ವಹಿಸಬೇಕು. ಈ ಪ್ರಕ್ರಿಯೆಯಲ್ಲಿ ಎಸಗಲಾಗುವ ಸಂಭವನೀಯ ಪ್ರಮಾದಗಳ ಬಗ್ಗೆ ಬೂತ್ ಮಟ್ಟದ ಏಜೆಂಟರು, ಕಾರ್ಯಕರ್ತರಿಗೆ ತರಬೇತಿ, ಶಿಬಿರಗಳ ಮೂಲಕ ಮಾಹಿತಿ ನೀಡಬೇಕು. ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಕಾರ್ಯವ್ಯಾಪ್ತಿಯ ಜಿಲ್ಲೆಯ ಬೂತ್ ಮಟ್ಟದ ಏಜೆಂಟರೊಂದಿಗೆ ಖುದ್ದಾಗಿ ಸಭೆ ನಡೆಸಬೇಕು. ಅವರಿಗೆ ಅಗತ್ಯ ಮಾರ್ಗದರ್ಶನ ಮಾಡಬೇಕು ಎಂಬ ಸೂಚನೆ ನೀಡಲಾಯಿತು.

ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟರೆ ಗ್ಯಾರಂಟಿ ಸೇರಿದಂತೆ ಸರಕಾರದ ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳಾಗಲು ಸಾಧ್ಯವಿಲ್ಲ, ಸರಕಾರಿ ಸವಲತ್ತು ಬೇಕಾದರೆ ಮತದಾರರ ಪಟ್ಟಿಯಲ್ಲಿ ಹೆಸರು ಇರಬೇಕು. ಈ ಬಗ್ಗೆ ಜನರಿಗೆ ಮನವರಿಗೆ ಮಾಡಿಕೊಡಬೇಕು ಎಂದು ಸಚಿವರು ಹಾಗೂ ಇತರರಿಗೆ ಸುರ್ಜೇವಾಲಾ ಸೂಚನೆ ನೀಡಿದರು.

ಪಶ್ಚಿಮ ಬಂಗಾಳ ಇನ್ನಿತರ ರಾಜ್ಯಗಳಲ್ಲಿ ಚುನಾವಣೆ ಹತ್ತಿರ ಇರುವಾಗ ಎಸ್‌ಐಆರ್ ಕೈಗೊಳ್ಳಲಾಗಿದೆ. ಹಾಗಾಗಿ ಅಲ್ಲಿನ ಬಿಜೆಪಿ ವಿರೋಧಿ ರಾಜಕೀಯ ಪಕ್ಷಗಳಿಗೆ ಸಮಯಾವಕಾಶವೇ ಇಲ್ಲದೆ ತೊಂದರೆಯಾಗಿದೆ. ರಾಜ್ಯದಲ್ಲಿ ಚುನಾವಣೆಗೆ ಇನ್ನೂ 2 ವರ್ಷವಿರುವಾಗಲೇ ಎಸ್‌ಐಆರ್‌ಗೆ ಮುಂದಾಗಲಾಗಿದೆ. ಹಾಗಾಗಿ ಈ ಹುನ್ನಾರದ ವಿರುದ್ಧ ಹೋರಾಡಲು ಮತ್ತು ಜನರಿಗೆ ವಾಸ್ತವಾಂಶ ತಿಳಿಸಲು ಸಮಯವಿದೆ. ಇದನ್ನು ಸದವಕಾಶವಾಗಿ ಬಳಸಿಕೊಳ್ಳಬೇಕು ಎಂದು ಹಿರಿಯ ನಾಯಕರು ಹೇಳಿದರು ಎನ್ನಲಾಗಿದೆ.

ಬೆಂಗಳೂರು ದೇವನಹಳ್ಳಿ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆದ ಎಸ್‌ಐಆರ್ ಪ್ರಕ್ರಿಯೆ, ಜಿಬಿಎ ಚುನಾವಣೆಗೆ ಪಕ್ಷ ಸಂಘಟನೆ ಕುರಿತ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದರು.

ಪಕ್ಷದಿಂದಲೇ ಎಲ್ಲ ವ್ಯವಸ್ಥೆ

ಎಸ್‌ಐಆರ್ ವಿರುದ್ಧದ ಜಾಗೃತಿಯಲ್ಲಿ ಪಕ್ಷದ ಇಡೀ ಕೇಡರ್ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಕಡ್ಡಾಯ. ಈ ಸಂಬಂಧಿತ ಪ್ರಯಾಣ, ಸಭೆ, ತರಬೇತಿ ಶಿಬಿರಗಳ ವೆಚ್ಚವನ್ನು ಪಕ್ಷದಿಂದ ಭರಿಸಲಾಗುವುದು ಎಂಬ ಭರವಸೆ ನೀಡಲಾಯಿತು. ಪಕ್ಷದಿಂದ ಸಹಾಯವಾಣಿ ಪ್ರಾರಂಭಿಸುವುದಕ್ಕೂ ಸೂಚಿಸಲಾಯಿತು.

ಪದಾಧಿಕಾರಿಗಳ ಸಭೆ

ಕೆಪಿಸಿಸಿ ಪದಾಧಿಕಾರಿಗಳು ಹಾಗೂ ಮುಂಚೂಣಿ ಘಟಕಗಳೊಂದಿಗೆ ಎಸ್‌ಐಆರ್ ಕುರಿತ ಸಭೆ ಸೋಮವಾರವೂ ಮುಂದುವರಿಯಲಿದೆ.

ಗ್ಯಾರಂಟಿ ಪರಿಷ್ಕರಣೆ ಬಗ್ಗೆಯೂ ಚರ್ಚೆ

ಕುತೂಹಲದ ಸಂಗತಿಯೆಂದರೆ, ಗ್ಯಾರಂಟಿ ಯೋಜನೆಗಳ ಪರಿಷ್ಕರಣೆಯಿಂದ ಈಗಾಗಲೇ 100 ಕೋಟಿ ರೂ. ಉಳಿತಾಯ ಮಾಡಲಾಗಿದೆ. ಈ ಪರಿಷ್ಕರಣೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಬೇಕು. ಅನರ್ಹರನ್ನು ಫಲಾನುಭವಿಗಳ ಪಟ್ಟಿಯಿಂದ ತೆಗೆದು ಹಾಕಬೇಕು. ವೈಜ್ಞಾನಿಕ ನೆಲೆಯಲ್ಲಿ ಈ ಪ್ರಕ್ರಿಯೆ ಕೈಗೊಂಡು ಬೊಕ್ಕಸದ ಹಣ ಸೋರಿಕೆ ತಪ್ಪಿಸಬೇಕು ಎಂಬ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಯಿತು ಎಂದು ಗೊತ್ತಾಗಿದೆ.

ವೈಫಲ್ಯ ಮುಚ್ಚಿಕೊಳ್ಳಲು ಎಸ್‌ಐಆರ್ ವಿರುದ್ಧ ಅಪಪ್ರಚಾರ: ಎಚ್‌ಡಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ತನ್ನ ವೈಫಲ್ಯ ಮುಚ್ಚಿಕೊಂಡು ಜನರ ಗಮನ ಬೇರೆಡೆ ಸೆಳೆಯಲು ಎಸ್‌ಐಆರ್ ಬಗ್ಗೆ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಭಾನುವಾರ ಮಾತನಾಡಿದ ಅವರು, ''ಸ್ವಲ್ಪ ದಿನ ಮನರೇಗಾ ಬಗ್ಗೆ ಮಾತನಾಡಿದ್ದರು. ಈಗ ಎಸ್‌ಐಆರ್ ಬಗ್ಗೆ ಹೊರಟಿದ್ದಾರೆ. ಇವರಿಗೆ ಜನರ ಕೆಲಸ ಮಾಡುವ ಮನೋಭಾವ ಇಲ್ಲ, ಕೇಂದ್ರ ಸರಕಾರ ಅಕ್ಕಿ ಕೊಡುತ್ತಿದೆ. ಕೇಂದ್ರ ಕೊಡುತ್ತಿರುವ ಅಕ್ಕಿಯನ್ನು ಹಂಚಿ ಇವರು ಪುಕ್ಕಟೆ ಪ್ರಚಾರ ಪಡೆಯುತ್ತಿದ್ದಾರೆ,'' ಎಂದು ಆರೋಪಿಸಿದರು.

ವಸೂಲಿಯಲ್ಲಿ ವ್ಯಸ್ತ: ''ಬಿಡದಿ ಟೌನ್‌ಶಿಪ್ ಬಗ್ಗೆ ಚರ್ಚೆಗೆ ಆಹ್ವಾನ ಕೊಟ್ಟಿದ್ದು ಅವರು. ಅದಕ್ಕೆ ನಾನು ಸಿದ್ಧ ಎಂದು ಹೇಳಿದ್ದೇನೆ. ಪಾಪ ಅವರು ತುಂಬಾ ಬ್ಯೂಸಿ ಇದ್ದಾರೆ. ದಿನವೂ ಇವತ್ತು ಎಷ್ಟು ವಸೂಲಿ ಆಗಲೇಬೇಕು ಅಂತ ಇದ್ದಾರೆ. ಮೀಟರ್ ಲೆಕ್ಕ ಹಾಕೋದು, ರೇಟ್ ಫಿಕ್ಸ್ ಮಾಡೋದು ಅವರ ಕೆಲಸ. ದಿನವೂ ಅವರು ಅರ್ಧ ರಾತ್ರಿಯಲ್ಲಿ ಏನು ಮಾಡುತ್ತಾರೆ ಎನ್ನುವುದು ಗೊತ್ತಿಲ್ಲವೇ?,'' ಎಂದು ಹೇಳಿದರು.

ರಾಜ್ಯಸಭೆಗೆ ಕೇಳಿಲ್ಲ: ''ನಾವು ಯಾರನ್ನೂ ರಾಜ್ಯಸಭೆಗೆ ಮರು ಆಯ್ಕೆ ಮಾಡುವಂತೆ ಕೇಳಿಲ್ಲ. ನಮ್ಮ ಮಿತ್ರಪಕ್ಷಕ್ಕೆ ವಿಧಾನಸಭೆಯಲ್ಲಿ 63 ಸ್ಥಾನಗಳಿವೆ. ಹೀಗಾಗಿ ಬಿಜೆಪಿಯವರೇ ನಿರ್ಧರಿಸುತ್ತಾರೆ. ನಾನಾಗಲಿ, ದೇವೇಗೌಡರಾಗಲಿ ಈ ಬಗ್ಗೆ ಪ್ರಸ್ತಾಪಿಸಿಲ್ಲ, ದೇವೇಗೌಡರ ಆವಶ್ಯಕತೆ ಬಗ್ಗೆ ದಿಲ್ಲಿ ಮಟ್ಟದಲ್ಲಿ ತೀರ್ಮಾನಿಸಲಿ. ನಾವು ಇನ್ನೊಬ್ಬರಿಗೆ ತಪ್ಪಿಸಿ ನಮಗೆ ಕೊಡಿ ಎಂದು ಕೇಳಲ್ಲ'' ಎಂದು ಕುಮಾರಸ್ವಾಮಿ ತಿಳಿಸಿದರು.

ಜಾಹ್ನವಿ ಜೆಡಿಎಸ್ ಸೇರ್ಪಡೆ

ಬೆಂಗಳೂರು: ಈ ಬಾರಿಯ ಬಿಗ್ ಬಾಸ್ ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದ ನಿರೂಪಕಿ ಜಾಹ್ನವಿ ಜೆಡಿಎಸ್‌ಗೆ ಸೇರ್ಪಡೆಯಾದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ ಪಕ್ಷದ ಬಾವುಟ ನೀಡಿ ಜಾಹ್ನವಿ ಅವರನ್ನು ಜೆಡಿಎಸ್‌ಗೆ ಬರಮಾಡಿಕೊಂಡರು. ಜೆಡಿಎಸ್ ಕಚೇರಿ ಜೆ.ಪಿ. ಭವನದಲ್ಲಿ ಭಾನುವಾರ ನಡೆದ ಈ ಸೇರ್ಪಡೆ ಕಾರ್ಯಕ್ರಮದ ಬಳಿಕ ಮಾತನಾಡಿದ ಜಾಹ್ನವಿ, ''ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಜೆಡಿಎಸ್ ಸೇರಿದ್ದೇನೆ,'' ಎಂದು ಹೇಳಿದರು.

ಜಿಬಿಎ ಚುನಾವಣೆ: ಎಚ್‌ಡಿಕೆ ಸಭೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಚುನಾವಣೆ ಸಿದ್ಧತೆಗೆ ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಎಚ್.ಡಿ.ಕುಮಾರಸ್ವಾಮಿ ಸಭೆ ನಡೆಸಿದರು.

ಮತಗಟ್ಟೆ ಹಾಗೂ ವಾರ್ಡ್ ಮಟ್ಟದಲ್ಲಿ ಸಂಘಟನೆ ಬಗ್ಗೆ ಮುಖಂಡರಿಗೆ ಸೂಚನೆ ಕೊಟ್ಟ ಅವರು, ''ಚುನಾವಣೆಗೆ ಶ್ರಮಪಟ್ಟು ಕೆಲಸ ಮಾಡಿ. ಎಷ್ಟು ಸೀಟು ಪಡೆಯುತ್ತೇವೆ ತಲೆ ಕೆಡಿಸಿಕೊಳ್ಳಬೇಡಿ. ಆ ವಿಚಾರವನ್ನು ನನಗೆ ಬಿಡಿ,'' ಎಂದರು. ಜೆಡಿಎಸ್ ಗ್ರೇಟರ್ ಬೆಂಗಳೂರು ಸಮಿತಿ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಟಿ.ಎನ್. ಜವರಾಯಿಗೌಡ, ಪರಿಷತ್‌ನ ಮಾಜಿ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಸೇರಿ ಬೆಂಗಳೂರಿನ 5 ವಿಭಾಗಗಳ ಅಧ್ಯಕ್ಷರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಎಐಸಿಸಿ ಪಾಲಿಗೆ ಕರ್ನಾಟಕವೇ ಎಟಿಎಂ: ನಿತಿನ್ ನವೀನ್ ವಾಗ್ದಾಳಿ

ಕಾಂಗ್ರೆಸ್‌ನಿಂದ ರಾಜ್ಯಕ್ಕೆ ವಿಶ್ವಾಸ ದ್ರೋಹ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಕಾಂಗ್ರೆಸ್ ಸರಕಾರ ಇಲ್ಲಿನ ಜನರಿಗೆ ವಿಶ್ವಾಸ ದ್ರೋಹ ಎಸಗಿದೆ. ಜತೆಗೆ ಈ ಸರಕಾರ ಕಾಂಗ್ರೆಸ್‌ನ ದಿಲ್ಲಿಯವರಿಗೆ ಎಟಿಎಂ ಆಗಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ವಾಗ್ದಾಳಿ ನಡೆಸಿದ್ದಾರೆ.

ರಾಜ್ಯ ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ''ಕಾಂಗ್ರೆಸ್ ತನ್ನ ಒಳಜಗಳದ ಕಾರಣ ಜನಹಿತವನ್ನು ಕಡೆಗಣಿಸಿದೆ. ಜನಹಿತಕ್ಕೂ ಈ ಸರಕಾರಕ್ಕೂ ಸಂಬಂಧವೇ ಇಲ್ಲ, ಕಳೆದ 3 ವರ್ಷದಿಂದಲೂ ಈ ಸರಕಾರ ಜನರಿಗೆ ವಂಚಿಸುವ ಕೆಲಸ ಮಾಡಿದೆ,'' ಎಂದು ಆರೋಪಿಸಿದರು.

''ರಾಜ್ಯದಲ್ಲಿ ಸರಕಾರ ನಡೆಸುತ್ತಿರುವ ನಾಯಕರು ಸರಕಾರವನ್ನು ತಮಗಾಗಿ ಬಳಸಿಕೊಳ್ಳುತ್ತಿದ್ದಾರೆ. ಅಭಿವೃದ್ಧಿ ಕಾರ್ಯದಲ್ಲಿ ಈ ಸರಕಾರ ಸಂಪೂರ್ಣ ವಿಫಲವಾಗಿದೆ. ಬದಲಾಗಿ ದಿಲ್ಲಿಗೆ ಎಟಿಎಂ ಆಗಿದೆ,'' ಎಂದು ಆಪಾದಿಸಿದರು.

''ನಮ್ಮ ಪಕ್ಷದ ಜಿಲ್ಲಾ ತರಬೇತಿ ಶಿಬಿರಗಳು ನಡೆಯುತ್ತಿವೆ. ಅದರಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ. ರಾಜ್ಯದಲ್ಲಿ ಪಕ್ಷದ ಚಟುವಟಿಕೆ ಬಗ್ಗೆ ಚರ್ಚಿಸಲಾಯಿತು,'' ಎಂದು ಹೇಳಿದರು.

ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ಭೇಟಿ

ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ದರ್ಶನ ಪಡೆದರು. ಈ ವೇಳೆ ಡೊಳ್ಳು ಕುಣಿತದ ಜಾನಪದ ಕಲಾವಿದರ ಬಳಿ ತೆರಳಿದ ನಿತಿನ್ ನವೀನ್, ತಾವೂ ಡೊಳ್ಳು ಬಾರಿಸಿದ್ದು ಗಮನ ಸೆಳೆಯಿತು.

ಬಿಎಸ್‌ವೈ ನಿವಾಸದಲ್ಲಿ ನಿತಿನ್ ಉಪಾಹಾರ

ಬೆಂಗಳೂರು: ಪಕ್ಷದ ಸಂಘಟನೆ ಉದ್ದೇಶಕ್ಕೆ ರಾಜ್ಯಕ್ಕೆ ಆಗಮಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ನಿವಾಸದಲ್ಲಿ ಉಪಾಹಾರ ಕೂಟದಲ್ಲಿ ಭಾಗಿಯಾದರು.

ಡಾಲರ್ಸ್ ಕಾಲೋನಿಯಲ್ಲಿನ ಬಿಎಸ್‌ವೈ ನಿವಾಸದಲ್ಲಿ ಭಾನುವಾರ ಬೆಳಗ್ಗೆ ಏರ್ಪಡಿಸಿದ್ದ ಈ ಉಪಾಹಾರ ಕೂಟದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಜತೆಗೆ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್, ಡಿ.ವಿ.ಸದಾನಂದಗೌಡ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಸಿ.ಟಿ.ರವಿ, ಬಿ.ಶ್ರೀರಾಮುಲು, ಮುರುಗೇಶ್ ನಿರಾಣಿ, ಸಂಸದ ಬಿ.ವೈ. ರಾಘವೇಂದ್ರ ಪಾಲ್ಗೊಂಡರು. ಯಡಿಯೂರಪ್ಪ ಖುದ್ದಾಗಿ ನವೀನ್ ಅವರನ್ನು ಸ್ವಾಗತಿಸಿ ಶುಭ ಕೋರಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉಪಾಹಾರ ಕೂಟದ ಉಸ್ತುವಾರಿ ನೋಡಿಕೊಂಡರು.

ರಾಜ್ಯಪಾಲರ ಭೇಟಿಯಾದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೊಂದಿಗೆ ಲೋಕಭವನಕ್ಕೆ ತೆರಳಿದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಸೌಹಾರ್ದ ಭೇಟಿಯಾದರು.

2028ರ ಗದ್ದುಗೆಗೆ ನಿತಿನ್ ಪಾಠ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಂಬರುವ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸಲಹೆ, ಸೂಚನೆ ನೀಡಿದ್ದಾರೆ ಎಂದು ಸಭೆಯ ವಿವರಗಳನ್ನು ಮಾಜಿ ಸಚಿವ ಸಿ.ಟಿ.ರವಿ ಮಾಧ್ಯಮಗಳಿಗೆ ನೀಡಿದರು.

''ರಾಜ್ಯದಲ್ಲಿನ ಅರಾಜಕ ಶಕ್ತಿಗಳ ಬಗ್ಗೆಯೂ ಎಚ್ಚರ ವಹಿಸುವಂತೆ ಸಲಹೆ ನೀಡಿದ್ದಾರೆ. ಕರ್ನಾಟಕದ ಅಸ್ಮಿತೆ ಜತೆಗೆ ರಾಷ್ಟ್ರದ ಗೌರವ ಉಳಿಸುವ ಕೆಲಸ ಮಾಡಬೇಕಾಗಿದೆ. ದೇಶದ ಸಮಗ್ರತೆಗೆ ಅಡ್ಡಿಯಾಗದಂತೆ ಎಲ್ಲ ರಾಜ್ಯಗಳಲ್ಲಿ ಪ್ರಾದೇಶಿಕ ಅಸ್ಮಿತೆ ಉಳಿಸಿಕೊಳ್ಳಬೇಕು. ವಿಧಾನ ಪರಿಷತ್, ಜಿಬಿಎ ಚುನಾವಣೆ ಕಡೆಗೆ ಗಮನಕೊಡಿ. ಗೆಲ್ಲಲು ಕಾರ್ಯಯೋಜನೆ ತಯಾರಿಸಿ. ಕೋರ್ ಕಮಿಟಿ ಈ ಬಗ್ಗೆ ಅವಲೋಕನ ಮಾಡಲಿ. ಎಸ್‌ಐಆರ್ ವಿಚಾರದಲ್ಲಿ ಕಾಂಗ್ರೆಸ್ ಸಂವಿಧಾನ ವಿರೋಧಿ ಹೇಳಿಕೆ ನೀಡುತ್ತಿದೆ. ನೆಹರು, ರಾಜೀವ್ ಗಾಂಧಿ, ಇಂದಿರಾ ಗಾಂಧಿ ಮತ್ತು ಮನಮೋಹನ್ ಸಿಂಗ್ ಎಸ್‌ಐಆರ್ ಮಾಡಿದರೆ ಸರಿ. ಬಿಜೆಪಿ ಮಾಡಿದರೆ ತಪ್ಪು ಎನ್ನುವಂತಾಗಿದೆ. ಕಾಂಗ್ರೆಸ್‌ಗೆ ಎಲ್ಲವನ್ನೂ ವಿರೋಧಿಸುವ ಸಿಂಡ್ರೋಮ್ ಇರುವುದಾಗಿ ಹೇಳಿದರು,'' ಎಂದು ಸಿ.ಟಿ.ರವಿ ತಿಳಿಸಿದರು.

ಲೈಂಗಿಕ ದೌರ್ಜನ್ಯ, ಬಿಜೆಪಿ ಮುಖಂಡ ಪರಾರಿ

■ **ವಿಕ ಸುದ್ದಿಲೋಕ** ಶಿವಮೊಗ್ಗ

ಭದ್ರಾವತಿ ತಾಲೂಕು ಬಾರಂದೂರು ಗ್ರಾಮದಲ್ಲಿ ಗೃಹಿಣಿಯೊಬ್ಬರ ಮೇಲೆ ಬಿಜೆಪಿ ಮುಖಂಡ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಹಳೆಬಾರಂದೂರು ಗ್ರಾಮದ ಬಿ.ಎಸ್.ಭರತ್ (36) ಆರೋಪಿ. ಈತ ಭದ್ರಾವತಿ ಗ್ರಾಮಾಂತರ ಬಿಜೆಪಿ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿದ್ದು, ವೃತ್ತಿಯಲ್ಲಿ ವಕೀಲರೂ ಆಗಿದ್ದಾರೆ. ಇವರು 23 ವರ್ಷದ ವಿವಾಹಿತ ಮಹಿಳೆ ಮೇಲೆ ಅವರ ಮನೆಯಲ್ಲಿ ಲೈಂಗಿಕ ದೌರ್ಜನ್ಯ ಎಸಗಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ.

ಭದ್ರಾವತಿ ಪೇಪರ್ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಸಂತ್ರಸ್ತೆಯ ಪತಿ ಅಂಗಡಿ ನಡೆಸುತ್ತಿದ್ದು, ಆರೋಪಿ ಭರತ್ ಆಗಾಗ ಅಲ್ಲಿಗೆ ಬರುತ್ತಿದ್ದ. ಅಲ್ಲದೆ, ಗೃಹಿಣಿ ಪತಿಯ ಸ್ನೇಹಿತನೂ ಆಗಿದ್ದ. ಕಳೆದ ಏಪ್ರಿಲ್ 5ರಂದು ಇನ್‌ಸ್ಟಾಗ್ರಾಂನಲ್ಲಿ ಮಹಿಳೆಗೆ ಸಂದೇಶ ಕಳಿಸಿ ಚಾಟಿಂಗ್ ಮಾಡಿದ್ದಾರೆ. ಮಾರನೇ ದಿನ ಅಂಗಡಿಗೆ ಬಂದು ಭೇಟಿಯಾಗಿ ಚಾಟಿಂಗ್ ತಾನೇ ಮಾಡಿರುವುದಾಗಿ ಹೇಳಿದ್ದಾನೆ.

ಏ.11ರಂದು ಪತಿಯು ಭರತ್‌ಗೆ 20 ಸಾವಿರ ರೂ. ಕೊಡುವಂತೆ ಹೇಳಿ ಗೃಹಿಣಿ ಕೈಗೆ ಕೊಟ್ಟಿದ್ದರು. ಅದನ್ನು ಪಡೆಯಲು ಮನೆಗೆ ಬಂದಿದ್ದಾಗ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ನಂತರವೂ ಮೈಕೈ ಮುಟ್ಟುತ್ತಿದ್ದ ಎಂದು ಆರೋಪಿಸಲಾಗಿದೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

MARKETING, ADVERTISING & SALES

Tele Caller

"REQ, Experienced / Fresher Telecallers, Team Leaders, For Bank Loan collection. Salary + Incentive 7019700755 / 9620206754

OTHER VACANCIES

DRIVERS

30 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ, ಮಾನ್ಯ ಎಲ್‌ಎಂವಿ ಪರವಾನಗಿ ಹೊಂದಿರುವ ಅನುಭವಿ ಚಾಲಕ ಬೇಕಾಗಿದ್ದಾರೆ. ಕಂಪನಿ ಒಡೆತನದ ವಾಹನದಲ್ಲಿ ಕೆಲಸ ಮಾಡಲು. ಆಸಕ್ತ ಅಭ್ಯರ್ಥಿಗಳು ಮೊಬೈಲ್ ಸಂಖ್ಯೆ: 9901345791 ಅನ್ನು ಸಂಪರ್ಕಿಸಿ. ರಾಜಾನುಕುಂಟೆ ಮತ್ತು ಯಲಹಂಕ ಪ್ರದೇಶಗಳಿಗೆ ಆದ್ಯತೆ ನೀಡಲಾಗುವುದು.

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

JOB WANTED

WANTED Helpers & Sales Man for Ready made Blouse Show Room in Chickpet Age: 18-35 in Showroom activities Manoj Bafna Call: 9448121073

ಪ್ರವಾಸ TRAVEL

TOURS & TRAVELS

05-06-2026 1 ದಿನ ಕೊಟ್ಟಿಯೂರ್ 11-6-26 3 ದಿನ ಕೊಟ್ಟಿಯೂರು, ವೈನಾಡು, 17-6-26 5 ದಿನ ಪಳನಿ, ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವಲ್ಸ್9972500645

ಸ್ವಯಂಭೂ ಹಿಮಲಿಂಗ ಅಮರನಾಥ್, ಕಾಶ್ಮೀರ್, ವೈಷ್ಣವಿದೇವಿ 03.07.2026, 05.07.2026 ರಿಂದ 9/7 ದಿನಗಳು. ಪವಿತ್ರ ಕೈಲಾಸ ಪರ್ವತ, ಮಾನಸ ಸರೋವರ 24.07.2026,23.08.2026 ರಿಂದ 13 ದಿನಗಳು. ಕಾಶಿ, ಗಯಾ, ಪ್ರಯಾಗ್ ರಾಜ್, ಅಯೋಧ್ಯ 26.06.2026, 02.07.2026,16.07.2026 ರಿಂದ 6 ದಿನಗಳು. ಸಂಪರ್ಕಿಸಿ. 26508925, 9980993631, ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ, ಬೆಂಗಳೂರು.18

personal

CHANGE OF NAME

I Ms. Vidhi Jain aged about 30 years, w/o Mr. Mayur M Residing at No. 549/19, GF 7th main Hanumnathnagr, Bengaluru- 560019. I hereby declare that my full name Vidhi B Jain and Vidhi both the names belong to me only. Vide affidavit dated 20/05.2026. sworn before notary H G Venkatramu, Bengaluru

I, AJAZ KHAN MAHBOOB KHAN, R/a.No.29, 1st Cross, Shivaji Road, Balappa Garden, Shivajinagar, Bangalore–51. I, have Changed my name to AJAZ KHAN Vide affidavit, dated 22/05/2026 Sworn before notary R.Basavaraja Bangalore

I, (Parphool kumar Rathaur) S/O (Sunil Rathore residing at (House No A-31 Samarth Nagar ,Gird Gwaliar MP 474005), have changed my name to (Praphool Rathore) vide affidavit dated (19 may 26) at (Gwaliar)

I Maqsood Ahamed S/O, Abdul Rauf R/o No 26-1 Lakshmaiya Layout Opp To Shampur Bus Stop Shampur Main Road A C Post Bangalore Karnataka - 560045 have changed my name to Maqsood Ahmed.

I, Namratha Naryanee Sanjay, have changed my name to Namratha Narayanee Sanjay. Henceforth, I shall be known as Namratha Narayanee Sanjay for all official and personal purposes.

I, formerly known as PULKIT SONE, S/o Sunil Kumar Sone, residing at Ittina Sarva2, 4 Cross, Bommanahalli, Bengaluru - 560068, have changed my name to PULKIT SUNIL SONE vide Certificate No. IN-KA68088100275897Y dated 23/05/2026 for all future purposes.

I, Smrithika L, residing at Bangalore, Karnataka, hereby notify that I am changing my name from "Smrithika Lalitha" to "Smrithika L" for uniformity across all official documents. Henceforth, I shall be known as "Smrithika L" in all records and correspondence.

I Kavitha Chalakaran Yadav D/O, Vinay Shettappa R/o Jenugudu Residency No 421 Flat No 102 8th Main Road Dwarka Nagar 5th Stage Bengaluru 560098 have changed my name to Kavitha Chalakaran.

I, (Tara Devi Rathaur) W/O (Sunil Rathore residing at (House No A-31 Samarth Nagar ,Gird Gwaliar MP 474005), have changed my name to (Tara Rathore) vide affidavit dated (19 may 26) at (Gwaliar)

I SHRAVAN KUMAR R/O No 02, Vinayaka Layout, Bhattarahalli, Bangalore 560049 i have changed my name to P SHRAWAN KUMAR for all purpose.

I, Geeta, W/o, 14854690A–Nk-Ravi Kumar Pal, R/o, Shivpalpur, Alipur Patti, Manipuri, UP, changed name to Geeta Devi, for all purpose.

I, VIJETHA ARUN PATIL, Wife of Late Arun Kumar Patil, aged about 34 years, residing at No. 102 7th 'A' main 3rd block 4th stage Basveshwaranagar Bengaluru-560079, have changed my name from VIJETHA M.R to VIJETHA ARUN PATIL vide affidavit dated: 22/5/2026 Before Notary M.K.Devaki Bangalore.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

REMEMBRANCE
SHARING MEMORIES

29th Death Anniversary
Y. RAMA KRISHNA
EX. MP & EX. MINISTER
We miss you every moment of our lives. Your memories are immortal and missed beyond measures.
Fondly remembered by- Family Members.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು

ಪಕ್ಷಾತೀತ ಹೋರಾಟವೆಂದು ಸಾಬೀತುಪಡಿಸಲು ಪಾಲಿಕೆ, ಪಕ್ಷದ ಸದಸ್ಯತ್ವಸ್ಥಾನ ತ್ಯಾಗ

ಹು-ಧಾ ಪಾಲಿಕೆಯ 12 ಸದಸ್ಯರ ರಾಜೀನಾಮೆ

■ **ವಿಕ ಸುದ್ದಿಲೋಕ** ಧಾರವಾಡ

ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಆಗ್ರಹಿಸಿ 10 ದಿನಗಳಿಂದ ನಿರಂತರ ಹಾಗೂ ತೀವ್ರ ಸ್ವರೂಪದ ಹೋರಾಟ ನಡೆಯುತ್ತಿದ್ದು, ಹೋರಾಟಕ್ಕೆ ಬೆಂಬಲಿಸಲು ಭಾನುವಾರ ಹು-ಧಾ ಮಹಾನಗರ ಪಾಲಿಕೆಯ 12 ಕಾಂಗ್ರೆಸ್ ಸದಸ್ಯರು ತಮ್ಮ ಪಾಲಿಕೆ ಸದಸ್ಯತ್ವ ಹಾಗೂ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಧಾರವಾಡ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರತ್ಯೇಕ ಪಾಲಿಕೆಯ ಅಗತ್ಯತೆ ಅತ್ಯಂತ ಅನಿವಾರ್ಯವಾಗಿದೆ. ಸಾರ್ವಜನಿಕರ ಈ ನ್ಯಾಯಸಮ್ಮತ ಹೋರಾಟಕ್ಕೆ ಸಂಪೂರ್ಣವಾಗಿ ಧ್ವನಿಯಾಗುವ ನಿಟ್ಟಿನಲ್ಲಿ ತಾವು ಸ್ವಇಚ್ಛೆಯಿಂದ ರಾಜೀನಾಮೆ ನೀಡಿರುವುದಾಗಿ ಸದಸ್ಯರು ತಿಳಿಸಿದ್ದಾರೆ.

ಧಾರವಾಡ-71 ಮತಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಅವರಿಗೆ ರಾಜಶೇಖರ ಕಮತಿ (ವಾರ್ಡ್ ನಂ.4), ಸೂರವ್ವಾ ಬಾಳನಗೌಡ ಪಾಟೀಲ್ (ವಾರ್ಡ್ ನಂ.2), ದಿಲಶಾದ ಬೇಗಂ ನದಾಫ (ವಾರ್ಡ್ ನಂ.6), ದೀಪಾ ಸಂತೋಷ ನೀರಲಕಟ್ಟಿ (ವಾರ್ಡ್ ನಂ.7) ಹಾಗೂ ನಾಮ ನಿರ್ದೇಶಿತ ಸದಸ್ಯ ಪ್ರಕಾಶ್ ಬಾಬುರಾವ್ ಘಾಟಗೆ ಅವರು ರಾಜೀನಾಮೆ ಪತ್ರವನ್ನು ನೀಡಿದರು.

ಅದರಂತೆ ಧಾರವಾಡ-74 ಮತಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗರಾಜ ಗೌರಿ ಅವರಿಗೆ ಕವಿತಾ ದಾನಪ್ಪ ಕಬ್ಬೇರ (ವಾರ್ಡ್ ನಂ.20), ಶಂಭುಗೌಡ ರುದ್ರಗೌಡ ಸಾಲಮನಿ (ವಾರ್ಡ್ ನಂ.14), ಪರವೀನ ದೇಸಾಯಿ (ವಾರ್ಡ್ ನಂ.16), ಗಣೇಶ ಮುಧೋಳ (ವಾರ್ಡ್ ನಂ.17), ಬಿಲಕಿಸಬಾನು ಮುಲ್ಲಾ (ವಾರ್ಡ್ ನಂ.22), ಮಂಜುನಾಥ ಬಡಕುರಿ (ವಾರ್ಡ್ ನಂ.23) ಹಾಗೂ ಮಯೂರ ಮೋರೆ (ವಾರ್ಡ್ ನಂ.24) ಅವರು ರಾಜೀನಾಮೆ ಪತ್ರವನ್ನು ನೀಡಿದರು.

ಈ ವೇಳೆ ಮುಖಂಡ ಅರವಿಂದ ಏಗನಗೌಡರ ಮಾತನಾಡಿ, ''ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಶಾಸಕ ಅರವಿಂದ ಬೆಲ್ಲದ ಅವರು ಈ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟವು ಪಕ್ಷಾತೀತವಾಗಿಲ್ಲ, ಬಿ.ಡಿ.ಹಿರೇಮಠ ಮಾತ್ರ ಹೋರಾಟಗಾರರಾಗಿದ್ದು, ಅವರ ಜತೆಗೆ ಇರುವವರು ಕಾಂಗ್ರೆಸ್ ಕಾರ್ಯಕರ್ತರು ಎಂಬ ಭಾವನೆಯಿಂದ ಮಾತನಾಡಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಾಲಿಕೆ ಸದಸ್ಯರು ರಾಜೀನಾಮೆ ನೀಡುವ ಮೂಲಕ ಅವರಿಗೆ ಇದು ಪಕ್ಷಾತೀತ ಹೋರಾಟವೆಂದು ಸಂದೇಶ ರವಾನಿಸಿದ್ದಾರೆ,'' ಎಂದು ಹೇಳಿದರು.

ಮುಖಂಡ ನಾಗರಾಜ ಗೌರಿ ಮಾತನಾಡಿ, ''ಪ್ರತ್ಯೇಕ ಪಾಲಿಕೆ ಹೋರಾಟದಲ್ಲಿ ಪ್ರಾಮಾಣಿಕವಾಗಿ ತೊಡಗಿರುವ ಕಾಂಗ್ರೆಸ್ ಪಾಲಿಕೆ ಸದಸ್ಯರ ಕುರಿತು ಶಾಸಕ ಅರವಿಂದ ಬೆಲ್ಲದ ನೀಡಿದ ಹೇಳಿಕೆಯಿಂದ ನೋವಾಗಿದೆ. ಆದ್ದರಿಂದ ಒಟ್ಟು 12 ಪಾಲಿಕೆ ಸದಸ್ಯರು ನಮಗೆ ಬೇಕಾಗಿರುವುದು ಧಾರವಾಡ ಪ್ರತ್ಯೇಕ ಪಾಲಿಕೆ ಹೊರತು ಅಧಿಕಾರವಲ್ಲ ಎಂದು ಪಾಲಿಕೆ ಸದಸ್ಯತ್ವ ಹಾಗೂ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ,'' ಎಂದು ತಿಳಿಸಿದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 12 ಕಾಂಗ್ರೆಸ್ ಸದಸ್ಯರು ತಮ್ಮ ಪಾಲಿಕೆ ಸದಸ್ಯತ್ವ ಹಾಗೂ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಎಸ್‌ಐಆರ್ ವಿರುದ್ಧ ಜಾಗೃತರಾಗಿ: ಡಿಸಿಎಂ

ಬೆಂಗಳೂರು: ಜವಾಬ್ದಾರಿಯುತ ರಾಜ್ಯ ಸರಕಾರವಾಗಿ ಎಸ್‌ಐಆರ್ ಬಗ್ಗೆ ಜಾಗೃತಿ ಮೂಡಿಸುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ''ಎಸ್‌ಐಆರ್‌ನಿಂದ ಅನಾಹುತ ಆಗುತ್ತಿವೆ. ಹಾಗಾಗಿ ಜಾಗೃತಿ ಉಂಟು ಮಾಡುತ್ತೇವೆ,'' ಎಂದು ತಿಳಿಸಿದರು.

ಮೊದಲು ಪಕ್ಷ: ಸಂಪುಟ ಪುನಾರಚನೆ ಕುರಿತ ಪ್ರಶ್ನೆಗೆ, ''ನಮ್ಮಲ್ಲಿ ಯಾವ ಗೊಂದಲವೂ ಇಲ್ಲ, ಮೊದಲು ನೀವು ಮತ್ತು ಪಕ್ಷವಿರಬೇಕು. ಮಿಕ್ಕಿದ್ದೆಲ್ಲ ಸ್ಥಾನಮಾನ ನಂತರ ಸಿಗುತ್ತದೆ,'' ಎಂದು ಪ್ರತಿಕ್ರಿಯಿಸಿದರು.

ಮೀಸಲು ಹಕ್ಕಿಗಾಗಿ ಹೋರಾಟ: ಉಗ್ರಪ್ಪ

■ **ವಿಕ ಸುದ್ದಿಲೋಕ** ಕೊಪ್ಪಳ

ಎಸ್ಸಿ, ಎಸ್ಟಿ ಹಾಗೂ ಒಬಿಸಿ ಸಮುದಾಯಗಳಿಗೆ ಸಂವಿಧಾನಬದ್ಧವಾಗಿ ದೊರೆಯಬೇಕಾದ ಮೀಸಲು ಹಕ್ಕುಗಳನ್ನು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಕೊಡದೇ ನಿರ್ಲಕ್ಷ್ಯ ಮಾಡುತ್ತಿವೆ ಎಂದು ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಮುಖಂಡ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆರೋಪಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ರಾಜ್ಯದಲ್ಲಿ ಎಸ್ಸಿ, ಎಸ್ಟಿ ಮತ್ತು ಒಬಿಸಿ ಸಮುದಾಯಗಳಿಗೆ ಸೇರಿದ ಸುಮಾರು 4 ಕೋಟಿ ಜನರಿದ್ದರೂ, ಅವರಿಗೆ ಸಮರ್ಪಕ ಮೀಸಲು ಸಿಗದಿರುವುದು ವಿಷಾದನೀಯ. ಮೀಸಲು ಭಿಕ್ಷೆ ಅಲ್ಲ, ಎಸ್ಸಿ ಸಮುದಾಯ ಶೇ.17 ಹಾಗೂ ಎಸ್ಟಿ ಸಮುದಾಯ ಶೇ.7ರಷ್ಟು ಜನಸಂಖ್ಯೆ ಹೊಂದಿದ್ದರೂ ಅವರಿಗೆ ನ್ಯಾಯಯುತ ಮೀಸಲು ಸಿಕ್ಕಿಲ್ಲ,'' ಎಂದರು.

''ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಶೇ.50 ಮಿತಿಯ ಬಗ್ಗೆ ಹೇಳಿದ್ದರೂ, ಯಾವುದಾದರೂ ಸಮುದಾಯಕ್ಕೆ ಅನ್ಯಾಯವಾಗುತ್ತಿದ್ದರೆ ಮೀಸಲು ಪ್ರಮಾಣ ಹೆಚ್ಚಿಸಬಹುದು ಎಂದು ತೀರ್ಪಿನಲ್ಲಿ ಉಲ್ಲೇಖವಿದೆ,'' ಎಂದು ಹೇಳಿದರು.

''ಬೊಮ್ಮಾಯಿ ಸರಕಾರ ಜಾರಿಗೆ ತಂದಿದ್ದ ಮೀಸಲು ಆದೇಶವನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕೇಂದ್ರ ಸರಕಾರ ಮುಂದಾಗಬೇಕು. ರಾಜ್ಯ ಸರಕಾರ ಈಗಾಗಲೇ ಕೇಂದ್ರಕ್ಕೆ ಪತ್ರ ಬರೆದಿದ್ದರೂ ಯಾವುದೇ ಕ್ರಮವಾಗಿಲ್ಲ, ರಾಜ್ಯದಲ್ಲಿ 3 ಲಕ್ಷ ಜನರು ನಕಲಿ ಜಾತಿ ಪ್ರಮಾಣಪತ್ರ ಪಡೆದಿದ್ದಾರೆ. ಬಿಜೆಪಿ ಸರಕಾರ ಜಾರಿಗೆ ತಂದಿರುವ ಕಾನೂನು ಜಾರಿಯಾಗಬೇಕು,'' ಎಂದು ಒತ್ತಾಯಿಸಿದರು.

3ನೇ ವರ್ಷದ ಪುಣ್ಯ ಸ್ಮರಣೆ



ಶ್ರೀ ಎಸ್. ಚೆನ್ನರಾಯ ರೆಡ್ಡಿ,
B.A., B.L., ವಕೀಲರು
''ನೀವು ನಮ್ಮನ್ನಗಲಿ ಇಂದಿಗೆ ಮೂರನೇ ವರ್ಷ, ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ, ನಿಮ್ಮ ಆದರ್ಶಗಳು ನಮಗೆ ದಾರಿ ದೀಪ''
~ಇಂತಿ~
ಸಿ. ಶಂಕರ್ ರೆಡ್ಡಿ, ವಕೀಲರು,
ಕೆ. ಅನಿತಾ, ವಕೀಲರು
ಗಣವ್ ಎಸ್. ರೆಡ್ಡಿ ಮತ್ತು
ದೇವಾಂಶ್ ಎಸ್. ರೆಡ್ಡಿ
ದೂರವಾಣಿ: 7619258548

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited. RNI No. 71653/99 Vol. 27 Issue No.144

ಮುಂಗಾರಿಗೆ ಬಿತ್ತನೆ ಬೀಜ ಬೆಲೆ ಇಳಿಕೆ

ಕೆ.ಜಿಗೆ 10ರಿಂದ 21 ರೂ. ಇಳಿಕೆ | ಬೆಲೆ ಏರಿಕೆಯಿಂದ ತತ್ತರಿಸಿದ್ದ ಅನ್ನದಾತ ಕೊಂಚ ನಿರಾಳ

■ **ದೇವಯ್ಯ ಗುತ್ತೇದಾರ್** ಕಲಬುರಗಿ
devayya.guttedar@timesofindia.com

ಈ ಬಾರಿಯ ಮುಂಗಾರು ಹಂಗಾಮಿಗೆ ಬಿತ್ತನೆಯ ಪ್ರಮುಖ ಬೀಜಗಳ ಬೆಲೆ ಗಣನೀಯವಾಗಿ ಇಳಿಕೆಯಾಗಿದೆ. ಎಲ್ಲೆಡೆ ಬೆಲೆ ಏರಿಕೆಯ ಸುದ್ದಿ ಕೇಳುತ್ತಿರುವಾಗ ಬಿತ್ತನೆ ಬೀಜಗಳ ಬೆಲೆ ಇಳಿಕೆಯಾಗಿರುವುದು ಅನ್ನದಾತರು ತುಸು ನಿರಾಳವಾಗುವಂತೆ ಮಾಡಿದೆ.

ತೊಗರಿ, ಉದ್ದು, ಹೆಸರು, ಸೂರ್ಯಕಾಂತಿ ಸೇರಿದಂತೆ ಹಲವು ಪ್ರಮುಖ ಬೀಜಗಳ ಬೆಲೆ ಇಳಿಕೆಯಾಗಿದೆ. ಕಳೆದ ವರ್ಷ ತೊಗರಿ ಬಿತ್ತನೆ ಬೀಜದ ದರ ಕೆ.ಜಿಗೆ 145 ರೂ. ಇದ್ದರೆ, ಈ ಬಾರಿ 132 ರೂ. ಇದ್ದು, 13 ರೂ. ಇಳಿಕೆಯಾಗಿದೆ. 138.50 ರೂ. ಇದ್ದ ಉದ್ದು 117. 50 ರೂ.ಗಳಾಗಿದ್ದು, 21 ರೂ. ಇಳಿಕೆಯಾಗಿದೆ. ಇದು ದರ ಇಳಿಕೆ ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿದೆ. 140 ರೂ. ಇದ್ದ ಹೆಸರು ಬೀಜ 127 ರೂ ಮತ್ತು 940 ರೂ. ಇದ್ದ ಸೂರ್ಯಕಾಂತಿ ಈಗ 950ಕ್ಕೆ ಇಳಿಕೆಯಾಗಿದೆ.

ಬೀಜಗಳ ಬೆಲೆ ಕೆ.ಜಿಗೆ ಕನಿಷ್ಠ 10 ಮತ್ತು ಗರಿಷ್ಠ 21 ರೂ.ಗಳಷ್ಟು ಇಳಿಕೆಯಾಗಿದೆ. ಬೆಲೆ ಏರಿಕೆಯ ಬೆಂಕಿಯಲ್ಲಿ ಬೆಂದು ಹೋಗುತ್ತಿರುವ ಅನ್ನದಾತರಿಗೆ ಬಿತ್ತನೆ ಬೀಜಗಳ ಬೆಲೆ ಇಳಿಕೆಯಾಗಿರುವುದು ಆಸರೆಯಾದಂತಾಗಿದೆ.

ಬಿತ್ತನೆ ಬೀಜಗಳ ವರ್ಷವಾರು ದರ

ಬೀಜಗಳು	2026-27	2025-26
ತೊಗರಿ	132	145
ಹೆಸರು	127	140
ಉದ್ದು	117.5	138.5
ಸೂರ್ಯಕಾಂತಿ	950	940

(ಪ್ರತಿ ಕೆ.ಜಿಗೆ ರೂ.ಗಳಲ್ಲಿ)

> ಮುಂಗಾರಿಗೆ ಬಿತ್ತನೆ ಬೀಜಗಳ ಬೆಲೆ ಇಳಿಕೆಯಾಗಿವುದು ರೈತರಿಗೆ ಹೆಚ್ಚು ಅನುಕೂಲ ಆಗಲಿದೆ. ಅಗತ್ಯ ವಸ್ತುಗಳ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ರೈತರಿಗೆ ಇದು ವರದಾನ ಆಗಲಿದೆ. ಅಗತ್ಯವಾದ ಬೀಜಗಳನ್ನು ರೈತ ಸಂಪರ್ಕ ಕೇಂದ್ರದಲ್ಲಿ ದಾಸ್ತಾನು ಮಾಡಿ ಇಡಲಾಗಿದೆ.
>
> **-ಸಮದ್ ಪಟೇಲ್ ಫಿ** ಜಂಟಿ ಕೃಷಿ ನಿರ್ದೇಶಕ, ಕಲಬುರಗಿ

ಯಾಕೆ ಇಳಿಕೆ?

ಕಳೆದ ಮುಂಗಾರಿನಲ್ಲಿ ರಾಜ್ಯದ ಕೆಲವೆಡೆ ಈ ಧಾನ್ಯಗಳ ಉತ್ಪಾದನೆ ಅಧಿಕವಾಗಿರುವುದು ಮತ್ತು ರೈತರಿಗೆ ಕಡಿಮೆ ದರದಲ್ಲಿ ಬಿತ್ತನೆ ಬೀಜಗಳು ನೀಡಬೇಕು ಎನ್ನುವ ಸರಕಾರದ ಕಾಳಜಿ ಬೆಲೆ ಇಳಿಕೆಯಾಗಲು ಪ್ರಮುಖ ಕಾರಣ ಎನ್ನುತ್ತಾರೆ ಕೃಷಿ ಅಧಿಕಾರಿಗಳು.

ಕೆಲವೆಡೆ ಬರ, ಹಲವೆಡೆ ನೆರೆಯಿಂದ ತತ್ತರಿಸಿದ್ದ ಅನ್ನದಾತರಿಗೆ ನೆರವು ಆಗಬೇಕು ಎನ್ನುವ ಕಾರಣವೂ ಇದೆ. ಈಗ ಮಾರುಕಟ್ಟೆಯಲ್ಲಿ ತೊಗರಿ ಬೆಲೆ ಕಡಿಮೆ ಇದ್ದು, ಬಿತ್ತನೆ ಬೀಜಗಳ ಬೆಲೆಯೂ ಕಮ್ಮಿಯಾಗಲು ಕಾರಣವಾಗಿದೆ. ಇದರ ದರ ಹೆಚ್ಚಿದ್ದಾಗ ರೈತರಿಗೆ ನೆರವು ಆಗುವುದು ಕಷ್ಟ, ಆದರೆ ಈ ಬಾರಿ ಧಾನ್ಯಗಳ ಬೆಲೆ ಇಳಿಕೆಯಾಗಿರುವುದರಿಂದ ಬೀಜಗಳ ದರ ಇಳಿಕೆಯಾಗಲು ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ಈ ಪ್ರಮಾಣಿತ ಬೀಜಗಳನ್ನು ರೈತರಿಗೆ ನೀಡಲಾಗುತ್ತಿದೆ. ಬೀಜ ನಿಗಮ ಇವುಗಳನ್ನು ಸಿದ್ಧಪಡಿಸಿದೆ. ಪ್ರಸಕ್ತ ಸಾಲಿನ ಮುಂಗಾರು ಆರಂಭವಾಗಲು ದಿನಗಣನೆ ಶುರುವಾಗಿದ್ದು, ಅಗತ್ಯ ಬೀಜಗಳನ್ನು ದಾಸ್ತಾನು ಮಾಡಿಕೊಂಡು ಇಡಲಾಗಿದೆ. ಕಾಳ ಸಂತೆಯಲ್ಲಿ ಬೀಜ ಮಾರಾಟ ತಡೆಗೆ ಜಾಗೃತ ದಳವನ್ನು ಸಜ್ಜುಗೊಳಿಸಲಾಗಿದೆ ಎನ್ನುತ್ತಾರೆ ಕೃಷಿ ಅಧಿಕಾರಿಗಳು.

ಕಳೆದ ಬಾರಿ ಆರಂಭದಲ್ಲಿ ಪ್ರವಾಹ ಬಂದು ಬೆಳೆ ಹಾಳಾದರೆ, ಬಳಿಕ ಮಳೆ ಬರದೇ ಬೆಳೆ ಒಣಗಿದೆ. ಸಂಕಷ್ಟದಲ್ಲಿರುವ ರೈತರಿಗೆ ನೆರವು ನೀಡಬೇಕು ಎನ್ನುವ ವಿಚಾರ ಸರಕಾರದಲ್ಲಿ ಇದ್ದಿದ್ದರೆ, ಬೀಜಗಳನ್ನು ಉಚಿತವಾಗಿ ನೀಡಬೇಕು ಎನ್ನುತ್ತಾರೆ ಪ್ರಾಂತ ರೈತ ಸಂಘದ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ.

ಬೈಕ್ ಸ್ಕಿಡ್: ಇಬ್ಬರು ಯುವಕರ ದುರ್ಮರಣ

■ **ವಿಕ ಸುದ್ದಿಲೋಕ ಕುಷ್ಟಗಿ** (ಕೊಪ್ಪಳ)

ಬೈಕ್ ಸ್ಕಿಡ್ ಆಗಿ ಬಿದ್ದು ಸವಾರರಿಬ್ಬರು ಮೃತಪಟ್ಟಿರುವ ಘಟನೆ ತಾಲೂಕಿನ ಗೋತಗಿ ಗ್ರಾಮದ ಬಳಿ ಶನಿವಾರ ರಾತ್ರಿ ಸಂಭವಿಸಿದೆ.

ಗೋತಗಿ ಗ್ರಾಮದ ವೀರೇಶ ಆಲಿಯಾಸ್ ಆಕಾಶ ಹಳೆಮನಿ (20), ನಾಗರಾಜ ಭಜಂತ್ರಿ (20) ಮೃತರು.

ಇವರಿಬ್ಬರೂ ತೋಣಸಿಹಾಳ ಗ್ರಾಮದಿಂದ ಗೋತಗಿ ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಬೈಕ್ ಸ್ಕಿಡ್ ಆಗಿದೆ. ತೀವ್ರ ಗಾಯಗೊಂಡಿದ್ದ ಇಬ್ಬರನ್ನು ಸ್ಥಳೀಯರ ಸಹಾಯದಿಂದ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟರು ಎಂದು ಪ್ರಕರಣ ದಾಖಲಿಸಿಕೊಂಡಿರುವ ಕುಷ್ಟಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಚೂರಿಯಿಂದ ಇರಿದು ಯುವಕನ ಕೊಲೆ

ಮೂಡಲಗಿ (ಬೆಳಗಾವಿ): ಪಟ್ಟಣದ ವಡ್ಡರ ಓಣಿ ಸಮೀಪ ಶನಿವಾರ ರಾತ್ರಿ ಯುವಕನೊಬ್ಬನನ್ನು ಚೂರಿಯಿಂದ ಇರಿದು ಕೊಲೆ ಮಾಡಲಾಗಿದೆ. ತಿಮ್ಮಣ್ಣಾ ವಿಠ್ಠಲ ಬಂಡಿವಡ್ಡರ (21) ಕೊಲೆಗೀಡಾದ ಯುವಕ.

ವಿಜಯಪುರ ಜಿಲ್ಲೆಯ ಟಕ್ಕಳಕಿ ಗ್ರಾಮಕ್ಕೆ ಕೆಲಸಕ್ಕೆ ಹೋಗಿದ್ದ ತಿಮ್ಮಣ್ಣ ಮೇ 18ರಂದು ಮನೆಗೆ ಆಗಮಿಸಿದ್ದ. ಪ್ರೀತಿ ವಿಚಾರಕ್ಕೆ ಕೊಲೆ ನಡೆದಿದೆ ಎನ್ನಲಾಗಿದ್ದು, ನಾಲವರು ಯುವಕರು ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಆರೋಪಿಗಳು ಚೂರಿ ಇರಿದ ಪರಾರಿಯಾದ ಬಳಿಕ ರಕ್ತದ ಮಡುವಿನಲ್ಲಿ ಬಿದ್ದಿದ್ದ ತಿಮ್ಮಣ್ಣ, ತನ್ನ ಕುಟುಂಬಸ್ಥರಿಗೆ ಕರೆ ಮಾಡಿ ''ನನಗೆ ಚಾಕು ಇರಿಯಲಾಗಿದೆ,'' ಎಂದು ಹೇಳಿದ್ದಾನೆ.

ಸ್ಥಳಕ್ಕೆ ಹೋಗಿ ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಯುವಕ ಮೃತಪಟ್ಟಿದ್ದಾನೆ. ಲಕ್ಷ್ಮಣ ಸಿದ್ದಪ್ಪ ಬಂಡಿವಡ್ಡರ ಎಂಬುವರು ನೀಡಿದ ದೂರಿನ ಮೇರೆಗೆ ಮೂಡಲಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿಬಿ ಡ್ಯಾಂ ಸೋರಿಕೆ ತಡೆಗೆ ಸರ್ಜರಿ

ಅಣೆಕಟ್ಟೆಗೆ ಪಾಯಿಂಟಿಂಗ್ ವರ್ಕ್ | ಸುರಕ್ಷತೆಗೆ ಆದ್ಯತೆ, ಟಿಬಿ ಡ್ಯಾಂನ ಪ್ರತಿ ಕಲ್ಲಿಗೂ ರಕ್ಷಣೆ

■ **ಜಯಪ್ಪ ರಾಥೋಡ್** ಹೊಸಪೇಟೆ (ವಿಜಯನಗರ)
rathodjayakumar92@gmail.com

ತುಂಗಭದ್ರಾ ಜಲಾಶಯದ ಇತಿಹಾಸದಲ್ಲೇ ಕಪ್ಪು ಚುಕ್ಕೆಯಾಗಿದ್ದ 19ನೇ ಕ್ರಸ್ಟ್ ಗೇಟ್ ಕೊಚ್ಚಿಹೋದ ಘಟನೆಯ ನಂತರ ಈಗ ಜಲಾಶಯದ ಭದ್ರತೆಯ ವಿಷಯದಲ್ಲಿ ತುಂಗಭದ್ರಾ ಮಂಡಳಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

2024ರ ಮಳೆಗಾಲದಲ್ಲಿ ಸಂಭವಿಸಿದ ತಾಂತ್ರಿಕ ವೈಫಲ್ಯ ಜಲಾಶಯದ ನಿರ್ವಹಣೆಯ ಬಗ್ಗೆ ದೊಡ್ಡ ಪ್ರಶ್ನೆ ಎತ್ತಿತ್ತು. ಆ ಘಟನೆಯಿಂದ ಪಾಠ ಕಲಿತಿರುವ ತುಂಗಭದ್ರಾ ಮಂಡಳಿ ಈ ಬಾರಿ ಮುನ್ನೆಚ್ಚರಿಕೆ ಕ್ರಮವಾಗಿ ನಿರ್ವಹಣೆ ಕೆಲಸಗಳಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಜಲಾಶಯದ ಗೋಡೆಯ ಬಾಳಿಕೆ ಅವಧಿ ಹೆಚ್ಚಿಸಲು ಹಾಗೂ ನೀರಿನ ಸೋರಿಕೆ ತಡೆಗಟ್ಟಲು ಅಪ್-ಸ್ಟ್ರೀಮ್ ಪಾಯಿಂಟಿಂಗ್ ಕಾರ್ಯಕ್ಕೆ ಚಾಲನೆ ನೀಡಿದೆ. ಎರಡ್ಮೂರು ತಿಂಗಳಿಂದ ನಡೆಯುತ್ತಿರುವ ಈ ಕೆಲಸ ಬಹುತೇಕ ಮುಕ್ತಾಯದ ಹಂತ ತಲುಪಿದೆ. ಡ್ಯಾಂನ ಎಡ ಮತ್ತು ಬಲ ಎರಡೂ ಬದಿಗಳಲ್ಲಿ ಈ ಕೆಲಸ ನಡೆದಿದೆ. ಜಲಾಶಯದ ಒಳಭಾಗದಲ್ಲಿ (ನೀರು ನಿಲ್ಲುವ ಪ್ರದೇಶ) ಕಲ್ಲುಗಳ ನಡುವಿನ ಸಂದುಗಳನ್ನು ಭದ್ರಪಡಿಸುವ ಈ ತಾಂತ್ರಿಕ ಪ್ರಕ್ರಿಯೆ ಡ್ಯಾಂನ ಸ್ಥಿರತೆಗೆ ಅತ್ಯಗತ್ಯವಾಗಿದೆ.



ಹೊಸಪೇಟೆಯ ತುಂಗಭದ್ರಾ ಜಲಾಶಯದ ಒಳಭಾಗದಲ್ಲಿ ಇಳಿಜಾರು ಗೋಡೆಯ ಮೇಲೆ ನಿಂತು, ಗಾರೆ ತುಂಬಲು ಕಲ್ಲುಗಳ ಸಂದುಗಳನ್ನು ಸ್ವಚ್ಛಗೊಳಿಸುತ್ತಿರುವುದು.

ಏನಿದು ಅಪ್-ಸ್ಟ್ರೀಮ್ ಪಾಯಿಂಟಿಂಗ್?: ಜಲಾಶಯದ ಗೋಡೆಯನ್ನು ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿರುತ್ತದೆ. ದಶಕಗಳ ಕಾಲ ನೀರು ನಿಲ್ಲುವುದರಿಂದ, ಕಲ್ಲುಗಳ ನಡುವೆ ಇರುವ ಗಾರೆ ಸವೆದು ಹೋಗುವ ಸಾಧ್ಯತೆ ಇರುತ್ತದೆ. ಹೀಗಾದಾಗ ನೀರು ಗೋಡೆಯ ಒಳಗೆ ಇಳಿದು ಸೋರಿಕೆ ಆರಂಭವಾಗಬಹುದು. ಇದನ್ನು ತಡೆಯಲು ಹಳೆಯ ಗಾರೆಯನ್ನು ತೆಗೆದು, ಅತ್ಯಾಧುನಿಕ ಸಿಮೆಂಟ್ ಮಿಶ್ರಣ ಅಥವಾ ವಿಶೇಷ ರಾಸಾಯನಿಕಗಳನ್ನು ಬಳಸಿ ಕಲ್ಲುಗಳ ಸಂದುಗಳನ್ನು ಭರ್ತಿ ಮಾಡುವುದೇ 'ಪಾಯಿಂಟಿಂಗ್ ವರ್ಕ್.

ಟಿಬಿ ಡ್ಯಾಂನಲ್ಲಿ ಸದ್ಯ ನೀರು ಕಡಿಮೆ ಇರುವುದರಿಂದ ಈ ಕೆಲಸ ಮಾಡಲಾಗುತ್ತಿದೆ. ಕಲ್ಲುಗಳ ನಡುವೆ ಬೆಳೆದಿರುವ ಪಾಚಿ ಮತ್ತು ಹಳೆಯ ಸಡಿಲವಾದ ಗಾರೆಯನ್ನು ಹೈ-ಪ್ರೆಶರ್ ವಾಟರ್ ಜೆಟ್ ಮೂಲಕ ಸ್ವಚ್ಛಗೊಳಿಸಲಾಗಿದೆ. ಜಲಾಶಯದ ಅತ್ಯಂತ ಕೆಳಮಟ್ಟದವರೆಗೂ ಈ ಪಾಯಿಂಟಿಂಗ್ ಮಾಡುವುದರಿಂದ ಮುಂದಿನ 20-30 ವರ್ಷ ಗೋಡೆಗೆ ಯಾವುದೇ ಹಾನಿಯಾಗದಂತೆ ರಕ್ಷಣೆ ಸಿಗಲಿದೆ. ಜಲಾಶಯದ ಹಿಂಭಾಗದಲ್ಲಿ ಕಾಣಿಸಿಕೊಳ್ಳುವ ಸಣ್ಣಪುಟ್ಟ ಸೋರಿಕೆಗಳನ್ನು ಇದು ಸಂಪೂರ್ಣ ನಿಲ್ಲಿಸುತ್ತದೆ. ಕಲ್ಲುಗಳ ನಡುವಿನ ಬಂಧ ಗಟ್ಟಿಯಾಗುವುದರಿಂದ ಡ್ಯಾಂನ ಒಟ್ಟಾರೆ ಸ್ಟ್ರಕ್ಚರಲ್ ಸ್ಟೆಬಿಲಿಟಿ ಹೆಚ್ಚುತ್ತದೆ. ನೀರಿನ ಒತ್ತಡದಿಂದ ಗೋಡೆಯ ಕಲ್ಲುಗಳು ಸಡಿಲವಾಗದಂತೆ ಇದು ತಡೆಯುತ್ತದೆ.

> ತುಂಗಭದ್ರಾ ಜಲಾಶಯದ ಎಲ್ಲ 33 ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಚೈನ್‌ಗಳ ಅಳವಡಿಕೆ ನಡೆಯುತ್ತಿದೆ. ಈಗ ನಡೆಯುತ್ತಿರುವ ಪಾಯಿಂಟಿಂಗ್ ಕೆಲಸವು ಕಲ್ಲಿನ ಸಂದುಗಳ ನಡುವೆ ನೀರಿನ ಸೋರಿಕೆ ತಡೆಯುತ್ತದೆ. ಈ ಕೆಲಸವೂ ಬಹುತೇಕ ಮುಗಿಯುವ ಹಂತದಲ್ಲಿದೆ.
>
> **-ಓ.ಆರ್.ಕೆ.ರೆಡ್ಡಿ** ಕಾರ್ಯದರ್ಶಿ, ಟಿಬಿ ಮಂಡಳಿ



ಮೈಸೂರಿನ ಅವಧೂತ ದತ್ತಪೀಠ ಆಶ್ರಮದಲ್ಲಿ ಭಾನುವಾರ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 84ನೇ ಜನ್ಮದಿನೋತ್ಸವದ ಕಾರ್ಯಕ್ರಮವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಇದ್ದರು.

ಬಾಗಲಕೋಟೆಯ ಚರಂತಿಮಠದಲ್ಲಿ ಭಾನುವಾರ ಪ್ರೊ.ಗೌ.ಮ.ಉಮಾಪತಿ ಶಾಸ್ತ್ರಿ ಜನ್ಮ ಶತಮಾನೋತ್ಸವ ವರ್ಷ, ಪ್ರತಿಷ್ಠಾನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಂಸ ಮಲ್ಲೇಪುರಂ ವೆಂಕಟೇಶ್ ಅವರಿಗೆ ಪ್ರೊ.ಗೌ.ಮ.ಉಮಾಪತಿ ಶಾಸ್ತ್ರಿ ಸಾಹಿತ್ಯ-ಸಂಶೋಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

17 ಬ್ಯಾಂಕ್ ಖಾತೆಗಳಲ್ಲಿನ 350 ಕೋಟಿ ರೂ.ಫ್ರೀಜ್

ಸಿಐಡಿ ವಶದಲ್ಲಿ ಶಿವಾನಂದ ನೀಲಣ್ಣವರ | ಲಾಭಾಂಶ ಪಡೆದವರ ಖಾತೆಗಳೂ ನಿಷ್ಕ್ರಿಯ

■ **ವಿಕ ಸುದ್ದಿಲೋಕ** ಬೆಳಗಾವಿ

ಕೋಟ್ಯಂತರ ರೂಪಾಯಿ ವಂಚನೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಂ ಅಸೋಸಿಯೇಟ್ ಮಾಲೀಕ ಶಿವಾನಂದ ನೀಲಣ್ಣವರ್ ಅವರ ಖಾತೆ ಸೇರಿದಂತೆ ಇತರರ 17 ಬ್ಯಾಂಕ್ ಖಾತೆಗಳಲ್ಲಿನ 350 ಕೋಟಿ ರೂ.ಗಳನ್ನು ಸಿಐಡಿ ತಂಡ ನಿಷ್ಕ್ರಿಯ ಸ್ಥಿತಿಯಲ್ಲಿ ಇರಿಸಿದೆ.

ಶಿವಂ ಅಸೋಸಿಯೇಟ್‌ನಲ್ಲಿ ಹೂಡಿಕೆ ಮಾಡಿ, ಲಾಭಾಂಶ ಪಡೆದುಕೊಂಡ ಗ್ರಾಹಕರ ಪೈಕಿ 16 ಗ್ರಾಹಕರ ಖಾತೆಗಳನ್ನು ಪತ್ತೆ ಮಾಡಿ, ಆ ಖಾತೆಗಳಲ್ಲಿ ವಹಿವಾಟು ನಡೆಯದಂತೆ ಅವುಗಳನ್ನು ನಿಷ್ಕ್ರಿಯಗೊಳಿಸಿದೆ. ಈ ಬಗ್ಗೆ ಇನ್ನೂ ತನಿಖೆ ಮುಂದುರಿಸಿರುವ ಸಿಐಡಿ, ಶೀಘ್ರದಲ್ಲಿ ಇನ್ನಷ್ಟು ಖಾತೆಗಳನ್ನು ಫ್ರೀಜ್ ಮಾಡುವ ಸಾಧ್ಯತೆ ಇದೆ. ನೀಲಣ್ಣವರ ವಿರುದ್ಧ ಹೂಡಿಕೆ ಮಾಡಿರುವ ಬಹುತೇಕರು ಯಾರು ದೂರು ನೀಡಲು ಮುಂದೆ ಬರುತ್ತಿಲ್ಲ, ಆದ್ದರಿಂದ ಸಿಐಡಿ ಅಧಿಕಾರಿಗಳು, ಲಾಭಾಂಶ ಪಡೆದ ಗ್ರಾಹಕರ ಬ್ಯಾಂಕ್ ಖಾತೆಗಳ ತಪಾಸಣೆಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ನೀಲಣ್ಣವರ ಪರ ವಿಡಿಯೊ: ಶಿವಂ ಅಸೋಸಿಯೇಟ್ ಮಾಲೀಕ ಶಿವಾನಂದ ನೀಲಣ್ಣವರ ಬಂಧನ ಸರಿಯಲ್ಲ ಎಂದು ವೃದ್ಧ ಮಹಿಳೆ ಹಾಗೂ ಮಾಜಿ ಸೈನಿಕರೊಬ್ಬರು ನೀಲಣ್ಣವರ ಇನ್ಸ್ಟಾಗ್ರಾಮ್ ಖಾತೆ ಮೂಲಕ ವಿಡಿಯೊ ಪೋಸ್ಟ್ ಮಾಡಿದ್ದಾರೆ. ಮಹಿಳೆ ಮಾತನಾಡಿರುವ ವಿಡಿಯೊದಲ್ಲಿ, ''ಏಕೆ ಶಿವಾನಂದ ಮೇಲೆ ಅಪವಾದ ಮಾಡಲಾಗುತ್ತಿದೆ? ಅಪವಾದ ಮಾಡುವಂತಹದ್ದು ಏನೂ ಮಾಡಿಲ್ಲ, ಅವನದು ಏನೂ ತಪ್ಪು ಇಲ್ಲ, ಯಾರದ್ದು ಒಂದು ರೂಪಾಯಿ ತಿಂದಿಲ್ಲ'' ಎಂದು ಕಣ್ಣೀರು ಸುರಿಸಿದ್ದಾರೆ. ಇದೇ ರೀತಿ ನಿವೃತ್ತ ಸೈನಿಕ ನರೇಂದ್ರಕುಮಾರ ಎಂಬುವರು ಮಾತನಾಡಿ, ''ನಾನು ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದೇನೆ. ನಿವೃತ್ತಿ ಬಳಿಕ ಶಿವಾನಂದ ನನಗೆ ಉತ್ತಮ ಜೀವನ ಕಲ್ಪಿಸಿದ್ದಾರೆ,'' ಎಂದಿರುವ ವಿಡಿಯೊ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಅತಿಥಿ ಶಿಕ್ಷಕ ಮನರೇಗಾ ಕಾರ್ಮಿಕ!

ಬೇಸಿಗೆ ರಜೆ ಅವಧಿಯಲ್ಲಿ ಕೂಲಿ ಕೆಲಸ ಮಾಡುತ್ತಿರುವ ಸ್ನಾತಕೋತ್ತರ ಪದವೀಧರ

■ **ಮಾಗನೂರು ಎಂ.ಶಿವಕುಮಾರ್** ಮಳವಳ್ಳಿ(ಮಂಡ್ಯ)
mamaramediacenter@gmail.com

ಬೇಸಿಗೆ ರಜೆ ದಿನಗಳಲ್ಲಿ ಅತಿಥಿ ಶಿಕ್ಷಕರ ವೇತನ ದೊರೆಯದ ಕಾರಣ ಜೀವನ ನಿರ್ವಹಿಸಲು ಮಂಡ್ಯ ಜಿಲ್ಲೆಯ ಸ್ನಾತಕೋತ್ತರ ಪದವೀಧರರಾದ ಅತಿಥಿ ಶಿಕ್ಷಕರೊಬ್ಬರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕೆಲಸವನ್ನು ಅವಲಂಬಿಸಿದ್ದಾರೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಕಲ್ಲಾರೆಪುರ ಗ್ರಾಮದ ಚುಂಚಣ್ಣ 8 ವರ್ಷಗಳಿಂದಲೂ ಮಳವಳ್ಳಿ ತಾಲೂಕಿನ ಬೆಳತ್ತೂರು, ಮೇಗಳಾಪುರ, ಮಿಕ್ಕೆರೆ, ಕೋರೇಗಾಲ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಅತಿಥಿ ಶಿಕ್ಷಕರಾಗಿದ್ದಾರೆ.

ಬೇಸಿಗೆ ರಜೆ ಅವಧಿಯಲ್ಲಿ ಮನರೇಗಾ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಇದಕ್ಕಾಗಿ ಬಂಡೂರು ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಚೀಟಿ ಪಡೆದುಕೊಂಡಿದ್ದು, ಪಂಚಾಯಿತಿಯಲ್ಲಿ ಎಂಎನ್ಆರ್ ತೆಗೆಸಿ ಕೂಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಸಸಿಯಾಲದಪುರ ಗ್ರಾಮದಲ್ಲಿ ಗಂಗಾಧರಯ್ಯನ ಕೆರೆ ಅಭಿವೃದ್ಧಿ ಕಾಮಗಾರಿಯ ಕಾಯಕದಲ್ಲಿ ತೊಡಗಿದ್ದಾರೆ.

47 ವರ್ಷದ ಕಲ್ಲಾರೆಪುರ ಚುಂಚಣ್ಣ ಅವರು ಎಲ್ಲೂ ಉದ್ಯೋಗ ಸಿಗದ ಕಾರಣ ಅತಿಥಿ ಶಿಕ್ಷಕರಾದರು.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಬಂಡೂರು ಗ್ರಾ.ಪಂ. ವ್ಯಾಪ್ತಿಯ ಸಸಿಯಾಲದಪುರ ಗ್ರಾಮದಲ್ಲಿ ಗಂಗಾಧರಯ್ಯನ ಕೆರೆ ಅಭಿವೃದ್ಧಿ ಕಾಮಗಾರಿಯಲ್ಲಿ ನಿರತರಾಗಿರುವ ಅತಿಥಿ ಶಿಕ್ಷಕ ಕಲ್ಲಾರೆಪುರ ಚುಂಚಣ್ಣ.

> ಕಲ್ಲಾರೆಪುರ ಗ್ರಾಮದ ಅತಿಥಿ ಶಿಕ್ಷಕರಾದ ಚುಂಚಣ್ಣನವರು ಮನರೇಗಾ ಯೋಜನೆಯಲ್ಲಿ ಕೂಲಿಕಾರರಾಗಿ ಗಂಗಾಧರಯ್ಯನ ಕೆರೆ ಅಭಿವೃದ್ಧಿ ಕಾಮಗಾರಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಇದಲ್ಲದೆ ಸರಕಾರಿ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಿ ಎಂಬ ಅಭಿಯಾನ ಹಮ್ಮಿಕೊಂಡಿದ್ದಾರೆ. ಅವರ ಸಮಾಜಮುಖಿ ಸೇವೆಗೆ ನಮ್ಮ ಸಹಕಾರವಿದೆ.
>
> **-ಗಂಗಾಧರ್ ಎಚ್.ಸಿ** ಅಭಿವೃದ್ಧಿ ಅಧಿಕಾರಿ, ಬಂಡೂರು ಗ್ರಾಮ ಪಂಚಾಯಿತಿ

> ಸ್ನಾತಕೋತ್ತರ ಪದವಿ ಪಡೆದಿರುವ ನಾನು ಈ ಕೆಲಸ ಮಾಡಬೇಕಾ? ಎಂಬ ಯಾವುದೇ ಬೇಸರವಿಲ್ಲ, ಬೇಸಿಗೆ ರಜೆ ಅವಧಿಯಲ್ಲಿ ಅತಿಥಿ ಶಿಕ್ಷಕರಿಗೆ ಸಂಬಳ ದೊರೆಯುವುದಿಲ್ಲ, ಈ ಅವಧಿಯಲ್ಲಿ ಮನರೇಗಾ ಯೋಜನೆಯಡಿ ಕೆಲಸ ಮಾಡುತ್ತಾ ರಜೆಯನ್ನೂ ಸದುಪಯೋಗ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದೇನೆ.
>
> **-ಕಲ್ಲಾರೆಪುರ ಚುಂಚಣ್ಣ** ಅತಿಥಿ ಶಿಕ್ಷಕ

ಜಾನುವಾರುಗಳಿಗೆ ಕಂಟಕವಾದ ಗಾಳಿ, ಮಳೆ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿ, ಕೊಪ್ಪಳ, ಕಿತ್ತೂರು ಕರ್ನಾಟಕ ಭಾಗದ ವಿಜಯಪುರ, ಬೆಳಗಾವಿ ಜಿಲ್ಲೆಗಳಲ್ಲಿ ಬಿರುಗಾಳಿ, ಮಳೆ ಅಬ್ಬರಕ್ಕೆ ಅನೇಕ ಜಾನುವಾರುಗಳು ಮೃತಪಟ್ಟಿವೆ. ಅನೇಕ ಕಡೆ ಮನೆಗಳಿಗೆ ಹಾನಿಯಾಗಿದ್ದು, ಮರಬಿದ್ದುವಾಹನಗಳುಜಖಂಗೊಂಡಿವೆ. ಜೋರು ಗಾಳಿಯಿಂದ ವಿವಿಧ ಬೆಳೆಗಳಿಗೆ ಹಾನಿ ಆಗಿದೆ.

ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ತಿಗಣಿ ಬಿದರಿ ಗ್ರಾಮದಲ್ಲಿ 4,600 ಕೋಳಿಗಳು ಮೃತಪಟ್ಟಿವೆ.

ಸಿಡಿಲಿಗೆ ಎಮ್ಮೆ, ಕುರಿಗಳು ಬಲಿ: ಬಾಗಲಕೋಟೆ ಜಿಲ್ಲಾದ್ಯಂತ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗಿನ ಜಾವದವರೆಗೆ ಗಾಳಿ, ಗುಡುಗು ಸಿಡಿಲಿನೊಂದಿಗೆಮಳೆಯಾಗಿದೆ. ಅಮೀನಗಡ, ಚಿಮ್ಮಡ, ಬಾದಾಮಿ, ಕೆರೂರ, ಇಳಕಲ್, ಮುಧೋಳ, ಕಲಾದಗಿ ಭಾಗದಲ್ಲಿಉತ್ತಮ ಮಳೆ ಆಗಿದೆ. ಸಿಡಿಲಿಗೆ ಮೂರು ಎಮ್ಮೆ, ಒಂದು ಕರು ಮೃತಪಟ್ಟಿವೆ. ಇಳಕಲ್ ನಗರದಲ್ಲಿ ಗಾಳಿಯ ಅರ್ಭಟಕ್ಕೆ ಕಂದಗಲ್ ರಸ್ತೆಯಲ್ಲಿ ಕೆಲ ವಿದ್ಯುತ್ ಕಂಬಗಳು ವಾಲಿವೆ. ಕಡಿ ಗ್ರಾಮದಲ್ಲಿ ಶನಿವಾರ ಸಂಜೆ ಸುರಿದ ಮಳೆಗೆ ರಾಜೇಸಾಬ ಮನೆ ಚಾವಣಿ ಕುಸಿದಿದೆ.

ಮುಧೋಳ ತಾಲೂಕಿನಲ್ಲಿ ಶನಿವಾರ ರಾತ್ರಿ ಸರಾಸರಿ 19 ಮಿಮೀ ಮಳೆಯಾಗಿದೆ. ಮಿರ್ಜಿಯಲ್ಲಿಸಿಡಿಲು ಬಡಿದು ಎರಡು ಎಮ್ಮೆ ಮೇಕೆ ಸಾವಿಗೀಡಾಗಿವೆ. ರಂಜಣಗಿ, ಉತ್ತೂರು, ಹಲಕಿ, ಬಿದರಿ, ಅಲಗುಂಡಿ ಬಿ.ಕೆ.ಗ್ರಾಮಗಳಲ್ಲಿಮನೆಗಳು ಕುಸಿದಿವೆ. ಲೋಕಾಪೂರ, ಮಾಚಕನೂರದಲ್ಲಿ 1.20 ಎಕರೆ ಬಾಳೆ, ಬದನೂರ, ಭಂಟನೂರ, ಜುನ್ನೂರದಲ್ಲಿ ದಾಳಿಂಬೆ ಬೆಳೆಗಳಿಗೆ ಹಾನಿಯಾಗಿದೆ. ಅಲಗುಂಡಿಯಲ್ಲಿ ಬಿತ್ತನೆ ಮಾಡಿದ ದಿನಸಿ ಅರಿಶಿನ ಬೀಜಗಳು ಕೊಚ್ಚಿಕೊಂಡು ಹೋಗಿವೆ.

4,600 ಕೋಳಿ ಸಾವು: ವಿಜಯಪುರ ಜಿಲ್ಲೆಯ ನಾನಾ ಕಡೆ ಶನಿವಾರ ರಾತ್ರಿ ಸುರಿದ ಮಳೆ ಹಾಗೂ ಬಿರುಗಾಳಿ ಅಲ್ಲೋಲಕಲ್ಲೋಲ ಸೃಷ್ಟಿಸಿದೆ. ಅಲ್ಲಲ್ಲಿ ಬೆಳೆ ಹಾನಿಯಾಗಿದ್ದರೆ, ಸಿಡಿಲು ಬಡಿದು ಎರಡು ಹಸು, ಮೂರು ಎಮ್ಮೆ ಮೃತಪಟ್ಟಿವೆ. ಬಬಲೇಶ್ವರ ತಾಲೂಕಿನ ತಿಗಣಿ ಬಿದರಿ ಗ್ರಾಮದಲ್ಲಿ ಶಿವಕ್ಕ ಕಲ್ಲಪ್ಪ ಮಾರದ(ದೊಡ್ಡಮನಿ) ಅವರ ಕೋಳಿ ಫಾರ್ಮ್‌ಗೆ ನೀರು ನುಗ್ಗಿ 5 ಸಾವಿರ ಕೋಳಿಗಳ ಪೈಕಿ 4,600 ಮೃತಪಟ್ಟಿವೆ.

ಚಡಚಣ ತಾಲೂಕಿನಲ್ಲಿ 9 ಮನೆಗಳು ಹಾನಿಯಾಗಿವೆ. ದೇವರನಿಂಬರಗಿ ಗ್ರಾಮದಲ್ಲಿವಾಹನ ಜಖಂಗೊಂಡಿವೆ. ಇಂಡಿ ತಾಲೂಕಿನ ಸಾಲೋಟಗಿ ಗ್ರಾಮದಲ್ಲಿ 4,000 ಬಾಳೆ ಗಿಡಗಳು ನೆಲಸಮವಾಗಿವೆ.

5 ಜಾನುವಾರು ಸಾವು: ಯಾದಗಿರಿ ಜಿಲ್ಲೆಯಲ್ಲಿ ಬಿರುಗಾಳಿ, ಗುಡುಗು ಸಹಿತ ಮಳೆಯಾಗಿದ್ದು ಜಿಲ್ಲಾದ್ಯಂತ ಸಿಡಿಲು ಬಡಿದು ಐದು ಜಾನುವಾರುಗಳು ಸಾವನ್ನಪ್ಪಿವೆ. 13 ಟನ್ ಶೆಡ್‌ಗಳ ಛಾವಣಿ ಗಾಳಿಗೆ ಹಾರಿಹೋಗಿವೆ ಮತ್ತು ನಾಲ್ಕು ಮನೆಗಳು ಭಾಗಶಃ ಹಾನಿಗೊಳಗಾಗಿವೆ. ಹಲವೆಡೆ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ಬೆಳಗಾವಿಯಲ್ಲಿ ಮಳೆ: ಬೆಳಗಾವಿ ನಗರ ಸೇರಿದಂತೆ ಜಿಲ್ಲಾದ್ಯಂತ ಕೆಲವೆಡೆ ಶನಿವಾರ ತಡರಾತ್ರಿ ಗುಡುಗು ಸಹಿತ ಮಳೆಯಾಗಿದೆ. ಶನಿವಾರ ರಾತ್ರಿ ಸುರಿದ ಧಾರಾಕಾರ ಮಳೆ-ಸಿಡಿಲಿಗೆ ಬೈಲಹೊಂಗಲ ತಾಲೂಕಿನ ಮಲ್ಲಾಪುರ ಬೆಳವಡಿ ಗ್ರಾಮದಲ್ಲಿ ತೆಂಗಿನ ಮರಕ್ಕೆ ಸಿಡಿಲು ಬಡಿದಿದೆ.

ಮುಧೋಳದ ಜಮಖಂಡಿ ರಸ್ತೆಯಲ್ಲಿ ಮರ ಉರುಳಿ ಕಾರು ಜಖಂ ಆಗಿದೆ.

ಮರಕ್ಕೆ ಬೈಕ್ ಡಿಕ್ಕಿಯಾಗಿ ಸವಾರ ಸಾವು

ಕೊಪ್ಪಳ: ತಾಲೂಕಿನ ಭೀಮನೂರ ಬಳಿ ಭಾನುವಾರ ಮಳೆಯಿಂದ ರಸ್ತೆ ಮೇಲೆ ಬಿದ್ದಿದ್ದ ಮರಕ್ಕೆ ಬೈಕ್ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಮೃತಪಟ್ಟು, ಮತ್ತೊಬ್ಬರು ಗಂಭೀರ ಗಾಯಗೊಂಡಿದ್ದಾರೆ. ಕಾಮನೂರು ಗ್ರಾಮದ ಕಿರಣ ಕರಬಡಿ (30) ಮೃತರು. ಮಹೇಶ ಹುಬ್ಬ ಅವರಿಗೆ ಗಂಭೀರ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾಮನೂರಿನಿಂದ ಕೊಪ್ಪಳದ ಸಮೀಪದ ಕಾರ್ಖಾನೆಗೆ ಕೆಲಸಕ್ಕೆ ಇಬ್ಬರೂ ಒಂದೇ ಬೈಕ್‌ನಲ್ಲಿತೆರಳುತ್ತಿದ್ದವೇಳೆ ಅವಘಡ ಸಂಭವಿಸಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ತೊರೆ ಕಾಡನಹಳ್ಳಿ ಶಿಂಷಾ ನದಿ ದಡದಲ್ಲಿ ಮೊಸಳೆ ಮರಿ ಕಾಣಿಸಿಕೊಂಡಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ನೆಟ್ಕಲ್ ಗ್ರಾಮದ ಸಮೀಪದ ಅರಣ್ಯದಂಚಿನಲ್ಲಿ ಬೃಹತ್ ಗಾತ್ರದ ಹೆಬ್ಬಾವೊಂದು ಪ್ರಾಣಿಯೊಂದನ್ನು ನುಂಗಿ ಚಲಿಸಲು ಆಗದೆ ಒದ್ದಾಡುತ್ತಿರುವ ದೃಶ್ಯವನ್ನು ಕುರಿಗಾಹಿಯೊಬ್ಬರು ಭಾನುವಾರ ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

ಮ.ಬೆಟ್ಟದಲ್ಲಿ ಬೋನಿಗೆ ಬಿದ್ದ ಚಿರತೆ

15 ದಿನಗಳ ಹಿಂದೆ ಬಾಲಕನ ಮೇಲೆ ದಾಳಿ ಮಾಡಿ ಕೊಂದಿದ್ದ ಚಿರತೆ

ಹನೂರು (ಚಾಮರಾಜನಗರ): ತಾಲೂಕಿನ ಮಲೆಮಹದೇಶ್ವರ ಬೆಟ್ಟದ ಇಂಡಿಗನತ್ತ ಗ್ರಾಮದ ಸಮೀಪ ಇಟ್ಟಿದ್ದ ಬೋನಿಗೆ ಚಿರತೆ ಸೆರೆ ಸಿಕ್ಕಿದೆ.

ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ಗುಂಪಿನಲ್ಲಿದ್ದ ಬಾಲಕನ ಮೇಲೆ 15 ದಿನಗಳ ಹಿಂದೆ ಈ ಚಿರತೆ ದಾಳಿ ಮಾಡಿ ಕೊಂದಿತ್ತು. ಅಲ್ಲದೆ, ಸ್ಥಳೀಯ ಗ್ರಾಮಗಳಲ್ಲಿ ಮೇಕೆಗಳ ಮೇಲೂ ದಾಳಿ ನಡೆಸುತ್ತಿದ್ದರಿಂದ ಗ್ರಾಮಸ್ಥರಲ್ಲಿ ಭೀತಿ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಚಿರತೆ ಸೆರೆಗೆ ಅರಣ್ಯ ಇಲಾಖೆ ಬೋನು ಇರಿಸಿ, ಕ್ಯಾಮೆರಾ ಟ್ರ್ಯಾಪ್ ಕಾರ್ಯಾಚರಣೆ ನಡೆಸುತ್ತಿತ್ತು. ಮೊದಲ ದಿನವೇ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಚಿರತೆ ಸೆರೆ ಸಿಕ್ಕಿದ್ದೂ, ಹಲವು ದಿನ ಬೋನಿಗೆ ಬೀಳದೆ ತಲೆಮರೆಸಿಕೊಂಡಿತ್ತು. ಆದರೆ, ಸೆರೆ ಸಿಕ್ಕಿರುವುದು ಬಾಲಕನ ಮೇಲೆ ದಾಳಿ ಮಾಡಿದ್ದ ಅದೇ ಚಿರತೆಯೇ ಎಂಬ ಅನುಮಾನ ಗ್ರಾಮಸ್ಥರಲ್ಲಿ ಉಳಿದಿದೆ. ಈ ಕುರಿತು ಮಲೆ ಮಹದೇಶ್ವರ ವನ್ಯಜೀವಿ ಧಾಮದ ಡಿಸಿಎಫ್ ಪ್ರತಿಕ್ರಿಯಿಸಿ, "ಬಾಲಕನ ಮೇಲೆ ದಾಳಿ ನಡೆಸಿದ ಚಿರತೆ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಕಾಣಿಸಿದೆ. ಬೋನಿಗೆ ಬಿದ್ದಿರುವುದು ಅದೇ ಚಿರತೆಯೇ ಎಂಬುದನ್ನು ಖಚಿತಪಡಿಸಲು ಅದರ ಮಾದರಿಗಳನ್ನು ಹೋಲಿಕೆ ಮಾಡಿ ಪರಿಶೀಲಿಸಲಾಗುತ್ತಿದೆ. ಚಿರತೆ ರಕ್ತದ ಮಾದರಿಯನ್ನು ಪರೀಕ್ಷೆಗೆ ಕಳುಹಿಸುವ ಮೂಲಕವೂ ಸತ್ಯಾಸತ್ಯತೆ ಪತ್ತೆಹಚ್ಚಲಾಗುವುದು," ಎಂದು ತಿಳಿಸಿದ್ದಾರೆ.

TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂ HESCOMನ ಮೂರು (3) ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಿಗೆ ವಿದ್ಯುತ್ ಕಾಯ್ದೆ, 2003ರ ಕಲಂ 14 ಮತ್ತು 15ರ ಅಡಿಯಲ್ಲಿ ವಿತರಣಾ ಪರವಾನಗಿಯನ್ನು ಮಂಜೂರು ಮಾಡುವ ಕುರಿತು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸಾರ್ವಜನಿಕ ಸೂಚನೆ (ಪ್ರಕರಣ ಸಂಖ್ಯೆ: MP/06/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯ್ದೆ, 2003 ('ಕಾಯ್ದೆ')ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC) (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ನಿಬಂಧನೆಗಳೊಂದಿಗೆ ಓದಿ, **ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಪರಸ್ಪರ ಸಂಪರ್ಕ ಹೊಂದಿರುವ ಪ್ರದೇಶಗಳಿಗೆ** ಟಾಟಾ ಪವರ್ ಕಂಪನಿ ಲಿಮಿಟೆಡ್‌ಗೆ ವಿತರಣಾ ಪರವಾನಗಿ ಮಂಜೂರು ಮಾಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು (**ಪ್ರಕರಣ ಸಂಖ್ಯೆ: MP/06/2026**) ಸಲ್ಲಿಸಿದೆ. ಆಯೋಗವು ಅರ್ಜಿಯನ್ನು ದಾಖಲಿಸಿಕೊಂಡಿದ್ದು, ಕಾಯ್ದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಟಾಟಾ ಪವರ್‌ಗೆ ನಿರ್ದೇಶಿಸಿದೆ.

2. ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24, ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯ್ದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಹೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. ಅರ್ಜಿಯ ಇತರ ಪ್ರಮುಖ ಲಕ್ಷಣಗಳು:

- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೀರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ – ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್ • ಮಾಸ್ಟರ್ಸ್ ಇನ್ ಇಂಟರ್ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	20 ವರ್ಷಗಳಿಗಿಂತ ಹೆಚ್ಚು
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ • ಎಂಬಿಎ, ಐಐಎಂ ಬೆಂಗಳೂರು	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ • ಬಿಪಿಸಿಎಲ್ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	38 ವರ್ಷಗಳಿಗಿಂತ ಹೆಚ್ಚು
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ • ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ • ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	30 ವರ್ಷಗಳಿಗಿಂತ ಹೆಚ್ಚು
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ • ಪಿಜಿಡಿಎಂ, ಐಐಎಂ ಕಲ್ಕತ್ತಾ	• ಟಾಟಾ ಸನ್ಸ್ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್ಪುರ	• ರಾಥ್ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ • ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್ • ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ • ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಕೋಲ್ ಇಂಡಿಯಾ ಲಿಮಿಟೆಡ್ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು

7 ತತ್ಸಮಾನ ಚಟುವಟಿಕೆಗಳಲ್ಲಿನ ಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೀರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.

i. ಮುಂಬೈನಲ್ಲಿ ವಿತರಣಾ ಪರವಾನಗಿ: ಮಾನ್ಯ ಎಂಇಆರ್‌ಸಿ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಭಾಗಕ್ಕೆ (ಚೆನೆ ಮತ್ತು ವರ್ಸಾವೆ ಪ್ರದೇಶವನ್ನು ಒಳಗೊಂಡ ಮಿರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ಪ್ರದೇಶಗಳು) 25 ವರ್ಷಗಳ ಅವಧಿಗೆ ಟಾಟಾ ಪವರ್ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂ. 1, 2014)ಯನ್ನು ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್-ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

ii. ದೆಹಲಿಯಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (ಪಿಪಿಪಿ) ಮಾದರಿಯಲ್ಲಿ ಜಂಟಿ ಉದ್ಯಮವಾಗಿ ಸ್ಥಾಪನೆಯಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12,500 ಸಿಕೆಎಂ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. ಎಟಿಆಂಡ್‌ಸಿ ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಗೆ ಇಳಿಕೆಯಾಗಿದೆ.

iii. ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲನ್ನು ಹೊಂದಿದೆ. ಟಿಪಿಸಿಒಡಿಎಲ್ 29,354 ಚದರ ಕಿ.ಮೀ.ಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನ ಸಮಯದಲ್ಲಿ 30.49% ಇದ್ದ ಎಟಿಆಂಡ್‌ಸಿ ನಷ್ಟಗಳು ಈಗ 19.6%ರಷ್ಟಿವೆ. ಟಿಪಿಸಿಒಡಿಎಲ್ 1,14,119 ಸಿಕೆಟಿ. ಕಿ.ಮೀ. ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

iv. ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯವನ್ನು ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪನೆಯಾಯಿತು. ಟಿಪಿಎನ್‌ಒಡಿಎಲ್ 27,920 ಚದರ ಕಿ.ಮೀ. ಪ್ರದೇಶದಾದ್ಯಂತ ಹರಡಿರುವ 2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಎಫ್‌ವೈ 25ರ ಅಂತ್ಯದಲ್ಲಿ ವಾರ್ಷಿಕ ಎಟಿಆಂಡ್‌ಸಿ ನಷ್ಟಗಳು 12.6%ರಷ್ಟಿದ್ದು – ಇದು ಮಾನ್ಯ ಒಇಆರ್‌ಸಿ ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. ಟಿಪಿಎನ್‌ಒಡಿಎಲ್ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,64,629 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ.

v. ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, ಟಿಪಿಎಸ್‌ಒಡಿಎಲ್ ಒಡಿಶಾದ ದಕ್ಷಿಣ ಭಾಗದಲ್ಲಿ ಸುಮಾರು 48,751 ಚದರ ಕಿ.ಮೀ. ವ್ಯಾಪಿಸಿಕೊಂಡಿದೆ. ಟಿಪಿಎಸ್‌ಒಡಿಎಲ್ 1,12,955 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ. ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.

vi. ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ: ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯುಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯುಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯುಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಆಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.

vii. ಅಜ್ಮೀರ್‌ನಲ್ಲಿ ವಿತರಣಾ ಫ್ರಾಂಚೈಸಿ: ಟಾಟಾ ಪವರ್ ಅಜ್ಮೀರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್) ಅಜ್ಮೀರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆಗೆ ವಿತರಣಾ ಫ್ರಾಂಚೈಸಿ ಒಪ್ಪಂದ (ಡಿಎಫ್‌ಎ)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. ಟಿಪಿಎಡಿಎಲ್ ಅಜ್ಮೀರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವ ಮತ್ತು ಸಂರಕ್ಷಿಸುವ ಹಾಗೂ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿದೆ. ಟಿಪಿಎಡಿಎಲ್ ಎಟಿಆಂಡ್‌ಸಿ ನಷ್ಟಗಳನ್ನು 17.2%ರಿಂದ 7.8%ಗೆ ಇಳಿಕೆ ಮಾಡುವಲ್ಲಿ ಕೊಡುಗೆ ನೀಡಿದೆ.

8. ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರಣೆ ಮತ್ತು ಸೇವೆ ಸಲ್ಲಿಸಲು ಪ್ರಸ್ತಾವಿತ ಗ್ರಾಹಕರ ಸಂಖ್ಯೆ: ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು **ಮೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ**ಯನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಬಯಸಿದೆ. ಮೇಲೆ ಉಲ್ಲೇಖಿಸಿದ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಈ ಕೆಳಗಿನ ಪ್ರದೇಶಗಳನ್ನು ಒಳಗೊಂಡಿವೆ: **1. ಶಿವಮೊಗ್ಗ ನಗರ ಪಾಲಿಕೆ 2. ಮಂಗಳೂರು ನಗರ ಪಾಲಿಕೆ 3. ಉಡುಪಿ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 4. ಶಿವಮೊಗ್ಗ ಮಹಾನಗರ ಪಾಲಿಕೆ 5. ಉಳ್ಳಾಲ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.**
ಟಿಪಿಸಿಎಲ್ ಪರವಾನಗಿ ಮಂಜೂರಾದ ದಿನಾಂಕದಿಂದ 3 ವರ್ಷಗಳ ಅಂತ್ಯದೊಳಗೆ 34,600 (ಮೂವತ್ತನಾಲ್ಕು ಸಾವಿರದ ಆರುನೂರು)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.

9. ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. **ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ:**
ವೆಬ್‌ಸೈಟ್: www.tatapower.com
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಯೋಗ್ಯತೆ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲೆ ತಿಳಿಸಿದಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟವಾದ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇಮೇಲ್ ಐಡಿ: asst.secykerc@gmail.com ಗೆ ಸಲ್ಲಿಸಬಹುದು. ಈ ವೈಶಿಷ್ಟ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದರೆ, ಸಂಬಂಧಪಟ್ಟ ಭಾಗಿದಾರರು ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10:00 ರಿಂದ ಸಂಜೆ 5:00ರವರೆಗೆ ಮೊಬೈಲ್ ಸಂಖ್ಯೆ: 8147 144 627 ಗೆ ಅಥವಾ ಇಮೇಲ್ ಐಡಿ: asst.secykerc@gmail.com ಗೆ ಕೆಇಆರ್‌ಸಿ ಕಚೇರಿಯನ್ನು ಸಂಪರ್ಕಿಸಬಹುದು.
13. ಮೇಲೆ ನಮೂದಿಸಿದ ಇಮೇಲ್ ಐಡಿ ಮೂಲಕ ತಮ್ಮ ಸಲಹೆ/ಆಕ್ಷೇಪಣೆ ಸಲ್ಲಿಸಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ/ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಳೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ ನಂತರ** ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ/ಅಭಿಪ್ರಾಯಕ್ಕೆ ಅದನ್ನು ಸ್ವೀಕರಿಸಿದ ಮೂರು ದಿನಗಳ ಒಳಗೆ ಉತ್ತರಿಸಲಿದೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ/ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು

ಸ್ಥಳ: ಮುಂಬೈ
ದಿನಾಂಕ: 25 ಮೇ, 2026

ಸಹಿ/-
ವಿದ್ಯಾಧರ ಹರಿ ವಾಗ್ಳೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

ಭಟ್ಕಳದಲ್ಲಿ ಉದ್ವಿಗ್ನ ವಾತಾವರಣ

■ ವಿಕ ಸುದ್ದಿಲೋಕ ಕಾರವಾರ

ಉತ್ತರಕನ್ನಡ ಜಿಲ್ಲೆ ಭಟ್ಕಳದ ಮುರಿನಕಟ್ಟೆಯಲ್ಲಿ ಭಾನುವಾರ ರಾತ್ರಿ ದ್ವೇಷಮಯ ವಾತಾವರಣ ಉಂಟಾಗಿತ್ತು. ಹಲವು ವರ್ಷಗಳಿಂದ ಇದ್ದ ದೇವರಕಟ್ಟೆಯನ್ನು ಕೆಲ ತಿಂಗಳ ಹಿಂದೆ ಹೆದ್ದಾರಿ ಅಗಲೀಕರಣ ಹಿನ್ನೆಲೆಯಲ್ಲಿ ತೆರವುಗೊಳಿಸಲಾಗಿತ್ತು. ಭಾನುವಾರ ತೆರವು ಮಾಡಿದ ಕಟ್ಟೆ ಬಳಿಯೇ ಮತ್ತೊಂದು ಕಟ್ಟೆ ನಿರ್ಮಿಸಲಾಗಿತ್ತು. ಇದಕ್ಕೆ ಒಂದು ಕೋಮಿನ ನಾಗರಿಕರಿಂದ ಆಕ್ಷೇಪ, ಆಕ್ರೋಶಕ್ಕೆ ಕಾರಣವಾಗಿ ತೆರವುಗೊಳಿಸುವಂತೆ ಒತ್ತಡ ತಂದರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಈಗ ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್, ಜಿಲ್ಲಾಧಿಕಾರಿ ಲಕ್ಷ್ಮಿಪ್ರಿಯಾ ಭೇಟಿ ನೀಡಿ ಪರಿಶೀಲಿಸಿದರು.

ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ, ಸೌತಡ್ಕದಲ್ಲಿ ಭಕ್ತರ ದಟ್ಟಣೆ

ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭಾನುವಾರ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿದ್ದರು.

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ, ಸೌತಡ್ಕ ಕ್ಷೇತ್ರಗಳಲ್ಲಿ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು ಶನಿವಾರ ಹಾಗೂ ಭಾನುವಾರ ಭಾರಿ ಸಂಖ್ಯೆಯ ಭಕ್ತರು ದೇವರ ದರ್ಶನ ಪಡೆದರು.

ಶಾಲಾ-ಕಾಲೇಜುಗಳಿಗೆ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಜಿಲ್ಲೆಯ ದೇಗುಲಗಳಿಗೆ ಪೋಷಕರು ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾರೆ.

ಭಾನುವಾರ ಬೆಳಗ್ಗಿನಿಂದಲೇ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ಭಕ್ತರ ಸಂಖ್ಯೆ ಹೆಚ್ಚಳದ ಹಿನ್ನೆಲೆಯಲ್ಲಿ ಸುಬ್ರಹ್ಮಣ್ಯ ಮತ್ತು ಧರ್ಮಸ್ಥಳಗಳಲ್ಲಿ ವಸತಿಗೃಹಗಳು ಭರ್ತಿಯಾಗಿದ್ದವು. ಉಜಿರೆ, ಕನ್ಯಾಡಿ ಖಾಸಗಿ ವಸತಿಗೃಹಗಳು ಭರ್ತಿಯಾಗಿದ್ದವು. ಸೋಮವಾರ ಧರ್ಮಸ್ಥಳದಲ್ಲಿ [illegible] ನಡೆಯಲಿದೆ. ಸೋಮವಾರದ ಬಳಿಕ ದೀಪಾವಳಿ ವರೆಗೆ ದೇವಸ್ಥಾನದಲ್ಲಿ ಉತ್ಸವ, ರಂಗಪೂಜೆ ಮೊದಲಾದ ವಿಶೇಷ ಸೇವೆಗಳು ನಡೆಯುವುದಿಲ್ಲ.

ಸೌತಡ್ಕದಲ್ಲಿ ಭಕ್ತಸಾಗರ

ಸೌತಡ್ಕ ಮಹಾಗಣಪತಿ ದೇವಸ್ಥಾನಕ್ಕೂ ಭಾನುವಾರ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿ, ದೇವರ ದರ್ಶನ ಪಡೆದರು. ಸೂರ್ಯ ಸದಾಶಿವರುದ್ರ ದೇವಸ್ಥಾನಕ್ಕೂ ಭಕ್ತರ ಸಂಖ್ಯೆ ಹೆಚ್ಚಿತ್ತು.

ಒಂದೇ ದಿನ 40 ಸಾವಿರ ಭಕ್ತರ ಭೇಟಿ

ಕುಕ್ಕೆಸುಬ್ರಹ್ಮಣ್ಯಕ್ಕೆ ಭಾನುವಾರ 40 ಸಾವಿರಕ್ಕೂ ಅಧಿಕ ಭಕ್ತರು ಭೇಟಿ ನೀಡಿದ್ದಾರೆ. ವಾಹನಗಳ ಸರತಿ ಕುಮಾರಧಾರದಿಂದ ದೇವರಗದ್ದೆವರೆಗೂ ಕಂಡುಬಂದಿದ್ದು, ಸ್ಥಳಾವಕಾಶ ಕೊರತೆಯಿಂದ ಅನೇಕ ಭಕ್ತರು ರಸ್ತೆ ಬದಿಯಲ್ಲೇ ವಾಹನ ನಿಲ್ಲಿಸಿ ಕಾಲ್ನಡಿಗೆಯಲ್ಲೇ ದೇವಸ್ಥಾನದತ್ತ ಸಾಗಿದರು. ನಾನಾ ಸೇವೆಗಳ ಸೇವಾರ್ಥಿಗಳ ಸಂಖ್ಯೆಯೂ ಗಣನೀಯ ಏರಿಕೆಯಾಯಿತು. ವಿಶೇಷವಾಗಿ ಆಶ್ಲೇಷ ಬಲಿ, ನಾಗ ಪ್ರತಿಷ್ಠೆ ಹಾಗೂ ಸರ್ಪ ಸಂಸ್ಕಾರ ಸೇವೆಗಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು. ಮುಂಜಾನೆಯಿಂದಲೇ ಸೇವೆಗಾಗಿ ಭಕ್ತರು ಉದ್ದ ಸಾಲಿನಲ್ಲಿ ನಿಂತಿದ್ದರು.

ಜನ ಸಂದಣಿಯಿಂದ ಕೂಡಿದ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ.

ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ

ಮಂಗಳೂರು: ನಗರದ ಕೋಡಿಕಲ್ ಉರ್ವ ಬಳಿ ಶನಿವಾರ ತಡರಾತ್ರಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಸಿಬ್ಬಂದಿ ಮೇಲೆ ದ್ವಿಚಕ್ರ ವಾಹನದಲ್ಲಿ ಬಂದ ಅಪರಿಚಿತರು ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

ದಾಳಿಯಿಂದ ಗಾಯಗೊಂಡ ಕಾನ್ಸ್‌ಟೆಬಲ್ ಹನುಮಂತ ಕಂಟಿ ಅವರನ್ನು ನಗರದ ಆಸ್ಪತ್ರೆಗೆ ದಾಖಲಾಗಿದೆ.

ಶನಿವಾರ ತಡರಾತ್ರಿ ಸುಮಾರು 2 ಗಂಟೆ ವೇಳೆ ಹನುಮಂತ ಕಂಟಿ ಮತ್ತು ಹೋಂಗಾರ್ಡ್ ಸಿಬ್ಬಂದಿ, ಕೋಡಿಕಲ್ ಉರ್ವದ ನಾರಾಯಣಗುರು ಕೋ-ಆಪರೇಟಿವ್ ಸೊಸೈಟಿ ಬಳಿ ಗಸ್ತಿನಲ್ಲಿದ್ದರು. ಆ ವೇಳೆ ದ್ವಿಚಕ್ರ ವಾಹನವೊಂದರಲ್ಲಿ ಇಬ್ಬರು ಯುವಕರು ಬಂದರು. ಹನುಮಂತ ಅವರು ತಪಾಸಣೆ ಮಾಡಲು ವಾಹನ ನಿಲ್ಲಿಸುವಂತೆ ಸೂಚನೆ ನೀಡಿದರೂ ಬೈಕ್ ಸವಾರರು ವೇಗವಾಗಿ ಬೈಕ್ ಚಲಾಯಿಸಿಕೊಂಡು ಹೋದರು. ಸ್ವಲ್ಪ ಸಮಯದ ಬಳಿಕ ಬೈಕ್ ಸವಾರರು ಮತ್ತೆ ಅಲ್ಲಿಗೆ ಬಂದರು ಹಿಂಬದಿಯ ಸವಾರ ಸಿಮೆಂಟ್ ಶೀಟ್‌ನಂತಹ ವಸ್ತುವಿನಿಂದ ಹನುಮಂತ ಅವರಿಗೆ ಹೊಡೆದ. ಹನುಮಂತ ಅವರು ಅಡ್ಡ ಹಿಡಿದು ತಲೆಗೆ ಏಟು ಬೀಳದಂತೆ ತಡೆದು, ಅಪಾಯದಿಂದ ಪಾರಾದರು. ಘಟನೆಯ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕ ಸೇರಿ ಇಬ್ಬರು ನೀರುಪಾಲು

ಹಿರಿಯೂರು (ಚಿತ್ರದುರ್ಗ): ತಾಲೂಕಿನ ಅಬ್ಬಿನಹೊಳೆ ಠಾಣೆ ವ್ಯಾಪ್ತಿಯ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ವ್ಯಕ್ತಿಗಳು ನೀರಿನಲ್ಲಿ ಮುಳುಗಿ ಮೃತರಾದರು. ಬಾವಿಯಲ್ಲಿ ಈಜು ಕಲಿಯಲು ಹೋಗಿದ್ದ ಪವನ್‌ಕುಮಾರ್ (17) ಮುಳುಗಿ ಮೃತಪಟ್ಟ ಘಟನೆ ತಾಲೂಕಿನ ಗೂಳ್ಯ ಗ್ರಾಮದಲ್ಲಿ ಶನಿವಾರ ನಡೆದಿದೆ. ಇತ್ತೀಚೆಗೆ ಎಸ್ಸೆಸ್ಸೆಲ್ಸಿ ಪಾಸಾಗಿದ್ದ ಪವನ್ ರಜೆ ಇದ್ದ ಕಾರಣ ಈಜಾಡಲು ಸ್ನೇಹಿತರೊಂದಿಗೆ ಗೂಳ್ಯ ಗ್ರಾಮದ ನಿಂಗಪ್ಪ ಎಂಬುವರ ಜಮೀನಿನಲ್ಲಿದ್ದ ಬಾವಿಗೆ ತೆರಳಿದ್ದ. ಈಜು ಕಲಿಯಲು ಕ್ಯಾನ್ ಕಟ್ಟಿಕೊಂಡು ನೀರಿಗಿಳಿದಾಗ, ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತನಾದ.

ಮತ್ತೊಂದು ಪ್ರಕರಣದಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದ ವ್ಯಕ್ತಿ, ತಾಲೂಕಿನ ಶಿಡ್ಲಯ್ಯನ ಕೋಟೆ ಸಮೀಪ ನಾರಾಯಣಪುರ ಯೋಜನೆ ನಾಲೆಯಲ್ಲಿ ಬಿದ್ದು ಮೃತಪಟ್ಟ ಘಟನೆ ಶನಿವಾರ ನಡೆದಿದೆ. ತುಮಕೂರು ಜಿಲ್ಲೆ ಪಾವಗಡ ತಾಲೂಕು ಓಬಳಾಪುರ ಮೂಲದ ಧರ್ಮಪುರ ನಿವಾಸಿ ಜಿ.ರಮೇಶ್ (45) ಮೃತರು. ಬೆಂಗಳೂರು ಮೂಲದ ರಮೇಶ್, ಆರು ವರ್ಷಗಳಿಂದ ಧರ್ಮಪುರದಲ್ಲಿ ಕುರಿ ಮರಿ ವ್ಯಾಪಾರ ಮಾಡಿಕೊಂಡಿದ್ದರು. ರಮೇಶ್ ಅವರ ಪುತ್ರಿ ಚಿತ್ರದುರ್ಗ ಎಸ್‌ಆರ್‌ಎಸ್ ಕಾಲೇಜಿನಲ್ಲಿ ಓದುತ್ತಿದ್ದು, ಮಗಳನ್ನು ಹಾಸ್ಟೆಲ್‌ಗೆ ಬಿಟ್ಟು ಮರಳಿ ಬರುವಾಗ ಬೈಕ್ ನಿಯಂತ್ರಣ ತಪ್ಪಿ ನಾಲೆಗೆ ಬಿದ್ದಿದ್ದ.

36 ಮೆಟ್ರಿಕ್ ಟನ್ ಅಕ್ರಮ ಅದಿರು ವಶ

ಬಳ್ಳಾರಿ: ಖನಿಜ ಸಾಗಣೆ ಪರವಾನಗಿ ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಕಬ್ಬಿಣದ ಅದಿರು ಸಾಗಿಸುತ್ತಿದ್ದ ಎರಡು ಟಿಪ್ಪರ್‌ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಭಾನುವಾರ ಜಪ್ತಿ ಪಡಿಸಿಕೊಂಡಿದ್ದು, ಇಬ್ಬರು ಚಾಲಕರನ್ನು ಬಂಧಿಸಿದ್ದಾರೆ.

ನಗರದ ಕೌಲ್ ಬಜಾರ್ ನಿವಾಸಿ ಕೆ. ಸತ್ಯನಾರಾಯಣ (52) ಹಾಗೂ ಆಂಧ್ರಪ್ರದೇಶದ ಓಬಳಾಪುರಂ ಗ್ರಾಮದ ಕೆ.ನಾಗರಾಜ (32) ಬಂಧಿತರು. ಆಂಧ್ರಪ್ರದೇಶದ ಸೋಮಲಾಪುರ ರೈಲ್ವೆ ಸೈಡಿಂಗ್ಸ್ ಪ್ರದೇಶದಿಂದ ಎರಡು ಟಿಪ್ಪರ್‌ಗಳಲ್ಲಿ ಕಬ್ಬಿಣದ ಅದಿರು ತುಂಬಿಕೊಂಡು, ಬಳ್ಳಾರಿ ತಾಲೂಕಿನ ಹಲಕುಂದಿ ಗ್ರಾಮದ ಬಳಿಯಿರುವ ಖಾಸಗಿ ಸ್ಪಾಂಜ್ ಐರನ್ ಘಟಕಕ್ಕೆ ಅನ್‌ಲೋಡ್ ಮಾಡಲು ತೆರಳುತ್ತಿದ್ದ ವೇಳೆ ಚಾಲಕರನ್ನು ಬಂಧಿಸಲಾಗಿದೆ. ಒಟ್ಟು 36 ಮೆಟ್ರಿಕ್ ಟನ್ (ಒಂದು ಲಾರಿಯಲ್ಲಿ 13.10 ಟನ್ ಹಾಗೂ ಮತ್ತೊಂದರಲ್ಲಿ 22.90 ಟನ್) ಕಬ್ಬಿಣದ ಅದಿರು ಪತ್ತೆಯಾಗಿದೆ. ಇದರ ಮೌಲ್ಯ ಸುಮಾರು 1.12 ಲಕ್ಷ ರೂ. ಆಗಿದ್ದು, ಇಷ್ಟು ಮೊತ್ತದ ರಾಜಧನವನ್ನು ಸರಕಾರಕ್ಕೆ ವಂಚಿಸಲಾಗಿದೆ. ಪೊಲೀಸರು ಅದಿರು ಹಾಗೂ ಸುಮಾರು 6 ಲಕ್ಷ ರೂ. ಮೌಲ್ಯದ ಎರಡು ಟಿಪ್ಪರ್ ಸೇರಿದಂತೆ ಒಟ್ಟು 7.12 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡಿದ್ದಾರೆ. ಭೂವಿಜ್ಞಾನಿ ನವೀನ್ ಜಿ. ದೂರಿನನ್ವಯ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

TATA

TATA POWER

THE TATA POWER COMPANY LIMITED,

Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ವಿದ್ಯುತ್ ಕಾಯ್ದೆ 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಜಿಇಎಸ್‌ಕಾಂನ ನಾಲ್ಕು (4) ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ ಪ್ರದೇಶಗಳಿಗೆ ವಿತರಣಾ ಪರವಾನಗಿ ಮಂಜೂರು ಮಾಡುವ ಕುರಿತು ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯ ಬಗ್ಗೆ ಸಲಹೆಗಳು / ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ

(ಪ್ರಕರಣ ಸಂಖ್ಯೆ: MP/05/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು, ವಿದ್ಯುತ್ ಕಾಯ್ದೆ 2003ರ ಕಲಂ 14 ಮತ್ತು 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) (ಲೈಸೆನ್ಸಿಂಗ್) ನಿಯಮಾವಳಿ, 2004 ಮತ್ತು ಅನ್ವಯವಾಗುವ ಇತರ ನಿಯಮಗಳು ಹಾಗೂ ನಿಯಮಾವಳಿಗಳ ಅನ್ವಯ, **ಜಿಇಎಸ್‌ಕಾಂನ ನಾಲ್ಕು (4) ಭೌಗೋಳಿಕವಾಗಿ ಸಂಯೋಜಿತ ಆದಾಯ ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ** ಪ್ರದೇಶಗಳಿಗೆ ಟಿಪಿಸಿಎಲ್‌ಗೆ ವಿತರಣಾ ಪರವಾನಗಿ ಮಂಜೂರು ಮಾಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (KERC/ಆಯೋಗ) ಮುಂದೆ ಅರ್ಜಿ (ಪ್ರಕರಣ ಸಂಖ್ಯೆ MP 05/2026) ಸಲ್ಲಿಸಿದೆ. ಆಯೋಗವು ಕಾಯ್ದೆಯ ಕಲಂ 15(2)ರ ಅಡಿಯಲ್ಲಿ ಟಾಟಾ ಪವರ್ ಸಾರ್ವಜನಿಕ ಸೂಚನೆ ಪ್ರಕಟಿಸಲು ನಿರ್ದೇಶಿಸಿದೆ.
2. **ಅರ್ಜಿಯ ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ ಕೆಳಗಿನಂತೆ ನೀಡಲಾಗಿದೆ:**

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯ್ದೆಯ ಕಲಂ 14ರ 6ನೇ ಉಪವಿಧಾನದ ಅಡಿಯಲ್ಲಿ ವಿತರಣಾ ಪರವಾನಗಿ.
ಅರ್ಜಿದಾರರ ಮುಖ್ಯ ವ್ಯವಹಾರ ಪ್ರದೇಶ:	**ಜಿಇಎಸ್‌ಕಾಂನ ನಾಲ್ಕು (4) ಭೌಗೋಳಿಕವಾಗಿ ಸಂಪರ್ಕಿತ ಆದಾಯ ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ.**

3. **ಅರ್ಜಿಯ ಇತರೆ ಮುಖ್ಯ ಅಂಶಗಳು:**

- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳಲ್ಲಿ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ, ಮುಂಬೈಯ 485 ಚ.ಕಿ.ಮೀ. ಪ್ರದೇಶದಲ್ಲಿ 0.8 ದಶಲಕ್ಷಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4850 CKM ಜಾಲದ ಉದ್ದ ಹಾಗೂ 99.99% ಕ್ಕಿಂತ ಹೆಚ್ಚು ವಿಶ್ವಾಸಾರ್ಹತೆಯನ್ನು ಹೊಂದಿದೆ; ಇದು ದೇಶದಲ್ಲೇ ಅತಿ ಉನ್ನತ ಮಟ್ಟದಲ್ಲೊಂದಾಗಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPWODL) ಹಾಗೂ ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಸಂಸ್ಥೆಗಳ ಮೂಲಕ ಟಾಟಾ ಪವರ್ ಗಮನಾರ್ಹ ಕಾರ್ಯಕ್ಷಮತೆಯನ್ನು ತೋರಿಸಿದೆ.
- ಟಾಟಾ ಪವರ್ ಸಂಸ್ಥೆಯು ಶತಮಾನಕ್ಕೂ ಹೆಚ್ಚು ಕಾಲ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ದಿನೇದಿನೇ ಸಂಕೀರ್ಣಗೊಳ್ಳುತ್ತಿರುವ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸಲು ಅಪರೂಪದ ಪರಿಣತಿ ಮತ್ತು ಸಾಮರ್ಥ್ಯವನ್ನು ಹೊಂದಿದೆ. ಅರ್ಜಿದಾರನು ವಿವಿಧ ಸಮನ್ವಯಾತ್ಮಕ ಪ್ರಯೋಜನಗಳನ್ನು ಬಳಸಿಕೊಂಡು, **ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ** ಜಿಲ್ಲೆಗಳನ್ನೊಳಗೊಂಡ ಪ್ರಸ್ತಾವಿತ ಸರಬರಾಜು ಪ್ರದೇಶದಲ್ಲಿನ ಗ್ರಾಹಕರ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾನೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ **ಗುಲ್ಬರ್ಗಾ ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ಲಿಮಿಟೆಡ್ (GESCOM)** ನ ವಿತರಣಾ ವ್ಯಾಪ್ತಿಗೆ ಒಳಪಡುತ್ತದೆ.

4. **ಅರ್ಜಿದಾರರ ಕಾನೂನುಬದ್ಧ ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – CIN [L28920MH1919PLC000567].

5. **ಷೇರು ಹಿಡಿಕೆ ಮಾದರಿ**

ಕ್ರ.ಸಂ.	ಷೇರುದಾರರ ಹೆಸರು	ಷೇರು ಹಿಡಿಕೆ ಮಾದರಿ (31 ಮಾರ್ಚ್ 2025ರ ಸ್ಥಿತಿಗೆ)
(i)	ಪ್ರೊಮೋಟರ್ ಮತ್ತು ಪ್ರೊಮೋಟರ್ ಗುಂಪು	1497257565
(ii)	ಸಾರ್ವಜನಿಕರು	1698081982
(iii)	ನಾನ್-ಪ್ರೊಮೋಟರ್ – ನಾನ್-ಪಬ್ಲಿಕ್	0
(iv)	ಡಿಲಾರ್‌ಗಳ ಅಡಿಪಾಯದ ಷೇರುಗಳು	0
(v)	ನೌಕರರ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	**ಒಟ್ಟು**	**3195339547**

6. **ನಿರ್ವಹಣಾ ವಿವರ (ನಿರ್ದೇಶಕ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕ, ಅಧ್ಯಕ್ಷರು;	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಶನ್ಸ್, ರೀಜನಲ್ ಎಂಜಿನಿಯರಿಂಗ್ ಕಾಲೇಜು, ತ್ರಿಚಿ • ಗೌರವ ಡಾಕ್ಟರ್ ಆಫ್ ಲೆಟರ್ಸ್	• ಟಾಟಾ ಸನ್ಸ್ ಅಧ್ಯಕ್ಷತೆ, • ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ;	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ	• ಐಐಟಿ ದೆಹಲಿ ಯಿಂದ ಪಿಎಚ್.ಡಿ. • ನ್ಯಾಷನಲ್ ಲಾ ಸ್ಕೂಲ್ ಬೆಂಗಳೂರು ಯಿಂದ ಮಾಸ್ಟರ್ಸ್ ಇನ್ ಬಿಸಿನೆಸ್ ಲಾ • ದೆಹಲಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ	• ವಿದ್ಯುತ್ ಕ್ಷೇತ್ರ ತಜ್ಞರು • ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ;	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಾಲ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕಿ	• ಬ್ಯಾಚಲರ್ ಇನ್ ಕಂಪ್ಯೂಟರ್ ಎಂಜಿನಿಯರಿಂಗ್ • ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಅಂತಾರಾಷ್ಟ್ರೀಯ ಹಣಕಾಸು ಮತ್ತು ವ್ಯವಹಾರದಲ್ಲಿ ಮಾಸ್ಟರ್ಸ್;	• ಕಾರ್ಪೊರೇಟ್ ಆಡಳಿತ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ;	ಅನುಭವ: 20 ವರ್ಷಗಳಿಗಿಂತ ಹೆಚ್ಚು
4	ಶ್ರೀ ಅಶೋಕ್ ಸಿನ್ಹಾ, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು;	• ಐಐಟಿ ಕಾನ್ಪುರದಿಂದ ಕೆಮಿಕಲ್ ಎಂಜಿನಿಯರಿಂಗ್ ಬ್ಯಾಚಲರ್ಸ್ • ಐಐಎಂ ಬೆಂಗಳೂರು ಯಿಂದ ಎಂಬಿಎ	• ಇಂಧನ ಕ್ಷೇತ್ರದಲ್ಲಿ ವಿಶಾಲ ಅನುಭವ • ಬಿಪಿಸಿಎಲ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು;	38 ವರ್ಷಗಳಿಗಿಂತ ಹೆಚ್ಚು
5	ಶ್ರೀ ರಾಜೀವ್ ಮೆಹ್ರಿಷಿ, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಇತಿಹಾಸದಲ್ಲಿ ಮಾಸ್ಟರ್ಸ್ • ಯುಕೆ ಯ ಸ್ಟ್ರಾತ್ಕ್ಲೈಡ್ ವಿಶ್ವವಿದ್ಯಾಲಯದಿಂದ ಎಂಬಿಎ;	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೇಖಾ ಪರಿಶೋಧಕರು • ಸಾರ್ವಜನಿಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ;	ನಾಗರಿಕ ಸೇವೆಯಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ;	30 ವರ್ಷಗಳಿಗಿಂತ ಹೆಚ್ಚು
7	ಶ್ರೀ ಸೌರಭ್ ಅಗ್ರವಾಲ್, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಐಐಟಿ ರೂರ್ಕಿಯಿಂದ ಕೆಮಿಕಲ್ ಎಂಜಿನಿಯರಿಂಗ್ ಬ್ಯಾಚಲರ್ಸ್ • ಐಐಎಂ ಕಲ್ಕತ್ತಾದಿಂದ ಪಿಜಿಡಿಎಂ	• ಟಾಟಾ ಸನ್ಸ್ ಗುಂಪಿನ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರೋಥ್‌ಶೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕರು • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ ತರುಣ್ ಬಜಾಜ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯದಿಂದ ವಾಣಿಜ್ಯದಲ್ಲಿ ಬ್ಯಾಚಲರ್ಸ್ • ಐಐಎಂ ಅಹಮದಾಬಾದ್‌ನಿಂದ ಎಂಬಿಎ • ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಅಂಡ್ ಪಾಲಿಟಿಕಲ್ ಸೈನ್ಸ್‌ನಿಂದ ಎಂ.ಎಸ್‌ಸಿ.	• ಭಾರತ ಸರ್ಕಾರದ ಮಾಜಿ ಆದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಸಾರ್ವಜನಿಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಯಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ ಪ್ರಮೋದ್ ಅಗರವಾಲ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಐಐಟಿ ಮುಂಬೈಯಿಂದ ಬಿ.ಟೆಕ್ (ಸಿವಿಲ್) • ಐಐಟಿ ದೆಹಲಿ ಯಿಂದ ಎಂ.ಟೆಕ್ (ಡಿಸೈನ್ ಎಂಜಿನಿಯರಿಂಗ್);	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (CMD), ಮಧ್ಯ ಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ • ವ್ಯೂಹಾತ್ಮಕ ಮೈತ್ರಿಗಳು • ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಯಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. **ಸಮಾನ ಸ್ವರೂಪದ ಚಟುವಟಿಕೆಗಳಲ್ಲಿ ಕಾರ್ಯಾಚರಣೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:**
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಟಾಟಾ ಪವರ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ಅಡ್ಡಿಯಿಲ್ಲದ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಸರಬರಾಜು ಮಾಡುತ್ತಿದೆ.

I. **ಮುಂಬೈಯಲ್ಲಿ ವಿತರಣಾ ಪರವಾನಗಿ:** ಗೌರವಾನ್ವಿತ MERC, ಟಾಟಾ ಪವರ್‌ಗೆ 25 ವರ್ಷಗಳ ಅವಧಿಗೆ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಒಂದು ಭಾಗಕ್ಕೆ ವಿತರಣಾ ಪರವಾನಗಿ (Distribution License No. 1 of 2014) ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚ.ಕಿ.ಮೀ. ಪ್ರದೇಶದಲ್ಲಿ 0.8 ದಶಲಕ್ಷಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು 4,850 CKM ಜಾಲ ಉದ್ದ 1,076 MW ಗರಿಷ್ಠ ಬೇಡಿಕೆ ಹಾಗೂ ಸುಮಾರು 1.24% ವಿತರಣಾ ನಷ್ಟಗಳೊಂದಿಗೆ ಅತ್ಯಾಧುನಿಕ ವಿತರಣಾ ಜಾಲವನ್ನು ನಡೆಸುತ್ತಿದೆ.

II. **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – DDL) ಅನ್ನು ಜುಲೈ 2002ರಲ್ಲಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ ಸರ್ಕಾರ (49%)ಗಳ ಸಂಯುಕ್ತ ಉಪಕ್ರಮವಾಗಿ ಸಾರ್ವಜನಿಕ-ಖಾಸಗಿ ಭಾಗಧಾರಿ (PPP) ಮಾದರಿಯಲ್ಲಿ ಸ್ಥಾಪಿಸಲಾಯಿತು. ಟಾಟಾ ಪವರ್ – DDL ಸುಮಾರು 2.1 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು ಸುಮಾರು 12500 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ; AT&C ನಷ್ಟ ಮಟ್ಟವು 2002ರ 53.1%ರಿಂದ 2025ರಲ್ಲಿ 5.54%ಕ್ಕೆ ಇಳಿದಿದೆ.

III. **ಸೆಂಟ್ರಲ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ಸಂಯುಕ್ತ ಉಪಕ್ರಮವಾಗಿದ್ದು, ಬಹುಪಾಲು ಹಂಚಿಕೆಯನ್ನು ಟಾಟಾ ಪವರ್ ಕಂಪನಿ (51%) ಹೊಂದಿದೆ. TPCODL 29,354 ಚ.ಕಿ.ಮೀ. ವ್ಯಾಪಕ ವಿತರಣಾ ಪ್ರದೇಶದಲ್ಲಿ 3.3 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, ಜೂನ್ 2020ರಲ್ಲಿ ಸ್ವೀಕರಣದ ಸಮಯದ 30.49% AT&C ನಷ್ಟವು ಈಗ 19.6%ಕ್ಕೆ ಇಳಿದಿದೆ; 114119 ಸರ್ಕ್ಯೂಟ್ ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ.

IV. **ನಾರ್ದರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL) ಅನ್ನು ಏಪ್ರಿಲ್ 2021ರಲ್ಲಿ ಟಾಟಾ ಪವರ್ (51%) ಮತ್ತು GRIDCO Ltd (49%) ಗಳ ಸಂಯುಕ್ತ ಉಪಕ್ರಮವಾಗಿ ರಚಿಸಲಾಯಿತು. TPNODL 27920 ಚ.ಕಿ.ಮೀ. ಪ್ರದೇಶದಲ್ಲಿ 2 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, FY 25 ಕೊನೆಯಲ್ಲಿ AT&C ನಷ್ಟವನ್ನು 12.6% ಮಟ್ಟದಲ್ಲಿಟ್ಟಿದೆ; ಇದು OERC ನಿಗದಿಪಡಿಸಿದ 17.09% ಗುರಿಯಿಗಿಂತ 4.49% ಕಡಿಮೆ. ಸಂಸ್ಥೆ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81168 ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 164629 CKM ಜಾಲವನ್ನು ನಿರ್ವಹಿಸುತ್ತದೆ.

V. **ಸದರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL) ಜನವರಿ 2021ರಲ್ಲಿ ಕಾರ್ಯಾರಂಭ ಮಾಡಿತು. ಸುಮಾರು 2.2 ದಶಲಕ್ಷ ಗ್ರಾಹಕರೊಂದಿಗೆ TPSODL ದಕ್ಷಿಣ ಒಡಿಶಾದ ಸುಮಾರು 48,751 ಚ.ಕಿ.ಮೀ. ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು 112955 CKM ಜಾಲವನ್ನು ನಿರ್ವಹಿಸುತ್ತದೆ; ದಾಖಲಾಗಿದ ಗರಿಷ್ಠ ಬೇಡಿಕೆ 798 MVA ಆಗಿತ್ತು.

VI. **ವೆಸ್ಟರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPWODL) ಟಾಟಾ ಪವರ್ (51%) ಮತ್ತು GRIDCO Limited (49%) ಗಳ ಸಂಯುಕ್ತ ಉಪಕ್ರಮವಾಗಿದ್ದು, ಜನವರಿ 2021ರಲ್ಲಿ ಕಾರ್ಯಾರಂಭ ಮಾಡಿತು. TPWODL 48,373 ಚ.ಕಿ.ಮೀ. ವ್ಯಾಪ್ತಿಯಲ್ಲಿ 2.2 ದಶಲಕ್ಷ ನೋಂದಾಯಿತ ಗ್ರಾಹಕರನ್ನು ಹೊಂದಿದ್ದು, 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82752 ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 179694 ಸರ್ಕ್ಯೂಟ್ ಕಿ.ಮೀ. ಜಾಲವನ್ನು ನಿರ್ವಹಿಸುತ್ತದೆ; FY 25ರಲ್ಲಿ AT&C ನಷ್ಟ 17.1% ಮತ್ತು ಗರಿಷ್ಠ ಬೇಡಿಕೆ 1780 MW ಆಗಿತ್ತು.

VII. **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:** ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಅಜ್ಮೇರ್ ವಿದ್ಯುತ್ ವಿತರಣ್ ನಿಗಮ್ ಲಿಮಿಟೆಡ್ ಜೊತೆ Distribution Franchisee Agreement (DFA) ಮಾಡಿಕೊಂಡಿರುವ ವಿತರಣಾ ಫ್ರಾಂಚೈಸಿಯಾಗಿದೆ. TPADL ಅಜ್ಮೇರ್ ನಗರದ ಸುಮಾರು 200 ಚ.ಕಿ.ಮೀ. ಪ್ರದೇಶದಲ್ಲಿ ವಿತರಣಾ ಜಾಲದ ಕಾರ್ಯಾಚರಣೆ ಮತ್ತು ನಿರ್ವಹಣೆ, ಬಿಲ್ಲಿಂಗ್ ಮತ್ತು ಸಂಗ್ರಹಣೆಗೆ ಜವಾಬ್ದಾರಿಯಾಗಿದ್ದು, AT&C ನಷ್ಟವನ್ನು 17.2%ರಿಂದ 7.8%ಕ್ಕೆ ಇಳಿಸುವಲ್ಲಿ ಕೊಡುಗೆ ನೀಡಿದೆ.

8. **ಪ್ರಸ್ತಾವಿತ ಸರಬರಾಜು ಪ್ರದೇಶ, ಅದರ ವಿವರಣೆ ಮತ್ತು ಸೇವೆ ನೀಡಲು ಉದ್ದೇಶಿಸಿರುವ ಗ್ರಾಹಕರ ಸಂಖ್ಯೆ:** ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, **ಜಿಇಎಸ್‌ಕಾಂನ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ ಎಂಬ ನಾಲ್ಕು (4) ಆದಾಯ ಜಿಲ್ಲೆಗಳ ಭೌಗೋಳಿಕವಾಗಿ** ಸಂಯೋಜಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಸರಬರಾಜು ಕೈಗೊಳ್ಳಲು ಉದ್ದೇಶಿಸಿದೆ. ಮೇಲ್ಕಂಡ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಕೆಳಗಿನ ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿವೆ: 1. **ಬಳ್ಳಾರಿ ಸಿಟಿ ಕಾರ್ಪೊರೇಷನ್ 2. ಕಲಬುರಗಿ ಸಿಟಿ ಕಾರ್ಪೊರೇಷನ್ 3. ರಾಯಚೂರು ಸಿಟಿ ಕಾರ್ಪೊರೇಷನ್ 4. ಸಿರುಗುಪ್ಪ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 5. ಶಹಾಬಾದ್ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 6. ಸಿಂಧನೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 7. ಶಹಾಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 8. ಸುರಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 9. ಯಾದಗಿರಿ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.** ಟಿಪಿಸಿ, ಪರವಾನಗಿ ಮಂಜೂರಾದ ಬಳಿಕ 3 ವರ್ಷಗಳ ಅಂತ್ಯದೊಳಗೆ 51,000 ಕ್ಕಿಂತ ಹೆಚ್ಚು (ಐವತ್ತೊಂದು ಸಾವಿರ) ಗ್ರಾಹಕರಿಗೆ ಸೇವೆ ನೀಡಲಿದೆ.

9. ಅರ್ಜಿಯ ಪ್ರತಿಯನ್ನು ಪರಿಶೀಲನೆ ಅಥವಾ ಖರೀದಿಗಾಗಿ ಪಡೆಯಬಹುದಾದ ನೋಡಲ್ ಅಧಿಕಾರಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಹುದ್ದೆ	ಶ್ರೀ ಮನೀಶ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಮತ್ತು ಕನ್ಸ್ಯೂಮರ್ ಎಂಜಿನಿಯರಿಂಗ್ (ಸಿಟಿ).
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿ ವಿಳಾಸ	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ಡಿಸ್ಟ್ರಿಬ್ಯೂಷನ್ ಡಿವಿಷನ್, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬೈ – 400013, ಮಹಾರಾಷ್ಟ್ರ, ಭಾರತ.
(iii)	ಸವಿಸ್ತಾರ ಅರ್ಜಿ ದಾಖಲೆಗಳು ಹಾಗೂ ಸಿಡಿ (ಇಂಗ್ಲಿಷ್‌ನಲ್ಲಿ): ರೂ. 150/- ನಗದು ಅಥವಾ ಮುಂಬೈಯಲ್ಲಿ ಪಾವತಿಸಬಹುದಾದ "The Tata Power Company Limited" ಹೆಸರಿನ ಡಿಡಿ / ಚೆಕ್ ಮುಖಾಂತರ.	
(iv)	ಸವಿಸ್ತಾರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ): ರೂ. 100/-	
(v)	ಸವಿಸ್ತಾರ ಅರ್ಜಿ ದಾಖಲೆಗಳ ಸಿಡಿ (ಇಂಗ್ಲಿಷ್‌ನಲ್ಲಿ): ರೂ. 50/-	

10. **ಅರ್ಜಿಯ ಪ್ರತಿಯನ್ನು ಹಾಗೂ ಅದರಲ್ಲಿ ಉಲ್ಲೇಖಿತ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ** ವೆಬ್‌ಸೈಟ್ ವಿಳಾಸ: www.tatapower.com
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಇವುಗಳ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರದಿಂದ ಅಧಿಸೂಚಿತವಾದ The Distribution of Electricity Licence (Additional Requirements of Capital Adequacy, Creditworthiness and Code of Conduct) Rules, 2005 (ಕಾಲಕಾಲಕ್ಕೆ ತಿದ್ದುಪಡಿಗೊಂಡಂತೆ) ಯ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅವಶ್ಯಕತೆಗಳನ್ನು ಅರ್ಜಿದಾರನು ಸಮರ್ಪಕವಾಗಿ ಅನುಸರಿಸುತ್ತಾನೆ. ಮೇಲ್ಕಂಡಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು, ಎಲ್ಲಾ ಅನುಸರಣೆ ಸಂಬಂಧಿತ ದಾಖಲೆಗಳನ್ನು ಅರ್ಜಿಯ ಭಾಗವಾಗಿ ಸಂಲಗ್ನಗೊಳಿಸಿದೆ.
12. ಪ್ರಕಟಿಸಲಾದ ಈ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆ / ಆಕ್ಷೇಪಣೆ ಸಲ್ಲಿಸಲು ಉದ್ದೇಶಿಸುವ ಪ್ರತಿಯೊಬ್ಬರೂ, ಅದನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ, ಇಮೇಲ್ ಐಡಿ: asst.secykerc@gmail.com ಗೆ ಕಳುಹಿಸಬಹುದು. ಈ ವ್ಯವಸ್ಥೆ ಬಳಸುವಲ್ಲಿ ಯಾವುದೇ ತೊಂದರೆ ಇದ್ದಲ್ಲಿ, ಸಂಬಂಧಿತ ಹಿತಾಸಕ್ತಿ ಹೊಂದಿದವರು ಕೆಲಸದ ದಿನಗಳಲ್ಲಿ ಬೆಳಿಗ್ಗೆ 10:00 ರಿಂದ ಸಂಜೆ 05:00ರವರೆಗೆ KERC ಕಚೇರಿಯನ್ನು ಮೊಬೈಲ್ ಸಂಖ್ಯೆ 8147 144 627 ಅಥವಾ ಇಮೇಲ್ ಐಡಿ asst.secykerc@gmail.com ಮೂಲಕ ಸಂಪರ್ಕಿಸಬಹುದು.
13. ಮೇಲ್ಕಂಡ ಇಮೇಲ್ ಐಡಿ ಮೂಲಕ ತನ್ನ ಸಲಹೆ / ಆಕ್ಷೇಪಣೆಯನ್ನು ಸಲ್ಲಿಸಿದ ವ್ಯಕ್ತಿಯು ತನ್ನ ಸಲ್ಲಿಕೆಯ ಮುದ್ರಿತ ಪ್ರತಿಯನ್ನು ಬೇರ್ಪಡಿಸಿ ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮದ ಸೌಲಭ್ಯವಿಲ್ಲದವರು ತಮ್ಮ ಸಲಹೆ / ಆಕ್ಷೇಪಣೆಯನ್ನು ಮುದ್ರಿತ ಪ್ರತಿಯಲ್ಲಿ ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, No. 16C-1, ಮಿಲ್ಲರ್ಸ್ ರಸ್ತೆ, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ – 560052 ಅವರಿಗೆ ಉದ್ದೇಶಿಸಿ, ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ ಸಲ್ಲಿಸಬಹುದು. ಜೊತೆಗೆ, ಶ್ರೀ ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ ಅವರಿಗೆ ಸೇವೆ ಸಲ್ಲಿಸಿರುವುದರ ಪುರಾವೆಯನ್ನು ಕೂಡ ಸಂಲಗ್ನಗೊಳಿಸಬೇಕು; ಸಂಪರ್ಕ ವಿವರಗಳು: Tel: (91-22)-67172953, Email: vidyadhar.wagle@tatapower.com ಸಲ್ಲಿಕೆಯ ಮೇಲೆ ಕಳುಹಿಸಿದವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಲಭ್ಯವಿದ್ದಲ್ಲಿ ಇಮೇಲ್ ವಿಳಾಸ ಅನಿವಾರ್ಯವಾಗಿ ಇರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ** ನಂತರ ಸ್ವೀಕರಿಸುವ ಸಲಹೆಗಳು ಮತ್ತು / ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ವಿಧಾನದಲ್ಲಿ ಸಲ್ಲಿಸಲಾದ ಸಲಹೆಗಳು / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸ್ಥಳ: ಮುಂಬೈ
ದಿನಾಂಕ: 25 ಮೇ, 2026

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

ಹಿರಿಯಣ್ಣನ ಭದ್ರಕೋಟೆಗೆ ಆತಂಕ ತಂದ ಅವಘಡಗಳು

ವೈಟ್‌ಹೌಸ್ ಲಾಕ್‌ಡೌನ್!

ಭಾನುವಾರವಷ್ಟೇ ಅಮೆರಿಕ ಅಧ್ಯಕ್ಷರ ಅಧಿಕೃತ ನಿವಾಸದ ಬಳಿ ಗುಂಡಿನ ಮೊರೆತ ಕೇಳಿಬಂದ ಕಾರಣ ಶ್ವೇತಭವನವನ್ನು ಕೆಲಕಾಲ ಲಾಕ್‌ಡೌನ್ ಮಾಡಲಾಗಿತ್ತು. ಈ ಹಿಂದೆಯೂ ಭದ್ರತಾ ಉಲ್ಲಂಘನೆಗಳು ಸಂಭವಿಸಿದಾಗಲೆಲ್ಲಾ ವೈಟ್‌ಹೌಸ್ ತಾತ್ಕಾಲಿಕ ಲಾಕ್‌ಡೌನ್‌ಗೆ ಒಳಗಾಗಿದೆ. ಅಂತಹ ಪ್ರಮುಖ ಪ್ರಕರಣಗಳು ಇಲ್ಲಿವೆ.

■ **ಹರ್ಷವರ್ಧನ್ ಸುಳ್ಯ**

ವಿಕ EXPLAINER

1 ವಿಮಾನ ಅಪಘಾತ, 1994

ಶ್ವೇತಭವನದೊಳಕ್ಕೆ ಅತಿಕ್ರಮ ಪ್ರವೇಶ ಸೇರಿದಂತೆ ಹಲವು ಬಗೆಯ ಭದ್ರತಾ ಉಲ್ಲಂಘನೆಗಳ ನಿಯಂತ್ರಣಕ್ಕೆ ಸೀಕ್ರೆಟ್ ಸರ್ವಿಸ್ ಸಿಬ್ಬಂದಿ ಮೊದಲೇ ತರಬೇತಿ ಪಡೆದು ಸಜ್ಜಾಗಿರುತ್ತದೆ. ಆದರೆ, 1994ರಲ್ಲಿ ಶ್ವೇತಭವನದ ಎದುರೇ ಸಂಭವಿಸಿದ ವಿಮಾನ ಅಪಘಾತವನ್ನು ಯಾರೂ ನಿರೀಕ್ಷಿಸಿರಲಿಲ್ಲ. ಮಾನಸಿಕವಾಗಿ ಅಸ್ವಸ್ಥನಾಗಿದ್ದ ಪೈಲಟ್, ತಾನು ಕಳವು ಮಾಡಿದ ಸಿಂಗಲ್ ಎಂಜಿನ್ 'ಸೆಸ್ನಾ 152' ವಿಮಾನವನ್ನು ನೇರವಾಗಿ ವೈಟ್‌ಹೌಸ್‌ನ ಹುಲ್ಲು ಹಾಸಿನ ಮೇಲೆ ಇಳಿಸಿದ. ಬಳಿಕ ವಿಮಾನವು ಮ್ಯಾಗ್ನೋಲಿಯಾ ಮರಕ್ಕೆ ಡಿಕ್ಕಿ ಹೊಡೆದು ಅಧ್ಯಕ್ಷರ ನಿವಾಸದ ಕಡೆಗೆ ನುಗ್ಗಿತು. ಇದರಿಂದಾಗಿ ಆವರಣದಲ್ಲಿ ತಕ್ಷಣವೇ ಲಾಕ್‌ಡೌನ್ ಜಾರಿಗೊಳಿಸಲಾಯಿತು. ಆರೋಪಿ ಫ್ರಾಂಕ್ ಹಣಕಾಸು ಸಮಸ್ಯೆಗಳಿಂದ ಬಳಲುತ್ತಿದ್ದ. ಇದರಿಂದಾಗಿ ಆತ್ಮಹತ್ಯಾ ಪ್ರಯತ್ನವಾಗಿ ಈ ಕೃತ್ಯ ನಡೆಸಿದನೆಂದು ವಿಚಾರಣೆ ವೇಳೆ ತಿಳಿದುಬಂದಿತು. ವೈಟ್ ಹೌಸ್‌ನಲ್ಲಿ ನವೀಕರಣ ಕಾರ್ಯ ನಡೆಯುತ್ತಿದ್ದರಿಂದ ಅಧ್ಯಕ್ಷ ಬಿಲ್ ಕ್ಲಿಂಟನ್ ಮತ್ತು ಪ್ರಥಮ ಮಹಿಳೆ ಹಿಲರಿ ಕ್ಲಿಂಟನ್ ಆ ಸಮಯದಲ್ಲಿ ಅಲ್ಲಿರಲಿಲ್ಲ.

2 ವರ್ಲ್ಡ್ ಟ್ರೇಡ್ ಸೆಂಟರ್ ದಾಳಿ, 2001

ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ದಾಳಿಯಾದಾಗ ಶ್ವೇತಭವನದ ಇತಿಹಾಸದಲ್ಲೇ ಅತ್ಯಂತ ಮಹತ್ವದ ಲಾಕ್‌ಡೌನ್ ಸಂಭವಿಸಿತು. ಅಲ್‌ಖೈದಾ ಉಗ್ರರು ವಿಮಾನವಗಳನ್ನು ಅಪಹರಿಸಿ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ನುಗ್ಗಿಸಿದ ದುರ್ಘಟನೆ ಜಗತ್ತನ್ನೇ ಬೆಚ್ಚಿ ಬೀಳಿಸಿತು. ಕಟ್ಟಡಕ್ಕೆ ಡಿಕ್ಕಿ ವಿಮಾನಗಳ ಗುರಿ ವೈಟ್ ಹೌಸ್ ಆಗಿದ್ದಿರಬಹುದು ಎನ್ನುವ ಆತಂಕದ ಹಿನ್ನೆಲೆಯಲ್ಲಿ ಸೀಕ್ರೆಟ್ ಸರ್ವಿಸ್ ಶ್ವೇತಭವನವನ್ನು ಲಾಕ್‌ಡೌನ್ ಮಾಡಿ ತುರ್ತು ನಿಯಮಾವಳಿಗಳನ್ನು ಜಾರಿಗೆ ತಂದಿತು.

3 ವಾಯುಪ್ರದೇಶ ಉಲ್ಲಂಘನೆ, 2005

ಮೇ 2005ರಲ್ಲಿ 'ಸೆಸ್ನಾ 150' ಸಣ್ಣ ವಿಮಾನವು ವಾಷಿಂಗ್ಟನ್‌ನ ನಿರ್ಬಂಧಿತ ವಾಯುಪ್ರದೇಶವನ್ನು ಉಲ್ಲಂಘಿಸಿ ಶ್ವೇತಭವನದ ವ್ಯಾಪ್ತಿಯಲ್ಲಿ ಹಾರಾಟ ನಡೆಸಿತು. ಭದ್ರತಾ ಸಿಬ್ಬಂದಿಯ ಯಾವುದೇ ಎಚ್ಚರಿಕೆ ಸಂದೇಶಗಳಿಗೆ ಚಾಲಕ ಸ್ಪಂದಿಸಲಿಲ್ಲ. ಇದರಿಂದಾಗಿ ವೈಟ್ ಹೌಸ್ ಮತ್ತು ಯು.ಎಸ್. ಕ್ಯಾಪಿಟಲ್ (ಸಂಸತ್ ಭವನ) ಎರಡನ್ನೂ ಸಂಪೂರ್ಣವಾಗಿ ಖಾಲಿ ಮಾಡಿಸಿ ಲಾಕ್‌ಡೌನ್ ಮಾಡಲಾಯಿತು. ಕಾನೂನು ಜಾರಿ ಸಂಸ್ಥೆಗಳು ಇದು 9/11 ಮಾದರಿಯ ಭಯೋತ್ಪಾದಕ ದಾಳಿ ಇರಬಹುದೆಂದು ಹೆದರಿದ್ದರಿಂದ ಕ್ಯಾಪಿಟಲ್ ಹಿಲ್‌ನಲ್ಲಿ ತಲ್ಲಣ ಸೃಷ್ಟಿಯಾಯಿತು. ವಿಮಾನವನ್ನು ವಿದ್ಯಾರ್ಥಿ ಚಾಲಕ ಟ್ರಾಯ್ ಮತ್ತು ಜಿಮ್ ಎಂಬಿಬ್ಬರು ಚಲಾಯಿಸುತ್ತಿದ್ದರು. ವಾತಾವರಣ ಅಸ್ಪಷ್ಟತೆಯ ಕಾರಣದಿಂದ ಅವರು ವೈಟ್ ಹೌಸ್‌ನ ನಿರ್ಬಂಧಿತ ವಾಯುಪ್ರದೇಶವನ್ನು ಪ್ರವೇಶಿಸಿದ್ದರು. ರೇಡಿಯೊ ಉಪಕರಣ ದೋಷದ ಕಾರಣ ಅವರಿಗೆ ಭದ್ರತಾಪಡೆಗಳ ಸಂದೇಶ ತಲುಪಿರಲಿಲ್ಲ.

4 ಗನ್ ತೋರಿಸಿದ ಆಗಂತುಕ, 2016

ವ್ಯಕ್ತಿಯೊಬ್ಬ ಶ್ವೇತಭವನದ ಹೊರಗಿನ ಭದ್ರತಾ ಚೆಕ್‌ಪಾಯಿಂಟ್ ಬಳಿ ಬಂದು ಬಂದೂಕನ್ನು ತೋರಿಸಿದ ಘಟನೆ ಅಲ್ಲಿದ್ದ ಸೀಕ್ರೆಟ್ ಸರ್ವಿಸ್ ಸಿಬ್ಬಂದಿಯನ್ನು ಹೌಹಾರುವಂತೆ ಮಾಡಿತು. ಇದು ವೈಟ್ ಹೌಸ್ ಲಾಕ್‌ಡೌನ್‌ಗೆ ಕಾರಣವಾಯಿತು. ಆ ವ್ಯಕ್ತಿ ಗನ್ ಎಸೆಯಲು ನಿರಾಕರಿಸಿದಾಗ ಸೀಕ್ರೆಟ್ ಸರ್ವಿಸ್ ಸಿಬ್ಬಂದಿ ಬೇರೆ ದಾರಿಯಿಲ್ಲದೆ ಆತನ ಮೇಲೆ ಗುಂಡು ಹಾರಿಸಿದರು. ಆ ಸಮಯದಲ್ಲಿ ಅಧ್ಯಕ್ಷರಾಗಿದ್ದ ಬರಾಕ್ ಒಬಾಮಾ ವೈಟ್ ಹೌಸಲ್ಲಿ ಇರಲಿಲ್ಲ. ಭದ್ರತಾ ಪಡೆಗಳ ಗುಂಡಿನ ದಾಳಿಯಿಂದ ಗಾಯಗೊಂಡ ಆರೋಪಿಯನ್ನು ಆಸ್ಪತ್ರೆಗೆ ದಾಖಲಿಸಲಾಯಿತು. 31 ವರ್ಷದ ಆರೋಪಿ ಜೆಸ್ಸಿ ಒಲಿವೆರಿ ಯಾವುದೇ ಉಗ್ರ ಸಂಘಟನೆ ಅಥವಾ ರಾಜಕೀಯ ಪಕ್ಷಕ್ಕೆ ಸೇರಿಲ್ಲ ಎನ್ನುವುದು ತಿಳಿದುಬಂದಿತು. ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ಆತ ತನ್ನ ಮೇಲೆ ಅಮೆರಿಕ ಸರಕಾರ ಗೂಢಾಚಾರಿಕೆ ನಡೆಸುತ್ತಿದೆ ಎಂದು ನಂಬಿದ್ದ!

5 ಬ್ಯಾರಿಕೇಡ್‌ಗಳಿಗೆ ವ್ಯಾನ್ ಡಿಕ್ಕಿ, 2025

ಅತಿ ವೇಗವಾಗಿ ಬಂದ ವ್ಯಾನೊಂದು ವೈಟ್‌ಹೌಸ್‌ನ ಹೊರಗಡೆ ಇದ್ದ ಭದ್ರತಾ ಬ್ಯಾರಿಕೇಡ್‌ಗೆ ಉದ್ದೇಶಪೂರ್ವಕವಾಗಿ ಡಿಕ್ಕಿ ಹೊಡೆದ ಘಟನೆಯು ದೊಡ್ಡ ಪ್ರಮಾಣದ ಲಾಕ್‌ಡೌನ್‌ಗೆ ಕಾರಣವಾಯಿತು. ಅಮೆರಿಕ ಅಧ್ಯಕ್ಷರ ಭದ್ರತೆಗಾಗಿಯೇ ಇರುವ ಸೀಕ್ರೆಟ್ ಸರ್ವಿಸ್ ಸಿಬ್ಬಂದಿ ತಕ್ಷಣವೇ ಶ್ವೇತಭವನವನ್ನು ಸುತ್ತುವರಿದರು. ವಾಹನವನ್ನು ಪರಿಶೀಲಿಸಲು ತುರ್ತು ಭದ್ರತಾ ತಂಡ ಮತ್ತು ಬಾಂಬ್ ಪತ್ತೆ ದಳವನ್ನು ನಿಯೋಜಿಸಲಾಯಿತು. ಆರೋಪಿಯನ್ನು ಭದ್ರತಾ ಪಡೆಗಳು ಜೈಲಿಗಟ್ಟಿ ವಿಚಾರಣೆ ನಡೆಸಿದರು. ಕೃತ್ಯ ನಡೆಸಿದ್ದೇಕೆಂದು ಕೇಳಿದಾಗ ಅವನು, ''ಅಧ್ಯಕ್ಷರಿಗೆ ಉಡುಗೊರೆ ತಲುಪಿಸು ಎಂದು ದೇವರು ಹೇಳಿದ. ನಾನು ಅವನ ಮಾತನ್ನು ಪಾಲಿಸಿದೆ'' ಎಂದಿದ್ದ!

harshavardhan.m@timesofindia.com

ಡೊನಾಲ್ಡ್ ಟ್ರಂಪ್ ಇರುವಾಗಲೇ ಶ್ವೇತಭವನದ ಬಳಿ ಗುಂಡಿನ ದಾಳಿ

ವಾಷಿಂಗ್ಟನ್: ಅಮೆರಿಕದ ಶ್ವೇತಭವನದ ಭದ್ರತಾ ತಪಾಸಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆದಿದ್ದು ಪ್ರತಿದಾಳಿಯಲ್ಲಿ ಬಂದೂಕುಧಾರಿಯೊಬ್ಬನನ್ನು ಹತ್ಯೆಗೈಯಲಾಗಿದೆ.

ವ್ಯಕ್ತಿಯೊಬ್ಬ ಶ್ವೇತಭವನದ ಬಳಿಯ 17ನೇ ಸ್ಟ್ರೀಟ್ ಮತ್ತು ಪೆನ್ಸಿಲ್ವೇನಿಯಾ ಅವೆನ್ಯೂ ಚೆಕ್ ಪಾಯಿಂಟ್ ಬಳಿ ಬಂದಿದ್ದಾನೆ. ಬಂದವನೇ ತನ್ನ ಬ್ಯಾಗ್‌ನಿಂದ ಗನ್ ಹೊರತೆಗೆದು ಅಲ್ಲಿ ನಿಯೋಜನೆಗೊಂಡಿದ್ದ ಅಮೆರಿಕ ಸೀಕ್ರೆಟ್ ಸರ್ವಿಸ್ ಅಧಿಕಾರಿಗಳ ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾನೆ. ತಕ್ಷಣವೇ ಕಾರ್ಯಪ್ರವೃತ್ತರಾದ ಭದ್ರತಾ ಅಧಿಕಾರಿಗಳು ಆತನ ಮೇಲೆ ಪ್ರತಿದಾಳಿ ನಡೆಸಿ ಗುಂಡು ಹಾರಿಸಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಶಂಕಿತನನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಆತ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ಘೋಷಿಸಿದ್ದಾರೆ.

ಗುಂಡಿನ ಚಕಮಕಿಯ ನಡುವೆ ಅಲ್ಲೇ ಸಮೀಪದಲ್ಲಿದ್ದ ಒಬ್ಬ ಸಾರ್ವಜನಿಕ ವ್ಯಕ್ತಿಗೂ ಗಾಯಗಳಾಗಿದ್ದು, ಅವರನ್ನು ಚಿಕಿತ್ಸೆಗೆ ದಾಖಲಿಸಲಾಗಿದೆ. ಗುಂಡಿನ ಸದ್ದು ಕೇಳಿಸುತ್ತಿದ್ದಂತೆ ಇಡೀ ಶ್ವೇತಭವನವನ್ನು ಸಂಪೂರ್ಣವಾಗಿ ಲಾಕ್‌ಡೌನ್ ಮಾಡಲಾಯಿತು ಮತ್ತು ಅಲ್ಲಿದ್ದ ಪತ್ರಕರ್ತರನ್ನು ಸುರಕ್ಷಿತ ಕೊಠಡಿಗಳಿಗೆ ಸ್ಥಳಾಂತರಿಸಲಾಯಿತು. ನಂತರ ಭದ್ರತೆಯನ್ನು ಖಚಿತಪಡಿಸಿಕೊಂಡು ಲಾಕ್‌ಡೌನ್ ತೆರವುಗೊಳಿಸಲಾಗಿದೆ. ಘಟನೆ ನಡೆದ ಸಮಯದಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶ್ವೇತಭವನದಲ್ಲೇ ಇದ್ದರು, ಆದರೆ ಅವರಿಗೆ ಯಾವುದೇ ರೀತಿಯ ಅಪಾಯ ಉಂಟಾಗಿಲ್ಲ ಮತ್ತು ಅವರು ಸಂಪೂರ್ಣ ಸುರಕ್ಷಿತವಾಗಿದ್ದಾರೆ ಎಂದು ಸೀಕ್ರೆಟ್ ಸರ್ವಿಸ್ ಖಚಿತಪಡಿಸಿದೆ. ಏಪ್ರಿಲ್ 26 ರಂದು ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ವಾರ್ಷಿಕ ವರದಿಗಾರರ ಭೋಜನಕೂಟ ನಡೆಯುತ್ತಿದ್ದಾಗ ಬಂದೂಕುಧಾರಿಯೊಬ್ಬ ಶಾಟ್‌ಗನ್‌ನೊಂದಿಗೆ ಭದ್ರತಾ ತಪಾಸಣಾ ಕೇಂದ್ರದೊಳಗೆ ನುಗ್ಗಿ ಗುಂಡು ಹಾರಿಸಿದ್ದ.

ರೈಲು ಗುರಿಯಾಗಿಸಿ ಸ್ಫೋಟ, 24 ಮಂದಿ ಸಾವು

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಮಾತುಕತೆಯ ಪ್ರಸ್ತಾಪದ ಜಾಗತಿಕ ಮನ್ನಣೆ ಗಳಿಸಲು ಪಾಕಿಸ್ತಾನ ಸೇನಾ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ಯತ್ನಿಸುತ್ತಿರುವ ನಡುವೆಯೇ ಬಲೂಚಿಸ್ತಾನದ ಪ್ರತ್ಯೇಕತಾವಾದಿಗಳು (ಬಲೂಚ್ ಲಿಬರೇಶನ್ ಆರ್ಮಿ-ಬಿಎಲ್‌ಎ) ಪಾಕ್ ಸೈನಿಕರನ್ನು ಗುರಿಯಾಗಿಸಿ ದೊಡ್ಡ ಮಟ್ಟದ ದಾಳಿ ನಡೆಸಿದ್ದಾರೆ. ಬಲೂಚಿಸ್ತಾನ ಪ್ರಾಂತ್ಯದ ರಾಜಧಾನಿ ಕ್ವೆಟ್ಟಾದ ಚಮನ್ ಫಾಟಕ್ ಬಳಿ ಪ್ರಯಾಣಿಕರಿದ್ದ ರೈಲನ್ನು ಗುರಿಯಾಗಿಸಿ ಆತ್ಮಾಹುತಿ ಬಾಂಬ್ ದಾಳಿ ನಡೆಸಲಾಗಿದ್ದು, 24 ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದುರ್ಘಟನೆಯಲ್ಲಿ ಸುಮಾರು 47 ಮಂದಿ ಗಂಭೀರವಾಗಿ ಗಾಯಗೊಂಡಿದ್ದು ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಆತಂಕ ವ್ಯಕ್ತವಾಗಿದೆ.

ರೈಲಿನಲ್ಲಿ ಪಾಕಿಸ್ತಾನದ ಸೈನಿಕರು ಇರುವುದನ್ನು ಖಾತ್ರಿಪಡಿಸಿಕೊಂಡ ಬಳಿಕ ಬಲೂಚ್ ಬಂಡುಕೋರರು ರೈಲು ಹಳಿಯ ಮೇಲೆ ಸ್ಫೋಟ ನಡೆಸಿ ಬೋಗಿಗಳು ಉರುಳುವಂತೆ ಮಾಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಸ್ಫೋಟದ ತೀವ್ರತೆಗೆ ರೈಲಿನ ಹಲವು ಬೋಗಿಗಳು ಹಳಿ ತಪ್ಪಿ ಸಂಪೂರ್ಣ ಜಖಂಗೊಂಡಿವೆ. ಇತ್ತೀಚೆಗೆ ಬಲೂಚಿಸ್ತಾನದಲ್ಲಿ ಪಾಕಿಸ್ತಾನಿ ಭದ್ರತಾ ಪಡೆಗಳು ನಡೆಸಿದ ತೀವ್ರ ಕಣ್ಗಾವಲು ಮತ್ತು ಪ್ರತಿದಾಳಿ ಕಾರ್ಯಾಚರಣೆಯಲ್ಲಿ ಬಿಎಲ್‌ಎ ಭಾರಿ ನಷ್ಟ ಅನುಭವಿಸಿದೆ. ಸೇನೆ ವಿರುದ್ಧದ ಕಾರ್ಯಾಚರಣೆಗಳಲ್ಲಿ ಸತತ ಸೋಲಿನಿಂದ ಹತಾಶೆಗೊಂಡ ಭಯೋತ್ಪಾದಕರು ತಮ್ಮ ಉಪಸ್ಥಿತಿ ತೋರಿಸಲು ಮತ್ತು ಸೇಡು ತೀರಿಸಿಕೊಳ್ಳಲು ಪಾಕ್ ಸೈನಿಕರನ್ನು ಗುರಿಯಾಗಿಸಿ ದಾಳಿ ನಡೆಸಿದ್ದಾರೆ ಎಂದು ಹೇಳಲಾಗಿದೆ.

ಅಪಘಾತದ ಮಾಹಿತಿ ತಿಳಿದ ತಕ್ಷಣ ತೆರಳಿದ ಪಾಕಿಸ್ತಾನಿ ಸೇನೆ ಮತ್ತು ಅರೆಸೈನಿಕ ಪಡೆಗಳು ಇಡೀ ಪ್ರದೇಶವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಸುತ್ತುವರಿದಿವೆ. 2025ರ ಮಾರ್ಚ್‌ನಲ್ಲಿ 380 ಪ್ರಯಾಣಿಕರಿದ್ದ ಜಾಫರ್ ಎಕ್ಸ್‌ಪ್ರೆಸ್‌ನ ಅಪಹರಣ ನಡೆದಿತ್ತು. ಈ ದಾಳಿಯಲ್ಲಿ, ಐಇಡಿ ಸ್ಫೋಟಿಸಿ ಬೋಗಿಗಳನ್ನು ಹಳಿ ತಪ್ಪಿಸಲಾಗಿತ್ತು. ಹೆಚ್ಚಿನ ಪ್ರಯಾಣಿಕರು ಪಾಕಿಸ್ತಾನಿ ಸೇನಾ ಸಿಬ್ಬಂದಿಯಾಗಿದ್ದರು. ಭಾರಿ ಪ್ರಮಾಣದ ಸಾವು-ನೋವುಗಳಿಗೆ ಕಾರಣವಾದ ಈ ಘಟನೆಯ ಹೊಣೆಯನ್ನು ಬಿಎಲ್‌ಎ ಹೊತ್ತುಕೊಂಡಿತ್ತು.

ಬಲೂಚ್ ಆರ್ಮಿಯಿಂದ ಬೃಹತ್ ದಾಳಿ

ವಿಕ ಈ ದಿನ ವಿಶೇಷ ಮೇ 25

ಜನುಮ ದಿನ

ಯಶವಂತ ಹಳಿಬಂಡಿ

■ ಸುಗಮ ಸಂಗೀತ ಕ್ಷೇತ್ರದಲ್ಲಿ ಅಪಾರ ಹೆಸರು ಗಳಿಸಿದ್ದ ಗಾಯಕ, ಸಂಗೀತ ಸಂಯೋಜಕ ಯಶವಂತ ಹಳಿಬಂಡಿ ಅವರು 1950ರ ಮೇ 25ರಂದು ಧಾರವಾಡದಲ್ಲಿ ಜನಿಸಿದರು. ವರಕವಿ ದ.ರಾ. ಬೇಂದ್ರೆ ಸೇರಿದಂತೆ ನಾಡಿನ ಖ್ಯಾತ ಕವಿಗಳ ಕವಿತೆಗಳನ್ನು ಗಾಯನ ಮೂಲಕ ಪ್ರಚುರಪಡಿಸಿದ ಶ್ರೇಯಸ್ಸು ಅವರದು. ಹಳಿಬಂಡಿ ಅವರ ಕಂಠದಲ್ಲಿ ಮೂಡಿಬಂದ ಬೇಂದ್ರೆ ವಿರಚಿತ 'ಪಾತರಗಿತ್ತಿ ಪಕ್ಕ ನೋಡಿದ್ದೇನಾ ಅಕ್ಕ' ಹಾಡು ಇಂದಿಗೂ ಜನಪ್ರಿಯ. ನಾಡಿನ ಉದ್ದಗಲಕ್ಕೂ ಪ್ರಯಾಣಿಸಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದರು. ಭಾವಗೀತೆಗಳ ಜೊತೆಗೆ ಭಕ್ತಿಗೀತೆ, ಜಾನಪದ, ವಚನ, ತತ್ವಪದ ಸೇರಿದಂತೆ ಹಲವು ಪ್ರಕಾರಗಳಲ್ಲಿ ಅವರು ತೊಡಗಿಸಿಕೊಂಡಿದ್ದರು. ಯಶವಂತ್ ಹಳಿಬಂಡಿ ಅವರು 2014ರಲ್ಲಿ ನಿಧನರಾದರು.

ಒಂದೇ ಕುಟುಂಬದ 10 ಮಂದಿ ಜಲಸಮಾಧಿ!

» ಮೊದಲ ಪುಟದಿಂದ

ಜಂಟಿ ಮರಣದ ತಲ್ಲಣ: ವೆಂಕಟಾಪುರ ನದಿಯ ತಟ್ಟೆಹಕ್ಕಲಲ್ಲಿ ಕಪ್ಪೆಚಿಪ್ಪು ಸಂಗ್ರಹಿಸಲು ಹೋದಾಗ ನೀರು ರಭಸವಾಗಿ ಬಂದಿದೆ. ಆಗ ಒಬ್ಬರನ್ನೊಬ್ಬರು ಬದುಕಿಸಿಕೊಳ್ಳಲು ಮಹಿಳೆಯರೆಲ್ಲರೂ ಕೈಕೈ ಹಿಡಿದುಕೊಂಡಿದ್ದಾರೆ. ಆದರೆ, ಆ ಪ್ರೀತಿಯ ಬಿಗಿ ಹಿಡಿತವೇ ಅವರಿಗೆ ಮುಳುವಾಯಿತು. ಒಬ್ಬರು ಮುಳುಗುತ್ತಿದ್ದಂತೆ ಎಲ್ಲರೂ ಒಟ್ಟಿಗೇ ನೀರಿನ ಆಳಕ್ಕೆ ಕುಸಿದಿದ್ದಾರೆ. ಈ ಪೈಕಿ ಮೂವರು ಮಹಿಳೆಯರು ಕಷ್ಟಪಟ್ಟು ಪ್ರಾಣಾಪಾಯದಿಂದ ದಡ ಸೇರಿದರು. ಅಳಿವೆಯಲ್ಲಿ ಈ ಕುಟುಂಬದವರು ಮಾತ್ರ ಕಪ್ಪೆಚಿಪ್ಪು ಸಂಗ್ರಹಿಸುತ್ತಿದ್ದ ಕಾರಣ, ಅವರ ರಕ್ಷಣೆಗೆ ಒಂದೇ ಒಂದು ದೋಣಿಯೂ ಇರಲಿಲ್ಲ. ದಡ ಸೇರಿದವರು ಊರಿನವರಿಗೆ ವಿಷಯ ಮುಟ್ಟಿಸುವ ವೇಳೆಗೆ ಕಾಲ ಮಿಂಚಿಹೋಗಿತ್ತು.

ಭಟ್ಕಳದ ತಾಲೂಕು ಆಸ್ಪತ್ರೆಗೆ ಒಂದರ ಬೆನ್ನಿಗೊಂದರಂತೆ ಶವಗಳು ಬರುತ್ತಿದ್ದಂತೆ ಅಲ್ಲಿದ್ದವರ ಕರುಳು ಹಿಂಡಿದಂತಾಯಿತು. ಒಂದೇ ಕುಟುಂಬದ ಶವಗಳನ್ನು ಒಟ್ಟಿಗೆ ನೋಡುವುದು ಮರೆಯಲಾಗದ ಆಘಾತ. ಜಮಾಯಿಸಿದ್ದ ನೂರಾರು ಜನರ ಕಣ್ಣುಗಳೂ ತೇವವಾಗಿದ್ದವು. ಎರಡು ವರ್ಷಗಳ ಹಿಂದೆ ಮುರುಡೇಶ್ವರದ ಕಡಲತೀರದಲ್ಲಿ ಕೋಲಾರ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಾಲ್ವರು ವಿದ್ಯಾರ್ಥಿಗಳು ಮುಳುಗಿ ಮೃತಪಟ್ಟ ಕರಾಳ ನೆನಪನ್ನು ಮರುಕಳಿಸುವಂತೆ ಮಾಡಿದೆ.

ಸಮುದ್ರದ ಪಾಲಾದವರು: ಮಾಲತಿ ಜಟ್ಟಪ್ಪ ನಾಯ್ಕ (38), ಲಕ್ಷ್ಮೀ ಮಾದೇವ ನಾಯ್ಕ ಹೆಗ್ಗಡತಿಮನೆ (46), ಲಕ್ಷ್ಮೀ ಶಿವರಾಮ ನಾಯ್ಕ ಮೋಳಿನಮನೆ(38), ಲಕ್ಷ್ಮೀ ಅಣ್ಣಪ್ಪ ನಾಯ್ಕ (58), ಉಮೇಶ ಮಂಜುನಾಥ ನಾಯ್ಕ ಹೆಗ್ಗಡತಿಮನೆ (23), ಲಕ್ಷ್ಮೀ ಮಾದೇವ ನಾಯ್ಕ (45), ಜ್ಯೋತಿ ನಾಗಪ್ಪ ನಾಯ್ಕ (37), ಮಾಸ್ತಮ್ಮ ಮಂಜುನಾಥ ನಾಯ್ಕ (40), ಮಂಜಮ್ಮ ಗೋವಿಂದ ನಾಯ್ಕ (47), ನಾಗರತ್ನ ಪರಮೇಶ್ವರ ನಾಯ್ಕ (38).

ಇನ್ನೂ ಸಿಗದವರು: ಮಾದೇವ ಭೈರಪ್ಪ ನಾಯ್ಕ (40).

ಬದುಕುಳಿದವರು: ಮಾದೇವಿ ಮಂಜುನಾಥ ನಾಯ್ಕ (60), ಲತಾ ಜಗದೀಶ ನಾಯ್ಕ (38), ನಾಗರತ್ನ ಈಶ್ವರ ನಾಯ್ಕ (40) ಸಾವಿನ ದವಡೆಯಿಂದ ಪಾರಾಗಿ ಬಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 'ಸೇವಾ ತೀರ್ಥ'ಕ್ಕೆ ಭೇಟಿ ನೀಡಿದ ಮಕ್ಕಳೊಂದಿಗೆ ಸಂತಸದ ಕ್ಷಣಗಳನ್ನು ಕಳೆದರು. ಕೇಂದ್ರ ಸಚಿವ ರಾಮ್ ಮೋಹನ್ ನಾಯ್ಡು ಅವರು ಕುಟುಂಬ ಸಮೇತರಾಗಿ ಪ್ರಧಾನಿ ಅವರನ್ನು ಭೇಟಿಯಾದ ವೇಳೆ ಕ್ಲಿಕ್ಕಿಸಿದ ಫೋಟೊಗಳು ವೈರಲ್ ಆಗಿವೆ.

ರಾಜ್ಯ ಬಿಜೆಪಿಗೆ ನಿತಿನ್ ಪಂಚತಂತ್ರ

» ಮೊದಲ ಪುಟದಿಂದ

ತಂತ್ರ-2 ಶಿಸ್ತಿನ ಪಾಠ: ಬಿಜೆಪಿ ಶಿಸ್ತಿನ ಪಕ್ಷ ಎಂಬುದನ್ನು ನೆನಪಿಸಿ ಮೇಲ್ಮಟ್ಟದ ನಾಯಕರಿಂದ ಕಾರ್ಯಕರ್ತರ ವರೆಗೆ ಪಕ್ಷದ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪಕ್ಷದ ವರ್ಚಸ್ಸಿಗೆ ಭಂಗ ತರುವಂತೆ ಬಹಿರಂಗ ಹೇಳಿಕೆ ನೀಡಬಾರದು. ಅಂತಹ ಚಟುವಟಿಕೆಯನ್ನು ಸಹಿಸಲು ಸಾಧ್ಯವೂ ಇಲ್ಲ. ಏನೇ ಅಭಿಪ್ರಾಯವಿದ್ದರೂ ಪಕ್ಷದ ಚೌಕಟ್ಟಿನಲ್ಲಿ ವ್ಯಕ್ತಪಡಿಸಬೇಕು ಎಂಬ ಸ್ಪಷ್ಟ ಸೂಚನೆ ಕೊಟ್ಟಿದ್ದಾರೆ.

ತಂತ್ರ-3 ಜನರ ಬಳಿಗೆ ತೆರಳಿ: ಕಚೇರಿಗಳಲ್ಲಿ ಕುಳಿತು ಕೆಲಸ ಮಾಡುವುದರಿಂದ ಪಕ್ಷಕ್ಕೆ ಶಕ್ತಿ ಬರುವುದಿಲ್ಲ. ಜನಪ್ರತಿನಿಧಿಗಳು, ಪದಾಧಿಕಾರಿಗಳು ಜನರ ಬಳಿಗೆ ತೆರಳಬೇಕು. ಕಾಂಗ್ರೆಸ್‌ನ ವೈಫಲ್ಯವನ್ನು ಎತ್ತಿ ತೋರಿಸಿ ಬಿಜೆಪಿ ವಿಶ್ವಾಸಾರ್ಹ ಪಕ್ಷವೆಂದು ಮನವರಿಕೆ ಮಾಡಿಕೊಡಲು ಸಂಘಟಿತರಾಗಿ ಶ್ರಮಿಸಬೇಕು. ಪಕ್ಷ ತನ್ನ ಪರಿಶ್ರಮದಿಂದ 22ಕ್ಕೂ ಹೆಚ್ಚು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. 400ಕ್ಕೂ ಹೆಚ್ಚು ಸಂಸದರು, 2,000ಕ್ಕೂ ಹೆಚ್ಚು ಶಾಸಕರಿದ್ದಾರೆ. ಇದು ಪಕ್ಷದ ಮೇಲೆ ಜನರು ಇಟ್ಟಿರುವ ವಿಶ್ವಾಸದ ದ್ಯೋತಕ. ಈ ನಂಬಿಕೆಯನ್ನು ಮುಂದಿನ ಚುನಾವಣೆಗಳಲ್ಲೂ ಉಳಿಸಿಕೊಳ್ಳಬೇಕು. ಕಾರ್ಯಕರ್ತರೊಂದಿಗೆ ಪಕ್ಷದ ಎಲ್ಲ ಮುಖಂಡರು, ಜನಪ್ರತಿನಿಧಿಗಳು ಆತ್ಮೀಯ ಸಂಬಂಧ ಇರಿಸಿಕೊಳ್ಳಬೇಕು. ಜನರೊಂದಿಗಿನ ಸಂವಾದ, ಜನಪರ ಹೋರಾಟಗಳ ಮೂಲಕ ಪಕ್ಷ ತನ್ನ ಹೊಣೆಗಾರಿಕೆ ನಿಭಾಯಿಸಬೇಕು ಎಂಬ ನಿರ್ದೇಶನ ನೀಡಿದರು.

ತಂತ್ರ-4 ಸಾಮೂಹಿಕ ಜವಾಬ್ದಾರಿ: ಸಾಮೂಹಿಕ ನಾಯಕತ್ವದಡಿ ಕೆಲಸ ಮಾಡಲು ಸೂಚಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು, ಪಕ್ಷದ ಸಂಘಟನಾತ್ಮಕ ಕಾರ್ಯ ಚಟುವಟಿಕೆ ವಿಸ್ತರಣೆಗೆ ನಿರ್ದಿಷ್ಟ ಜವಾಬ್ದಾರಿ ಹಂಚಿಕೆ ಮಾಡಲಾಗುವುದು. ಆದರೆ, ಸಾಮೂಹಿಕ ನಾಯಕತ್ವದ ಸೂತ್ರದಡಿ ಕಾರ್ಯ ನಿರ್ವಹಿಸಬೇಕು. ಪಕ್ಷದ ಸಿದ್ಧಾಂತವನ್ನು ತಳಮಟ್ಟದ ವರೆಗೂ ಕೊಂಡೊಯ್ಯಬೇಕು ಎಂಬ ಸೂಚನೆ ಕೊಟ್ಟರು.

ತಂತ್ರ-5 ವ್ಯಕ್ತಿ ಹಿತ ಬೇಡ: ''ವೈಯಕ್ತಿಕ ಹಿತಕ್ಕಾಗಿ ಕೆಲಸ ಮಾಡಬೇಡಿ. ಜನರ ಮತ್ತು ಪಕ್ಷದ ಹಿತ ರಕ್ಷಣೆಗಾಗಿ ಕಾರ್ಯ ನಿರ್ವಹಿಸಿ,'' ಎಂದು ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ.

ಸ್ಕೂಲ್ ಬಿಲ್ಡಿಂಗ್‌ಗಳಿಗೆ ಭದ್ರತೆ

» ಮೊದಲ ಪುಟದಿಂದ

ಶೌಚಾಲಯಗಳ ನಿರ್ಮಾಣಕ್ಕೆ 75 ಕೋಟಿ ರೂ. ಕಾಯ್ದಿರಿಸಲಾಗಿದೆ. ಶಾಲಾ ಕಟ್ಟಡಗಳ ನವೀಕರಣಕ್ಕೆ ಸರಕಾರ ಹಾಗೂ ಸಂಘ-ಸಂಸ್ಥೆಗಳಿಂದ ನೀಡಲಾದ ಅನುದಾನದ ಜತೆಗೆ, ಸಿಎಸ್‌ಆರ್ ನಿಧಿ ಬಳಸಿಕೊಂಡು ಶಾಲಾ ಕಟ್ಟಡಗಳನ್ನು ಸದೃಢಗೊಳಿಸುವ ಮೂಲಕ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಲು ಸಿದ್ಧತೆ ನಡೆದಿದೆ. ಹಂತ-ಹಂತವಾಗಿ ಎಲ್ಲಾ ಶಾಲೆಗಳು ಸುರಕ್ಷಿತವಾಗಲಿವೆ ಎಂದು ಶಾಲಾ ಶಿಕ್ಷಣ ಇಲಾಖೆ ತಿಳಿಸಿದೆ.

ಹೈಕೋರ್ಟ್ ಆದೇಶ: ಅನುದಾನರಹಿತ ಹಾಗೂ ಖಾಸಗಿ ಶಾಲೆಗಳಿಗೆ ವಿಧಿಸಲಾಗುವ ಅಗ್ನಿ ಸುರಕ್ಷತೆ ಮತ್ತು ಸುರಕ್ಷತಾ ನಿಯಮಗಳು ಸರಕಾರಿ ಶಾಲೆಗಳಿಗೂ ಅನ್ವಯವಾಗಲಿವೆ ಎಂದು 2025ರಲ್ಲಿ ಹೈಕೋರ್ಟ್ ತೀರ್ಪು ನೀಡಿತ್ತು. 2022ರಲ್ಲಿ ಶಾಲಾ ಶಿಕ್ಷಣ ಇಲಾಖೆ ಅನುದಾನರಹಿತ ಹಾಗೂ ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಹೊರಡಿಸಿದ್ದ ಸುತ್ತೋಲೆಯನ್ನು ಪ್ರಶ್ನಿಸಿ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಕೋರ್ಟ್ ಮೆಟ್ಟಿಲೇರಿದ್ದವು.

ಈ ವೇಳೆ ನ್ಯಾ.ಸೂರಜ್ ಗೋವಿಂದ್‌ರಾಜ್ ನೇತೃತ್ವದ ಏಕಸದಸ್ಯ ಪೀಠ, ಸುರಕ್ಷತಾ ನಿಯಮಗಳು ಸರಕಾರಿ ಶಾಲೆಗಳಿಗೂ ಅನ್ವಯಿಸುತ್ತವೆ ಎಂದು ತೀರ್ಪು ನೀಡಿತ್ತು.

ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗೆ ಎಲ್ಲಾ ರೀತಿಯ ಕ್ರಮ ಜಾರಿಯಲ್ಲಿವೆ. ಸರಕಾರಿ ಶಾಲೆಗಳ ಕಟ್ಟಡಗಳ ನವೀಕರಣದ ಜತೆಗೆ, ಮಕ್ಕಳ ಸುರಕ್ಷತೆಗೆ ಸರಕಾರ ಆದ್ಯತೆ ನೀಡುತ್ತಿದೆ. ಸರಕಾರದ ಸೂಚನೆಯಂತೆ ಶಾಲೆಗಳಲ್ಲಿ ಸುರಕ್ಷತೆಗೆ ಕ್ರಮ ವಹಿಸಲಾಗುತ್ತಿದೆ.

-ಸುರಳ್ಕರ್ ವಿಕಾಸ್ ಕಿಶೋರ್
ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ

ಎಬೋಲಾ

ವಿಕ ಜಾಣ ತಾಣ

ಎಬೋಲಾ ಎನ್ನುವುದು ಎಬೋಲಾ ವೈರಸ್‌ನಿಂದ ಬರುವ ಅಪರೂಪದ ಪ್ರಾಣಾಂತಿಕ ಕಾಯಿಲೆಯಾಗಿದೆ. ಜ್ವರ, ತೀವ್ರ ರಕ್ತಸ್ರಾವ, ಅಂಗಾಂಗ ವೈಫಲ್ಯ, ವಾಂತಿ, ನಿರ್ಜಲೀಕರಣ ಇದರ ಲಕ್ಷಣಗಳಾಗಿವೆ. ಈ ಕಾಯಿಲೆಯು ಹೆಚ್ಚಾಗಿ ಆಫ್ರಿಕಾ ಖಂಡದಲ್ಲಿ ಕಂಡುಬರುತ್ತದೆ. ಈ ವೈರಸ್ 1976ರಲ್ಲಿ ಆಫ್ರಿಕನ್ ರಾಷ್ಟ್ರವಾದ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ ಯಂಬುಕು ಗ್ರಾಮದ ಬಳಿ ಮೊದಲ ಬಾರಿಗೆ ಪತ್ತೆಯಾಯಿತು. ಆ ಗ್ರಾಮದ ಹತ್ತಿರ ಹರಿಯುವ 'ಎಬೋಲಾ ನದಿ'ಯ ಹೆಸರನ್ನು ವೈರಸ್‌ಗೆ ಇಡಲಾಗಿದೆ. ಸೋಂಕಿತರ ದೇಹದಿಂದ ಉತ್ಪತ್ತಿಯಾದ ಯಾವುದೇ ಬಗೆಯ ದ್ರವದೊಂದಿಗೆ ನೇರ ಸಂಪರ್ಕಕ್ಕೆ ಬರುವುದರಿಂದ ಈ ವೈರಸ್ ವೇಗವಾಗಿ ಹರಡುತ್ತದೆ. 'ಜೈರೆ' ಎನ್ನುವ ನಿರ್ದಿಷ್ಟ ತಳಿಯ ಎಬೋಲಾ ವೈರಸ್ ಸೋಂಕಿಗೆ ಲಸಿಕೆ ಲಭ್ಯವಿದೆ. ಇತರೆ ತಳಿಗಳ ವೈರಸ್‌ಗೆ ಲಸಿಕೆಯು ಸಂಶೋಧನಾ ಹಂತದಲ್ಲಿವೆ.

ಊಟಕ್ಕೆ ಅಮ್ಮ ಬೆಳಚು ತರುತ್ತಾಳೆಂದು ಮಕ್ಕಳು ಕಾಯುತ್ತಿದ್ದರು, ಆಕೆ ಬರಲೇ ಇಲ್ಲ...

ಅನ್ನ ನೀಡಿದ ಚಿಪ್ಪೆ ಬದುಕು ಕಸಿಯಿತು

■ **ಪ್ರಮೋದ ಹರಿಕಾಂತ** ಕಾರವಾರ
pramod.harikant@timesofindia.com

ಕಡಲ ತೀರದ ಜನರಿಗೆ 'ಕಪ್ಪೆಚಿಪ್ಪು' ಕೇವಲ ಆಹಾರವಲ್ಲ; ಹೊಟ್ಟೆಪಾಡಿನ ಒಂದು ಭಾಗ. ಬಿಸಿಲು, ಹಸಿವು, ದಣಿವು ಎನ್ನದೆ ನೀರಿಗೆ ಇಳಿದು ಸಮುದ್ರದ ಇಳಿತ ಮುಗಿಯುವುದರೊಳಗೆ ಸಿಕ್ಕಷ್ಟು ಕಪ್ಪೆಚಿಪ್ಪು ಸಂಗ್ರಹಿಸಿದರೆ ಮನೆಯ ಖರ್ಚಿಗೆ ಒಂದಷ್ಟು ಹಣ ಸಿಗುತ್ತದೆ.

ಅಳಿವೆಯಲ್ಲಿ ಕಪ್ಪೆಚಿಪ್ಪು ಬೆಳೆದಿದೆ ಎಂದರೆ ಬಡ ಕುಟುಂಬಗಳಿಗೆ ಆದಾಯದ ಭಾಗ್ಯ ಸಿಕ್ಕಂತೆ. ಮನೆ ಮಂದಿಯೆಲ್ಲ ಅಧಿಕ ಬೆಲೆಯ ಕಪ್ಪೆಚಿಪ್ಪು ಸಂಗ್ರಹಕ್ಕೆ ಇಳಿಯುತ್ತಾರೆ. ಭಟ್ಕಳದ ತಟ್ಟೆಹಕ್ಲು ಅಳಿವೆ ದುರಂತದಲ್ಲಿ ಕಳೆದು ಹೋದ ಕುಟುಂಬ ಕೂಡ ಹೊಟ್ಟೆಪಾಡಿಗಾಗಿಯೇ ಕಪ್ಪೆಚಿಪ್ಪು ಸಂಗ್ರಹಕ್ಕೆ ಹೋಗಿತ್ತು. ದುರಂತದಿಂದ ಹಲವು ಮಕ್ಕಳು ಹೆತ್ತವರನ್ನು ಕಳೆದುಕೊಂಡಿದ್ದಾರೆ. ಹೆಚ್ಚಿನವರು ತಾಯಿ ಇಲ್ಲದ ತಬ್ಬಲಿ ಆಗಿದ್ದಾರೆ.

ನದಿ, ಸಮುದ್ರ ಸೇರುವ ಅಳಿವೆಯಲ್ಲಿ ವರ್ಷದ ಎರಡು ತಿಂಗಳು ಮಾತ್ರ ಕಪ್ಪೆಚಿಪ್ಪು (ಬೈವಾಲ್ಸ್) ಬೆಳೆಯುತ್ತದೆ. ಬುಟ್ಟಿ ಹಿಡಿದು ನೀರಿಗೆ ಇಳಿದರೆ ಮಹಿಳೆಯರು ಕೂಡ ಸುಲಭವಾಗಿ ಕಪ್ಪೆಚಿಪ್ಪು ಸಂಗ್ರಹಿಸಬಹುದು. ತಟ್ಟೆಹಕ್ಲು ಅಳಿವೆಗೆ ಕೆಲವರು ಹೊಟ್ಟೆಪಾಡಿಗಾಗಿ ಹೋಗಿದ್ದರೆ, ಇನ್ನು ಕೆಲವರು ಅಡುಗೆಗಾಗಿ ಸಂಗ್ರಹಿಸಲು ಹೋಗಿದ್ದರು.

ಅಳಿವೆಯಲ್ಲಿ ಕಪ್ಪೆಚಿಪ್ಪು ಸಂಗ್ರಹ

ಹೀಗೆ ಪ್ರತಿ ವರ್ಷ ಬೇಸಿಗೆಯಲ್ಲಿ ಸಿಗುವ ಕಪ್ಪೆಚಿಪ್ಪು ಈ ವರ್ಷ ಉತ್ತರ ಕನ್ನಡ ಜಿಲ್ಲೆಯ ಎಲ್ಲ ನದಿಗಳಲ್ಲಿ ಹೇರಳವಾಗಿ ಸಂಗ್ರಹವಾಗಿವೆ. ತಟ್ಟೆಹಕ್ಲು ದುರಂತದಲ್ಲಿ ಮಹಿಳೆಯೊಬ್ಬರು ಕಪ್ಪೆಚಿಪ್ಪು ಮಾರಿಯೇ ಮಕ್ಕಳನ್ನು ಸಾಕುತ್ತಿದ್ದರು. ಪತಿಯನ್ನು ಕಳೆದುಕೊಂಡಿದ್ದ ಆ ಮಹಿಳೆ ಕುಟುಂಬಕ್ಕೆ ಆಧಾರವಾಗಿದ್ದರು. ಆ ತಾಯಿ ಇಲ್ಲದೆ ಮಕ್ಕಳು ಅನಾಥವಾಗಿದ್ದಾರೆ. ಅನ್ನ ನೀಡಿದ್ದ ದುಡಿಮೆಯೇ ಬದುಕು ಕಸಿದುಕೊಂಡಿದೆ ಎಂದು ಜನ ಮರುಗುವಂತಾಗಿದೆ.

ಅಪಾಯದ ಬದುಕು: ಅಳಿವೆಯಲ್ಲಿ ನೀರಿನಲ್ಲಿ ಇಳಿದು ಕಪ್ಪೆಚಿಪ್ಪು ಸಂಗ್ರಹಿಸುವುದು ಉತ್ತರ ಕನ್ನಡ ಜಿಲ್ಲೆಯ ಸಾವಿರಾರು ಕುಟುಂಬಗಳ ಬದುಕು. ಕೆಲವೊಮ್ಮೆ ಸೊಂಟದ ನೀರಿಗೆ ಇಳಿದರೂ ಕಪ್ಪೆಚಿಪ್ಪು ಸಿಗುವುದಿಲ್ಲ, ಆಗ ಎದೆ ಎತ್ತರದ ನೀರಿನವರೆಗೂ ಹೋಗಿ ಮುಳುಗಿ ಕಪ್ಪೆಚಿಪ್ಪು ಸಂಗ್ರಹಿಸಬೇಕಾಗುತ್ತದೆ. ಆಯ ತಪ್ಪಿದರೆ ಅಪಾಯ ಎಂದು ಗೊತ್ತಿರುತ್ತದೆ. ದುಡಿಯದೆ ವಿಧಿ ಇಲ್ಲ.

ಅಮ್ಮ ಬೆಳಚು (ಕಪ್ಪೆಚಿಪ್ಪು) ತರುತ್ತಾರೆ. ಇವತ್ತು ಬೆಳಚಿನ ಸಾರು ಎಂದು ಮನೆ ಮಕ್ಕಳು ಖುಷಿಯಿಂದ ಕಾಯುವುದು, ಇವತ್ತು ಹೆಚ್ಚಿನ ಕಪ್ಪೆಚಿಪ್ಪು ಹೆಕ್ಕಿ ಮನೆಗೆ ಏನಾದರೂ ಕೊಂಡೊಯ್ಯಬೇಕು ಎಂದು ಹೆತ್ತವರು ಆಸೆಯಲ್ಲಿ ಕಪ್ಪೆಚಿಪ್ಪು ಸಂಗ್ರಹಿಸುತ್ತಾರೆ. ಅದೃಷ್ಟ ಕೈಕೊಟ್ಟಾಗ ಕಪ್ಪೆಚಿಪ್ಪು ಸಂಗ್ರಹಿಸಲು ನೀರಿನಲ್ಲಿ ಮುಳುಗಿದ ವ್ಯಕ್ತಿ ಮೇಲೆ ಏಳುವುದೇ ಇಲ್ಲ. ಇಂಥ ಅನೇಕ ದುರಂತಗಳು ಉತ್ತರ ಕನ್ನಡ ಜಿಲ್ಲೆಯ ಅಳಿವೆಗಳಲ್ಲಿ ಆಗಿವೆ. ಉಬ್ಬರ ಶುರುವಾದರೆ ನಿಂತಲ್ಲೇ ನೀರು ಕುತ್ತಿಗೆವರೆಗೆ ಬಂದಿರುತ್ತದೆ. ಇಳಿತ ಇದ್ದಾಗ ನೀರು ವೇಗವಾಗಿ ಸಮುದ್ರದ ಕಡೆ ಹೋಗುತ್ತಿರುತ್ತದೆ. ಎಚ್ಚರಿಕೆಯಿಂದ ನಿಂತಿರಬೇಕಾಗುತ್ತದೆ. ಹಾಗೆ ಆದಾಗ ಅದು ಒಬ್ಬ ವ್ಯಕ್ತಿಯ ಸಾವು ಆಗಿರುವುದಿಲ್ಲ, ಕುಟುಂಬದ ಆಧಾರ ಸ್ತಂಭವೇ ನೀರು ಪಾಲಾಗಿರುತ್ತದೆ.

ಇಮ್ಯುನಿಟಿ ಬೂಸ್ಟರ್: ಬೈವಾಲ್ಸ್ ಸಮುದಾಯದ ಚಿಪ್ಪಿಕಲ್ಲುಗಳು ಕಪ್ಪೆಚಿಪ್ಪು ಮಾದರಿಯಲ್ಲಿ ಇರುತ್ತದೆ. ಕೊಂಡ್ಲ, ಅಡ್ಡಬೆಳಚು, ಕರಿ ಬೆಳಚು ಹೀಗೆ ವಿವಿಧ ಜಾತಿಯ ಬೈವಾಲ್ಸ್‌ಗಳು ಇವೆ. ಇವು ಅಳಿವೆಯ ಕೆಸರಿನಲ್ಲಿ ಬೆಳೆಯುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚು. ಕಪ್ಪೆಚಿಪ್ಪಿನಿಂದಲೇ ಸುಣ್ಣ, ಕ್ಯಾಲ್ಸಿಯಂ ಮಾತ್ರೆಗಳು ತಯಾರಾಗುತ್ತವೆ. ಮಿದುಳಿನ ಪಾರ್ಶ್ವವಾಯು ತಡೆಯುವ, ಬುದ್ಧಿ ಚುರುಕಾಗಿಸುವ ಸಾಮರ್ಥ್ಯ ಹೊಂದಿವೆ. ಚಿಪ್ಪಿಕಲ್ಲು ತಿನ್ನಲು ಬಲು ರುಚಿ.

ಕಪ್ಪೆಚಿಪ್ಪು ಸಂಗ್ರಹಿಸಲು ಹೋಗಿ ನೀರಿನ ಸೆಳತಕ್ಕೆ ಸಿಲುಕಿ ಪ್ರಾಣ ಕಳೆದುಕೊಂಡವರ ಕುಟುಂಬದವರಿಗೆ ದುಃಖವನ್ನು ಎದುರಿಸುವ ಶಕ್ತಿಯನ್ನು ದೇವರು ನೀಡಲಿ. ವಿಷಯವನ್ನು ಕೂಡಲೇ ಸಿಎಂ ಹಾಗೂ ಡಿಸಿಎಂಗೆ ತಿಳಿಸಿದ್ದು, ಮಾನವೀಯ ನೆಲೆಯಲ್ಲಿ ರಾಜ್ಯ ಸರಕಾರದಿಂದ ಪರಿಹಾರ ಘೋಷಿಸಿದೆ. ನಾಪತ್ತೆಯಾದವರಿಗಾಗಿ ಶೋಧನೆ ನಡೆಯುತ್ತಿದೆ.

-**ಮಂಕಾಳ ವೈದ್ಯ** ಉತ್ತರಕನ್ನಡ ಜಿಲ್ಲಾ ಉಸ್ತುವಾರಿ ಸಚಿವ

ಭಟ್ಕಳ ಸಮೀಪದ ಕಪ್ಪೆಚಿಪ್ಪು ಸಂಗ್ರಹಿಸಲು ಹೋಗಿ ಒಂದೇ ಕುಟುಂಬದ 10 ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ ಘಟನೆ ಅತ್ಯಂತ ದುಃಖಕರ. ಭಗವಂತನು ಅವರ ಕುಟುಂಬಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲಿ. ಮೃತರ ಕುಟುಂಬಗಳಿಗೆ ಪ್ರಧಾನ ಮಂತ್ರಿ ಪರಿಹಾರ ನಿಧಿಯಿಂದ ಸೂಕ್ತ ಪರಿಹಾರ ಒದಗಿಸಲು ಪ್ರಯತ್ನಿಸಲಾಗುವುದು.

-**ವಿಶ್ವೇಶ್ವರ ಹೆಗಡೆ ಕಾಗೇರಿ** ಸಂಸದ

ಶವಕ್ಕಾಗಿ ಶೋಧ ಕಾರ್ಯ ನಡೆಯಿತು.

ಬೆಳಗ್ಗೆ ತೆರಳಿದ್ದ ಜನರು

ರಜಾ ದಿನವಾಗಿರುವ ಭಾನುವಾರ ಪಡುಶಿರಾಲಿ ಹಾಗೂ ಸುತ್ತಮುತ್ತಲಿನ ಜನರು ಚಿಪ್ಪೆಕಲ್ಲು, ಮೀನಿಗಾಗಿ ಬೆಳಗ್ಗೆ 10 ಗಂಟೆ ಸುಮಾರಿಗೆ ತಟ್ಟಿಹಕ್ಕಲ್‌ನತ್ತ ತೆರಳಿದ್ದರು. ಆದರೆ ಹೊಳೆಗೆ ಇಳಿದ ಕೆಲವೇ ಕ್ಷಣಗಳಲ್ಲಿ ಅಬ್ಬರದ ಅಲೆ ಎರಗಿ ಬಂದಿದ್ದು, ನೀರಿನಲ್ಲಿದ್ದವರು ಜಾರಿ ನೀರಿನಲ್ಲಿ ಮುಳುಗಿ ಅಸ್ವಸ್ಥಗೊಂಡಿರುವ ಬಗ್ಗೆ ಮಾಹಿತಿ ಲಭಿಸಿದೆ. ದಡದ ಬಳಿಯಲ್ಲಿ ಗದ್ದೆ ಮತ್ತಿತರ ಕೆಲಸ ಮಾಡಿಕೊಂಡಿದ್ದವರು ನೀರಿನಲ್ಲಿ ಮುಳುಗೇಳುತ್ತಿರುವವರನ್ನು ಕಂಡು ನೆರವಿಗೆ ಧಾವಿಸಿ ಬಂದಿದ್ದು, ಕೇವಲ 3 ಜನರನ್ನು ರಕ್ಷಿಸುವಲ್ಲಿ ಸಫಲರಾಗಿದ್ದಾರೆ. ಅಷ್ಟರಲ್ಲಾಗಲೇ ಉಳಿದವರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು. ಅವರ ಶವವನ್ನು ದಡಕ್ಕೆ ತಂದು ಮರಣೋತ್ತರ ಪರೀಕ್ಷೆಗಾಗಿ ಭಟ್ಕಳ ಸರಕಾರಿ ಆಸ್ಪತ್ರೆಗೆ ಸಾಗಿಸಲಾಯಿತು.

ಜಿಲ್ಲಾಧಿಕಾರಿ ಲಕ್ಷ್ಮಿಪ್ರಿಯ ಭೇಟಿ

ಘಟನೆ ಬಗ್ಗೆ ಮಾಹಿತಿ ಪಡೆದ ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್, ಸಹಾಯಕ ಆಯುಕ್ತ ಮಹೇಶ ಸ್ಥಳಕ್ಕೆ ಆಗಮಿಸಿ ಘಟನೆ ಬಗ್ಗೆ ಅಗತ್ಯ ಮಾಹಿತಿ ಕಲೆ ಹಾಕಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ''ಹೊಳೆಯ ಇಳಿತ ನೋಡಿಕೊಂಡು ಜನರು ಮೀನು ಮತ್ತು ಚಿಪ್ಪೆಕಲ್ಲು ಸಂಗ್ರಹಿಸಲು ತೆರಳಿರುವ ವೇಳೆ ಅವಘಡ ಸಂಭವಿಸಿದೆ. ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ದೊರಕಿಸಿ ಕೊಡಲಾಗುವುದು,'' ಎಂದು ಪ್ರತಿಕ್ರಿಯಿಸಿದರು.

ಒಂದೇ ಕುಟುಂಬದ 10 ಮಂದಿ ನೀರಿನಲ್ಲಿ ಮುಳುಗಿದ್ದು ಅತ್ಯಂತ ಹೃದಯ ವಿದ್ರಾವಕ ಘಟನೆ. ಅಮೂಲ್ಯ ಜೀವಗಳನ್ನು ಕಳೆದುಕೊಂಡ ಕುಟುಂಬದ ದುಃಖದಲ್ಲಿ ನಾನು ಸಹಭಾಗಿಯಾಗಿದ್ದೇನೆ. ಕಾಣೆಯಾದವರು ಸುರಕ್ಷಿತವಾಗಿ ಬದುಕಿ ತಮ್ಮ ಕುಟುಂಬದವರನ್ನು ಸೇರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

- **ಆರ್.ವಿ. ದೇಶಪಾಂಡೆ** ಹಳಿಯಾಳ, ಶಾಸಕ

ಕುಟುಂಬಗಳ ಬೆಳಕೇ ಕ್ಷಣಾರ್ಧದಲ್ಲಿ ನಂದಿಹೋಗಿರುವ ಈ ದುರಂತವು ಇಡೀ ಸಮಾಜವನ್ನೇ ಮೌನಗೊಳಿಸಿದೆ. ದುಃಖ ಸಾಗರದಲ್ಲಿ ಮುಳುಗಿರುವ ಕುಟುಂಬಸ್ಥರಿಗೆ ಹಾಗೂ ಬಂಧು ಬಳಗಕ್ಕೆ ಈ ಅಸಹನೀಯ ನೋವನ್ನು ತಡೆದುಕೊಳ್ಳುವ ಧೈರ್ಯ ಮತ್ತು ಶಕ್ತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

-**ಶಿವರಾಮ ಹೆಬ್ಬಾರ್** ಯಲ್ಲಾಪುರ- ಮುಂಡಗೋಡ ಶಾಸಕ

ಹೈ.ಕ ಅಭಿವೃದ್ಧಿಗೆ ಹಲವು ನಿರ್ಣಯ

■ **ವಿಕ ಸುದ್ದಿಲೋಕ** ರಾಯಚೂರು

ನಗರದಲ್ಲಿ ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರದಿಂದ ಭಾನುವಾರ ಆಯೋಜಿಸಿದ್ದ 'ದುಂಡು ಮೇಜಿನ ಸಭೆ ಹಾಗೂ 371 (ಜೆ) ಹೋರಾಟಗಾರರ ಸಮಾವೇಶ'ದಲ್ಲಿ ಹಲವು ನಿರ್ಣಯ ಕೈಗೊಳ್ಳಲಾಯಿತು.

ಹಿರಿಯ ಹೋರಾಟಗಾರ ಪ್ರೊ.ಆರ್.ಕೆ. ಹುಡಗಿ, ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರದ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ, ಸಂಪನ್ಮೂಲ ವ್ಯಕ್ತಿ ಈ.ಧನರಾಜ, ಶಾಸಕರಾದ ಕರೆಮ್ಮ ಜಿ.ನಾಯಕ, ಶರಣಗೌಡ ಕಂದಕೂರು, ಮಾಜಿ ಶಾಸಕರಾದ ಪ್ರತಾಪಗೌಡ ಪಾಟೀಲ್, ವೆಂಕಟರಾವ್ ನಾಡಗೌಡ, ಬಸನಗೌಡ ಬ್ಯಾಗವಾಟ್, ಗಂಗಾಧರ ನಾಯಕ ಸಭೆಯಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರು.

ನಿರ್ಣಯಗಳು

- ಪ್ರತ್ಯೇಕ 371(ಜೆ) ಆಡಳಿತಾತ್ಮಕ ನ್ಯಾಯಮಂಡಳಿ ಸ್ಥಾಪಿಸಬೇಕು.
- ರಾಜ್ಯ ಮಟ್ಟದ ಇಲಾಖೆಗಳ ವಿಭಾಗೀಯ ಕಚೇರಿಗಳನ್ನು (ಕೆಪಿಎಸ್‌ಸಿ, ಕೆಇಎ, ಪಿಯು ಬೋರ್ಡ್ ಇತ್ಯಾದಿ) ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತೆರೆಯಬೇಕು.
- ರಾಜ್ಯ ಮಟ್ಟದ 371(ಜೆ) ಅನ್ವಯ ಮೀಸಲು ಸೌಲಭ್ಯವಿರುವ ಬಹುತೇಕ ಕಚೇರಿಗಳಲ್ಲಿ ಇಂದಿಗೂ 371(ಜೆ) ಮೀಸಲು ಅನುಷ್ಠಾನವಾಗಿಲ್ಲ, ಅಂತಹ ಇಲಾಖೆಗಳನ್ನು ಗುರುತಿಸಿ, ಕಾಲಮಿತಿಗಳೊಳಗೆ ಶೇ.8ರ ಮೀಸಲು ಅನುಷ್ಠಾನಗೊಳಿಸಬೇಕು.
- ರಾಜ್ಯದ ನಾನಾ ಭಾಗದಲ್ಲಿರುವ ಸರಕಾರಿ ವಿಶ್ವವಿದ್ಯಾಲಯಗಳಲ್ಲಿ ಎಂ.ಫಿಲ್, ಪಿಎಚ್‌ಡಿ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯ ಅಧಿಸೂಚನೆಯಲ್ಲಿ ಕಡ್ಡಾಯವಾಗಿ 371(ಜೆ) ಮೀಸಲು ನಿಗದಿಗೊಳಿಸಬೇಕು.
- ಯರಮರಸ್ ಶಾಖೋತ್ಪನ್ನ ವಿದ್ಯುತ್ ಉತ್ಪದನಾ ಕೇಂದ್ರ ನಿರ್ವಹಣೆಯನ್ನು 780 ಹುದ್ದೆಗಳ ಜತೆಗೆ ಹೈದರಾಬಾದ್ ಮೂಲದ ಕಂಪನಿಗೆ ಹೊರಗುತ್ತಿಗೆ ನೀಡಿದ್ದು, ಹೊರಗುತ್ತಿಗೆ ಕರಾರಿನಲ್ಲಿ 371 (ಜೆ) ನಿಯಮಗಳ ಉಲ್ಲಂಘನೆಯಾಗಿದೆ. ಇದನ್ನು ಸರಿಪಡಿಸಬೇಕು.
- ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 20 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿರುವ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಬೇಕು.
- ಕೊಪ್ಪಳ ಜಿಲ್ಲೆಯ ಗಿಣಿಗೇರಾ ಸುತ್ತ, ಯಾದಗಿರಿ ಜಿಲ್ಲೆಯ ಕಡೆಚೂರು ಕೈಗಾರಿಕಾ ಪ್ರದೇಶ ಮತ್ತು ರಾಯಚೂರಿನ ಶಕ್ತಿನಗರ ಭಾಗದಲ್ಲಿ ಮಾರಕ ರಾಸಾಯನಿಕ ಉದ್ದಿಮೆಗಳು ಸ್ಥಾಪನೆಯಾಗಿವೆ. ಈ ಉದ್ದಿಮೆಗಳ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಕಟ್ಟುನಿಟ್ಟಿನ ಕ್ರಮ ವಹಿಸಬೇಕು.
- ರಾಯಚೂರಿನಲ್ಲಿ ಏಮ್ಸ್ ಸಂಸ್ಥೆ ಸ್ಥಾಪಿಸಬೇಕು.

ಡೀಸೆಲ್‌ಗಾಗಿ ಕ್ಯಾನ್ ಕ್ಯೂ

ಗದಗ ಜಿಲ್ಲೆಯ ನರೇಗಲ್‌ನ ಪೆಟ್ರೋಲ್‌ವೊಂದರಲ್ಲಿ ಡಿಸೇಲ್ ಖರೀದಿಸಲು ರೈತರು ಕ್ಯೂನಲ್ಲಿ ಇಟ್ಟಿರುವ ಕ್ಯಾನ್‌ಗಳು. ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಇಂಧನ ಕೊರತೆ ಉಂಟಾಗಿದೆ. ಈ ಮಧ್ಯೆ ಪೂರ್ವ ಮುಂಗಾರು ಚುರುಕುಗೊಂಡಿದ್ದು ಕೃಷಿ ಚಟುವಟಿಕೆ ಗರಿಗೆದರಿದ ಹಿನ್ನೆಲೆಯಲ್ಲಿ ಟ್ರ್ಯಾಕ್ಟರ್‌ಗಳಿಗೆ ಇಂಧನ ಸಂಗ್ರಹಿಸಿಕೊಳ್ಳಲು ರೈತರು ಮುಂದಾಗಿದ್ದಾರೆ.

12 ಲಕ್ಷ ರೂ. ಮೌಲ್ಯದ ಮಾವು ಮಾರಾಟ

ಹುಬ್ಬಳ್ಳಿಯ ಎಪಿಎಂಸಿ ವಿವಿಧೋದ್ದೇಶ ವಸ್ತು ಪ್ರದರ್ಶನ ಆವರಣದಲ್ಲಿ ಧಾರವಾಡ ಜಿಲ್ಲಾ ಮಟ್ಟದ ಮಾವು ಮೇಳಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಆರ್., ಜಿಪಂ ಸಿಇಒ ಭುವನೇಶ ಪಾಟೀಲ ಭೇಟಿ ನೀಡಿದರು.

■ **ವಿಕ ಸುದ್ದಿಲೋಕ** ಹುಬ್ಬಳ್ಳಿ

ಧಾರವಾಡ ಜಿಲ್ಲಾ ಮಟ್ಟದ ಮಾವು ಮೇಳಕ್ಕೆ ತೆರೆ

ಇಲ್ಲಿನ ಎಪಿಎಂಸಿಯ ವಿವಿಧೋದ್ದೇಶ ವಸ್ತು ಪ್ರದರ್ಶನ ಆವರಣದಲ್ಲಿ ಮಾರುಕಟ್ಟೆ ಮತ್ತು ಮೌಲ್ಯವರ್ಧನೆ ಶೀರ್ಷಿಕೆಯಡಿ ಎರಡು ದಿನ ನಡೆದ ಧಾರವಾಡ ಜಿಲ್ಲಾ ಮಟ್ಟದ ಮಾವು ಮೇಳ-2026 ಭಾನುವಾರ ತೆರೆ ಕಂಡಿತು.

ಮೇಳದಲ್ಲಿ 25ಕ್ಕೂ ಹೆಚ್ಚು ರೈತರು ವಿವಿಧ ತಳಿಯ ಮಾವು ಮಾರಾಟ ಮಾಡಿದರು. ಮೇಳದಲ್ಲಿ ಅಂದಾಜು 12 ಲಕ್ಷ ರೂ. ಮೌಲ್ಯದ 5.70 ಮೆಟ್ರಿಕ್ ಟನ್ ಮಾವು ಮಾರಾಟವಾಗಿದೆ. ಎರಡು ದಿನದ ಮೇಳಕ್ಕೆ ಖರೀದಿಗಾರರು, ರಫ್ತುದಾರರು ಸೇರಿದಂತೆ ಅಂದಾಜು 2-3 ಸಾವಿರ ಜನರು ಭೇಟಿ ನೀಡಿದ್ದು ವಿಶೇಷ.

ಮಾವು ಬೆಳೆದ ರೈತರು, ಮಳಿಗೆದಾರರು ಹಾಗೂ ಮೇಳದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಅವಂತ್ರದ 'ದಿ ಗುಲಿಸ್ತಾನ್ ಎಡಿಟ್' ಸಂಗ್ರಹ ಅನಾವರಣ

ಬೆಂಗಳೂರು: ಸಾಂಪ್ರದಾಯಿಕ ಉಡುಪು ಹಾಗೂ ಸೀರೆಗಳ ವೈವಿಧ್ಯಕ್ಕೆ ಮನೆಮಾತಾಗಿರುವ ಅವಂತ್ರದ 'ದಿ ಗುಲಿಸ್ತಾನ್ ಎಡಿಟ್' ಸಂಗ್ರಹವನ್ನು ಅವಂತ್ರ ಬ್ರ್ಯಾಂಡ್ ರಾಯಭಾರಿ ಹಾಗೂ ನಟಿ ರುಕ್ಮಿಣಿ ವಸಂತ್ ಅನಾವರಣಗೊಳಿಸಿದರು. ಬೆಂಗಳೂರಿನ ಫೀನಿಕ್ಸ್ ಮಾರ್ಕೆಟ್ ಸಿಟಿಯಲ್ಲಿ ಇರುವ ಅವಂತ್ರ ನೂತನ ಮಳಿಗೆಯು ಈ ಸಂದರ್ಭದಲ್ಲಿ ಫ್ಯಾಷನ್, ಪರಂಪರೆ ಹಾಗೂ ಕಲೆಯ ಮಹಾಸಂಗಮಕ್ಕೆ ಸಾಕ್ಷಿಯಾಯಿತು.

ಅರಮನೆಯ ಗೋಡೆಗಳ ಮೇಲಿನ ಸೂಕ್ಷ್ಮ ಚಿತ್ತಾರದಿಂದ ಪ್ರೇರಿತರಾಗಿ 'ದಿ ಗುಲಿಸ್ತಾನ್ ಎಡಿಟ್' ಸಂಗ್ರಹವನ್ನು ವಿನ್ಯಾಸಗೊಳಿಸಲಾಗಿದೆ. ಇವು ಸೌಹಾರ್ದ, ಬಾಂಧವ್ಯ ಹಾಗೂ ಕಲೆಯ ಅದ್ಭುತ ಮಿಶ್ರಣವಾಗಿವೆ. ಸುಂದರವಾಗಿ ಅರಳಿ ನಿಂತ ಹೂವುಗಳು, ತಂಪಾದ ಗಾಳಿ ಮತ್ತು ಸುಂದರವಾದ ಕಿಟಕಿ ಆಕಾರದ ಜಾಲಿ ವಿನ್ಯಾಸಗಳಿಂದ ಸ್ಫೂರ್ತಿ ಪಡೆದು ಇದನ್ನು ರೂಪಿಸಲಾಗಿದೆ. ರೇಷ್ಮೆ, ಕ್ರೈಮಗ್ಗದ ನೇಯ್ಗೆ ಸೇರಿದಂತೆ ಎಲ್ಲ ರೀತಿಯ ವೈವಿಧ್ಯ ಒಳಗೊಂಡಿರುವ 'ದಿ ಗುಲಿಸ್ತಾನ್ ಎಡಿಟ್', ಸಾಂಪ್ರದಾಯಿಕ ದಿರಿಸುಗಳ ಬೃಹತ್ ಶ್ರೇಣಿಯನ್ನೇ ಗ್ರಾಹಕರ ಮುಂದೆ ತೆರೆದಿಡುತ್ತದೆ.

ಅವಂತ್ರದ ಬ್ರ್ಯಾಂಡ್ ಅಂಬಾಸಿಡರ್ ರುಕ್ಮಿಣಿ ವಸಂತ್ ಮಾತನಾಡಿ, ''ಭಾರತೀಯ ಸಾಂಪ್ರದಾಯಿಕ ಉಡುಪುಗಳು ಯಾವಾಗಲೂ ನನಗೆ ಅತ್ಯಂತ ವೈಯಕ್ತಿಕ ಮತ್ತು ಆಪ್ತವಾದ ಭಾವನೆಯನ್ನು ನೀಡುತ್ತವೆ. ಅವು ನಮ್ಮ ಗುರುತು, ಸಂಸ್ಕೃತಿ ಮತ್ತು ಆತ್ಮವಿಶ್ವಾಸದ ಪ್ರತೀಕವಾಗಿವೆ. 'ದಿ ಗುಲಿಸ್ತಾನ್ ಎಡಿಟ್' ಸಂಗ್ರಹದಲ್ಲಿನ ಸೂಕ್ಷ್ಮವಾದ ಹೂವಿನ ವಿನ್ಯಾಸಗಳು, ಪ್ರತಿ ಉಡುಪಿನಲ್ಲೂ ಅಡಕವಾದ ಆಲೋಚನಾ ಲಹರಿ ನನ್ನನ್ನು ತಕ್ಷಣವೇ ಆಕರ್ಷಿಸಿದವು. ಪ್ರತಿ ಮಹಿಳೆಯೂ ತನ್ನದೇ ಆದ ಕಥೆಯನ್ನು ಆತ್ಮವಿಶ್ವಾಸ ಮತ್ತು ಘನತೆಯಿಂದ ಸ್ವೀಕರಿಸುವ ಈ ಬ್ರ್ಯಾಂಡ್‌ನೊಂದಿಗೆ ಗುರುತಿಸಿಕೊಳ್ಳಲು ನನಗೆ ತುಂಬ ಸಂತೋಷವಿದೆ,'' ಎಂದು ಹೇಳಿದರು.

''ಭಾರತದಲ್ಲಿ ಇಂದಿಗೂ ಜೀವಂತವಾಗಿರುವ ಅದ್ಭುತ ನೇಯ್ಗೆ ಕಲೆಗೆ 'ದಿ ಗುಲಿಸ್ತಾನ್ ಎಡಿಟ್' ನಮ್ಮ ಕೃತಜ್ಞತಾ ಪ್ರೇಮಪತ್ರದಂತಿದೆ. ಪುರಾತನ ಎನಿಸುವ ಕಲೆಯು ಆಧುನಿಕ ಶೈಲಿಯಲ್ಲಿ ತನ್ನದೇ ಎನಿಸುವ ರೀತಿ ಮೂಡಿಬರಬೇಕು ಎಂಬುದು ನಮ್ಮ ಪರಿಕಲ್ಪನೆ,'' ಎಂದು ಅವಂತ್ರದ ವಕ್ತಾರರು ತಿಳಿಸಿದ್ದಾರೆ.

ಅನುದಾನಿತ ಶಾಲೆಗಳಿಗೇಕಿಲ್ಲ ಅತಿಥಿ ಶಿಕ್ಷಕರು?

ಸರಕಾರಿ ಶಾಲೆಗಳಿಗೆ ಬಣ್ಣ, ಅನುದಾನಿತ ಶಾಲೆಗಳಿಗೆ ಸುಣ್ಣ | 6,000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆ ಖಾಲಿ

■ **ವೆಂಕಟೇಶ ಏಗನೂರು** ಕಲಬುರಗಿ
Venkatesh.narasappa@timesofindia.com

ಶಾಲಾ ಶಿಕ್ಷಣ ಇಲಾಖೆ 2026-27ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 51,000 ಅತಿಥಿ ಶಿಕ್ಷಕರ ಹುದ್ದೆಗಳನ್ನು ನೇಮಕಾತಿಗೆ ಮಂಜೂರಾತಿ ನೀಡಿದೆ. ಆದರೆ, ಹಲವು ವರ್ಷಗಳಿಂದ ಅನುದಾನಿತ ಶಾಲೆಗಳಿಗೂ ಅತಿಥಿ ಶಿಕ್ಷಕರನ್ನು ನೇಮಕ ಮಾಡಬೇಕೆಂಬ ಬೇಡಿಕೆಗೆ ಸ್ಪಂದಿಸುತ್ತಿಲ್ಲ ಎನ್ನುವ ಆಕ್ರೋಶ ವ್ಯಕ್ತವಾಗಿದೆ.

ವಾರದಲ್ಲೇ ಶಾಲೆಗಳು ಆರಂಭವಾಗಲಿವೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅನುಸಾರವಾಗಿ ಪ್ರಾಥಮಿಕ ಶಾಲೆಗಳಲ್ಲಿ 40,000 ಹಾಗೂ ಪ್ರೌಢಶಾಲೆಗಳಲ್ಲಿ 11,000 ಹುದ್ದೆಗಳು ಸೇರಿ ಒಟ್ಟು 51,000 ಅತಿಥಿ ಶಿಕ್ಷಕರ ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಿದ್ದು, ಶಾಲೆಗಳು ಆರಂಭವಾದ ನಂತರ ಅತಿಥಿ ಶಿಕ್ಷಕರನ್ನು ಭರ್ತಿ ಮಾಡಲಿದೆ. ಆದರೆ, ರಾಜ್ಯದ ಅನುದಾನಿತ ಶಾಲೆಗಳಿಗೆ ಮಾತ್ರ ಅತಿಥಿ ಶಿಕ್ಷಕರನ್ನು ಶಿಕ್ಷಣ ಇಲಾಖೆ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಅನುದಾನಿತ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಬೇಕು ಎಂದು ಅನುದಾನಿತ ಶಾಲೆಗಳು ಆಗ್ರಹಿಸುತ್ತಿವೆ.

ಅನುದಾನಿತ ಶಿಕ್ಷಕರ ಕೊರತೆ: ರಾಜ್ಯದಲ್ಲಿ 3,940 ಅನುದಾನಿತ ಶಾಲೆಗಳಿದ್ದು, ಇದರಲ್ಲಿ 6,000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಕಲ್ಯಾಣ ಕರ್ನಾಟಕದಲ್ಲಿ 611 ಪ್ರಾಥಮಿಕ ಮತ್ತು 467 ಪ್ರೌಢಶಾಲೆ ಸೇರಿ 1,078 ಅನುದಾನಿತ ಶಾಲೆಗಳಿವೆ. ಈ ಶಾಲೆಗಳಲ್ಲಿ 1,000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಆದರೆ, ಸರಕಾರ ಸರಕಾರಿ ಶಾಲೆಗಳಿಗೆ ಮಾತ್ರ ಅತಿಥಿ ಶಿಕ್ಷಕರನ್ನು ಕೊಟ್ಟು ಅನುದಾನಿತ ಶಾಲೆಗಳಿಗೆ ನೀಡದಿರುವುದು ತಾರತಮ್ಯ ಅನುಸರಿಸಿದಂತಿದೆ.

ಶಿಕ್ಷಕ ಹುದ್ದೆ ಭರ್ತಿ ಮಾಡುವ ಜವಾಬ್ದಾರಿ ಸರಕಾರದ್ದು: ಸರಕಾರಿ ಮತ್ತು ಅನುದಾನಿತ ಶಾಲೆಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಸರಕಾರದ ಜವಾಬ್ದಾರಿ. ಆದರೆ, ಸರಕಾರಿ ಶಾಲೆಗಳ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಆಸಕ್ತಿ ತೋರುವ ಸರಕಾರ ಅನುದಾನಿತ ಶಾಲೆಗಳ ಶಿಕ್ಷಕರ ಹುದ್ದೆಗಳ ಭರ್ತಿಗೆ ತೋರುತ್ತಿಲ್ಲ, 2016ರಿಂದ ಖಾಲಿಯಾದ ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಇದರಿಂದ ಅನುದಾನಿತ ಶಾಲೆಗಳು ತೀವ್ರ ತೊಂದರೆ ಎದುರಿಸುವಂತಾಗಿದೆ.

ಗುಣಮಟ್ಟ ಫಲಿತಾಂಶಕ್ಕೆ ಪೆಟ್ಟು: ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಹಾಗೂ ಸರಕಾರ ಅತಿಥಿ ಶಿಕ್ಷಕರನ್ನೂ ನೀಡದಿದ್ದರಿಂದ ಅನುದಾನಿತ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಪೆಟ್ಟು ಬಿದ್ದಿದೆ. ಜತೆಗೆ ಫಲಿತಾಂಶದ ಮೇಲೂ ಪರಿಣಾಮ ಬೀರುತ್ತಿದೆ. ಶಿಕ್ಷಕರೇ ಇಲ್ಲದ ಮೇಲೆ ಉತ್ತಮ ಶಿಕ್ಷಣ ನೀಡಲು ಹೇಗೆ ಸಾಧ್ಯ? ಎಂದು ಅನುದಾನಿತ ಶಾಲೆಗಳು ಪ್ರಶ್ನಿಸುತ್ತಿವೆ.

ಅನುದಾನಿತ ಶಾಲೆಗಳಲ್ಲಿ ಶಿಕ್ಷಕರಿಲ್ಲದಿದ್ದರೆ ಫಲಿತಾಂಶ ಕುಸಿಯುತ್ತದೆ. ಆದರೆ, ಸರಕಾರ ಶಿಕ್ಷಕರನ್ನೇ ನೇಮಕ ಮಾಡದಿದ್ದರೂ ಇರುವ ಶಿಕ್ಷಕರಿಗೆ ನೋಟಿಸ್ ನೀಡುವುದು, ಮೆಮೋ ಕೊಡುವುದು, ಇನ್‌ಕ್ರಿಮೆಂಟ್ ಕಡಿತ ಮಾಡುವುದು, ಶಾಲೆ ಮುಚ್ಚುವ ಬೆದರಿಕೆಗಳನ್ನು ನೀಡುವುದು ಎಷ್ಟು ಸರಿ ಎಂದು ಪ್ರಶ್ನಿಸಲಾಗುತ್ತಿದೆ.

ಶಿಕ್ಷಣ ಸಚಿವರ ಭರವಸೆ ಜಾರಿಯಾಗಿಲ್ಲ

ಈ ಹಿಂದೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಅನುದಾನಿತ ಶಾಲೆಗಳಿಗೂ 6,000 ಅತಿಥಿ ಶಿಕ್ಷಕರನ್ನು ನೀಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ, ಈ ಬಾರಿ ಕೇವಲ ಸರಕಾರಿ ಶಾಲೆಗಳಿಗೆ ಮಾತ್ರ ಅತಿಥಿ ಶಿಕ್ಷಕರನ್ನು ನೇಮಕ ಮಾಡಲು ಮಂಜೂರಾತಿ ನೀಡಿದ್ದು, ಅನುದಾನಿತ ಶಾಲೆಗಳಿಗೆ ಮಂಜೂರಾತಿ ಯಾವಾಗ ಎಂದು ಪ್ರಶ್ನಿಸುತ್ತಿದ್ದಾರೆ.

ಅನುದಾನಿತ ಶಾಲೆಗಳಲ್ಲಿ 2016ರಿಂದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ, ಕಾಯಂ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ಅತಿಥಿ ಶಿಕ್ಷಕರನ್ನಾದರೂ ಕೊಡಿ ಎಂದು ಅನೇಕ ಬಾರಿ ಮನವಿ ಮಾಡಿದರೂ ಕೊಡುತ್ತಿಲ್ಲ, ಹೀಗಾದರೆ ಗುಣಮಟ್ಟದ ಶಿಕ್ಷಣ ಸಾಧ್ಯ ಹೇಗೆ? ಆದ್ದರಿಂದ ಸರಕಾರ ಅತಿಥಿ ಶಿಕ್ಷಕರನ್ನು ನೀಡಬೇಕು.

- **ಸತೀಶ ಜಾಮಗೊಂಡ** ಅಧ್ಯಕ್ಷ ಅನುದಾನಿತ ಪ್ರೌಢ ಶಾಲಾ ಶಿಕ್ಷಕರ ಸಂಘ

ಸಕಾಲಕ್ಕೆ ಆಂಬ್ಯುಲೆನ್ಸ್ ಬಾರದೆ ವ್ಯಕ್ತಿ ಸಾವು

ಹನೂರು (ಚಾಮರಾಜನಗರ): ತಾಲೂಕಿನ ಸತ್ತಾರ್ ಮೇಡು ಗ್ರಾಮದಲ್ಲಿ ಸಕಾಲಕ್ಕೆ ಆಂಬ್ಯುಲೆನ್ಸ್ ಲಭ್ಯವಾಗದ ಕಾರಣ ಸಹದೇವ್ (55) ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಹದೇವ್ ಅವರು ಭಾನುವಾರ ಬೆಳಗ್ಗೆ ಮನೆಯಲ್ಲಿ ದಿಢೀರ್ ಕುಸಿದು ಅಸ್ವಸ್ಥರಾಗಿದ್ದರು. ಕುಟುಂಬಸ್ಥರು ಹಾಗೂ ಸ್ಥಳೀಯರು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದರೂ ಸಮಯಕ್ಕೆ ಆಂಬ್ಯುಲೆನ್ಸ್ ವಾಹನ ಸಿಗಲಿಲ್ಲ. ಕೆಲ ಹೊತ್ತಿನ ಬಳಿಕ ಖಾಸಗಿ ವಾಹನದ ಮೂಲಕ ಕರೆದೊಯ್ಯಲಾಯಿತು. ಆದರೆ, ಅವರು ಆಸ್ಪತ್ರೆ ಮುಟ್ಟುವ ಮೊದಲೇ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಮೃತರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

'ಪೂರಕ ವಾತಾವರಣ ಕೊರತೆ ಭಾರತೀಯರಿಗೆ ಹಿನ್ನಡೆ'

ಕನ್ನಡಿಗ ಪ್ರಜ್ವಲ್ ದೇವ್ ಅಭಿಮತ

■ **ಮಂಜುನಾಥ ಕೆ. ಜಾಬಗೆರೆ** ಬೆಂಗಳೂರು
manjunath.gowda@timesofindia.com

ಪ್ರತಿಷ್ಠಿತ ಫ್ರೆಂಚ್ ಓಪನ್ ಗ್ರ್ಯಾನ್ ಸ್ಲಾಮ್ ಭಾನುವಾರ (ಮೇ 24)ದಂದು ಆರಂಭವಾಗಿದೆ. ಆದರೆ ಟೆನಿಸ್‌ನಲ್ಲಿ ಭಾರತೀಯರ ಪಾಲ್ಗೊಳ್ಳುವಿಕೆ ಮತ್ತು ಗ್ರ್ಯಾನ್ ಸ್ಲಾಮ್‌ನಂತಹ ಕ್ರೀಡೆಗೆ ಅರ್ಹತೆಗಳಿಸಲು ಹಲವು ವರ್ಷಗಳ ನಂತರವೂ ಭಾರತೀಯರು ಇನ್ನೂ ಹೆಣಗಾಡುತ್ತಿದ್ದಾರೆ. ಅದರಲ್ಲೂ ಫ್ರೆಂಚ್ ಓಪನ್ ಭಾರತೀಯರಿಗೇಕೆ ಕಬ್ಬಿಣದ ಕಡಲೆಯಾಗಿದೆ? ಇದಕ್ಕೆ ಮೂಲ ಕಾರಣಗಳೇನು? ಎಂಬುದರ ಕುರಿತು ಮಾಜಿ ಟೆನಿಸ್ ಪಟು ಕನ್ನಡಿಗ ಪ್ರಜ್ವಲ್ ದೇವ್ 'ವಿಜಯ ಕರ್ನಾಟಕ'ದೊಂದಿಗೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

● **ಭಾರತೀಯರಿಗೆ ಫ್ರೆಂಚ್ ಓಪನ್ ಸೇರಿದಂತೆ ಗ್ರ್ಯಾನ್ ಸ್ಲಾಮ್ ಟೂರ್ನಿಗಳು ಇಂದಿಗೂ ಏಕೆ ಸವಾಲಾಗಿವೆ?**

ಮೊದಲಿಗೆ ಫ್ರೆಂಚ್ ಓಪನ್ ಕ್ಲೇಕೋರ್ಟ್‌ನಲ್ಲಿ ನಡೆಯುತ್ತದೆ. ಇದು ವಿಭಿನ್ನವಾಗಿರುತ್ತದೆ. ದೈಹಿಕ ಹಾಗೂ ಮಾನಸಿಕವಾಗಿಯೂ ಇದು ಸವಾಲಿನಿಂದ ಕೂಡಿರುತ್ತದೆ. ಕಾರ್ಯತಂತ್ರದ ಅರಿವು ಅತ್ಯವಶ್ಯಕವಾಗಿರುತ್ತದೆ. ವಿಶೇಷವಾಗಿ ನಮ್ಮ ದೇಶದಲ್ಲಿ ಹಿಂದಿನಿಂದಲೂ ಹವೆ ಮಣ್ಣಿನ ಕೋರ್ಟ್‌ಗಳಲ್ಲಿ ಅಭ್ಯಾಸ ಮಾಡುತ್ತಿಲ್ಲ, ನಮ್ಮ ಅಭ್ಯಾಸ ಹಾರ್ಡ್ ಕೋರ್ಟ್‌ನಲ್ಲಿ ನಡೆಯುತ್ತದೆ. ಹೀಗಾಗಿ ಭಾರತೀಯರಿಗೆ ಇಂದಿಗೂ ಈ ಟೂರ್ನಿ ಸವಾಲಾಗಿ ಪರಿಣಮಿಸಿದೆ.

● **ಗ್ರ್ಯಾನ್ ಸ್ಲಾಮ್ ಟೂರ್ನಿಗಳಲ್ಲಿ ಭಾರತೀಯರು ಹಿಂದುಳಿಯಲು ಕಾರಣಗಳೇನು?**

ಗ್ರ್ಯಾನ್ ಸ್ಲಾಮ್ ಟೂರ್ನಿಗೆ ಬೇಕಾದ ಅಗತ್ಯ ಮೂಲ ಸೌಕರ್ಯಗಳು ಭಾರತದಲ್ಲಿಲ್ಲ, ಅದಕ್ಕೆ ಬೇಕಾದ ಸೂಕ್ತ ತರಬೇತಿಯೂ ಇಲ್ಲ, ಆರ್ಥಿಕ ನೆರವೂ ಸಹ ಇಲ್ಲ, ಫಿಟ್ನೆಸ್ ಟ್ರೈನರ್‌ಗಳ ಕೊರತೆ ಸೇರಿದಂತೆ ಕೆಲವು ವಿದೇಶಗಳಲ್ಲಿರುವ ಸೌಲಭ್ಯಗಳು ಭಾರತದಲ್ಲಿಲ್ಲ.

● **ಭಾರತದಲ್ಲಿ ಹಲವು ಎಟಿಪಿ ಚಾಲೆಂಜರ್ ಟೂರ್ನಿಗಳು ನಡೆಯುತ್ತಿದ್ದರೂ ಭಾರತೀಯರು ಇದರ ಲಾಭ ಪಡೆಯುತ್ತಿಲ್ಲ ಏಕೆ?**

ಹೌದು.. ಭಾರತದಲ್ಲಿ ತುಂಬಾ ಎಟಿಪಿ ಚಾಲೆಂಜರ್ ಟೂರ್ನಿಗಳು ನಡೆಯುತ್ತಿವೆ. ಇದು ಉತ್ತಮ ಬೆಳವಣಿಗೆ. ಇದಲ್ಲದೆ ಐಟಿಎಫ್ ಟೂರ್ನಿಗಳು ಸಹ ನಡೆಯುತ್ತಿವೆ. ಕೇವಲ ಈ ಟೂರ್ನಿಗಳಿಂದ ಆಟಗಾರರಿಗೆ ನೆರವಾಗುವುದಿಲ್ಲ, ಬಾಲ್ಯದಿಂದಲೂ ವಿಶ್ವದರ್ಜೆಯ ತರಬೇತಿ ಅಗತ್ಯವಿದೆ. ಆಟಗಾರರನ್ನು ಮಾನಸಿಕವಾಗಿ ಸದೃಢಗೊಳಿಸಬೇಕು. ಸ್ಪೋರ್ಟ್ಸ್ ನ್ಯೂಟ್ರಿಷಿಯನ್ ಕೂಡ ಇಲ್ಲಿ ಮುಖ್ಯವಾಗುತ್ತದೆ. ಆಗಾಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉನ್ನತ ದರ್ಜೆಯ ಆಟಗಾರರೊಂದಿಗೆ ಆಡಲು ಭಾರತೀಯರಿಗೆ ಅವಕಾಶ ಕಲ್ಪಿಸಬೇಕು. ಆದರೆ ಇದೆಲ್ಲವೂ ಭಾರತೀಯ ಆಟಗಾರರಿಗೆ ಲಭ್ಯವಾಗುತ್ತಿಲ್ಲ, ಆರ್ಥಿಕ ಬೆಂಬಲದ ಕೊರತೆಯ ಜತೆಗೆ ಯಾವುದೇ ಸರಕಾರಿ ಕೆಲಸದ ಕುರಿತು ಖಾತ್ರಿ ಇಲ್ಲದಿರುವುದು ಹಿಂದುಳಿಯಲು ಕಾರಣ.

● **ಸೋಮ್‌ದೇವ್ ನಂತರ ಅಂತಾರಾಷ್ಟ್ರೀಯ ಮಟ್ಟದ ಸಿಂಗಲ್ಸ್‌ನಲ್ಲಿ ಭಾರತೀಯರ ಅಭಾವ ಕಾಡುತ್ತಿದೆ. ಇದಕ್ಕೆ ಕಾರಣ?**

ಖಂಡಿತವಾಗಿಯೂ ಭಾರತದಲ್ಲಿ ಪ್ರತಿಭೆಗೇನು ಕೊರತೆಯಿಲ್ಲ, ನೂರು ಕೋಟಿಗೂ ಅಧಿಕ ಜನಸಂಖ್ಯೆ ಇರುವ ದೇಶದಲ್ಲಿ ಸಾಕಷ್ಟು ಪ್ರತಿಭೆಗಳಿವೆ. ಆದರೆ ಆಟಗಾರರನ್ನು ಸಿದ್ಧಗೊಳಿಸಲು ಸೂಕ್ತವಾದ ಹಾಗೂ ರಚನಾತ್ಮಕವಾದ ವ್ಯವಸ್ಥೆ ನಮ್ಮಲ್ಲಿಲ್ಲ. ಇವೆಲ್ಲವೂ ಸುಧಾರಿಸಿದರೆ, ಮುಂಬರುವ ವರ್ಷಗಳಲ್ಲಿ 10ರಿಂದ 20 ಆಟಗಾರರು ಅಂತಾರಾಷ್ಟ್ರೀಯ ಮಟ್ಟದ ಸಿಂಗಲ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ ಎಂಬ ವಿಶ್ವಾಸವಿದೆ.

ಕನ್ನಡದಲ್ಲೂ ಫ್ರೆಂಚ್ ಓಪನ್ ಕಾಮೆಂಟ್ರಿ

ಕನ್ನಡಿಗರು ಕ್ರಿಕೆಟ್ ಮತ್ತು ಕಬಡ್ಡಿ ಕ್ರೀಡೆಗಳ ಕಾಮೆಂಟ್ರಿಯನ್ನು ಕಳೆದ ಹಲವು ವರ್ಷಗಳಿಂದ ಕನ್ನಡದಲ್ಲಿ ಆಲಿಸುತ್ತಿದ್ದಾರೆ. ಇದಕ್ಕೀಗ ಹೊಸ ಸೇರ್ಪಡೆ ಟೆನಿಸ್. ಭಾನುವಾರ ಆರಂಭವಾದ ಫ್ರೆಂಚ್ ಓಪನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿಯ ಕಾಮೆಂಟ್ರಿ ಈಗ ಕನ್ನಡದಲ್ಲೂ ಲಭ್ಯವಾಗಿದೆ. ಸೋನಿಸ್ಪೋರ್ಟ್ಸ್ ನೆಟ್‌ವರ್ಕ್ ಸಂಸ್ಥೆಯು ಕನ್ನಡದಲ್ಲೂ ಕಾಮೆಂಟ್ರಿ ನೀಡುವ ಮೂಲಕ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಕನ್ನಡಿಗರು 'ಸೋನಿ ಟೆನ್ 4' ಚಾನೆಲ್‌ನಲ್ಲಿ ಕನ್ನಡ ಕಾಮೆಂಟ್ರಿ ಆಲಿಸಬಹುದು. ಮಾಜಿ ಟೆನಿಸ್ ಆಟಗಾರರಾದ ಏಷ್ಯನ್ ಗೇಮ್ಸ್ ಪದಕ ವಿಜೇತ ಶ್ರೀನಾಥ್ ಪ್ರಹ್ಲಾದ್ ಮತ್ತು ಪ್ರಜ್ವಲ್ ದೇವ್ ಕನ್ನಡದಲ್ಲಿ ಕಾಮೆಂಟ್ರಿ ನೀಡುತ್ತಿದ್ದಾರೆ.

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
3ನೇ ಮಹಡಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕಛೇರಿ ಸಂಕೀರ್ಣ, ಮಹಾವೀರ ಡಿವೈನ್ ಸಿಟಿ, ಪ್ರಗತಿ ನಗರ ಚಾಮರಾಜನಗರ 571313
Email: dtwoffice.217@gmail.com ದೂ. 08226-226070 & ಫ್ಯಾಕ್ಸ್ ಸಂ: 08226-226070
ಸಂ : ಜಿಪವಕಅ/ಕಅ/ಸಿಬ್ಬಂದಿ/ಹೊಸಂ/ಸಿಆರ್/2026-27 ದಿನಾಂಕ: 21-05-2026

: ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :

2026-27ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಗೊಳಪಡುವ ಕಚೇರಿ/ವಸತಿಶಾಲೆ/ಆಶ್ರಮಶಾಲೆ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಶಿಕ್ಷಕರು, ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು, ಬೋಧಕ, ಬೋಧಕೇತರ, ಪ್ರ.ದ.ಸ. ದ್ವಿ.ದ.ಸ. ನರ್ಸ್, ಗ್ರೂಪ್ 'ಡಿ' ನೌಕರರು, ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಒಂದು ವರ್ಷದ ಅವಧಿಗೆ ರೂ. 400.00ಲಕ್ಷಗಳಿಗೆ ಅರ್ಹ ವ್ಯಕ್ತಿ/ ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (www.kppp.karnataka.gov.in) ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕ: 12.05.2026 ರಿಂದ 11.06.2026ರ ಸಾಯಂಕಾಲ 4.00ಗಂಟೆಯೊಳಗೆ ಅರ್ಹ ವ್ಯಕ್ತಿ/ ಸಂಸ್ಥೆಗಳಿಂದ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸಂಬಂಧಪಟ್ಟ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ # 3ನೇ ಮಹಡಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕಛೇರಿ ಸಂಕೀರ್ಣ, ಮಹಾವೀರ ಡಿವೈನ್ ಸಿಟಿ, ಪ್ರಗತಿ ನಗರ ಚಾಮರಾಜನಗರ 571313 ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/- ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ(ಪರವಾಗಿ)
ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:129:2026-27

ಈಶಾನ್ಯ ರೈಲ್ವೆ
ಇ-ಟೆಂಡರ್
ಟೆಂಡರ್ ನೋಟಿಸ್ ನಂ.
ಎನ್‌ಇಆರ್_ಎಸ್‌ಎನ್‌ಟಿ_ಯೋಜನೆ_ಬಿಎಸ್‌ಬಿ_03_2026

ಉಪ ಮುಖ್ಯ ಸಿಗ್ನಲ್ ಮತ್ತು ದೂರಸಂಪರ್ಕ ಅಭಿಯಂತರರು/ಯೋಜನೆ/ಎನ್.ಇ. ರೈಲ್ವೆ/ವಾರಣಾಸಿ ಇವರು ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಯಲ್ಲಿ ಉಲ್ಲೇಖಿಸಲಾದ ಅರ್ಹತಾ ಮಾನದಂಡದ ಪ್ರಕಾರ ಸಾಕಷ್ಟು ಅನುಭವವುಳ್ಳ ಗುತ್ತಿಗೆದಾರರಿಂದ ಇ-ಟೆಂಡರ್ (ಎರಡು ಪಾಕೆಟ್ ಸಿಸ್ಟಮ್) ಆಹ್ವಾನಿಸಿದ್ದಾರೆ. **ಟೆಂಡರ್ ನೋಟಿಸ್ ನಂ. ಮತ್ತು ಕಾಮಗಾರಿಯ ವಿವರಣೆ:** ಎನ್‌ಇಆರ್_ಎಸ್‌ಎನ್‌ಟಿ_ಯೋಜನೆ_ಬಿಎಸ್‌ಬಿ_03_2026. ಕಾಮಗಾರಿಯ ಹೆಸರು: ಎನ್.ಇ. ರೈಲ್ವೆಯ ವಾರಣಾಸಿ ವಿಭಾಗದ ಔರಿಹಾರ್ ಜಂಕ್ಷನ್ (ಎಆರ್‌ಜೆ) -ಛಪ್ರಾ ಜಂಕ್ಷನ್ (ಸಿಪಿಆರ್) ಸೆಕ್ಷನ್‌ನಲ್ಲಿ 4x48 ಒಎಫ್‌ಸಿ ಕೆಲಸದ ಜೊತೆಗೆ ಪಕ್ಕದ ನಿಲ್ದಾಣಗಳಲ್ಲಿ ಸಂಬಂಧಿತ ಆಕ್ಸಿಲರಿ ಕಾಮಗಾರಿಗಳು ಒಳಗೊಂಡಂತೆ ನಿಯಮಿತ ಟ್ರ್ಯಾಕ್ ಸರ್ಕ್ಯೂಟ್‌ಗಾಗಿ ಎಂಎಸ್‌ಡಿಎಸಿ ಮೂಲಕ ಆಟೋಮೆಟಿಕ್ ಬ್ಲಾಕ್ ಸಿಗ್ನಲಿಂಗ್ ಕಾಮಗಾರಿಯ ಸಮೀಕ್ಷೆ, ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ. ಅಂದಾಜು ಮೌಲ್ಯ: ರೂ. 1361067788.19, ಬಿಡ್ ಭದ್ರತೆ: ರೂ.27221400.00, ಅನುಮತಿ ಪತ್ರ ನೀಡಿದ ದಿನಾಂಕದಿಂದ ಪೂರ್ಣಗೊಳಿಸುವ ಸಮಯ/ಅವಧಿ: 18 ತಿಂಗಳು, ಟೆಂಡರ್ ಮುಕ್ತಾಯ ದಿನಾಂಕ ಮತ್ತು ಸಮಯ: 07.07.2026ರ 15.00 ಗಂಟೆ. **ಗಮನಿಸಿ:** 1. ಆಫರ್‌ನ ಮಾನ್ಯತೆಯು ಟೆಂಡರ್ ಮುಕ್ತಾಯ ದಿನಾಂಕದಿಂದ 90 ದಿನಗಳು. 2. ವಿವರವಾದ ಟೆಂಡರ್ ನೋಟಿಸ್, ಅರ್ಹತಾ ಮಾನದಂಡ, ನಿಯಮಗಳು ಮತ್ತು ಷರತ್ತುಗಳು ವೆಬ್‌ಸೈಟ್ http://www.ireps.gov.in ನಲ್ಲಿ ಲಭ್ಯವಿವೆ. 3. ಬಿಡ್ ಭದ್ರತೆಯನ್ನು ಇ-ಪೇಮೆಂಟ್ ಗೇಟ್‌ವೇ ಮೂಲಕ ನಗದು ರೂಪದಲ್ಲಿ ಠೇವಣಿ ಮಾಡಬೇಕು ಅಥವಾ ಭಾರತದ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ನಿಂದ ಬ್ಯಾಂಕ್ ಗ್ಯಾರಂಟಿ ಬಾಂಡ್ ಆಗಿ ಅಥವಾ ಟೆಂಡರ್ ದಾಖಲೆಗಳಲ್ಲಿ ಉಲ್ಲೇಖಿಸಿದಂತೆ ಸಲ್ಲಿಸಬೇಕು. ಬ್ಯಾಂಕ್ ಗ್ಯಾರಂಟಿ ಬಾಂಡ್ ಅನುಬಂಧ-1.1 (ಟೆಂಡರ್ ದಾಖಲೆ) ಪ್ರಕಾರ ಇರುತ್ತದೆ ಮತ್ತು ಅದು ಬಿಡ್ ಮಾನ್ಯತೆಯ ಅವಧಿ ಮುಗಿದ 90 ದಿನಗಳನ್ನು ಮೀರಿ ಮಾನ್ಯವಿರುತ್ತದೆ.

ಉಪ ಸಿಎಸ್‌ಟಿಇ/ಯೋಜನೆ, ವಾರಣಾಸಿ/ ಈಶಾನ್ಯ ರೈಲ್ವೆ
CPRO/Sig.-43
"ರೈಲಿನ ರೂಫ್ ಮತ್ತು ಫುಟ್‌ಬೋರ್ಡ್ಸ್ ಮೇಲೆ ಪ್ರಯಾಣಿಸಬೇಡಿ"

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ

2026ರ ಹಂಗಾಮ

ರಾಯಲ್ಸ್‌ಗೆ 30 ರನ್ ಗೆಲುವು | ಸೋಲಿನೊಂದಿಗೆ ಅಭಿಯಾನ ಕೊನೆಗೊಳಿಸಿದ ಮುಂಬಯಿ ಇಂಡಿಯನ್ಸ್

ಪ್ಲೇಆಫ್‌ಗೆ ರಾಜಸ್ಥಾನ ಲಗ್ಗೆ

ಮುಂಬಯಿ: ಆಲ್‌ರೌಂಡ್ ಪ್ರದರ್ಶನ ನೀಡುವಲ್ಲಿ ಸಫಲವಾದ ರಾಜಸ್ಥಾನ ರಾಯಲ್ಸ್ ತಂಡ ತನ್ನ ನಿರ್ಣಾಯಕ ಪಂದ್ಯದಲ್ಲಿ 30 ರನ್‌ಗಳಿಂದ ಮುಂಬಯಿ ಇಂಡಿಯನ್ಸ್ ತಂಡವನ್ನು ಪರಾಭವಗೊಳಿಸಿತು. ಇದರೊಂದಿಗೆ ಒಟ್ಟು 16 ಅಂಕಗಳನ್ನು ಕಲೆಹಾಕಿದ ರಿಯಾನ್ ಪರಾಗ್ ಬಳಗ 2026ರ ಐಪಿಎಲ್‌ನಲ್ಲಿ ನಾಲ್ಕನೇ ತಂಡವಾಗಿ ಪ್ಲೇಆಫ್ ಪ್ರವೇಶಿಸಿತು.

ಲೀಗ್‌ನ ಉದ್ಘಾಟನ ಆವೃತ್ತಿಯ ಚಾಂಪಿಯನ್ ರಾಜಸ್ಥಾನ, ಮೇ 27ರಂದು ನ್ಯೂ ಚಂಡೀಗಢದಲ್ಲಿ ನಡೆಯಲಿರುವ ಎಲಿಮಿನೇಟರ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಕಠಿಣ ಸವಾಲು ಎದುರಿಸಲಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಈ 'ಮಾಡು ಇಲ್ಲವೇ ಮಡಿ' ಪಂದ್ಯದಲ್ಲಿ ಟಾಸ್ ಸೋತ ರಾಜಸ್ಥಾನ ಬ್ಯಾಟಿಂಗ್‌ಗೆ ಆಹ್ವಾನ ಪಡೆಯಿತು. ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಅವರ ವೈಫಲ್ಯದ ನಡುವೆಯೂ ರಾಯಲ್ಸ್ ಇತರ ಬ್ಯಾಟರ್‌ಗಳ ಸಮಯೋಚಿತ ಆಟದಿಂದ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಕಲೆಹಾಕಿತು. ಇದಕ್ಕೆ ಪ್ರತಿಯಾಗಿ ಮುಂಬಯಿ ಇಂಡಿಯನ್ಸ್, 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಲಷ್ಟೇ ಶಕ್ತಗೊಂಡಿತು.

ರಾಯಲ್ಸ್‌ನ ಶಿಸ್ತಿನ ದಾಳಿಗೆ 5.1 ಓವರ್‌ಗಳಲ್ಲಿ 38ಕ್ಕೆ 4 ವಿಕೆಟ್ ಕಳೆದುಕೊಂಡ ಮುಂಬಯಿ ತಂಡ, ಹೀನಾಯ ಸೋಲಿನ ಭೀತಿ ಎದುರಿಸಿತು. ಆದಾಗ್ಯೂ ಮಧ್ಯಮ ಕ್ರಮಾಂಕ'ದಲ್ಲಿ ಸೂರ್ಯಕುಮಾರ್ ಯಾದವ್(60;42 ಎಸೆತ), ವಿಲ್ ಜಾಕ್ಸ್ (33) ಮತ್ತು ಹಾರ್ದಿಕ್ ಪಾಂಡ್ಯ (34) ತಂಡದ ಹೋರಾಟಕ್ಕೆ ಬಲ ತುಂಬಿದರಾದರೂ ರಾಯಲ್ಸ್ ಪ್ಲೇಆಫ್‌ಗೆ ಮುನ್ನುಗ್ಗುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ಐದು ಬಾರಿಯ ಚಾಂಪಿಯನ್ ಮುಂಬಯಿ, ಒಟ್ಟು 8 ಅಂಕಗಳೊಂದಿಗೆ 9ನೇ ತಂಡವಾಗಿ ಲೀಗ್‌ನಲ್ಲೇ ಅಭಿಯಾನ ಕೊನೆಗೊಳಿಸಿತು. ರಾಯಲ್ಸ್ ಪರ ಜೋಫ್ರಾ ಆರ್ಚರ್(17ಕ್ಕೆ 3), ನಂದ್ರೆ ಬರ್ಗರ್(43ಕ್ಕೆ 2), ಬ್ರಿಜೇಶ್ ಶರ್ಮ(26ಕ್ಕೆ 2) ಮತ್ತು ಯಶ್ ರಾಜ್ ಪೂಂಜ (44ಕ್ಕೆ 2) ಮಿಂಚಿದರು. ಇದಕ್ಕೂ ಮುನ್ನ ಧ್ರುವ್ ಜುರೆಲ್(38), ಜೈಸ್ವಾಲ್ 27, ಜೋಫ್ರಾ ಆರ್ಚರ್(32) ಮತ್ತು ರವೀಂದ್ರ ಜಡೇಜಾ(19*)ಅವರ ಸಮಯೋಚಿತ ಆಟದಿಂದ 200 ರನ್ ಗಡಿದಾಟುವಲ್ಲಿ ರಾಯಲ್ಸ್ ಯಶಸ್ವಿಯಾಯಿತು.

ಸಂಕ್ಷಿಪ್ತ ಸ್ಕೋರ್: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 205(ಧ್ರುವ್ ಜುರೆಲ್ 38, ಜೈಸ್ವಾಲ್ 27, ದಸುನ್ ಶನಕ 29, ಆರ್ಚರ್ 32; ದೀಪಕ್ ಚಾಹರ್ 43ಕ್ಕೆ 2, ಶಾರ್ದೂಲ್ ಠಾಕೂರ್ 41ಕ್ಕೆ 2); **ಮುಂಬಯಿ ಇಂಡಿಯನ್ಸ್:** 20 ಓವರ್‌ಗಳಲ್ಲಿ 9 ವಿಕೆಟ್‌ಗೆ 175 (ಸೂರ್ಯಕುಮಾರ್ 60, ವಿಲ್ ಜಾಕ್ಸ್ 33, ಹಾರ್ದಿಕ್ ಪಾಂಡ್ಯ 34; ಆರ್ಚರ್ 17ಕ್ಕೆ 3, ಬರ್ಗರ್ 43ಕ್ಕೆ 2, ಬ್ರಿಜೇಶ್ 26ಕ್ಕೆ 2, ಯಶ್ ರಾಜ್ 44ಕ್ಕೆ 2).


ರಾಜಸ್ಥಾನ ಪರ ಆಲ್‌ರೌಂಡ್ ಪ್ರದರ್ಶನ ನೀಡಿದ ಆರ್ಚರ್

ಪ್ಲೇಆಫ್ ವೇಳಾಪಟ್ಟಿ

ಕ್ವಾಲಿಫೈಯರ್ 1: ಬೆಂಗಳೂರು vs ಗುಜರಾತ್
ಸ್ಥಳ: ಧರ್ಮಶಾಲಾ (ಮೇ 26)

ಎಲಿಮಿನೇಟರ್: ಹೈದರಾಬಾದ್ vs ರಾಜಸ್ಥಾನ
ಸ್ಥಳ: ನ್ಯೂ ಚಂಡೀಗಢ (ಮೇ 27)

ಕ್ವಾಲಿಫೈಯರ್ 2: ಕ್ವಾಲಿಫೈಯರ್ 1ರ ಸೋತ ತಂಡ vs ಎಲಿಮಿನೇಟರ್‌ನಲ್ಲಿ ಗೆದ್ದ ತಂಡ
ಸ್ಥಳ: ನ್ಯೂ ಚಂಡೀಗಢ (ಮೇ 29)

ಫೈನಲ್: ಕ್ವಾಲಿಫೈಯರ್ 1ರ ವಿಜೇತ ತಂಡ vs ಕ್ವಾಲಿಫೈಯರ್ 2ರ ವಿಜೇತ ತಂಡ
ಸ್ಥಳ: ಅಹಮದಾಬಾದ್ (ಮೇ 31)

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಬೆಂಗಳೂರು	14	9	5	0	18	+0.783
ಗುಜರಾತ್	14	9	5	0	18	+0.695
ಹೈದರಾಬಾದ್	14	9	5	0	18	+0.524
ರಾಜಸ್ಥಾನ	14	8	6	0	16	+0.189
ಪಂಜಾಬ್	14	7	6	1	15	+0.309
ಡೆಲ್ಲಿ	14	7	7	0	14	-0.651
ಕೋಲ್ಕೊತಾ	14	6	7	1	13	-0.147
ಚೆನ್ನೈ	14	6	8	0	12	-0.345
ಮುಂಬಯಿ	14	4	10	0	08	-0.584
ಲಖನೌ	14	4	10	0	08	-0.740

638 ರನ್
ಸಾಯಿ ಸುದರ್ಶನ್
ಗುಜರಾತ್ ಟೈಟನ್ಸ್

24 ವಿಕೆಟ್
ಭುವನೇಶ್ವರ್ ಕುಮಾರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು

ಪಂಜಾಬ್, ನೈಟ್ ರೈಡರ್ಸ್ ಪ್ಲೇಆಫ್ ಕನಸು ಭಗ್ನ

ರಾಜಸ್ಥಾನ ಒಟ್ಟು 16 ಅಂಕಗಳನ್ನು ಕಲೆಹಾಕಿದ ಕಾರಣ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕೊತಾ ನೈಟ್ ರೈಡರ್ಸ್ ತಂಡಗಳ ಪ್ಲೇಆಫ್ ಕನಸು ಭಗ್ನಗೊಂಡಿತು. ಒಂದು ವೇಳೆ ರಾಯಲ್ಸ್ ಸೋತಿದ್ದರೆ, 15 ಅಂಕಗಳನ್ನು ಹೊಂದಿದ್ದ ಪಂಜಾಬ್ ಪ್ಲೇಆಫ್ ಹಂತಕ್ಕೆ ಮುನ್ನಡೆಯುವ ಅವಕಾಶವನ್ನು ಹೊಂದಿತ್ತು. ಹಾಗೆಯೇ ಡೆಲ್ಲಿ ವಿರುದ್ಧ ಕೋಲ್ಕೊತಾ ತಂಡ ಜಯಿಸಿದ್ದರೆ 15 ಅಂಕಗಳನ್ನು ಕಲೆಹಾಕಿ ಪ್ಲೇಆಫ್‌ಗೆ ಪೈಪೋಟಿ ಒಡ್ಡುತ್ತಿತ್ತು. ಆದರೆ ರಾಯಲ್ಸ್ ಜಯದೊಂದಿಗೆ ಉಳಿದೆಲ್ಲಾ ಲೆಕ್ಕಾಚಾರವು ಬುಡಮೇಲಾದವು.

ಗೆದ್ದು ಹೊರಬಿದ್ದ ಡೆಲ್ಲಿ

ಕೋಲ್ಕೊತ್ತಾ: ಕೆ.ಎಲ್. ರಾಹುಲ್(60; 30 ಎಸೆತ) ಹಾಗೂ ನಾಯಕ ಅಕ್ಷರ್ ಪಟೇಲ್(39; 25 ಎಸೆತ) ಅವರ ಬಿರುಸಿನ ಬ್ಯಾಟಿಂಗ್ ಜತೆಗೆ ಸಂಘಟಿತ ಬೌಲಿಂಗ್ ನಿರ್ವಹಣೆ ತೋರಿದ ಡೆಲ್ಲಿ ಕ್ಯಾಪಿಟಲ್ಸ್ ಹಾಲಿ ಐಪಿಎಲ್ ಋತುವಿನ ಕೊನೆಯ ಲೀಗ್ ಪಂದ್ಯದಲ್ಲಿ 40 ರನ್‌ಗಳಿಂದ ಕೋಲ್ಕೊತಾ ನೈಟ್ ರೈಡರ್ಸ್ ತಂಡವನ್ನು ಮಣಿಸಿತು.ಇದರೊಂದಿಗೆ ಒಟ್ಟು 14 ಅಂಕಗಳನ್ನು ಕಲೆಹಾಕಿದ ಡೆಲ್ಲಿ, ಅಂಕಪಟ್ಟಿಯ 6ನೇ ಸ್ಥಾನಿಯಾಗಿ ಹೋರಾಟ ಮುಗಿಸಿದರೆ, ಕೋಲ್ಕೊತಾ 13 ಅಂಕಗಳೊಂದಿಗೆ 7ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು.

ಭಾನುವಾರ ನಡೆದ ಡಬಲ್ ಹೆಡರ್‌ನ ಮೊದಲ ಪಂದ್ಯದಲ್ಲಿ ಮುಂಬಯಿ ವಿರುದ್ಧ ರಾಜಸ್ಥಾನ ಗೆದ್ದು ಪ್ಲೇಆಫ್ ಪ್ರವೇಶಿಸಿದ ಕಾರಣ ಕೋಲ್ಕೊತಾ ಮತ್ತು ಡೆಲ್ಲಿ ನಡುವಿನ ಪಂದ್ಯ ಮಹತ್ವ ಕಳೆದುಕೊಂಡಿತು.ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಟಾಸ್

ಸೋಲಿನೊಂದಿಗೆ ಹೋರಾಟ ಮುಗಿಸಿದ ಕೆಕೆಆರ್

ಸೋತು ಬ್ಯಾಟಿಂಗ್‌ಗೆ ಅವಕಾಶ ಪಡೆದ ಡೆಲ್ಲಿ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 203 ರನ್ ಕಲೆಹಾಕಿತು. ಇದಕ್ಕೆ ಪ್ರತಿಯಾಗಿ ಕೋಲ್ಕೊತ್ತಾ, ರಹಾನೆ(63) ಅವರ ಹೋರಾಟದ ಹೊರತಾಗಿಯೂ 18.4 ಓವರ್‌ಗಳಲ್ಲಿ 163 ರನ್‌ಗಳಿಗೆ ಆಲೌಟ್ ಆಯಿತು. ಡೆಲ್ಲಿ ಪರ ಎನ್‌ಗಿಡಿ ಮತ್ತು ಕುಲ್ದೀಪ್ ತಲಾ 3 ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರ್: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 203(ಕೆ.ಎಲ್. ರಾಹುಲ್ 60, ಅಕ್ಷರ್ ಪಟೇಲ್ 39, ಮಿಲ್ಲರ್ 28, ಸಾಹಿಲ್ ಪರಾಖ್ 24; ಸೌರಭ್ ದುಬೆ 28ಕ್ಕೆ 2); **ಕೋಲ್ಕೊತ್ತಾ ನೈಟ್‌ರೈಡರ್ಸ್:** 18.4 ಓವರ್‌ಗಳಲ್ಲಿ 163(ರಹಾನೆ 63, ಪಾಂಡೆ 25, ಪೊವೆಲ್ 29; ಕುಲ್ದೀಪ್ 29ಕ್ಕೆ 3, ಎನ್‌ಗಿಡಿ 27ಕ್ಕೆ 3, ಸ್ಟಾರ್ಕ್ 26ಕ್ಕೆ 2).

ಎರಡನೇ ಸುತ್ತಿಗೆ ಜ್ವೆರೇವ್

ಪ್ಯಾರಿಸ್: ಎರಡನೇ ಶ್ರೇಯಾಂಕಿತ ಆಟಗಾರ ಅಲೆಕ್ಸಾಂಡರ್ ಜ್ವೆರೆವ್ 2026ರ ಫ್ರೆಂಚ್ ಓಪನ್‌ನಲ್ಲಿ ತಮ್ಮ ಚೊಚ್ಚಲ ಗ್ರ್ಯಾನ್ ಸ್ಲಾಮ್ ಗೆಲ್ಲುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿರಿಸಿದ್ದಾರೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಆರಂಭಿಕ ಪಂದ್ಯದಲ್ಲಿ ಜರ್ಮನಿಯ ಆಟಗಾರ ಜ್ವೆರೆವ್ 6-3, 6-4, 6-2 ನೇರ ಸೆಟ್‌ಗಳಿಂದ ಫ್ರಾನ್ಸ್‌ನ ಬೆಂಜಮಿನ್ ಬೋನ್ಜಿ ವಿರುದ್ಧ ಸುಲಭ ಜಯ ಗಳಿಸಿದರು.

ಕೇವಲ 2 ಗಂಟೆ ಮತ್ತು 8 ನಿಮಿಷಗಳ ಅಂತರದಲ್ಲಿ ಪಂದ್ಯ ವಶಪಡಿಸಿಕೊಂಡ ಅಲೆಕ್ಸಾಂಡರ್, 2ನೇ ಸುತ್ತಿನಲ್ಲಿ ಜೆಕ್ ಗಣರಾಜ್ಯದ ಥಾಮಸ್ ಮಚಾಕ್ ಅವರ ಸವಾಲು ಎದುರಿಸಲಿದ್ದಾರೆ.

ಜ್ವೆರೆವ್ ಅವರಲ್ಲದೆ, 13ನೇ ಶ್ರೇಯಾಂಕಿತ ಕರೆನ್ ಖಚಾನೋವ್ ದ್ವಿತೀಯ ಸುತ್ತಿಗೆ ಮುನ್ನಡೆದಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ 11ನೇ ಶ್ರೇಯಾಂಕಿತೆ ಬೆಲಿಂಡಾ ಬೆನ್ಸಿಕ್, 8ನೇ ಶ್ರೇಯಾಂಕಿತೆ ಮಿರಾ ಆಂಡ್ರೀವಾ ತಮ್ಮ ಎದುರಾಳಿಗಳನ್ನು ಸೋಲಿಸಿ ಎರಡನೇ ಸುತ್ತು ತಲುಪಿದ್ದಾರೆ.

ಮ್ಯೂನಿಚ್ ವಿಶ್ವಕಪ್ ಶೂಟಿಂಗ್

22 ಭಾರತೀಯರ ಸ್ಪರ್ಧೆ

ಹೊಸದಿಲ್ಲಿ: ಮೇ 24 ರಿಂದ 31ರವರೆಗೆ ಮ್ಯೂನಿಚ್‌ನಲ್ಲಿ ನಡೆಯಲಿರುವ ಐಎಸ್ಎಸ್ಎಫ್ ರೈಫಲ್/ಪಿಸ್ತೂಲ್ ವಿಶ್ವಕಪ್‌ನಲ್ಲಿ ಭಾರತ 22 ಸದಸ್ಯರ ತಂಡವನ್ನು ಕಣಕ್ಕಿಳಿಸಲಿದೆ. 2 ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ ಮಿಶ್ರ ತಂಡ ಸ್ಪರ್ಧೆಯ ಜತೆಗೆ ಎರಡು ವೈಯಕ್ತಿಕ ಪಿಸ್ತೂಲ್ ಸ್ಪರ್ಧೆಗಳಲ್ಲಿ ಸ್ಪರ್ಧಿಸಲಿದ್ದಾರೆ.

ನ್ಯಾಷನಲ್ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ ಭಾನುವಾರ ಅನುಭವಿ ಮತ್ತು ಯುವ ಶೂಟರ್‌ಗಳನ್ನೊಳಗೊಂಡ ತಂಡವನ್ನು ಘೋಷಿಸಿದೆ. ಮನು ಜತೆಗೆ, ಒಲಿಂಪಿಯನ್ ಮತ್ತು ವಿಶ್ವ ಚಾಂಪಿಯನ್ ಪದಕ ವಿಜೇತೆ ಇಶಾ ಸಿಂಗ್ ಕೂಡ 2 ವೈಯಕ್ತಿಕ ಪಿಸ್ತೂಲ್ ಸ್ಪರ್ಧೆಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮೇ 26ರಿಂದ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯೊಂದಿಗೆ ಸ್ಪರ್ಧೆ ಪ್ರಾರಂಭವಾಗಲಿದೆ. ಹಲವಾರು ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್‌ಗಳು ಸೇರಿದಂತೆ 80 ದೇಶಗಳ ಒಟ್ಟು 696 ಶೂಟರ್‌ಗಳು ಭಾಗವಹಿಸಿದ್ದರು.

5000 ಮೀ.ನಲ್ಲಿ ಗುಲ್ವೀರ್ ಸಿಂಗ್ ರಾಷ್ಟ್ರೀಯ ದಾಖಲೆ

ಹೊಸದಿಲ್ಲಿ: ಭಾರತದ ಅಗ್ರಮಾನ್ಯ ದೂರದ ಓಟಗಾರ ಗುಲ್ವೀರ್ ಸಿಂಗ್ ಲಾಸ್ ಏಂಜಲೀಸ್‌ನಲ್ಲಿ ನಡೆಯುತ್ತಿರುವ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಸಿಲ್ವರ್ ಮಟ್ಟದ ಕೂಟದ ಪುರುಷರ 5000 ಮೀ. ಹೊರಾಂಗಣ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ.

ಎಲ್ಎ ಟ್ರ್ಯಾಕ್ ಫೆಸ್ಟ್‌ನಲ್ಲಿ ಶನಿವಾರ ನಡೆದ ಸ್ಪರ್ಧೆಯಲ್ಲಿ ಅವರು 13 ನಿಮಿಷ 03.93 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟುವ ಮೂಲಕ ಈ ಹಿಂದೆ ತಾವೇ ನಿರ್ಮಿಸಿದ್ದ 13:11.82 ಸೆಕೆಂಡ್‌ಗಳ ದಾಖಲೆಯನ್ನು ತಿದ್ದಿ ಬರೆದರು. 27 ವರ್ಷದ ಗುಲ್ವೀರ್, ಕಳೆದ ವರ್ಷ ಬೂಸ್ಟನ್‌ನಲ್ಲಿ ನಡೆದ ಟೆರಿಯರ್ ಡಿಎಂಆರ್ ಚಾಲೆಂಜ್ ಒಳಾಂಗಣ ಸ್ಪರ್ಧೆಯಲ್ಲಿ 12 ನಿಮಿಷ ಮತ್ತು 59.77 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದ ಸಾಧನೆ ಹೊಂದಿದ್ದಾರೆ.

ಮೇ 26ರಿಂದ ಬೆಂಗಳೂರಲ್ಲಿ ಅಂತಾರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

350ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ ನಿರೀಕ್ಷೆ

■ **ವಿಕ ಸುದ್ದಿಲೋಕ** ಬೆಂಗಳೂರು

ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ (ಪಿಸಿಐ) ಆಶ್ರಯದಲ್ಲಿ 8ನೇ ಆವೃತ್ತಿಯ ಭಾರತೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಅಂತಾರಾಷ್ಟ್ರೀಯ ಚಾಂಪಿಯನ್‌ಶಿಪ್ ಮೇ 26ರಿಂದ 28ರ ವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಭಾನುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಝಝಾರಿಯಾ, ''ಈ ಚಾಂಪಿಯನ್‌ಶಿಪ್ ಅಕ್ಟೋಬರ್ 18ರಿಂದ 24ರ ವರೆಗೆ ಜಪಾನ್‌ನ ನಗೋಯದಲ್ಲಿ ನಡೆಯಲಿರುವ 5ನೇ ಆವೃತ್ತಿಯ ಏಷ್ಯನ್ ಪ್ಯಾರಾ ಗೇಮ್ಸ್‌ಗೆ ಆಯ್ಕೆ ಟ್ರಯಲ್ಸ್ ಆಗಿದೆ,'' ಎಂದು ತಿಳಿಸಿದರು.

''ಚಾಂಪಿಯನ್‌ಶಿಪ್‌ನಲ್ಲಿ ಅತಿ ಹೆಚ್ಚು ಭಾರತೀಯರು ಸೇರಿ 350 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಪ್ಯಾರಾಲಿಂಪಿಕ್ಸ್, ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಏಷ್ಯನ್ ಪ್ಯಾರಾ ಗೇಮ್ಸ್ ಪದಕ ವಿಜೇತರು ಕೂಟದಲ್ಲಿ ಭಾಗವಹಿಸಲಿದ್ದಾರೆ. ಎರಡು ಬಾರಿ ಪ್ಯಾರಾಲಿಂಪಿಕ್ಸ್ ಹಾಗೂ ಮೂರು ಬಾರಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಚಿನ್ನದ ಪದಕ ವಿಜೇತ ಜಾವೆಲಿನ್ ಪಟು ಸುಮಿತ್ ಅಂತಿಲ್ ಚಾಂಪಿಯನ್‌ಶಿಪ್‌ನ ಪ್ರಮುಖ ಆಕರ್ಷಣೆ ಎನಿಸಿಕೊಳ್ಳಲಿದ್ದಾರೆ. ಕಿರ್ಗಿಸ್ತಾನ, ಫಿಲಿಪ್ಪೀನ್ಸ್, ಶ್ರೀಲಂಕಾ, ಥಾಯ್ಲೆಂಡ್‌ನ ಸ್ಪರ್ಧಿಗಳೂ ಭಾಗವಹಿಸಲಿದ್ದಾರೆ. ಅಫ್ಘಾನಿಸ್ತಾನದ ಕೆಲ ಸ್ಪರ್ಧಿಗಳೂ ಕೂಟದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ,'' ಎಂದು ಮಾಹಿತಿ ನೀಡಿದರು.

ಗುಕೇಶ್, ಪ್ರಜ್ಞಾನಂದ ಆಕರ್ಷಣೆ

ಓಸ್ಲೊ(ನಾರ್ವೆ): ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿ ಸೋಮವಾರ ಆರಂಭವಾಗಲಿದ್ದು, ಭಾರತೀಯರ ಪೈಕಿ ಡಿ. ಗುಕೇಶ್ ಮತ್ತು ಆರ್. ಪ್ರಜ್ಞಾನಂದ ಆಕರ್ಷಣೆಯಾಗಿದ್ದಾರೆ. ವಿಶ್ವ ಚಾಂಪಿಯನ್ ಡಿ. ಗುಕೇಶ್, ವಿಶ್ವ ಚಾಂಪಿಯನ್‌ಶಿಪ್ ಕಿರೀಟವನ್ನು ಉಳಿಸಿಕೊಳ್ಳುವ ಮೊದಲು ಫಾರ್ಮ್ ಕಂಡುಕೊಳ್ಳಲು ಎದುರು ನೋಡುತ್ತಿದ್ದಾರೆ. ಎಲೈಟ್ ಸ್ಪರ್ಧೆಗಳಲ್ಲಿ ಮಾಜಿ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸೇರಿ ವಿಶ್ವದರ್ಜೆಯ ಆಟಗಾರರು ಕಣದಲ್ಲಿರುವುದು ಭಾರತೀಯರಿಗೆ ದೊಡ್ಡ ಸವಾಲಾಗಿದೆ. ಗುಕೇಶ್ ಅವರಲ್ಲದೆ, ಆರ್. ಪ್ರಜ್ಞಾನಂದ ಪ್ರಶಸ್ತಿ ಗೆಲ್ಲುವ ಫೇವರಿಟ್‌ಗಳಲ್ಲಿ ಸೇರಿದ್ದಾರೆ.

ಪಂದ್ಯದ ವೇಳೆ ಹೃದಯಾಘಾತ ಕ್ರಿಕೆಟಿಗ ಅಕ್ಷಯ್ ನಿಧನ

ಬೆಂಗಳೂರು: ಕರ್ನಾಟಕದ ಮಾಜಿ ರಣಜಿ ಆಟಗಾರ ಎಸ್.ಎಲ್. ಅಕ್ಷಯ್ ಕೆಎಸ್‌ಸಿಎ ಲೀಗ್ ಪಂದ್ಯದ ವೇಳೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ನಗರದ ಆವಲಹಳ್ಳಿ ಎಸ್‌ಎಲ್‌ಎಸ್ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದ (ಕೆಎಸ್‌ಸಿಎ ನಾಸೂರ್ ಸ್ಮಾರಕ ಶೀಲ್ಡ್) ವೇಳೆ 4 ಓವರ್ ಬೌಲಿಂಗ್ ಮಾಡಿದ ನಂತರ ಆರೋಗ್ಯ ಸಮಸ್ಯೆ ಎದುರಿಸಿದ ಅವರು, ಮೈದಾನದಿಂದ ಹೊರಬಂದಿದ್ದಾರೆ. ಆ ನಂತರ ಡಗ್ ಔಟ್‌ನಲ್ಲಿದ್ದಾಗ ಕುಸಿದ ಅಕ್ಷಯ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಧ್ಯೆ ನಿಧನರಾದರು ಎಂದು ಮೂಲಗಳು ತಿಳಿಸಿವೆ. ಶಿವಮೊಗ್ಗ ಮೂಲದ 39 ವರ್ಷದ ಅಕ್ಷಯ್, ಕರ್ನಾಟಕ ತಂಡದ ಪರ 6 ಪ್ರಥಮ ದರ್ಜೆ(18 ವಿಕೆಟ್), 3 ಲಿಸ್ಟ್ ಎ ಮತ್ತು 9 ಟಿ20 ಪಂದ್ಯಗಳನ್ನಾಡಿದ್ದಾರೆ.

ಕೆಎಸ್‌ಸಿಎ ಸಂತಾಪ: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ಸಮಿತಿಯು ಕರ್ನಾಟಕದ ಮಾಜಿ ಕ್ರಿಕೆಟಿಗ ಎಸ್.ಎಲ್.ಅಕ್ಷಯ್ ಅವರ ಅಕಾಲಿಕ ನಿಧನಕ್ಕೆ ತೀವ್ರ ದುಃಖ ಮತ್ತು ಸಂತಾಪ ಸೂಚಿಸಿದೆ.

ಕಿರಿಯ ಮಟ್ಟದ ತರಬೇತುದಾರರಾಗಿ, ಯುವ ಕ್ರಿಕೆಟಿಗರನ್ನು ಪೋಷಿಸುವಲ್ಲಿ ಅಕ್ಷಯ್ ಪ್ರಮುಖ ಪಾತ್ರ ವಹಿಸಿದ್ದರು. ''ಕರ್ನಾಟಕ ಕ್ರಿಕೆಟ್ ಮಾಜಿ ಆಟಗಾರ ಮತ್ತು ಕೋಚ್‌ಅನ್ನು ಮಾತ್ರವಲ್ಲದೆ, ತನ್ನ ಕುಟುಂಬದ ಮೌಲ್ಯಯುತ ಸದಸ್ಯರನ್ನೂ ಕಳೆದುಕೊಂಡಿದೆ. ಅವರ ದುಃಖತಪ್ತ ಕುಟುಂಬಕ್ಕೆ ಸಂತಾಪಗಳು,'' ಎಂದು ಹೇಳಿದೆ.

ಮೂಲವ್ಯಾಧಿಗೆ ಸುಲಭ ಚಿಕಿತ್ಸೆ

ಪೈಲ್ಸ್ ಅಥವಾ ಮೂಲವ್ಯಾಧಿಯಲ್ಲಿ ಗುದದ್ವಾರದ ಬಳಿ ರಕ್ತನಾಳಗಳು ಊದಿಕೊಂಡು ರಕ್ತಸ್ರಾವ ಆಗಿ ವಿಪರೀತ ನೋವಾಗುತ್ತದೆ. ಈ ಕಾಯಿಲೆಯಲ್ಲಿ ಅತ್ತ ಕೂರಲೂ ಆಗದೆ, ಇತ್ತ ನಿಲ್ಲಲೂ ಆಗದೆ ಬಹಳಷ್ಟು ಯಾತನೆಯಾಗುತ್ತದೆ.



ರೋಗಲಕ್ಷಣ

- ಮಲ ವಿಸರ್ಜಿಸುವಾಗ ಗುದದ್ವಾರದಲ್ಲಿ ನೋವು, ಗುದದ್ವಾರದ ಬಳಿ ತುರಿಕೆ.
- ವಿಸರ್ಜನೆ ಬಳಿಕ ಗುದದ್ವಾರದಿಂದ ರಕ್ತ ಬರುವುದು, ಮಲ ವಿಸರ್ಜನೆ ಬಳಿಕವೂ ಮತ್ತೆ ವಿಸರ್ಜಿಸಬೇಕೆಂದು ಅನಿಸುವುದು, ಆದರೆ ಮಲ ವಿಸರ್ಜನೆ ಆಗದಿರುವುದು.
- ಗುದದ್ವಾರದ ಸುತ್ತ ಗಡ್ಡೆ ಬೆಳೆದಂತೆ ಭಾಸವಾಗುವುದು.

ಕಾರಣ ಅನೇಕ: ಮೂಲವ್ಯಾಧಿಗೆ ಅತಿ ಮುಖ್ಯ ಕಾರಣ ಮಲಬದ್ಧತೆ. ಮಲ ವಿಸರ್ಜಿಸುವಾಗ ನಿರಂತರ ಅತಿ ಒತ್ತಡ ಹಾಕಿದಾಗಲೂ ಪೈಲ್ಸ್ ಬರುವ ಸಾಧ್ಯತೆ ಇರುತ್ತದೆ. ಗರ್ಭಿಣಿಯರಲ್ಲಿ ಪ್ರೊಜೆಸ್ಟ್ರಾನ್ ಎಂಬ ರಸದೂತ ಹೆಚ್ಚಾಗಿರುತ್ತದೆ. ಇದರಿಂದಾಗಿ ರಕ್ತನಾಳಗಳು ವಿಸ್ತಾರವಾಗುತ್ತವೆ. ಗರ್ಭಿಣಿಯರಿಗೆ ಕೊಡಲಾಗುವ ಹೆಚ್ಚಿನ ಕಬ್ಬಿಣಾಂಶದಿಂದಾಗಿ ಕೂಡ ಮಲಬದ್ಧತೆಯಾಗುವ ಸಾಧ್ಯತೆ ಹೆಚ್ಚು.

ಡಾ. ಶ್ರೀಕಾಂತ್ ಮೋರ್ಲಾವರ್
ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ

ಇಂಟರ್ನಲ್ ಪೈಲ್ಸ್: ಇಂಥ ಪೈಲ್ಸ್‌ನಿಂದ ಬಳಲುವ ವ್ಯಕ್ತಿಯ ಗುದದ್ವಾರದ ರಕ್ತನಾಳಗಳು ಒಳಗಡೆಯೇ ಇದ್ದು ಮಲ ವಿಸರ್ಜಿಸುವಾಗ ನೋವು, ರಕ್ತಸ್ರಾವ, ಉರಿ, ತುರಿಕೆಯಾಗುತ್ತದೆ.

ಎಕ್ಸ್‌ಟರ್ನಲ್ ಪೈಲ್ಸ್: ಇದರಲ್ಲಿ ವ್ಯಕ್ತಿಯು ಬಹಳ ಯಾತನೆ ಅನುಭವಿಸುವುದರ ಜತೆಗೆ ರಕ್ತಸ್ರಾವ, ಊದಿದ ರಕ್ತನಾಳಗಳು ಹೊರಗಡೆಯೇ ಇದ್ದು, ನೋವಿನ ಪ್ರಮಾಣ ಹೆಚ್ಚಿರುತ್ತದೆ.

ಕಾಡುವ ಫಿಷರ್: ಗುದದ್ವಾರದ ಹತ್ತಿರ ಉಂಟಾಗುವ ಬಿರುಕನ್ನು ಫಿಷರ್ ಎನ್ನಲಾಗುತ್ತದೆ. ದೀರ್ಘಕಾಲದ ಮಲಬದ್ಧತೆ, ಭೇದಿಯಿಂದಾಗಿ ಉಂಟಾಗುವ ಇದು ಗರ್ಭಧಾರಣೆ ಸಮಯದಲ್ಲಿ ಕೆಲವು ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತದೆ. ಕ್ಯಾನ್ಸರ್, ಅಲ್ಸರೇಟಿವ್ ಕೊಲೈಟಿಸ್ ರೋಗಗಳಿಂದ ಬಳಲುವವರಲ್ಲಿಯೂ ಈ ತೊಂದರೆ ಉಂಟುಗುವ ಸಾಧ್ಯತೆ ಹೆಚ್ಚು.

ಫಿಸ್ತುಲಾ ಸಮಸ್ಯೆ: ಎರಡು ಎಪಿಥೀಲಿಯಲ್ ಕಣಜಾಲಗಳ ಮಧ್ಯೆ ಇರುವ ನಾಳದ ರೀತಿಯ ರಚನೆಯನ್ನು ಫಿಸ್ತುಲಾ ಎನ್ನಲಾಗುತ್ತದೆ. ಇದು ದೇಹದಲ್ಲಿ ಎಲ್ಲಿಯಾದರೂ ರಚನೆಯಾಗಬಹುದು. ಇದರಲ್ಲಿ ಎನಲ್ ಫಿಸ್ತುಲಾ ಎಂಬ ವಿಧ ಹೆಚ್ಚಾಗಿ ಅಧಿಕ ತೂಕ ಇರುವವರಲ್ಲಿ ಕಾಣಿಸುತ್ತದೆ. ಗುದದ್ವಾರದ ಪಕ್ಕದ ಚರ್ಮದ ಮೇಲೆ ಮೊಡವೆಯಂತೆ ಮೂಡುವ ಇದು ಕ್ರಮೇಣ ನೋವು, ಊತವಾಗಿ ಎರಡ್ಮೂರು ದಿನಗಳಲ್ಲಿ ಒಡೆದು ಕೀವು ಸೋರುತ್ತದೆ.

ಹೋಮಿಯೋಕೇರ್ ಚಿಕಿತ್ಸೆ: ಹೋಮಿಯೋಕೇರ್ ಇಂಟರ್‌ನ್ಯಾಷನಲ್‌ನಲ್ಲಿ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ವೈದ್ಯ ಪದ್ಧತಿಯಿಂದ ಪೈಲ್ಸ್, ಫಿಷರ್, ಫಿಸ್ತುಲಾ, ಮಲಬದ್ಧತೆ ಸಮಸ್ಯೆಗಳ ಮೂಲ ಕಾರಣಗಳನ್ನು ಗುರುತಿಸಿ ಸಂಪೂರ್ಣ ವಾಸಿ ಮಾಡಲಾಗುತ್ತದೆ. ಮಾತ್ರವಲ್ಲದೆ ಈ ಕಾಯಿಲೆಗಳು ಮತ್ತೆ ಬರದಿರುವ ಹಾಗೆ ಯಾವುದೇ ಶಸ್ತ್ರರಹಿತ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ವೈದ್ಯ ಪದ್ಧತಿಯಿಂದ ವಾಸಿ ಮಾಡಬಹುದು ಎಂದು ಇಲ್ಲಿನ ತಜ್ಞರು ಹೇಳಿದ್ದಾರೆ.

ಹೋಮಿಯೋಕೇರ್ ಇಂಟರ್‌ನ್ಯಾಷನಲ್: ಕರ್ನಾಟಕದಲ್ಲಿನ ಶಾಖೆಗಳು ಬೆಂಗಳೂರು (ಜಯನಗರ, ಮಲ್ಲೇಶ್ವರ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಕಲಬುರಗಿ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ. ■

ಉಚಿತ ಸಮಾಲೋಚನೆ: 9550001133
ಉಚಿತ ಕರೆಗೆ: 1800 108 1212
ವೆಬ್‌ಸೈಟ್: www.homeocare.in

(ಈ ಕ್ಷೇತ್ರದಲ್ಲಿ ತಜ್ಞರ ತಿಳುವಳಿಕೆಯನ್ನು ಆಧರಿಸಿದ ಬರಹ)

ಉತ್ತಮ ಜೀವನಶೈಲಿ ಪಾಲಿಸಿ

- ಸಾಕಷ್ಟು ನೀರು ಕುಡಿಯಿರಿ, ನಾರುಮುಕ್ತ ಆಹಾರ, ಮನೆಯೂಟಕ್ಕೆ ಆದ್ಯತೆ ಕೊಡಿ.
- ಜಂಕ್ ಫುಡ್ ತ್ಯಜಿಸಿ, ಹಣ್ಣು, ತರಕಾರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿ.
- ಚೆನ್ನಾಗಿ ನಿದ್ರೆ ಮಾಡಿ. ನಿಯಮಿತವಾಗಿ ದೈಹಿಕ ವ್ಯಾಯಾಮ ಅತಿ ಅಗತ್ಯ.
- ಗುದದ್ವಾರದಲ್ಲಿ ಅತಿ ತುರಿಕೆ ಇದ್ದರೆ ಬಿಸಿ ನೀರಿನಲ್ಲಿ ಸ್ನಾನ ಮಾಡಿ. ಮಲ ವಿಸರ್ಜನೆ ಸುಲಭವಾಗಲು ಅನಗತ್ಯವಾಗಿ ನೋವು ನಿವಾರಕ ಮಾತ್ರೆ ಸೇವಿಸಬೇಡಿ.

ಲವಲVK ಫಿಟ್ನೆಸ್ ಫಂಡಾ

ಸಮತೋಲಿತ ಆಹಾರ ಸೇವನೆ

ಡಯಟ್‌ನಲ್ಲಿ ಎದುರಾಗುವ ಸಾಮಾನ್ಯ ಪ್ರಶ್ನೆ ಎಂದರೆ ಕ್ಯಾಲೊರಿ ಎಣಿಕೆ ಮಾಡದೆ ಅಥವಾ ಆಹಾರವನ್ನು ತೂಕ ಮಾಡದೆ ಸರಿಯಾದ ಪ್ರಮಾಣದ ಕಾರ್ಬೋಹೈಡ್ರೇಟ್ಸ್, ಪ್ರೊಟೀನ್, ಫೈಬರ್, ಕೊಬ್ಬಿನಂಶ ಇರುವ ಸಮತೋಲಿತ ಆಹಾರ ಸೇವಿಸುತ್ತಿದ್ದೇವೆ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳುವುದು ಹೇಗೆ ಎಂಬುದು. ಖಂಡಿತವಾಗಿಯೂ ತಿಳಿದುಕೊಳ್ಳಬಹುದು.

- ತಟ್ಟೆಯ ಅರ್ಧ ಭಾಗದಲ್ಲಿ ತರಕಾರಿ ಅಥವಾ ಹಣ್ಣುಗಳು ಇರಲಿ. ಇದರಿಂದ ಫೈಬರ್, ವಿಟಮಿನ್ ಮತ್ತು ಹೊಟ್ಟೆ ತುಂಬಿದ ಅನುಭವ ಸಿಗುತ್ತದೆ.
- ತಟ್ಟೆಯ ಒಂದು ಭಾಗದಲ್ಲಿ ಪ್ರೊಟೀನ್ ಇರಲಿ. ಉದಾಹರಣೆಗೆ ಮೊಟ್ಟೆ, ಪನೀರ್, ಚಿಕನ್, ಮೀನು, ಬೇಳೆ, ಟೋಫು ಅಥವಾ ಗ್ರೀಕ್ ಯೋಗರ್ಟ್.
- ಉಳಿದ ಒಂದು ಭಾಗದಲ್ಲಿ ಕಾರ್ಬೋಹೈಡ್ರೇಟ್ಸ್ ಇರಲಿ. ಉದಾಹರಣೆಗೆ ಅನ್ನ, ರೊಟ್ಟಿ, ಓಟ್ಸ್, ಆಲೂಗಡ್ಡೆ, ಹಣ್ಣು ಅಥವಾ ಸಿರಿಧಾನ್ಯಗಳು. ಜತೆಗೆ ಸ್ವಲ್ಪ ಆರೋಗ್ಯಕರ ಕೊಬ್ಬು ಸೇರಿಸಿ. ಅಂದರೆ ಕಡಲೆಕಾಯಿ, ಬೀಜಗಳು, ತುಪ್ಪ, ಆಲಿವ್ ಎಣ್ಣೆ ಅಥವಾ ಪೀನಟ್ ಬಟರ್.

ಮತ್ತೊಂದು ಸರಳ ಪರೀಕ್ಷೆ ಎಂದರೆ ಆಹಾರ ಸೇವಿಸಿದ ನಂತರ ಮೂರರಿಂದ ನಾಲ್ಕು ಗಂಟೆಗಳವರೆಗೆ ಹೊಟ್ಟೆ ತುಂಬಿದ ಅನುಭವ ಇದ್ದರೆ, ಶಕ್ತಿ ಸ್ಥಿರವಾಗಿದ್ದರೆ ಮತ್ತು ತಕ್ಷಣವೇ ಮತ್ತೆ ತಿಂಡಿ ಸೇವಿಸಬೇಕು ಎಂದು ಅನಿಸದಿದ್ದರೆ ನಿಮ್ಮ ಆಹಾರ ಸಮತೋಲಿತವಾಗಿದೆ ಎಂದು ಹೇಳಬಹುದು. ಪ್ರಮುಖ ಸಂಗತಿ ಎಂದರೆ ತರಕಾರಿ, ಹಣ್ಣು, ಬೇಳೆ, ಧಾನ್ಯ ಮತ್ತು ಪ್ರೊಟೀನ್‌ಗಳಿಂದ ತಟ್ಟೆಯನ್ನು ತುಂಬಿದಷ್ಟೂ ಪೋಷಕಾಂಶಗಳ ಸಮತೋಲನ ಉತ್ತಮವಾಗಿರುತ್ತದೆ. ಬಿಸ್ಕತ್ ಮತ್ತು ಚಿಪ್ಸ್ ಮಾತ್ರ ಇರುವ ತಟ್ಟೆ ದೇಹಕ್ಕೆ ಹೆಚ್ಚು ಉಪಕಾರಿಯಲ್ಲ. ಪ್ರತಿ ಊಟವೂ ಪರಿಪೂರ್ಣ ಆಗಿರಬೇಕೆಂದಿಲ್ಲ, ವಾರದ ಒಟ್ಟು ಆಹಾರ ಪದ್ಧತಿ ಹೇಗಿರುತ್ತದೆ ಎಂಬುದು ಮುಖ್ಯವಾಗಿರುತ್ತದೆ. ಪೌಷ್ಟಿಕಾಂಶದ ನಿಖರತೆಗಿಂತ ನಿಯಮಿತ ಹೆಚ್ಚು ಮಹತ್ವದ್ದು. ■




ವನಿತಾ ಅಶೋಕ್
ಫಿಟ್ ಇಂಡಿಯಾ ರಾಯಭಾರಿ

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.

ದೂ: 9513747474



ಮಿಥುನ, ಸಿಂಹ, ಧನು-ಈ ರಾಶಿಯವರು ಈ ದಿನ ಎಚ್ಚರಿಕೆಯಿಂದ ಇರಿ

ಮೇಷ: ವ್ಯವಹಾರದಲ್ಲಿನ ಹೆಚ್ಚಿನ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ. ಎತ್ತರದಲ್ಲಿ ಏರಿ ಕೆಲಸ ಮಾಡುವವರು ಮತ್ತು ಸಾಹಸ ಪ್ರವೃತ್ತಿಯವರು ಜಾಗ್ರತರಾಗಿರಿ. ಸ್ವಸಾಮರ್ಥ್ಯ ವೃದ್ಧಿಸಿ. **ಶುಭ ಸಂಖ್ಯೆ:** 7, **ಬಣ್ಣ:** ಹಳದಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಸಹೋದರರ ನಡುವಿನ ಕೋರ್ಟು ವ್ಯವಹಾರಗಳನ್ನು ರಾಜಿ ಮೂಲಕ ಬಗೆಹರಿಸುವ ಪ್ರಯತ್ನ ಮಾಡುವುದು ಒಳ್ಳೆಯದು. ಹೊಸ ಉದ್ಯೋಗಕ್ಕಾಗಿ ಪ್ರಯತ್ನ ನಡೆಸಲು ಶುರು ಮಾಡಿದರೆ ಫಲ ಸಿಗಲಿದೆ. **ಶುಭ ಸಂಖ್ಯೆ:** 5, **ಬಣ್ಣ:** ಸುವರ್ಣ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ನಿಮ್ಮ ದೈನಂದಿನ ಬದುಕನ್ನು ಶಿಸ್ತುಬದ್ಧವಾಗಿ ನಡೆಸಲು ತೀರ್ಮಾನಿಸುವುದರಿಂದ ಅಭಿವೃದ್ಧಿ ಹೊಂದುವಿರಿ. ಆರ್ಥಿಕ ಲಾಭ ಪಡೆಯಲು ಹೋರಾಟ ನಡೆಸಬೇಕಾಗುವ ಪರಿಸ್ಥಿತಿ ಬರಲಿದೆ. **ಶುಭ ಸಂಖ್ಯೆ:** 1, **ಬಣ್ಣ:** ಕಪ್ಪು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಸಿಗಲಿವೆ. ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗಬಹುದು. ಕುಟುಂಬದಲ್ಲಿ ಸಂತಸ ಇರಲಿದೆ. **ಶುಭ ಸಂಖ್ಯೆ:** 3, **ಬಣ್ಣ:** ಗುಲಾಬಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಲೇವಾದೇವಿ ವ್ಯವಹಾರ ನಡೆಸುವವರಿಗೆ ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟವಾಗಿ ಹಿನ್ನಡೆಯಾಗಲಿದೆ. ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಂಗಾತಿಯ ಸಂಪೂರ್ಣ ಬೆಂಬಲ ಸಿಗಲಿದೆ. **ಶುಭ ಸಂಖ್ಯೆ:** 6, **ಬಣ್ಣ:** ಆಕಾಶ ನೀಲಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಹಿರಿಯರ ಹೇಳಿಕೆಯಂತೆ ಅಗತ್ಯ ಪೂರೈಸುವ ಕಡೆಗೆ ಹೆಚ್ಚಿನ ಗಮನ ಹರಿಸಿ. ನಿಮ್ಮ ಒತ್ತಡದ ನಡುವೆಯೂ ಇತರರಿಗೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ. **ಶುಭ ಸಂಖ್ಯೆ:** 8, **ಬಣ್ಣ:** ಬಿಳಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ನಿಮ್ಮ ಪ್ರತಿಯೊಂದು ಕೆಲಸಕ್ಕೂ ಬೆನ್ನೆಲುಬಾಗುವ ಧರ್ಮಪತ್ನಿಯ ಸಹಕಾರ ಮುನ್ನಡೆಗೆ ಪೂರಕವಾಗಲಿದೆ. ಸಹೋದರರಲ್ಲಿ ಅಥವಾ ಮನೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯ, ವಾದ-ವಿವಾದ, ಕಲಹಗಳು ಇಲ್ಲವಾಗುವುವು. **ಶುಭ ಸಂಖ್ಯೆ** 4, **ಬಣ್ಣ:** ಕೇಸರಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ವಿವಾಹ ಸಂಬಂಧ, ವರಾನ್ವೇಷಣೆಗೆ ತೊಡಗುವುದಕ್ಕೆ ಸೂಕ್ತವಾದ ದಿನ ಸುಲಭವಾಗಿ ಪ್ರಾಪ್ತಿಯಾಗುವುದು. ವ್ಯಾಪಾರ-ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ. **ಶುಭ ಸಂಖ್ಯೆ** :2, **ಬಣ್ಣ:** ನೀಲಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ನಿಮಗೆ ಒಳಿತಾಗುವ ನಿರ್ಧಾರ ತೆಗೆದುಕೊಳ್ಳುವಲ್ಲಿ ಯಾವುದೇ ರೀತಿಯ ಯೋಚನೆಗಳು ಬೇಡ. ವ್ಯವಹಾರದಲ್ಲಿನ ಲಾಭ ಅಭಿವೃದ್ಧಿಗೆ ಸಹಕಾರಿ ಆಗಲಿದೆ. ಮನೆಯಲ್ಲಿ ಸಮಾರಂಭ ನಡೆಸಲು ತಯಾರಿ ನಡೆಸಬಹುದು. **ಶುಭ ಸಂಖ್ಯೆ** :9, **ಬಣ್ಣ:** ಹಸಿರು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ನಿಮ್ಮ ವಾಕ್ಚಾತುರ್ಯಕ್ಕೆ ಸಾಮಾಜಿಕವಾಗಿ ಗೌರವ, ಪ್ರಶಂಸೆಗಳು ಸಿಗಲಿವೆ. ನೀವೆಂದು ಇನ್ನೊಬ್ಬರ ಅಧೀನದಿಂದ ಹೊರ ಬಂದು ಸ್ವತಂತ್ರ ಮನೋಭಾವದಿಂದ ಉಲ್ಲಾಸಭರಿತವಾಗಿ ಜೀವನ ನಡೆಸುವಂತಾಗಲಿದೆ. **ಶುಭ ಸಂಖ್ಯೆ** :7, **ಬಣ್ಣ:** ಪಾಚಿ ಹಸಿರು
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಸಾಂಸಾರಿಕ ಒತ್ತಡದಿಂದ ವೃತ್ತಿಪರವಾದ ಜವಾಬ್ದಾರಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನಿಮ್ಮ ಕ್ರಾಂತಿಕಾರಿ ಸ್ವಭಾವವು ಈ ದಿನ ಹೆಚ್ಚಿನ ಲಾಭವನ್ನು ತರಲಿದೆ. ಹೊಸ ವಾಹನ ಖರೀದಿಸುವ ಯೋಗ ಇರುವುದು. **ಶುಭ ಸಂಖ್ಯೆ** :1, **ಬಣ್ಣ:** ಕಂದು
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ರಜೆಯ ದಿನವಾದರೂ ಅನಿವಾರ್ಯ ಕಾರಣದಿಂದಾಗಿ ಕಾರ್ಯ ಪ್ರವೃತ್ತರಾಗಬೇಕಾಗುವುದು. **ಶುಭ ಸಂಖ್ಯೆ** : 5, **ಬಣ್ಣ:** ಬೂದು
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK ವೆಲ್ನೆಸ್ ಟಿಪ್ಸ್

ತಲೆಹೊಟ್ಟು ನಿವಾರಣೆಗೆ ಬೇವು

ಬೇವಿನ ಗಿಡದ ಎಲೆ, ತೊಗಟೆ, ಹೂವುಗಳಿಂದ ಅನೇಕ ಔಷಧೀಯ ಪ್ರಯೋಜನಗಳಿವೆ. ಮುಖ್ಯವಾಗಿ ಬೇವಿನೆಲೆಗಳನ್ನು ಕುದಿಸಿದ ನೀರಿನಿಂದ ತಲೆ ತೊಳೆದರೆ ಹೊಟ್ಟು, ತುರಿಕೆ ನಿವಾರಣೆಯಾಗುತ್ತದೆ. ಬೇವಿನೆಣ್ಣೆಯ ಬಳಕೆಯಿಂದ ಹೇನು ದೂರವಾಗುತ್ತದೆ.

- ಬೇವಿನೆಲೆಯ ಹೊಗೆಯಿಂದ ಕೀಟ, ಸೊಳ್ಳೆಗಳನ್ನು ಓಡಿಸಬಹುದು.
- ಕಾಳುಗಳ ಡಬ್ಬಿಯಲ್ಲಿ ಬೇವಿನೆಲೆ ಹಾಕುವುದರಿಂದ ಹುಳಗಳ ಕಾಟ ನಿಯಂತ್ರಿಸಬಹುದು.
- ಬೇವಿನ ತೊಗಟೆಯ ಭಸ್ಮದ ಲೇಪನವು ದೀರ್ಘಕಾಲದ ಗಾಯ ಮತ್ತು ಹುಣ್ಣನ್ನು ವಾಸಿಮಾಡುತ್ತದೆ.
- ಬೇವಿನೆಲೆಯ ರಸಕ್ಕೆ ಕಲ್ಲುಸಕ್ಕರೆ ಸೇರಿಸಿ ಸೇವಿಸಿದರೆ ಆರಂಭಿಕ ಕಾಮಾಲೆ ವಾಸಿಯಾಗುತ್ತದೆ.
- ಬೇವಿನೆಲೆಯ ಪೇಸ್ಟ್‌ಗೆ ಅರಿಶಿಣ ಬೆರೆಸಿ ಮುಖಕ್ಕೆ ಹಚ್ಚಿದರೆ ಕಲೆ ಹೋಗುತ್ತದೆ.
- ಬೇವಿನ ಎಲೆಯ ರಸ ಮತ್ತು ಜೇನುತುಪ್ಪದ ಮಿಶ್ರಣದಿಂದ ಬಾಯಿ ಮುಕ್ಕಳಿಸಿದರೆ ಗಂಟಲು ನೋವು ಕಡಿಮೆಯಾಗುತ್ತದೆ.
- ಬೇವಿನ ಹೂವನ್ನು ನೆನೆಸಿದ ನೀರನ್ನು ಕುಡಿಯುವುದರಿಂದ ದೇಹ ತಂಪಾಗಿರುತ್ತದೆ.
- ಬೇವಿನೆಲೆಯ ರಸಕ್ಕೆ ಇಂಗು ಸೇರಿಸಿ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಜಂತುಹುಳಗಳು ಸಾಯುತ್ತವೆ. ■



ವಿಜಯಬಂಧ - 7956



ಎಡದಿಂದ ಬಲಕ್ಕೆ

2 ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದ ಕುಸ್ತಿಪಟು 2
3 ಜಪದ ಸಮಯದಲ್ಲಿನ ಮಂತ್ರಪೂರ್ವಕವಾದ ಅಂಗಸ್ಪರ್ಶ 2
6 ಮೇಲು ಕೀಳು ಎಂಬ ಅಂತರವೇ ಇಲ್ಲ 3
8 ಮಗನ ಜೊತೆ ತಂಗಲು ಬಂದಿರುವ ಆನೆ 3
9 ನರಕಾಧಿಪತಿಯ ಮಗ ಧರ್ಮರಾಯ 5
13 ನವರತ್ನ ಹುಡುಕುವ ಕೆಲಸ ನಿರಂತರವಾಗಿ ನಡೆದಿದೆ 5
17 ಸಮತಲದಲ್ಲಿ ಅಗ್ರ ಸ್ಥಾನ ಪಡೆದದ್ದು ಸಂಪೂರ್ಣವಾದುದು 3
18 ಯಮುನ ಎಣಿಕೆಗೆ ಪೂರಕ ಕಾಲ 3
19 ಹಕ್ಕಬುಕ್ಕರು ನಿರ್ವಹಿಸಿದ ಅಧಿಕಾರ 2
20 ಹತ್ತಾನೆ ಅಗಲದ ಲಲಾಟ 2

ಮೇಲಿನಿಂದ ಕೆಳಕ್ಕೆ

1 ಮತ್ತು ಏರುವಂತೆ ನಡೆಸಿದ ಒಳಸಂಚು 4
2 ಮುಂದಿಗೆ ಇಷ್ಟವಾದ ವಿವಿಧ ರಂಗಗಳ ಸಾಧಕ 4
4 ಏರುಪೇರಿಲ್ಲದಂತೆ ಅನ್ವಯಿಸುವ ಹೊಂದಾಣಿಕೆ 4
5 ರಂಗನಾಥನ ಸ್ಥಳದಲ್ಲಿರುವ ನಾಟಕದ ವೇದಿಕೆ 4
7 ರಾಜಾಧೀನದಲ್ಲಿದ್ದು ಕಪ್ಪ ಕಾಣಿಕೆ ಒಪ್ಪಿಸುವ ಮಾಂಡಲಿಕ 3
10 ಆನನದ ಮೂಲಕ ಆಲಿಸಿದ ವಿಷಯ ಚಿತ್ತಕ್ಕೆ ನಾಟಿದೆ 3
11 ಈಶ್ವರನ ವಿನಾ ಮತ್ತಾವುದೂ ಶಾಶ್ವತವಲ್ಲ 3
12 ಅರಮನೆ ಬಳಿ ವಸತಿ ಹೂಡಲು ತೋರಿದ ಆತುರ 4
13 ಅನುಮಾನ ಬೇಡ ಗ್ರಹಗಳಿಂದಲೂ ಸಿಗಬಲ್ಲದು ದಯೆ 4
14 ಶ್ರಾವಣ ಮತ್ತು ಭಾದ್ರಪದ ಮಾಸಗಳ ಮಳೆಗಾಲದ ಅವಧಿ 3
15 ತಪ್ಪು ಮಾಡಿದವರ ಕೂಲಂಕಷ ವಿಚಾರಣೆ 4
16 ಅಪ್ಪನ ಜೊತೆ ಕಾದಾಡಿದ್ದಕ್ಕೆ ಸೋಲು ಸಿಕ್ಕಿತಷ್ಟೆ 4

ವಿಜಯಬಂಧ | 7955

ಎಡದಿಂದ ಬಲಕ್ಕೆ: 2.ಬಕ 3.ಅಜ 6.ಕರಾಳ 7.ನಟ್ಟುವ 8.ಸುಮಾ 10.ಧನ 11.ದನ 13.ನಯನ 14.ವಿಧಿ 15.ಗಡವ 16.ಕಾನನ 17.ದಾರ 18.ಧರಣಿ 19.ಯಶ 21.ಕರ್ಮ 22.ಕನೆ 24.ನಿರ್ಜೀವ 25.ನಕುಲ 26.ನಡು 27.ಕಂಪು.

ಮೇಲಿನಿಂದ ಕೆಳಕ್ಕೆ: 1.ಮಕರಂದ 2.ಬಳಸು 4.ಜನನ 5.ನವನಿಧಿ 9.ಮಾನವಧರ್ಮ 10.ಧನಕಾಣಿಕೆ 12.ನಗರ 14.ವಿನಯ 17.ದಾವಾನಿಲ 20.ಶತಾಲಯ 21.ಕವನ 23.ನೆನಪು.

ಅ.ನಾ. ಪ್ರಹ್ಲಾದರಾವ್

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಸೋಮವಾರ, 25 ಮೇ 2026
ಇಂದಿನ ತಾಪಮಾನ 22° ಕನಿಷ್ಠ 32° ಗರಿಷ್ಠ
X.com/vijaykarnataka facebook.com/vijaykarnataka www.vijaykarnataka.com

ಸ್ಯಾಂಕಿ ಕೆರೆ ರಕ್ಷಣೆಗೆ ಒತ್ತಾಯ »10

ರಾಜಧಾನಿಯಿಂದ 1 ಗಂಟೆಯಲ್ಲೇ ಪ್ರಯಾಣ ಸಾಧ್ಯ | ಪ್ರತಿನಿತ್ಯ 3 ಲಕ್ಷ ಪ್ರಯಾಣಿಕರ ಸಂಚಾರ ನಿರೀಕ್ಷೆ | ಸರಕಾರಕ್ಕೆ ಡಿಪಿಆರ್ ಸಲ್ಲಿಕೆ

ತುಮಕೂರಿಗೆ ಮೆಟ್ರೊ: ನಿಲ್ದಾಣ ಸಂಖ್ಯೆ ಕಡಿತ

■ **ವಿಕ ಸುದ್ದಿಲೋಕ** ಬೆಂಗಳೂರು

ತುಮಕೂರಿಗೆ ಮೆಟ್ರೊ ಸಂಪರ್ಕ ಕಲ್ಪಿಸುವ ಸಂಬಂಧ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್ ಸಿಎಲ್)ವು ವಿಸ್ತೃತ ಯೋಜನಾ ವರದಿ (ಡಿಪಿಆರ್)ಯನ್ನು ಸರಕಾರಕ್ಕೆ ಸಲ್ಲಿಸಿದೆ. ಈ ಮೊದಲು ಸಲ್ಲಿಸಿದ್ದ ಕಾರ್ಯ ಸಾಧ್ಯತಾ ವರದಿಯಲ್ಲಿನ 25 ನಿಲ್ದಾಣಗಳ ಬದಲಾಗಿ 16 ನಿಲ್ದಾಣಗಳನ್ನಷ್ಟೇ ಪ್ರಸ್ತಾಪಿಸಲಾಗಿದೆ.

ಕಾಮಗಾರಿ ನಿರ್ವಹಿಸಲು ಎರಡು ಮಾದರಿಯ ಸಾಧ್ಯತೆಯನ್ನು ಡಿಪಿಆರ್‌ನಲ್ಲಿ ವಿವರಿಸಲಾಗಿದೆ. ಬಿಎಂಆರ್‌ಸಿಎಲ್ ನೇರವಾಗಿ ಯೋಜನೆ ಅನುಷ್ಠಾನಕ್ಕೆ ಮುಂದಾದರೆ 18 ಸಾವಿರ ಕೋಟಿ ರೂ. ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಿದಲ್ಲಿ 20 ಸಾವಿರ ಕೋಟಿ ರೂ. ವೆಚ್ಚ ತಗಲಬಹುದು ಎಂದು ಅಂದಾಜಿಸಿದೆ.

ಮೆಟ್ರೊದ ಹಸಿರು ಕಾರಿಡಾರ್‌ನ ಕೊನೆಯ ನಿಲ್ದಾಣ ಮಾದಾವರ (ಬಿಐಇಸಿ)ದ ಮುಂದುವರಿದ ವಿಸ್ತರಣಾ ಮಾರ್ಗ ಇದಾಗಲಿದ್ದು, ನೆಲಮಂಗಲ, ದಾಬಸ್‌ಪೇಟೆ, ಕ್ಯಾತ್ಸಂದ್ರ ಮೂಲಕ ತುಮಕೂರನ್ನು ತಲುಪಲಿದೆ. ಇದರಿಂದ ಪ್ರಯಾಣಿಕರು ಸುಮಾರು ಒಂದು ಗಂಟೆಯಲ್ಲಿ ತುಮಕೂರು ತಲುಪಲು ಸಾಧ್ಯವಾಗಲಿದೆ. ಬೆಂಗಳೂರು- ತುಮಕೂರು ನಡುವೆ ಮೆಟ್ರೊ ಸಂಪರ್ಕ ಸಾಧ್ಯವಾದಲ್ಲಿ ರಾಜ್ಯದಲ್ಲಿ ಇದು ಮೊದಲ ಅಂತರ ಜಿಲ್ಲಾ ಸಂಪರ್ಕವೆಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಅಲ್ಲದೆ, ಈ ಯೋಜನೆ ಅನುಷ್ಠಾನದಿಂದ ಈ ಮಾರ್ಗದಲ್ಲಿ ಪ್ರತಿನಿತ್ಯ 3 ಲಕ್ಷಕ್ಕೂ ಅಧಿಕ ಮಂದಿ ಸಂಚರಿಸುವ ನಿರೀಕ್ಷೆಯಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೊದಲು ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸಿದ್ದಾಗ ಸುಮಾರು 25 ನಿಲ್ದಾಣಗಳನ್ನು ನಿರ್ಮಿಸುವ ಗುರಿಯಿತ್ತು. ಈಗ 16 ನಿಲ್ದಾಣಗಳ ನಿರ್ಮಾಣದ ಪ್ರಸ್ತಾವನೆ ಸಿದ್ಧವಾಗಿದೆ. ಕ್ಯಾತ್ಸಂದ್ರ ದಾಟಿದ ಬಳಿಕ ತುಮಕೂರು ಯುನಿವರ್ಸಿಟಿ, ಸಿದ್ಧಗಂಗಾ ಮೆಡಿಕಲ್ ಕಾಲೇಜು, ತುಮಕೂರು ಬಸ್ ನಿಲ್ದಾಣ ಹಾಗೂ ಸಿರಾ ಗೇಟ್ ಬಳಿ ಟರ್ಮಿನಲ್ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಿಗಮ ಅನುಷ್ಠಾನ ಮಾಡಿದರೆ 18 ಸಾವಿರ ಕೋಟಿ ರೂ, ಪಿಪಿಪಿ ಮಾದರಿಯಲ್ಲಿ 20 ಸಾವಿರ ಕೋಟಿ ರೂ. ವೆಚ್ಚ ಅಂದಾಜು

4-5 ಕಿ.ಮೀಗೆ ನಿಲ್ದಾಣ

ಆರ್‌ಆರ್‌ಟಿಎಸ್ ಚರ್ಚೆ

2025-26ರಲ್ಲಿ ಕೇಂದ್ರ ಸರಕಾರವು ಬೆಂಗಳೂರು-ಮೈಸೂರು, ತುಮಕೂರು- ಹೊಸೂರು ನಡುವೆ ಆರ್ ಆರ್‌ಟಿಎಸ್ (ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂ) ರ್‍ಯಾಪಿಡ್ ರೈಲು ಸಂಪರ್ಕದ ಪ್ರಸ್ತಾಪ ಮಾಡಿದೆ. ದಿಲ್ಲಿ- ಮೀರತ್ ನಡುವಿನ ನಮೋ ಭಾರತ್ ರ್‍ಯಾಪಿಡ್ ರೈಲಿನ ಮಾದರಿಯಲ್ಲಿ ದೇಶದಲ್ಲಿ ಗುರುತಿಸಲಾದ 2,900 ಕಿಮೀ ಆರ್‌ಆರ್‌ಟಿಎಸ್ ಮಾರ್ಗ ನಿರ್ಮಾಣದಲ್ಲಿ ಬೆಂಗಳೂರು-ತುಮಕೂರು ಮಾರ್ಗವೂ ಸೇರಿದೆ. ಈ ನಡುವೆ, ಸರಕಾರ ಎರಡೂ ಜಿಲ್ಲೆಗಳ ನಡುವೆ ಮೆಟ್ರೊ ಸಂಪರ್ಕಕ್ಕೆ ಮುಂದಾಗಿರುವಾಗ ಇದು ಸೂಕ್ತವೇ? ಅಥವಾ ರ್‍ಯಾಪಿಡ್ ರೈಲು ವ್ಯವಸ್ಥೆ ಅನುಷ್ಠಾನಗೊಳ್ಳಬೇಕೇ ಎಂಬ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ.

ನಗರಾಭಿವೃದ್ಧಿ ಇಲಾಖೆಯ ಉನ್ನತಾಧಿಕಾರಿಗಳು ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಲಿದ್ದಾರೆ. ಅಗತ್ಯವಿಲ್ಲದ ಇನ್ನೂ ಕೆಲ ನಿಲ್ದಾಣಗಳನ್ನು ಕೈಬಿಟ್ಟಲ್ಲಿ ಪ್ರಯಾಣದ ಸಮಯ ತಗ್ಗುವ ಸಾಧ್ಯತೆ ಬಗ್ಗೆ ಅವರು ನಿರ್ದೇಶನ ನೀಡಿದಲ್ಲಿ ಪರಿಗಣಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ''ಬೆಂಗಳೂರು - ತುಮಕೂರು ನಡುವೆ ತುರ್ತು ಸಂಪರ್ಕ ಸಾಧ್ಯವಾಗಿಸುವ ಇತರೆ ಸಾರಿಗೆ ವ್ಯವಸ್ಥೆ ಬಗ್ಗೆ ಚರ್ಚೆ ನಡೆದಿದೆ. ಆದರೆ, ಈ ಮಾರ್ಗದಲ್ಲಿ 4-5 ಕಿಮೀಗೆ ಒಂದರಂತೆ ಮೆಟ್ರೊ ನಿಲ್ದಾಣ ರೂಪಿಸಿದಲ್ಲಿ ರೈಲಿನ ವೇಗ ಹೆಚ್ಚಿರಲಿದ್ದು, ಎರಡು ನಗರಗಳ ನಡುವೆ ಕ್ರಮಿಸುವ ಅವಧಿ ತಗ್ಗಲಿದೆ. ವಸತಿ ಹಾಗೂ ಕೈಗಾರಿಕಾ ಪ್ರದೇಶಗಳಿಂದ ಈ ಮಾರ್ಗ ಹಾದು ಹೋಗುವುದರಿಂದ ಹೆಚ್ಚು ಅನುಕೂಲವಾಗಲಿದ್ದು, ನಿತ್ಯ 3 ಲಕ್ಷ ಮಂದಿ ಓಡಾಡುವ ನಿರೀಕ್ಷೆಯಿದೆ,'' ಎಂದು ಅವರು ಅಭಿಪ್ರಾಯಪಟ್ಟರು.

ಮೆಟ್ರೊದಲ್ಲಿ ಮತ್ತೆ ಹೊರಗುತ್ತಿಗೆ ಸದ್ದು

ಸಂಚಾರ ನಿರ್ವಹಣೆ ಜತೆಗೆ ನಿಲ್ದಾಣ ಕಾರ್ಯಾಚರಣೆ ಹೊಣೆಯೂ ಖಾಸಗಿ ಸಂಸ್ಥೆಗೆ?

■ **ಮಯೂರ್ ಹೆಗಡೆ** ಬೆಂಗಳೂರು
mayur.hegde@timesofindia.com

ನಮ್ಮ ಮೆಟ್ರೊದ ನೀಲಿಮಾರ್ಗದಲ್ಲಿ ರೈಲುಗಳ ಕಾರ್ಯಾಚರಣೆ, ನಿರ್ವಹಣೆಯನ್ನು ಸಂಪೂರ್ಣವಾಗಿ ಹೊರಗುತ್ತಿಗೆ ನೀಡಲು ಬೆಂಗಳೂರು ಮೆಟ್ರೊ ರೈಲು ನಿಗಮವು ಯೋಜಿಸಿದೆ ಎನ್ನಲಾಗಿದ್ದು, ಸುರಕ್ಷತೆ ದೃಷ್ಟಿಯಿಂದ ಇದು ಅಪಾಯಕಾರಿ ನಡೆಯೆಂಬ ಆಕ್ಷೇಪ ವ್ಯಕ್ತವಾಗಿದೆ.

ಹೊರವರ್ತುಲ ರಸ್ತೆ ಸಂಪರ್ಕಿಸುವ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರ (2 ಎ) ಮಾರ್ಗವನ್ನು ಡಿಸೆಂಬರ್‌ಗೆ ಮುಕ್ತಗೊಳಿಸಲು ಬಿಎಂಆರ್‌ಸಿಎಲ್ ತೀರ್ಮಾನಿಸಿದೆ. ಬಳಿಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗವನ್ನು (2 'ಬಿ') 2027ರಲ್ಲಿ ಮುಕ್ತಗೊಳಿಸಲು ನಿಗಮ ಉದ್ದೇಶಿಸಿದೆ. ಈ ಮಾರ್ಗಕ್ಕಾಗಿ ಬಿಇಎಂಎಲ್ ಜೂನ್‌ಗೆ ಪ್ರೋಟೊಟೈಪ್ ಸೇರಿ ಎರಡು ರೈಲುಗಳನ್ನು ಪೂರೈಸಲಿದೆ ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಪೂರ್ಣ ಹೊರಗುತ್ತಿಗೆ: ಚಾಲನಾ ಹೊರಗುತ್ತಿಗೆ ನೀಡುವುದು ಹೊಸದಲ್ಲ. ಈಗಾಗಲೇ ಆರಂಭವಾಗಿರುವ ಹಳದಿ ಮಾರ್ಗ ಹಾಗೂ ಮುಂದಿನ ಎರಡು ತಿಂಗಳಲ್ಲಿ ಸಂಚಾರಕ್ಕೆ ಮುಕ್ತವಾಗಲಿರುವ ಗುಲಾಬಿ ಮಾರ್ಗದಲ್ಲಿ ಹೊರಗುತ್ತಿಗೆ ನೀಡಲಾಗಿದ್ದು, ಈಗಾಗಲೇ ಖಾಸಗಿ ಸಿಬ್ಬಂದಿಗೆ ಬಿಎಂಆರ್‌ಸಿಎಲ್ ತರಬೇತಿ ನೀಡುತ್ತಿದೆ. ರೈಲುಗಳ ಸಂಚಾರ, ನಿರ್ವಹಣೆಗೆ ಮಾತ್ರ ಇದು ಸೀಮಿತವಾಗಿದ್ದು, ನಿಲ್ದಾಣ ಕಾರ್ಯಾಚರಣೆ ಬಿಎಂಆರ್ ಸಿಎಲ್ ಕಾಯಂ ಸಿಬ್ಬಂದಿಯಿಂದ ನಡೆಯುತ್ತಿದೆ. ಆದರೆ, ನೀಲಿ ಮಾರ್ಗದಲ್ಲಿ ನಿಲ್ದಾಣ ವ್ಯವಸ್ಥಾಪನೆಯಿಂದ ರೈಲುಗಳ ಚಾಲನೆವರೆಗೆ ಸಂಪೂರ್ಣ ಕಾರ್ಯಾಚರಣೆಯನ್ನು ಖಾಸಗಿಗೆ ವಹಿಸಲು ಮುಂದಾಗಿದ್ದು, ಟೆಂಡರ್ ಕರೆಯುವ ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಆಕ್ಷೇಪ ಯಾಕೆ?: ಹಳದಿ, ಗುಲಾಬಿ ಮಾರ್ಗದ ಮೆಟ್ರೊಗೆ ಹೊರಗುತ್ತಿಗೆ ನೀಡಿದಾಗಲೂ ನೌಕರರ ಸಂಘ ಆಕ್ಷೇಪಿಸಿತ್ತು. ಈಗ ನೀಲಿ ಮಾರ್ಗದಲ್ಲಿ ಪೂರ್ಣ ಪ್ರಮಾಣದ ಹೊಣೆಗಾರಿಕೆಯಿಂದ ಬಿಎಂಆರ್‌ಸಿಎಲ್ ನುಣುಚಿಕೊಳ್ಳುತ್ತಿದೆ ಎಂದು ಆರೋಪಿಸಿದೆ. ''ಮೆಟ್ರೊ ನೌಕರರು ಉತ್ತಮ ತಾಂತ್ರಿಕ ಜ್ಞಾನ ಹೊಂದಿದ್ದಾರೆ. ಬಿಎಂಆರ್‌ಸಿಎಲ್ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾಗಿರುವುದರಿಂದ ಹೆಚ್ಚಿನ ಸುರಕ್ಷತೆ, ಭದ್ರತೆ, ಸಮಯ ಪಾಲನೆ ಮತ್ತು ಕೆಲಸದ ಗುಣಮಟ್ಟದ ಅಗತ್ಯವಿದೆ. ಈ ಶಿಸ್ತು ಕಾಪಾಡಿಕೊಳ್ಳಲು ಕಾಯಂ ಸಿಬ್ಬಂದಿಯಿಂದ ಮಾತ್ರ ಇದು ಸಾಧ್ಯ,'' ಎಂಬುದು ನೌಕರರ ಸಂಘದ ಅಭಿಪ್ರಾಯ.

''ಖಾಸಗಿ ಮೆಟ್ರೊ ನಿರ್ವಾಹಕರು ನಗರದ ಬಸ್, ರೈಲುಗಳು ಅಥವಾ ಉಪನಗರ ನೆಟ್‌ವರ್ಕ್‌ಗಳೊಂದಿಗೆ ಸುಗಮ ಸಮನ್ವಯಕ್ಕೆ ಆದ್ಯತೆ ನೀಡದಿರಬಹುದು. ಹೊರಗುತ್ತಿಗೆ ಪಡೆದ ರೈಲು ಚಾಲಕರು ಮತ್ತು ಭದ್ರತಾ ಸಿಬ್ಬಂದಿ ಸೂಕ್ತ ತರಬೇತಿ ಪಡೆಯದೆ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಸಾಧ್ಯತೆಯಿದೆ. ಇದು ಸುರಕ್ಷತೆಯ ಆತಂಕ ಹೆಚ್ಚಿಸುತ್ತದೆ. ಕಟ್ಟುನಿಟ್ಟಾದ ಉಸ್ತುವಾರಿ ಇಲ್ಲದೆ ಹೊರಗುತ್ತಿಗೆ ನೀಡಿದಲ್ಲಿ ತಾಂತ್ರಿಕ ಉಪಕರಣಗಳ ವೈಫಲ್ಯ ಅಥವಾ ಅಪಘಾತದಂತಹ ಅಪಾಯ ಉಂಟು ಮಾಡಬಹುದು,'' ಎಂದು ಸಂಘದ ಪ್ರತಿನಿಧಿಗಳು ಅನುಮಾನ ವ್ಯಕ್ತಪಡಿಸಿದ್ದಾರೆ.

ರೈಲು ಚಾಲನೆ, ನಿರ್ವಹಣೆಯ ಹೊರಗುತ್ತಿಗೆ ಪದ್ಧತಿಯನ್ನು ಬಿಎಂಆರ್‌ಸಿಲ್ ರದ್ದುಪಡಿಸಬೇಕು. ಶೈಕ್ಷಣಿಕವಾಗಿ, ಅನುಭವವಿಲ್ಲದ ಅನರ್ಹರಿಗೆ ಲೋಕೊಪೈಲಟ್ ಸೇರಿ ಇತರೆ ಮಹತ್ತರ ಹೊಣೆ ದೊರೆತು, ಮುಂದಾಗುವ ಅನಾಹುತಗಳಿಗೆ ಯಾರು ಹೊಣೆ ?
- ಸೂರ್ಯ ನಾರಾಯಣಮೂರ್ತಿ
ಬಿಎಂಆರ್‌ಸಿಎಲ್ ನೌಕರರ ಸಂಘದ ಉಪಾಧ್ಯಕ್ಷ

ಹೊಣೆಗಾರಿಕೆ ಇರದು

ಒಂದು ವೇಳೆ ದುರ್ಘಟನೆ ನಡೆದಲ್ಲಿ ಯಾರು ಹೊಣೆ ? ಮಾರ್ಗದಲ್ಲಿ ತಾಂತ್ರಿಕ ಸಮಸ್ಯೆ ಎಂದು ಗುತ್ತಿಗೆದಾರರು, ಚಾಲಕರ ನಿರ್ಲಕ್ಷ್ಯ ಎಂದು ನಿಗಮ ಪರಸ್ಪರ ದೂರಿಕೊಳ್ಳಲು ಇದು ದಾರಿಯಾಗಬಹುದು ಎಂದು ನೌಕರರ ಸಂಘ ಆಕ್ಷೇಪಿಸಿದೆ. ಜತೆಗೆ, ರೈಲು ಕಾರ್ಯಾಚರಣೆ ಹೊಣೆ ನೀಡಲಾದ ಹೊರಗುತ್ತಿಗೆಯನ್ನು ಉತ್ತರ ಭಾರತೀಯ ಗುತ್ತಿಗೆದಾರರೊಬ್ಬರು ಪಡೆದಿದ್ದಾರೆ. ಇದರಿಂದ ಸ್ಥಳೀಯರಿಗೆ ಉದ್ಯೋಗ ತಪ್ಪುತ್ತಿದೆ. ಈಗಾಗಲೇ ಮೆಟ್ರೊದಲ್ಲಿ ಕನ್ನಡದ ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಸಂಘದ ಪ್ರತಿನಿಧಿಗಳು ಆಕ್ಷೇಪಿಸಿದ್ದಾರೆ. ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಬಿಎಂಆರ್‌ಸಿಎಲ್ ಎಂಡಿ ಅವರನ್ನು ಸಂಪರ್ಕಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಬಕ್ರೀದ್, ಪೊಲೀಸರ ಶಾಂತಿ ಸಭೆ

ಬೆಂಗಳೂರು: ಬಕ್ರೀದ್ ಹಿನ್ನೆಲೆಯಲ್ಲಿ ಈಶಾನ್ಯ ವಿಭಾಗದ ಠಾಣೆಗಳ ವ್ಯಾಪ್ತಿಯ ಪೊಲೀಸರು ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಭಾನುವಾರ ಶಾಂತಿ ಸಭೆ ನಡೆಸಿದರು. ಶಾಂತಿಯುತವಾಗಿ ಮತ್ತು ಸೌಹಾರ್ದಯುತವಾಗಿ ಬಕ್ರೀದ್ ಹಬ್ಬ ಆಚರಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಾರದು, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಸಂದೇಶದ ಪೋಸ್ಟ್‌ಗಳನ್ನು ಹಾಕಬಾರದು, ಕೋಮು ಪ್ರಚೋದನೆಯ ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಸೂಚನೆ ನೀಡಿದರು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಅಥವಾ ಪ್ರಚೋದನಕಾರಿ ಸಂದೇಶಗಳನ್ನು ಹಂಚಿಕೊಳ್ಳಬಾರದು. ಅನುಮಾನಾಸ್ಪದ ಚಟುವಟಿಕೆಗಳು ಕಂಡು ಬಂದಲ್ಲಿ ತಕ್ಷಣವೇ ಠಾಣೆಗೆ ಮಾಹಿತಿ ನೀಡಬೇಕು. ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಎಲ್ಲರೂ ಸಹಕರಿಸಬೇಕು. ಕೋಮು ಸಾಮರಸ್ಯ ಕಾಪಾಡಬೇಕು ಎಂದು ಅಧಿಕಾರಿಗಳು ತಿಳಿಸಿದರು. ಯಲಹಂಕ ನ್ಯೂಟೌನ್, ಕೊತ್ತನೂರು, ವಿದ್ಯಾರಣ್ಯಪುರ, ಕೊಡಿಗೇಹಳ್ಳಿ, ಅಮೃತಹಳ್ಳಿ, ಚಿಕ್ಕಜಾಲ ಹಾಗೂ ಯಲಹಂಕ ಪೊಲೀಸ್ ಠಾಣೆಗಳಲ್ಲಿ ನಡೆದ ಶಾಂತಿ ಸಭೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ಧಾರ್ಮಿಕ ಮುಖಂಡರು, ಸಮುದಾಯದ ಗಣ್ಯರು, ಸ್ಥಳೀಯ ನಿವಾಸಿಗಳು, ಧಾರ್ಮಿಕ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು.

ಕೋಮು ಸಾಮರಸ್ಯ ಕಾಪಾಡಲು ಸಲಹೆ

ಬೆಂಗಳೂರು ದಕ್ಷಿಣ ಪಾಲಿಕೆ ವತಿಯಿಂದ ಶ್ವಾನ ದತ್ತು ಕಾರ್ಯಕ್ರಮ ಭಾನುವಾರ ನಡೆಯಿತು. ಅನಾಥವಾಗಿದ್ದ 10 ನಾಯಿ ಮರಿ ಹಾಗೂ ಬೆಕ್ಕನ್ನು ಸಾರ್ವಜನಿಕರು ದತ್ತು ಪಡೆದರು.

ತಿಂಗಳಾಂತ್ಯದೊಳಗೆ ರೈಲ್ವೆ ವೆಂಟ್ ಕಾಮಗಾರಿ ಪೂರ್ಣಕ್ಕೆ ಸೂಚನೆ

ಬೆಂಗಳೂರು: ನಗರದ ಗೆದ್ದಲಹಳ್ಳಿಯ ಸಾಯಿ ಲೇಔಟ್‌ನಲ್ಲಿ ಕೈಗೊಂಡಿರುವ ರೈಲ್ವೆ ವೆಂಟ್‌ನ ಬಾಕಿ 12 ಮೀಟರ್ ಬಾಕ್ಸ್ ಪುಶಿಂಗ್ ಕಾಮಗಾರಿಯನ್ನು ಈ ತಿಂಗಳಾಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು. ರೈಲ್ವೆ ವೆಂಟ್ ಕಾಮಗಾರಿ ಹಾಗೂ ರಾಜಕಾಲುವೆಗಳ ನಿರ್ವಹಣೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ''ರೈಲ್ವೆ ವೆಂಟ್ ಕಾಮಗಾರಿಯನ್ನು ಮೇ 31ರೊಳಗೆ ಪೂರ್ಣಗೊಳಿಸಬೇಕು ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. ಆ ಮೂಲಕ ಸುತ್ತಮುತ್ತಲ ಪ್ರದೇಶಗಳಲ್ಲಿ ಉಂಟಾಗುತ್ತಿದ್ದ ಪ್ರವಾಹ ಪರಿಸ್ಥಿತಿ ಸಮಸ್ಯೆಯನ್ನು ನಿವಾರಿಸಬೇಕು,'' ಎಂದು ಹೇಳಿದರು. ಗೆದ್ದಲಹಳ್ಳಿ ಬಳಿಯ ರಾಜಕಾಲುವೆಗಳಲ್ಲಿ ಕೈಗೊಂಡಿರುವ ಹೂಳು ತೆರವು ಕಾಮಗಾರಿಯನ್ನು ಪರಿಶೀಲಿಸಿದ ಅವರು, ''ಮಳೆ ಬಂದಾಗ ನೀರು ನಿಲ್ಲುವುದನ್ನು ತಪ್ಪಿಸಲು ಪ್ರಮುಖ ರಸ್ತೆಗಳ ಎರಡೂ ಬದಿಗಳಿಂದ ರಾಜಕಾಲುವೆಗೆ ಸಂಪರ್ಕ ಕಲ್ಪಿಸುವ ಚರಂಡಿಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಬೇಕು,'' ಎಂದು ತಿಳಿಸಿದರು. ''ಮಳೆಗಾಲದ ಹಿನ್ನೆಲೆಯಲ್ಲಿ ಕಾಲುವೆಗಳಲ್ಲಿ ಹೂಳು ತೆರವು, ಸ್ವಚ್ಛತೆ ಮತ್ತು ನಿರ್ವಹಣೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು. ಪ್ರವಾಹ ಸಾಧ್ಯತೆ ಇರುವ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಕಾಲುವೆಗಳಲ್ಲಿರುವ ಹೂಳು, ತ್ಯಾಜ್ಯ, ಅನುಪಯುಕ್ತ ಕಳೆ ತೆಗೆದು, ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು,'' ಎಂದು ಸೂಚನೆ ನೀಡಿದರು.

ಕಾಲುವೆ ಹೂಳು ತೆರವಿಗೆ ತಾಕೀತು

ಬ್ಯಾಂಕ್ ಮ್ಯಾನೇಜರ್ ಸಮಯ ಪ್ರಜ್ಞೆಯಿಂದ ಪ್ರಕರಣ ಬಯಲು | ಖಾಕಿ ಖೆಡ್ಡಾಕ್ಕೆ ಬಿದ್ದ ವಂಚಕರು

ಡಿಜಿಟಲ್ ಅರೆಸ್ಟ್: ವೃದ್ಧೆ ಬೆದರಿಸಿ 24 ಕೋಟಿ ರೂ. ಲೂಟಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸೈಬರ್ ವಂಚಕರು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವೃದ್ಧೆಯನ್ನು ಬೆದರಿಸಿ ಬರೋಬ್ಬರಿ 24 ಕೋಟಿ ರೂ. ಲೂಟಿ ಮಾಡಿದ್ದು, ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದ ಈ ಅತಿ ದೊಡ್ಡ ಡಿಜಿಟಲ್ ಅರೆಸ್ಟ್ ಪ್ರಕರಣ ಭೇದಿಸುವಲ್ಲಿ ರಾಜಧಾನಿಯ ಪೊಲೀಸರು ಯಶಸ್ವಿಯಾಗಿದ್ದಾರೆ.

ಬ್ಯಾಂಕ್ ವ್ಯವಸ್ಥಾಪಕರ ಸಮಯ ಪ್ರಜ್ಞೆಯಿಂದಾಗಿ ಸಂತ್ರಸ್ತ ವೃದ್ಧೆಯು ಮತ್ತಷ್ಟು ಹಣ ಕಳೆದುಕೊಳ್ಳುವುದು ತಪ್ಪಿದ್ದು, ಸೈಬರ್ ಖದೀಮರು ಖಾಕಿ ಖೆಡ್ಡಾಕ್ಕೆ ಬಿದ್ದಿದ್ದಾರೆ. ಪ್ರಕರಣ ಸಂಬಂಧ ಹೊಸದಿಲ್ಲಿ, ಮುಂಬಯಿ ಹಾಗೂ ಅಲಹಾಬಾದ್ ಮೂಲದ ಶಿವಜ್ಞಾನಮ್, ಅಕ್ಕಟ್ ಮಲ್ಲಿಕ್, ಪಾಲಕ್ ಭಾಯ್ ಪಟೇಲ್, ಅಮಿತ್ ನರೇಂದ್ರ ಪಟೇಲ್, ಗೌರವ್‌ಕುಮಾರ್ ಮತ್ತು ಓಂಪ್ರಕಾಶ್ ರಜಪೂತ್ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಶಿವಾಜಿನಗರ ನಿವಾಸಿಯಾದ ಲಕ್ಷ್ಮೀ ಎಂಬ ವೃದ್ಧೆ ಇತ್ತೀಚೆಗೆ ತಮ್ಮ ಆಸ್ತಿ ಮಾರಾಟದಿಂದ ಗಳಿಸಿದ್ದ ಕೋಟ್ಯಂತರ ರೂ. ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದರು. ಲಕ್ಷ್ಮೀ ಅವರ ಬ್ಯಾಂಕ್ ವಹಿವಾಟಿನ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದ ಸೈಬರ್ ವಂಚಕರು ಕೇಂದ್ರ ತನಿಖಾ ಸಂಸ್ಥೆ ಅಧಿಕಾರಿಗಳ ಸೋಗಿನಲ್ಲಿ ಅವರನ್ನು ಸಂಪರ್ಕಿಸಿದ್ದರು. ತಮ್ಮ ಖಾತೆಯಿಂದ ಹಣದ ಅಕ್ರಮ ವರ್ಗಾವಣೆಯಾಗಿದೆ. ಈ ಸಂಬಂಧ ವಿಚಾರಣೆ ನಡೆಸಲು ತಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಲಾಗಿದೆ ಎಂದು ಹೆದರಿಸಿದ್ದರು.

ತಮ್ಮನ್ನು ಬಂಧಿಸದಿರಲು ಹಾಗೂ ತಮ್ಮ ವಿರುದ್ಧ ಪ್ರಕರಣ ದಾಖಲಿಸದಿರಲು ಹಣ ಕೊಡಬೇಕೆಂದು ಆರೋಪಿಗಳು ಲಕ್ಷ್ಮೀ ಅವರಿಗೆ ಬೇಡಿಕೆ ಇಟ್ಟಿದ್ದರು. ಕಾನೂನು ಕ್ರಮಕ್ಕೆ ಹೆದರಿದ ಲಕ್ಷ್ಮೀ ಅವರು ಜನವರಿಯಿಂದ ಮೇ ತಿಂಗಳವರೆಗೆ ಆರೋಪಿಗಳು ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ಹಂತ-ಹಂತವಾಗಿ 24 ಕೋಟಿ ರೂ. ವರ್ಗಾಯಿಸಿದ್ದರು ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಂಕ್ ವ್ಯವಸ್ಥಾಪಕರ ಸಮಯಪ್ರಜ್ಞೆ: ಕೋಟಿಗಟ್ಟಲೇ ಹಣ ಪಡೆದ ನಂತರವೂ ಆರೋಪಿಗಳು ಲಕ್ಷ್ಮೀ ಅವರಿಗೆ ಬೆದರಿಕೆ ಹಾಕುವುದನ್ನು ಮುಂದುವರಿಸಿದ್ದರು. ಆರೋಪಿಗಳು ಮತ್ತಷ್ಟು ಹಣಕ್ಕಾಗಿ ಬೇಡಿಕೆ ಇಟ್ಟಾಗ ಲಕ್ಷ್ಮೀ ಅವರು ಮನೆಯಲ್ಲಿದ್ದ 1 ಕೆ.ಜಿ 300 ಗ್ರಾಂ ಚಿನ್ನಾಭರಣ ಅಡವಿಟ್ಟು ಸಾಲ ಪಡೆಯಲು ಬ್ಯಾಂಕ್‌ಗೆ ಹೋಗಿದ್ದರು. ಅವರ ಖಾತೆಯಿಂದ ಪದೇ ಪದೆ ದೊಡ್ಡ ಮೊತ್ತದ ಹಣ ವರ್ಗಾವಣೆ ಆಗಿರುವುದನ್ನು ಗಮನಿಸಿದ ಬ್ಯಾಂಕ್ ವ್ಯವಸ್ಥಾಪಕರು, ಸಾಲದ ಔಚಿತ್ಯದ ಬಗ್ಗೆ ಪ್ರಶ್ನೆ ಮಾಡಿದ್ದರು. ಇದಕ್ಕೆ ಲಕ್ಷ್ಮೀ ಅವರು ಸರಿಯಾಗಿ ಉತ್ತರಿಸಿಲ್ಲ.

ಲಕ್ಷ್ಮೀ ಅವರ ವರ್ತನೆ ಬಗ್ಗೆ ಅನುಮಾನಗೊಂಡ ಬ್ಯಾಂಕ್ ವ್ಯವಸ್ಥಾಪಕರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಕೂಡಲೇ ಬ್ಯಾಂಕ್‌ಗೆ ಧಾವಿಸಿದ ಸಿಸಿಬಿ ಪೊಲೀಸರು ಲಕ್ಷ್ಮೀ ಅವರ ವಿಚಾರಣೆ ನಡೆಸಿದ್ದರು. ಆರಂಭದಲ್ಲಿ ತೀವ್ರ ಭಯದಿಂದ ಏನನ್ನೂ ಹೇಳದ ಲಕ್ಷ್ಮೀ ಅವರಿಗೆ ಪೊಲೀಸರು ಧೈರ್ಯ ತುಂಬಿದಾಗ ಡಿಜಿಟಲ್ ಅರೆಸ್ಟ್‌ನ ಅಸಲಿ ಸತ್ಯ ಬಯಲಾಗಿದೆ. ಕೂಡಲೇ ಸಂತ್ರಸ್ತೆಯಿಂದ ದೂರು ಪಡೆದ ಪೊಲೀಸರು, ಆರೋಪಿಗಳ ಬೆನ್ನುಬಿದ್ದು ಬಂಧಿಸಿದ್ದಾರೆ.

ವಂಚಕರು ಸುಲಿಗೆ ಮಾಡಿದ್ದ ಹಣವನ್ನು 22 ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದು, ಸಿಬ್ಬಂದಿ ಸದ್ಯ 60 ಲಕ್ಷ ರೂ. ಹಣವಿದ್ದ ಖಾತೆಯನ್ನು ಸ್ಥಗಿತಗೊಳಿಸಿದ್ದಾರೆ. ಉಳಿದ ಹಣ ಜಪ್ತಿಗಾಗಿ ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶಿವಜ್ಞಾನಮ್

ಅಕ್ಕಟ್ ಮಲ್ಲಿಕ್

ಪಾಲಕ್ ಭಾಯ್

ಅಮಿತ್ ನರೇಂದ್ರ



ಓಂಪ್ರಕಾಶ್

ಗೌರವ್‌ಕುಮಾರ್

ಡಿಜಿಟಲ್ ಅರೆಸ್ಟ್ ಎಚ್ಚರವಿರಲಿ

- ಸರಕಾರದ ಯಾವುದೇ ತನಿಖಾ ಸಂಸ್ಥೆಯ ಅಧಿಕಾರಿಗಳು ವಾಟ್ಸ್ಯಾಪ್, ವಿಡಿಯೊ ಕರೆ ಮೂಲಕ ತನಿಖೆ ನಡೆಸುವುದಿಲ್ಲ.
- ಸಾರ್ವಜನಿಕರು ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು.
- ವೈಯಕ್ತಿಕ ದಾಖಲೆಗಳು, ಸೂಕ್ಷ್ಮ ಮಾಹಿತಿಯನ್ನು ಸಾಮಾಜಿಕ ಜಾಲತಾಣ ಅಥವಾ ಯಾವುದೇ ಆನ್‌ಲೈನ್ ವೇದಿಕೆಯಲ್ಲಿ ಹಂಚಿಕೊಳ್ಳಬಾರದು.
- ಹಣ ವರ್ಗಾವಣೆ ಮಾಡಬಾರದು. ತನಿಖಾ ಸಂಸ್ಥೆಗಳು ಪ್ರಕರಣ ಕೈಬಿಡಲು ಹಣಕ್ಕಾಗಿ ಬೇಡಿಕೆ ಇಡುವುದಿಲ್ಲ.
- ಅನುಮಾನಾಸ್ಪದ ಕರೆಗಳ ಕುರಿತು ಎಚ್ಚರವಿರಬೇಕು.
- ಅನುಮಾನಾಸ್ಪದ ಕರೆ ಸ್ವೀಕರಿಸಿದರೆ ರಾಷ್ಟ್ರೀಯ ಸೈಬರ್ ಕ್ರೈಂ ರಿಪೋರ್ಟ್ ಪೋರ್ಟಲ್ ಅಥವಾ 1930 ಸಹಾಯವಾಣಿಗೆ ಮಾಹಿತಿ ನೀಡಬೇಕು.

ಕಾನ್‌ಸ್ಟೆಬಲ್ ಪೊಲೀಸ್ ವಶಕ್ಕೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ಪತ್ನಿ ಆತ್ಮಹತ್ಯೆ ಪ್ರಕರಣ ಸಂಬಂಧ ಕೆ. ಆರ್.ಪುರ ಠಾಣೆ ಪೊಲೀಸರು ಮೃತರ ಪತಿ ಕಾನ್‌ಸ್ಟೆಬಲ್ ರಾಜೇಶ್ ಆರಾಧ್ಯ ಅವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ರಾಜೇಶ್ ಆರಾಧ್ಯ ಅವರು ಎಚ್ ಎಎಲ್ ಪೊಲೀಸ್ ಠಾಣೆಯಲ್ಲಿ ಕಾನ್ ಸ್ಟೆಬಲ್ ಆಗಿದ್ದು, ಅವರ ಪತ್ನಿ ಲಕ್ಷ್ಮೀಪ್ರಿಯಾ (27) ಕೆ.ಆರ್.ಪುರ ಪೊಲೀಸ್ ವಸತಿ ಸಮುಚ್ಚಯದಲ್ಲಿ ಶುಕ್ರವಾರ (ಮೇ 22) ಆತ್ಮಹತ್ಯೆ ಮಾಡಿಕೊಂಡಿದ್ದರು. ಇದರ ಬೆನ್ನಲ್ಲೇ ಲಕ್ಷ್ಮೀಪ್ರಿಯಾ ಪೋಷಕರು, ಮಗಳ ಸಾವಿಗೆ ಅಳಿಯ ರಾಜೇಶ್ ಆರಾಧ್ಯ ಮತ್ತು ಅವರ ಕುಟುಂಬ ಸದಸ್ಯರ ದೈಹಿಕ, ಮಾನಸಿಕ ಹಾಗೂ ವರದಕ್ಷಿಣೆ ಕಿರುಕುಳವೇ ಕಾರಣ ಎಂದು ಕೆ.ಆರ್.ಪುರ ಠಾಣೆಗೆ ದೂರು ಕೊಟ್ಟಿದ್ದರು.

ಈ ದೂರು ಆಧರಿಸಿ ವರದಕ್ಷಿಣೆ ಸಾವು, ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ರಾಜೇಶ್‌ರನ್ನು ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ತೆಗೆದುಕೊಂಡಿದ್ದಾರೆ. ಲಕ್ಷ್ಮೀಪ್ರಿಯಾ ಆತ್ಮಹತ್ಯೆಗೂ ಮುನ್ನ ತಮ್ಮ ಮೊಬೈಲ್‌ನ ಪಾಸ್‌ವರ್ಡ್ ವಿವರವನ್ನು ಸಹೋದರಿಗೆ ವಾಟ್ಸ್ಯಾಪ್‌ನಲ್ಲಿ ಕಳುಹಿಸಿದ್ದರು. ಇದರಿಂದ ಅನುಮಾನಗೊಂಡ ಸಹೋದರ, ಲಕ್ಷ್ಮೀಪ್ರಿಯಾಗೆ ಕರೆ ಮಾಡಿದ್ದರು. ಆದರೆ, ಲಕ್ಷ್ಮೀಪ್ರಿಯಾ ಕರೆ ಸ್ವೀಕರಿಸಿರಲಿಲ್ಲ, ಬಳಿಕ ಲಕ್ಷ್ಮೀಪ್ರಿಯಾ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಗೊತ್ತಾಗಿತ್ತು.

ಮಂಡ್ಯ ಜಿಲ್ಲೆ ಮಳವಳ್ಳಿಯ ಲಕ್ಷ್ಮೀಪ್ರಿಯಾ ಹಾಗೂ ಮೈಸೂರಿನ ರಾಜೇಶ್ 2023ರಲ್ಲಿ ವಿವಾಹವಾಗಿದ್ದರು. ದಂಪತಿಗೆ 8 ತಿಂಗಳ ಹೆಣ್ಣು ಮಗುವಿದೆ. ಕೆ.ಆರ್.ಪುರ ಪೊಲೀಸ್ ವಸತಿ ಸಮುಚ್ಚಯದಲ್ಲಿ ನೆಲೆಸಿದ್ದ ರಾಜೇಶ್ ದಂಪತಿ ಮಧ್ಯೆ ಸಣ್ಣಪುಟ್ಟ ವಿಚಾರಕ್ಕೆ ಆಗಾಗ್ಗೆ ಜಗಳವಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ನಿ ಆತ್ಮಹತ್ಯೆ ಹಿನ್ನೆಲೆ

ಕ್ಯಾಬ್ ಚಾಲಕನಿಗೆ ಥಳಿತ

ಬೆಂಗಳೂರು: ಶಾಂತಿನಗರ ಜೋಡಿ ರಸ್ತೆಯಲ್ಲಿ ದುಷ್ಕರ್ಮಿಗಳು ಶನಿವಾರ ರಾತ್ರಿ ಉಬರ್ ಕ್ಯಾಬ್ ಚಾಲಕನ ಮೇಲೆ ಹಲ್ಲೆನಡೆಸಿ ಪರಾರಿಯಾಗಿದ್ದು, ಈ ದುಷ್ಕೃತ್ಯದ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕ್ಯಾಬ್ ಚಾಲಕ, ಜೋಡಿ ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿಕೊಂಡು ಒಳಗೆ ಕುಳಿತಿದ್ದ. ವಾಹನದೊಳಗೆ ಮತ್ತೊಂದು ಬದಿಯಲ್ಲಿ ಮಹಿಳೆ ಕುಳಿತಿದ್ದರು. ಈ ವೇಳೆ ಅಲ್ಲಿಗೆ ಕಾರು ಹಾಗೂ ಬೈಕ್‌ನಲ್ಲಿ ಬಂದ ಏಳೆಂಟು ಮಂದಿ, ಚಾಲಕನನ್ನು ಕಾರಿನಿಂದ ಹೊರಗೆ ಎಳೆದು ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಚಾಲಕ ತಪ್ಪಿಸಿಕೊಳ್ಳಲು ಯತ್ನಿಸಿದಾಗ ದುಷ್ಕರ್ಮಿಗಳು ಅಟ್ಟಾಡಿಸಿ ಹೊಡೆದಿದ್ದಾರೆ.

ದುಷ್ಕರ್ಮಿಗಳ ಪುಂಡಾಟದ ದೃಶ್ಯಾವಳಿ ಘಟನಾ ಸ್ಥಳದ ಸಿ.ಸಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು, ಭಾನುವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಹಲ್ಲೆಗೊಳಗಾದ ಚಾಲಕ ಈವರೆಗೆ ದೂರು ಕೊಟ್ಟಿಲ್ಲ, ಹೀಗಾಗಿ, ಆತನ ಬಗ್ಗೆ ಮಾಹಿತಿಯಿಲ್ಲ, ಹಲ್ಲೆಗೆ ಕಾರಣ ಏನೆಂದು ಗೊತ್ತಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

2011 ರಿಂದ 2023ರವರೆಗಿನ ಅಧ್ಯಯನದಲ್ಲಿ ಬಹಿರಂಗ | ಸಂಜೆ 7ರಿಂದ ರಾತ್ರಿ 9ರ ಅವಧಿಯಲ್ಲೇ ಹೆಚ್ಚು

ಗುಡುಗು-ಮಿಂಚಿನ ಪ್ರಮಾಣ ಹೆಚ್ಚಳ

■ **ವಿಕ ಸುದ್ದಿಲೋಕ** ಬೆಂಗಳೂರು

ಐಟಿ ಸಿಟಿ ಬೆಂಗಳೂರಿನಲ್ಲಿ ಮಾನ್ಸೂನ್ ಅವಧಿಯಲ್ಲಿ ಗುಡುಗು-ಮಿಂಚಿನ ಪ್ರಮಾಣ ಮಿತಿ ಮೀರಿ ಏರಿಕೆಯಾಗಿರುವುದು ಭಾರತೀಯ ಹವಾಮಾನ ಇಲಾಖೆ ನಡೆಸಿದ ಅಧ್ಯಯನದಿಂದ ಬಯಲಾಗಿದೆ. 2011 ರಿಂದ 2023ರವರೆಗೆ ನಡೆದ ಅಧ್ಯಯನದಲ್ಲಿ ನಗರದಲ್ಲಿ ಗುಡುಗು-ಮಿಂಚಿನ ಪ್ರಮಾಣ ಹೆಚ್ಚಳವಾಗಿರುವುದು ಬಯಲಾಗಿದೆ.

ಭಾರತೀಯ ಹವಾಮಾನ ಇಲಾಖೆ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಆಂಧ್ರಪ್ರದೇಶ ವಿಶ್ವವಿದ್ಯಾಲಯದ ತಂಡವು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಸತತ 13 ವರ್ಷಗಳ ಕಾಲ ಈ ಬಗ್ಗೆ ಅಧ್ಯಯನ ನಡೆಸಿತ್ತು. ನಗರದಲ್ಲಿ ಪ್ರತಿ ವರ್ಷ ಶೇ.3.41ರಷ್ಟು ಗುಡುಗು ಹಾಗೂ ಶೇ.3.3 ರಷ್ಟು ಮಿಂಚಿನ ಪ್ರಮಾಣ ಹೆಚ್ಚಳವಾಗಿರುವುದನ್ನು ಪತ್ತೆ ಹಚ್ಚಿದೆ.

ನಗರದ ಸ್ಥಳೀಯ ಹವಾಮಾನದ ಸ್ಥಿತಿಗತಿಗಳ ಬಗ್ಗೆ ನಡೆಸಿದ್ದ ಈ ಅಧ್ಯಯನದಲ್ಲಿ ಸಂಜೆ 7ರಿಂದ ರಾತ್ರಿ 9 ಗಂಟೆ ಅವಧಿಯಲ್ಲೇ ಅತಿಹೆಚ್ಚು ಗುಡುಗು-ಮಿಂಚು ಕಾಣಿಸಿಕೊಂಡಿರುವುದು ಪತ್ತೆಯಾಗಿದೆ. ಪ್ರತಿ ವರ್ಷ 41 ದಿನಗಳು ಗುಡುಗು ಕಾಣಿಸಿಕೊಂಡಿದ್ದರೆ, 157 ಬಾರಿ ಮಿಂಚಿನ ಸಂಚಾರವಾಗಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ವಾಯುಮಾಲಿನ್ಯ, ಬದಲಾದ ಮಾನ್ಸೂನ್ ಸ್ಥಿತಿಗತಿ ಹಾಗೂ ಹೆಚ್ಚುತ್ತಿರುವ ತಾಪಮಾನದ ಪರಿಣಾಮದಿಂದ ಗುಡುಗು-ಮಿಂಚಿನ ಪ್ರಮಾಣ ಕೂಡ ಏರಿಕೆ ಕಾಣುತ್ತಿದೆ ಎಂದು ತಜ್ಞರ ತಂಡ ಅಭಿಪ್ರಾಯಪಟ್ಟಿದೆ.

ಏಪ್ರಿಲ್-ಮೇ ಹಾಗೂ ಸೆಪ್ಟೆಂಬರ್- ಅಕ್ಟೋಬರ್ ತಿಂಗಳಿನಲ್ಲಿ ಅತಿಹೆಚ್ಚು ಗುಡುಗು-ಮಿಂಚು ಕಾಣಿಸಿಕೊಂಡಿದೆ. ನೈರುತ್ಯ ಮತ್ತು ಮಾನ್ಸೂನ್ ಮಾರುತಗಳ ಚಲನೆ ವೇಳೆ ಅತಿಹೆಚ್ಚು ಗುಡುಗು-ಮಿಂಚು ಕಾಣಿಸಿಕೊಂಡಿದ್ದು, ಇದರ ಜತೆಗೆ, ಪ್ರತಿ ವರ್ಷ ಶೇ.1.44 ಮಿ.ಮೀ.ನಷ್ಟು ಮಳೆಯ ಪ್ರಮಾಣ ಹೆಚ್ಚಾಗಿರುವುದು ಕೂಡ ಅಧ್ಯಯನದಿಂದ ಬೆಳಕಿಗೆ ಬಂದಿದೆ. ಇದೇ ವೇಳೆ ಆರ್ದ್ರತೆಯ ಪ್ರಮಾಣ ಶೇ.0.74 ರಷ್ಟು ಹೆಚ್ಚಳವಾಗಿದ್ದು, ಗಾಳಿಯ ಪ್ರಮಾಣ ಇಳಿಕೆಯಾಗಿರುವುದು ಕಂಡು ಬಂದಿದೆ.

ಮಾಲಿನ್ಯವೇ ಮೂಲ !

ನಗರದಲ್ಲಿ ಹೆಚ್ಚುತ್ತಿರುವ ನೈಟ್ರೋಜನ್ ಡೈಆಕ್ಸೈಡ್ ಪ್ರಮಾಣ, ವಾಯುಮಾಲಿನ್ಯ ಹಾಗೂ ವಾತಾವರಣದಲ್ಲಿ ಅತಿಯಾದ ಉಷ್ಣಾಂಶದ ಕಾರಣದಿಂದ ಗುಡುಗು-ಮಿಂಚಿನ ಪ್ರಮಾಣ ಹೆಚ್ಚಳವಾಗಿದೆ ಎಂದು ತಜ್ಞರು ಪತ್ತೆ ಹಚ್ಚಿದ್ದಾರೆ. ಮಳೆಯಾದ ಸಂದರ್ಭದಲ್ಲಿ ಮಳೆ ನೀರಿನಿಂದ ವಾತಾವರಣದ ಮಾಲಿನ್ಯ ಪ್ರಮಾಣ ಕೊಂಚ ತಗ್ಗುವುದನ್ನು ಪತ್ತೆ ಹಚ್ಚಿದ್ದಾರೆ. ಮಳೆ ಬಂದ ಎರಡರಿಂದ ಎರಡೂವರೆ ಗಂಟೆ ಅವಧಿಯಲ್ಲಿ ನೈಟ್ರೋಜನ್ ಡೈ-ಆಕ್ಸೈಡ್ ಪ್ರಮಾಣ ಇಳಿಕೆಯಾಗಲಿದೆ ಎಂದಿದ್ದಾರೆ.

ಇನ್ನೂ ಹೆಚ್ಚುವ ಸಾಧ್ಯತೆ

ನಗರದ ಮಾಲಿನ್ಯ ಪ್ರಮಾಣ ತಗ್ಗದೇ ಇದ್ದರೇ ಗುಡುಗು- ಮಿಂಚಿನ ಪ್ರಮಾಣ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಮಾಲಿನ್ಯ ಪ್ರಮಾಣ ಭಾರೀ ಪ್ರಮಾಣದಲ್ಲಿ ಹೆಚ್ಚಿದರೆ ಮುಂದಿನ ದಿನಗಳಲ್ಲಿ ದಿಢೀರ್ ಕತ್ತಲೆ ಆವರಿಸುವ ವಾತಾವರಣ, ಗುಡುಗು- ಮಿಂಚು ಹೆಚ್ಚಾಗುವ ಸಾಧ್ಯತೆಯಿದೆ ಎಂದು ತಜ್ಞರ ತಂಡ ಎಚ್ಚರಿಸಿದೆ.

ಶೃಂಗೇರಿಯ ಉಭಯ ಜಗದ್ಗುರುಗಳ ಮಾರ್ಗದರ್ಶನದಲ್ಲಿ 'ಸಂಸ್ಕಾರ ಸುಧಾ' ಗ್ರೀಷ್ಮ ಶಿಬಿರದ ಸಮಾರೋಪ ಸಮಾರಂಭವು ಜಯನಗರದ ಶ್ರೀಜಯರಾಮ ಸೇವಾ ಮಂಡಳಿಯಲ್ಲಿ ನಡೆಯಿತು. ಶೃಂಗೇರಿ ಪರಂಪರೆ, ಶ್ರೀ ಶಂಕರರ ತತ್ವ, ಸಂಗೀತ, ಯಕ್ಷಗಾನ, ಭರತನಾಟ್ಯ, ಸಂಸ್ಕೃತಿ ಕುರಿತು ಶಿಬಿರಾರ್ಥಿಗಳಲ್ಲಿ ಅರಿವು ಮೂಡಿಸಲಾಯಿತು. ಇದೇ ವೇಳೆ ಡಾ. ಕೃಷ್ಣ ಜೋಶಿಯವರನ್ನು ಅಭಿನಂದಿಸಲಾಯಿತು. ಡಾ. ಅರ್ಚನಾ ಹೆಗಡೆ ಇದ್ದರು.

ಹೊಸಕೆರೆಹಳ್ಳಿಯ ವಿನಾಯಕ ವೃತ್ತದ ಕೆರೆಕೋಡಿ ಮುಖ್ಯರಸ್ತೆಯ ವರಸಿದ್ಧಿ ವಿನಾಯಕ ದೇವರ 10ನೇ ವಾರ್ಷಿಕೋತ್ಸವ ಪ್ರಯುಕ್ತ ಪರಿಸರಪ್ರೇಮಿ ರಾಜು ಬಿ.ಎಚ್. ಅವರಿಗೆ 'ಸಾವಿರಾರು ಮರಗಳ ಸರದಾರ' ಎಂದು ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ವರಸಿದ್ಧಿ ವಿನಾಯಕ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಗಣೇಶ್ , ಮಾಗಡಿ ಜಡದೇವರ ಮಠದ ಬಸವರಾಜೇಂದ್ರ ಸ್ವಾಮೀಜಿ, ಜಿ.ಎಚ್ ರಾಮಚಂದ್ರ, ರಾಜೇಶ್ ಗೂಳಿಗೌಡ ಉಪಸ್ಥಿತರಿದ್ದರು.

ಎನ್ಎಂಐಎಂಎಸ್ ಸ್ನಾತಕ ಕೋರ್ಸ್ ಪ್ರವೇಶಕ್ಕೆ ನಾಳೆ ಕೊನೆ ದಿನ

ಬೆಂಗಳೂರು: ಕೈಗಾರಿಕೆಗಳು ವೇಗವಾಗಿ ವಿಕಸನಗೊಳ್ಳುತ್ತಿರುವುದರಿಂದ ವಿದ್ಯಾರ್ಥಿಗಳು ಉದ್ಯಮಕ್ಕೆ ತಕ್ಕಂತೆ ಕೌಶಲಗಳನ್ನು ಹೊಂದುವುದು ಅಗತ್ಯವಾಗಿದೆ. ಮರ್ಸರ್/ ಮೆಟ್ಟ್ ಇಂಡಿಯಾ ಗ್ರಾಜುಯೇಟ್ ಸ್ಕಿಲ್ ಇಂಡೆಕ್ಸ್ 2025ರ ಪ್ರಕಾರ ಕೇವಲ ಶೇ.42.6 ಭಾರತೀಯ ಪದವೀಧರರನ್ನು ಮಾತ್ರ ಉದ್ಯೋಗಕ್ಕೆ ಅರ್ಹರೆಂದು ಪರಿಗಣಿಸಲಾಗುತ್ತದೆ. ಇದು ಉದ್ಯಮ-ಸಮನ್ವಯ ಶಿಕ್ಷಣದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ಈ ಹಿನ್ನೆಲೆಯಲ್ಲಿ ನರಸೀಮೊಂಜಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಎನ್ಎಂಐಎಂಎಸ್) ಉದ್ಯಮ ಆಧಾರಿತ ಪಠ್ಯಕ್ರಮ ಅಳವಡಿಕೆ, ಅನುಭವಿ ಕಲಿಕೆ, ಸಂವಹನ ಕೌಶಲ ಹೆಚ್ಚಿಸುವ ಮೂಲಕ ವಿದ್ಯಾರ್ಥಿಗಳನ್ನು ಉಜ್ವಲ ಭವಿಷ್ಯದ ಅವಕಾಶಗಳಿಗೆ ಸಿದ್ಧಪಡಿಸುತ್ತಿದೆ. ಮುಂಬಯಿ, ನವಿ ಮುಂಬಯಿ, ಶಿರ್‌ಪುರ್, ಬೆಂಗಳೂರು, ಹೈದರಾಬಾದ್, ಇಂದೋರ್, ಚಂಡೀಗಢ ಮತ್ತು ಅಹಮದಾಬಾದ್‌ನಲ್ಲಿರುವ ಎನ್ಎಂಐಎಂಎಸ್ ಕ್ಯಾಂಪಸ್‌ಗಳಲ್ಲಿ ವಿವಿಧ ಸ್ನಾತಕ ಕೋರ್ಸ್‌ಗಳಿಗೆ 2026-7ನೇ ಶೈಕ್ಷಣಿಕ ವರ್ಷದ ಪ್ರವೇಶಾತಿಗೆ ಅವಕಾಶ ನೀಡುತ್ತಿದೆ. ಎನ್‌ಪಿಎಟಿ (ವಾಣಿಜ್ಯ), ಎನ್‌ಸಿಇಟಿ(ಎಂಜಿನಿಯರಿಂಗ್ ಮತ್ತು ಫಾರ್ಮಸಿ), ಎನ್‌ಎಲ್‌ಎಟಿ(ಕಾನೂನು), ಎನ್‌ಡಿಎಟಿ (ವಿನ್ಯಾಸ) ಮತ್ತು ಎಂಎಸ್‌ಟಿ(ಗಣಿತ, ಸ್ಟಾಟಿಸ್ಟಿಕ್ಸ್ ಮತ್ತು ಡೇಟಾ ಸೈನ್ಸ್) ನಂತಹ ವಿವಿಧ ಪ್ರವೇಶ ಪರೀಕ್ಷೆಗಳ ಮೂಲಕ ನೋಂದಣಿಗಳನ್ನು ನಡೆಸಲಾಗುತ್ತದೆ. ಮೇ 26ಕ್ಕೆ ನೋಂದಣಿಗಳು ಮುಕ್ತಾಯಗೊಳ್ಳಲಿವೆ. ಆಕಾಂಕ್ಷಿಗಳು ಸಂಸ್ಥೆಯ ಅಧಿಕೃತ ಪ್ರವೇಶ ಪೋರ್ಟಲ್ (https://nmims.edu/admission)ಮೂಲಕ ಪ್ರವೇಶಾತಿಗೆ ನೋಂದಣಿ ಮಾಡಿಕೊಳ್ಳಬಹುದು.

ಎಲ್ಲಿ-ಏನು? ಸೋಮವಾರ

ಕರ್ನಾಟಕ ರಂಗ ಪರಿಷತ್ ಕೇಂದ್ರ ಸಮಿತಿ: 3ನೇ ಕರ್ನಾಟಕ ಸಂಘಟಕರ ಸಮಾವೇಶ. ಮುಖ್ಯ ಅತಿಥಿ: ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್

ಸ್ಥಳ: ಕನ್ನಡ ಭವನ, ನಯನ ರಂಗಮಂದಿರ, ಜೆ.ಸಿ. ರಸ್ತೆ ಬೆಳಗ್ಗೆ 10.30ರಿಂದ ರಾತ್ರಿ 8ರವರೆಗೆ.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು: ಶರಣ ಸಂಜೆ, ಶಿವಯೋಗಿ ಸಿದ್ಧರಾಮೇಶ್ವರ ಜಯಂತ್ಯುತ್ಸವ, ಗೊ.ರು. ಚನ್ನಬಸಪ್ಪ ಅವರ 98ನೇ ಜನ್ಮದಿನಾಚರಣೆ. ಉದ್ಘಾಟನೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್

ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ವರಸಿದ್ಧಿ ವಿನಾಯಕ ದೇವಸ್ಥಾನ ಆವರಣ, ಡಿ ಗ್ರೂಪ್ ಲೇಔಟ್. ಸಂಜೆ 6.

ನಿಧನ

ಸಿದ್ದೇಗೌಡ

ಬೆಂಗಳೂರು: ನಿವೃತ್ತ ಡಿವೈಎಸ್‌ಪಿ ಎಲ್. ಸಿದ್ದೇಗೌಡ (89) ಅವರು ವಯೋಸಹಜ ಕಾರಣದಿಂದ ಗಿರಿನಗರದ ತಮ್ಮ ನಿವಾಸದಲ್ಲಿ ಭಾನುವಾರ ರಾತ್ರಿ ನಿಧನರಾದರು. ಮಾಗಡಿ ತಾಲೂಕಿನ ಹೊಸದೊಡ್ಡಿ ಗ್ರಾಮದ ಸಿದ್ದೇಗೌಡ ಅವರು ಪೊಲೀಸ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿಯನ್ನು ಅಗಲಿದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಸೋಮವಾರ ಸಂಜೆ 4ಕ್ಕೆ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಕರಗಿದ ಆಮ್ಲಜನಕ ಪ್ರಮಾಣ ತೀವ್ರ ಕುಸಿತ | ಜಲಚರಗಳು ಬದುಕುವುದೇ ಕಷ್ಟ | ಕೆಎಸ್‌ಪಿಸಿಬಿ ವರದಿಯಲ್ಲಿ ಉಲ್ಲೇಖ

ಹೆಚ್ಚಿದ ಮಾಲಿನ್ಯ: ಡೆಡ್‌ಝೋನ್ ಆದ ಅರ್ಕಾವತಿ

■ ವಿಕ ಸುದ್ದಿಲೋಕ ಬೆಂಗಳೂರು

ಸಾಂದರ್ಭಿಕ ಚಿತ್ರ

■ ತರಕಾರಿ ಬೆಳೆಗೂ ಕಲುಷಿತ ನೀರು ಬಳಕೆ

ಹೆಚ್ಚುತ್ತಿರುವ ಮಾಲಿನ್ಯದಿಂದಾಗಿ ಅರ್ಕಾವತಿ ನದಿ ನೀರಿನಲ್ಲಿ ಕರಗಿದ ಆಮ್ಲಜನಕದ ಮಟ್ಟವು ತೀರಾ ಕಡಿಮೆ ಆಗಿದ್ದು, ಪ್ರತಿ ಲೀಟರ್‌ಗೆ 1.6 ಮಿ.ಗ್ರಾಂಗೆ ತಲುಪಿದೆ. ಇದನ್ನು ನಿರ್ಣಾಯಕ ಮಾಲಿನ್ಯ ಮಟ್ಟವೆಂದು ಪರಿಗಣಿಸಲಾಗಿದ್ದು, ಮೀನುಗಳು ಮತ್ತು ಇತರೆ ಜಲಚರಗಳಿಗೆ ಡೆಡ್‌ಝೋನ್ ಆಗಿ ಮಾರ್ಪಟ್ಟಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಇತ್ತೀಚೆಗೆ ಬಿಡುಗಡೆ ಮಾಡಿರುವ ಕರ್ನಾಟಕದ ನದಿಗಳ ನೀರಿನ ಗುಣಮಟ್ಟದ ವರದಿಯಲ್ಲಿ ಈ ಮಾಹಿತಿ ದಾಖಲಾಗಿದೆ. ತಜ್ಞರ ಪ್ರಕಾರ, ಸಾಮಾನ್ಯವಾಗಿ ಆರೋಗ್ಯಕರ ನೀರಿನಲ್ಲಿ ಆಮ್ಲಜನಕದ ಪ್ರಮಾಣವು ಪ್ರತಿ ಲೀಟರ್‌ಗೆ 6.5 ಮಿ. ಗ್ರಾಂನಿಂದ 8 ಮಿ. ಗ್ರಾಂವರೆಗೆ ಇರಬೇಕು. ಆದರೆ, ಅರ್ಕಾವತಿ ನದಿ ನೀರಿನಲ್ಲಿ ಆಮ್ಲಜನಕ ಪ್ರಮಾಣ 1.6 ಮಿ. ಗ್ರಾಂಗೆ ತಲುಪಿದೆ. ಇಂತಹ ನೀರಿನಲ್ಲಿ ಜಲಚರಗಳು ಬದುಕುಳಿಯುವುದು ಕಷ್ಟ, ವಿಲಕ್ಷಣ ಪ್ರಭೇದಗಳು ಮಾತ್ರ ತಮ್ಮನ್ನು ತಾವು ಉಳಿಸಿಕೊಳ್ಳಬಹುದು. ಇದು ಅನಾರೋಗ್ಯಕರ ಪರಿಸರ ವ್ಯವಸ್ಥೆಗೂ ಕಾರಣವಾಗಲಿದೆ.

ಕೇಂದ್ರ ಸರಕಾರದ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆ(ಎನ್‌ಡಬ್ಲ್ಯುಎಂಪಿ)ಯಡಿ ಕೆಎಸ್‌ಪಿಸಿಬಿಯು, ಅರ್ಕಾವತಿ, ಲಕ್ಷ್ಮಣತೀರ್ಥ, ತುಂಗಭದ್ರಾ, ಭದ್ರಾ, ಕಾವೇರಿ, ಕಬಿನಿ, ಕೃಷ್ಣಾ, ಭೀಮಾ, ನೇತ್ರಾವತಿ ಮತ್ತು ತುಂಗಾ ಸೇರಿದಂತೆ ರಾಜ್ಯದ 12 ನದಿಗಳು ಮತ್ತು 36-38 ಸ್ಥಳಗಳಲ್ಲಿ ನೀರಿನ ಗುಣಮಟ್ಟದ ಪರೀಕ್ಷೆ ಕೈಗೊಂಡಿತ್ತು.

ಈ ವೇಳೆ ಅರ್ಕಾವತಿ ಸೇರಿ ವಿವಿಧ ನದಿಗಳ ನೀರಿನಲ್ಲಿ ಆಮ್ಲಜನಕದ ಪ್ರಮಾಣ ತೀರಾ ಕುಸಿದಿರುವುದು ಪತ್ತೆಯಾಗಿದೆ. ಅಲ್ಲದೆ, ನೀರಿನ ಮಾದರಿಯಲ್ಲಿರುವ ಸಾವಯವ ವಸ್ತುವನ್ನು ವಿಭಜಿಸುವ ಜೀವ ರಾಸಾಯನಿಕ ಆಮ್ಲಜನಕದ ಬೇಡಿಕೆಯು (Biochemical Oxygen Demand) ಗಣನೀಯವಾಗಿ ಹೆಚ್ಚಾಗಿದೆ. ನದಿಯಲ್ಲಿ ಸಾಮಾನ್ಯವಾಗಿ ಶುದ್ಧ ನದಿ ನೀರಿನ 'ಬಿಒಡಿ' ಪ್ರಮಾಣವು ಪ್ರತಿ ಲೀಟರ್‌ಗೆ 1 ರಿಂದ 3 ಮಿ. ಗ್ರಾಂ ಇರಬೇಕು. ಆದರೆ, ಅರ್ಕಾವತಿಯಲ್ಲಿ ಇದರ ಪ್ರಮಾಣ 21 ಮಿ. ಗ್ರಾಂಗೆ ತಲುಪಿದೆ. ಆ ಮೂಲಕ ಮಾಲಿನ್ಯದ ಪ್ರಮಾಣದ ಮಿತಿ ಮೀರಿರುವುದು ದೃಢಪಟ್ಟಿದೆ.

ಕೈಗಾರಿಕೆಗಳಲ್ಲಿ, ನಗರ, ಪಟ್ಟಣಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ನೀರನ್ನು ಸಂಸ್ಕರಿಸಿ ನದಿ ಬಿಡಬೇಕು. ಆದರೆ, ಈ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ. ನೀರು ನೇರವಾಗಿ ನದಿ ಸೇರುತ್ತಿದ್ದು, ಜಲಚರಗಳಿಗೂ ಮಾರಕವಾಗಿದೆ. ಮಾತ್ರವಲ್ಲದೆ, ಇದೇ ನೀರನ್ನು ಬಳಸಿ ಸುತ್ತಲಿನ ರೈತರು ತರಕಾರಿ ಬೆಳೆಯುತ್ತಿದ್ದಾರೆ. ಸಂಸ್ಕರಿಸದೆ ನೀರು ನದಿಗಳಿಗೆ ಬಿಡಬಾರದೆಂಬ ನಿಯಮವಿದ್ದರೂ ಅದು ಪಾಲನೆ ಆಗುತ್ತಿಲ್ಲ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕನ್ನಡತನದ ಬೇರು ಕಳಚಿದ್ದರಿಂದ ಗುಣಮಟ್ಟ ಕುಸಿತ'

■ ವಿಕ ಸುದ್ದಿಲೋಕ ಬೆಂಗಳೂರು

ಸಿಎಂ ಮಾಧ್ಯಮ ಕಾರ್ಯದರ್ಶಿ ಕೆ.ವಿ.ಪ್ರಭಾಕರ್ ಫಿಲಂ ಚೇಂಬರ್ ಮನವಿ ಸ್ವೀಕರಿಸಿದರು.

ಕನ್ನಡತನದ ಬೇರುಗಳಿಂದ ಕಳಚಿಕೊಂಡಿದ್ದರಿಂದ ಸಿನಿಮಾರಂಗ ಗುಣಮಟ್ಟ ಕುಸಿದಿದೆ. ಇಂದಿನ ತಾಂತ್ರಿಕತೆ, ಹಿಂದಿನ ಮೌಲ್ಯವನ್ನು ಮೇಳೈಸಿ ಹೈಬ್ರಿಡ್ ಮಾದರಿಯನ್ನು ಅಳವಡಿಸಿಕೊಂಡಲ್ಲಿ ಹಳೆಯ ವೈಭವ ಮರಳಲಿದೆ ಎಂದು ಸಿಎಂ ಮಾಧ್ಯಮ ಕಾರ್ಯದರ್ಶಿ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಆಯೋಜಿಸಿದ್ದ 'ಚಂದನವನ: ಅಂದು - ಇಂದು - ಮುಂದು' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

''ಶತಮಾನ ಪೂರೈಸಿರುವ ಚಂದನವನಕ್ಕೆ ಸತ್ವ ಮತ್ತು ಸಂಸ್ಕಾರದ ಜತೆಗೆ ಸಾಂಸ್ಕೃತಿಕವಾಗಿ ಆಳವಾದ ಬೇರುಗಳಿವೆ. ಚಂದನವನ ತನ್ನ ಇತಿಹಾಸದಲ್ಲಿ ಎಂದಿಗೂ ಕೇವಲ ಮನರಂಜನೆಯ ಮಾಧ್ಯಮವಾಗಿರಲಿಲ್ಲ. ಬದಲಿಗೆ ಸಾಹಿತ್ಯ, ಸಂಸ್ಕೃತಿ ಮತ್ತು ಬದುಕಿನ ಮೌಲ್ಯಗಳನ್ನು ಬಿಂಬಿಸುವ ಕನ್ನಡಿಯಾಗಿತ್ತು. ಆಗ ಆರ್ಥಿಕವಾಗಿ ಸಬಲವಾಗಿಲ್ಲದಿದ್ದರೂ ಗುಣಮಟ್ಟದ ಚಿತ್ರಗಳು ಬರುತ್ತಿದ್ದವು. ಆದರೆ, ಈಗ ಶ್ರೀಮಂತಿಕೆ ಇದ್ದರೂ ಗುಣಮಟ್ಟದಲ್ಲಿ ಬಡವಾಗಿದೆ,'' ಎಂದರು.

''ತಾಂತ್ರಿಕ ಕ್ರಾಂತಿಯ ಹೊತ್ತಲ್ಲೂ ಜಾಗತಿಕ ಮನ್ನಣೆ ಗಳಿಸಿದ ಕೆಲ ಚಿತ್ರಗಳು ಕನ್ನಡದ ತಾಕತ್ತನ್ನು ಇಡೀ ಜಗತ್ತಿಗೆ ಪರಿಚಯಿಸಿರುವುದು ಆಶಾದಾಯಕ. ಹೀಗಾಗಿ, ಕನ್ನಡ ಚಿತ್ರರಂಗ ಹಳತು ಮತ್ತು ಹೊಸತನ್ನು ಮೇಳೈಸಿದ ಹೈಬ್ರಿಡ್ ಮಾದರಿಯನ್ನು ಅಳವಡಿಸಿಕೊಂಡರೆ ಪುನಃ ವೈಭವ ಮರಳಬಹುದು,'' ಎಂದು ಸಲಹೆ ಮಾಡಿದರು.

ಇದೇ ವೇಳೆ ಮಂಡಳಿಯ ಮನವಿ ಸ್ವೀಕರಿಸಿದ ಅವರು, ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಮತ್ತು ನಟ ನಿರ್ದೇಶಕ ರಮೇಶ್ ಅರವಿಂದ್ ವೇದಿಕೆಯಲ್ಲಿದ್ದರು.

ಸ್ಯಾಂಕಿ ಕೆರೆ ರಕ್ಷಣೆಗೆ ಒತ್ತಾಯ

■ ವಿಕ ಸುದ್ದಿಲೋಕ ಬೆಂಗಳೂರು

ನಗರದ ಸ್ಯಾಂಕಿ ಕೆರೆ ಇಂದು ಗಂಭೀರ ಪರಿಸರ ಸಂಕಷ್ಟ ಎದುರಿಸುತ್ತಿದ್ದು, ಕೆರೆಯ ಅಸ್ತಿತ್ವವೇ ಅಪಾಯದಲ್ಲಿದೆ ಎಂದು ಸದಾಶಿವನಗರದ ನಾಗರಿಕರು, ಪರಿಸರ ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

'ಸೇವ್ ಸ್ಯಾಂಕಿ ಟ್ಯಾಂಕ್' ಅಭಿಯಾನ ಕೈಗೊಡಿರುವ ನಾಗರಿಕರು ಕೆರೆ ಆವರಣದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು. ''ಸ್ಯಾಂಕಿ ಕೆರೆ ನೀರಿನ ಮಟ್ಟ ನಿರಂತರವಾಗಿ ಕುಸಿಯುತ್ತಿದೆ. ಒಳಚರಂಡಿ ನೀರು ಹರಿಯುತ್ತಿದ್ದು, ಹಸಿರು ವಲಯದ ನಾಶ, ಕೆರೆಯ ವಿಸ್ತೀರ್ಣ ಕುಗ್ಗುತ್ತಿದೆ. ಕೆರೆಯ ಪರಿಸರ ಸಮತೋಲನ ಹದಗೆಡುತ್ತಿದೆ. ಕೆರೆಯ ಸುತ್ತಮುತ್ತ ದಶಕಗಳಷ್ಟು ಹಳೆಯ ಮರಗಳನ್ನು ಕಡಿದಿರುವುದರಿಂದ ಹಾಗೂ ಯಾವುದೇ ಸಮರ್ಪಕ ಅಧ್ಯಯನವಿಲ್ಲದೆ ನಡೆಯುತ್ತಿರುವ ಕಾಮಗಾರಿಯಿಂದ ಕೆರೆಯ ಮೂಲ ಸ್ವರೂಪವನ್ನೇ ಹಾಳಾಗುತ್ತಿದೆ,'' ಎಂದು ಪ್ರತಿಭಟನಾಕಾರರು ಕಳವಳ ವ್ಯಕ್ತಪಡಿಸಿದ್ದಾರೆ.

ವಾಯ್ಸ್ ಆಫ್ ಸದಾಶಿವನಗರದ ಸಂಚಾಲಕರಾದ ಶಿಲ್ಪ ಜತ್ತಿ ಮಾತನಾಡಿ, ''ಸ್ಯಾಂಕಿ ಕೆರೆಯೊಳಗೆ ಹಾಗೂ ಸುತ್ತಮುತ್ತ ನಿರ್ಮಾಣ ತ್ಯಾಜ್ಯ ಸುರಿಯುತ್ತಿದ್ದು, ಪರಿಸರಕ್ಕೆ ಹಾನಿಕಾರಕವಾದ ಹೂಳು ಹೆಚ್ಚಾಗುತ್ತಿದೆ. ಕೆರೆ ಸಂಪೂರ್ಣ ಕಾಂಕ್ರೀಟ್ ಕೆರೆಯಾಗಿ ಮಾರ್ಪಟ್ಟಿದೆ. ಎಲ್ಲಿಂದ ಚರಂಡಿ ನೀರು ಹರಿಯುತ್ತಿದೆ ಎಂಬುದನ್ನು ಪತ್ತೆ ಮಾಡಿ ತಕ್ಷಣವೇ ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು. ಈ ಉದ್ದೇಶದಿಂದ 'ಸೇವ್ ಸ್ಯಾಂಕಿ ಟ್ಯಾಂಕ್' ಅಭಿಯಾನ ಆರಂಭಿಸಲಾಗಿದೆ,'' ಎಂದರು.

ರಾಷ್ಟ್ರೀಯ ಮಾನವ ಹಕ್ಕುಗಳು ಹಾಗೂ ಸಾಮಾಜಿಕ ನ್ಯಾಯ ಸಂಸ್ಥೆಯ ಪ್ರತಿನಿಧಿಗಳು ಮಾತನಾಡಿ, ''ಪರಿಸರ ಮತ್ತು ನೀರಿನ ಗುಣಮಟ್ಟ ಪರಿಶೀಲನೆ ನಡೆಸಬೇಕು. ಪರಿಸರ ಸ್ನೇಹಿ ಪುನರುಜ್ಜೀವನ ಯೋಜನೆ ರೂಪಿಸಬೇಕು. ನಗರದ ನಾಗರಿಕರು, ಯುವ ಜನಾಂಗ, ಪರಿಸರ ಪ್ರೇಮಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಈ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಕೆರೆ ಉಳಿಸಲು ಮುಂದಾಗಬೇಕು,'' ಎಂದರು.

ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ, ಡಾ.ಮನು ಮತ್ತು ಸದಾಶಿವನಗರದ ಸ್ಥಳೀಯ ನಾಗರಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕುರುಬ ಸಮುದಾಯ ಎಸ್‌ಟಿ ಪಟ್ಟಿ ಸೇರ್ಪಡೆಗೆ ಆಗ್ರಹ

■ ವಿಕ ಸುದ್ದಿಲೋಕ ಕೆಂಗೇರಿ

ಕನಕೋದ್ಯಮಿಗಳ ಸಮ್ಮಿಲನ ಹಾಗೂ ಉದ್ಯಮಿಗಳಿಗೆ ಅವಕಾಶಗಳ ಅರಿವು ಕಾರ್ಯಕ್ರಮ ಉದ್ಘಾಟನೆಗೊಂಡಿತು.

ಕುರುಬ ಸಮುದಾಯವು ಪರಿಶಿಷ್ಟ ವರ್ಗ ಪಟ್ಟಿಗೆ ಸೇರ್ಪಡೆಯಾದರೆ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಹಾಗೂ ಮಾಜಿ ಸಚಿವ ಎಚ್.ಎಂ.ರೇವಣ್ಣ ತಿಳಿಸಿದರು.

ಹಾಲುಮತ ಉದ್ಯಮಿಗಳ ಸಂಘದ ವತಿಯಿಂದ ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಯ ಕನಕದಾಸ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಕನಕೋದ್ಯಮಿಗಳ ಸಮ್ಮಿಲನ ಹಾಗೂ ಉದ್ಯಮಿಗಳಿಗೆ ಅವಕಾಶಗಳ ಅರಿವು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

''ನಾನು ಉದ್ಯಮಿಯಲ್ಲ, ಸಂಘಟಕ. ಎಲ್ಲ ರಾಜಕೀಯ ಪಕ್ಷದವರು ಕುರುಬ ಸಮುದಾಯದವರನ್ನು ತಬ್ಬಿಕೊಳ್ಳುತ್ತಿದ್ದಾರೆ. ಕಾರಣ ಸಂಘಟನೆ ಇದೆ ಎಂದು. ಕೈಗಾರಿಕೆ ಸ್ಥಾಪಿಸುವ ಕುರುಬ ಸಮುದಾಯದವರಿಗೆ ಕೆಐಎಡಿಬಿ ವತಿಯಿಂದ ಹಂಚಿಕೆಯಾಗುವ ಭೂಮಿಯಲ್ಲಿ ಮೀಸಲು ಕಲ್ಪಿಸಲು ಸರಕಾರವನ್ನು ಒತ್ತಾಯಿಸಲಾಗಿದೆ,'' ಎಂದರು.

ಅಧ್ಯಕ್ಷತೆ ವಹಿಸಿದ್ದ ಹಾಲುಮತ ಉದ್ಯಮಿಗಳ ಸಂಘದ ಅಧ್ಯಕ್ಷ ಸುನಿಲ್ ಜಯರಾಜ್ ಮಾತನಾಡಿ, ''ಸಮುದಾಯದ ಸಬಲೀಕರಣ ಹಾಗೂ ಯುವ ಸಮುದಾಯದ ಭವಿಷ್ಯ ನಿರ್ಮಾಣದ ಕಡೆಗೆ ದೃಢ ಹೆಜ್ಜೆ ಇಡಬೇಕಾಗಿದೆ. ಉದ್ಯಮವನ್ನು ಸ್ಥಾಪಿಸುವ ಮುನ್ನ ಹಲವರು ಹಲವು ಬಗೆಯಲ್ಲಿ ಮಾತನಾಡುತ್ತಾರೆ. ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ನಿರ್ದಿಷ್ಟ ಗುರಿ, ಪರಿಶ್ರಮ ಹಾಗೂ ಶಿಸ್ತಿನಿಂದ ಕಾರ್ಯಪ್ರವೃತ್ತರಾದಾಗ ಎಂತಹ ಕಠಿಣ ಸವಾಲುಗಳನ್ನಾದರೂ ಎದುರಿಸಿ ಸಾಧನೆ ಮಾಡಬಹುದಾಗಿದೆ,'' ಎಂದರು.

ಮಾಜಿ ಸಚಿವ ಬಂಡೆಪ್ಪ ಕಾಶಂಪುರ್ ಮಾತನಾಡಿದರು. ರಾಮೋಹಳ್ಳಿ ರಾಮಕೃಷ್ಣ ಯೋಗಾಶ್ರಮದ ಯೋಗೇಶ್ವರಾನಂದ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠ ಹೊಸದುರ್ಗ ಶಾಖಾಮಠದ ಈಶ್ವರಾನಂದ ಪುರಿ ಸ್ವಾಮೀಜಿ, ಸಂಘದ ಪ್ರಧಾನ ಕಾರ್ಯದರ್ಶಿ ಸುದರ್ಶನ್ ರಾಮಯ್ಯ, ಶಿಕ್ಷಣ ತಜ್ಞ ಡಾ.ಎಂ.ಆರ್ ಹುಲಿ ನಾಯ್ಕರ್, ರುದ್ರಣ್ಣ ಗುಳಗುಳಿ, ಟಿ.ಬಿ. ಬೆಳಗಾವಿ, ಇನ್‌ಸೈಟ್ ಐಎಎಸ್ ಅಕಾಡೆಮಿ ಸಂಸ್ಥಾಪಕ ಬಿ.ಜಿ.ವಿನಯ್ ಕುಮಾರ್ ಉಪಸ್ಥಿತರಿದ್ದರು.

ಕಲಾವಿದರಿಗೆ ನೆರವು

ಬೆಂಗಳೂರು: ಜಾಣ ಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್ ವತಿಯಿಂದ ಮೇ 31ರಂದು ವಯೋಸಹಜ ಆರೋಗ್ಯ ಸಮಸ್ಯೆ, ಅಶಕ್ತರಾದ 60 ಕಲಾವಿದರಿಗೆ ತಲಾ 10 ಲಕ್ಷ ರೂ. ಮೌಲ್ಯದ ಆರೋಗ್ಯ ವಿಮಾ ಪಾಲಿಸಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಅಂದು ಸಂಜೆ 5 ಗಂಟೆಗೆ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಜಾಣ ಜಾಣೆಯರ ನಗೆ ಉತ್ಸವ, ಟ್ರಸ್ಟ್ ಉದ್ಘಾಟನೆ ನಡೆಯಲಿದೆ. ಕಲಾವಿದರಿಗೆ ನೆರವಾಗುವ ಉದ್ದೇಶದಿಂದ ಜಾಣ ಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್ ಸ್ಥಾಪನೆಯಾಗಿದೆ. ವಿದುಷಿ ಡಾ.ಸುಮಾ ಸುಧೀಂದ್ರ ಟ್ರಸ್ಟ್ ಜತೆ ಕೈಜೋಡಿಸಿದ್ದು, ಸಚಿವ ದಿನೇಶ್ ಗುಂಡೂರಾವ್, ಎಂ.ಆರ್. ಸೀತಾರಾಮ್, ಎಂ. ಕೃಷ್ಣಪ್ಪ, ಡಿ.ಕೆ. ಸುರೇಶ್, ಪ್ರಿಯಾಕೃಷ್ಣ, ರಕ್ಷಾ ರಾಮಯ್ಯ ಹಾಗೂ ಹಿರಿಯ ವಕೀಲ ಚಂದ್ರಮೌಳಿ ಮಾರ್ಗದರ್ಶನದಲ್ಲಿ ಟ್ರಸ್ಟ್ ಕಾರ್ಯನಿರ್ವಹಿಸಲಿದೆ. ಇದೇ ಸಂದರ್ಭದಲ್ಲಿ ಮೂರು ಗಂಟೆಗಳ ನಿರಂತರ ವಿಶೇಷ ನಗೆಹಬ್ಬ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಹಕ್ಕುಗಳ ರಕ್ಷಣೆಗೆ ಮ್ಯಾರಥಾನ್

ಮಹದೇವಪುರ: ವೈಚಾರಿಕ ಪ್ರಗತಿಪರ ವೇದಿಕೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನದ ಪ್ರಯುಕ್ತ ಬೆಳತ್ತೂರಿನಲ್ಲಿ ಭಾನುವಾರ 'ಹಕ್ಕುಗಳಿಗಾಗಿ ಓಟ' ಎಂಬ ಘೋಷವಾಕ್ಯದಡಿ ಮ್ಯಾರಥಾನ್ ನಡೆಯಿತು.

ಮ್ಯಾರಥಾನ್‌ಗೆ ಬಾಕ್ಸಿಂಗ್‌ಪಟು, ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಎಂ. ವೇಣು ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ''ಯಾವುದೇ ಒಂದು ಹೋರಾಟಕ್ಕೆ ಆರೋಗ್ಯ ಮುಖ್ಯ. ಯುವ ಪೀಳಿಗೆ ಆರೋಗ್ಯ ಕಾಪಾಡಿಕೊಳ್ಳುವುದರ ಜತೆಗೆ ನಮ್ಮ ಹಕ್ಕುಗಳನ್ನು ರಕ್ಷಿಸಲು ಹೋರಾಟ ಮಾಡಬೇಕು. ದೇಶದ ಏಕತೆಯ ದೃಷ್ಟಿಯಿಂದ ನಾವೆಲ್ಲರೂ ಒಂದಾಗಬೇಕು,'' ಎಂದರು.

ವೈಚಾರಿಕ ಪ್ರಗತಿಪರ ವೇದಿಕೆ (ಕರ್ನಾಟಕ) ಅಧ್ಯಕ್ಷ ಎಂ.ಆರ್. ವೆಂಕಟೇಶ್, ''ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವನ್ನು ಪಸರಿಸುವ ಉದ್ದೇಶದಿಂದ ಹಾಗೂ ಸಮಾನತೆ, ಏಕತೆ, ಸಾಮಾಜಿಕ ನ್ಯಾಯದ ಕುರಿತು ಅರಿವು ಮೂಡಿಸಲು ಮ್ಯಾರಥಾನ್ ಹಮ್ಮಿಕೊಳ್ಳಲಾಗಿತ್ತು. 5 ಹಾಗೂ 10 ಕಿಮೀ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದವರಿಗೆ 25,000 ರೂ. ನಗದು ಬಹುಮಾನವನ್ನು ಬರುವ ಭಾನುವಾರ ನಡೆಯುವ ಕಾರ್ಯಕ್ರಮದಂದು ನೀಡಲಾಗುವುದು,'' ಎಂದರು.

ಪದಾಧಿಕಾರಿಗಳಾದ ಚಿನ್ನಸ್ವಾಮಿ, ಆಸೀಫ್, ವಿಜಯನ್, ಬೆಳತ್ತೂರು ರಮೇಶ್, ಮಹೇಂದ್ರ, ಕೆ.ಗಂಗಾಧರ್, ಮಾಸ್ತಿ ಜಗನಾಥ್, ಕಾಂಚನಾ, ಆದೂರು ಮುನಿರಾಜು ಪಾಲ್ಗೊಂಡಿದ್ದರು.

ನಾದಯೋಗಿ ಡಾ.ರಾಜ್ ಕೃತಿ ಬಿಡುಗಡೆ

■ ವಿಕ ಸುದ್ದಿಲೋಕ ಬೆಂಗಳೂರು

ನಮ್ಮ ತಂದೆಗೆ ಸಂಗೀತವೆಂದರೆ ಪ್ರಾಣ. ಗಜಲ್ ಬಹಳ ಇಷ್ಟ, ನಮ್ಮ ಮನೆಯಲ್ಲಿ ಎಲ್ಲರೂ ಸಂಗೀತ ಪ್ರೇಮಿಗಳೇ. ಇದು ನಮ್ಮ ಕುಟುಂಬಕ್ಕೆ ಬಂದ ಬಳುವಳಿ ಎಂದು ರಾಜ್‌ಕುಮಾರ್ ಪುತ್ರಿ ಪೂರ್ಣಿಮಾ ರಾಮ್‌ಕುಮಾರ್ ಅಭಿಪ್ರಾಯಪಟ್ಟರು.

ಚಾಮರಾಜಪೇಟೆಯಲ್ಲಿ ಕಲಾವಿದರ ಸಂಘದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಆರ್. ಮಂಜುನಾಥ್ ಚವ್ಹಾಣ್ ಹಾಗೂ ಡಾ. ಸೌಮ್ಯಾ ಮಂಜುನಾಥ್ ರಚಿತ ಡಾ. ರಾಜ್ ಕುಮಾರ್ ಅವರ ಸಂಗೀತ ಜ್ಞಾನವನ್ನು ಪರಿಚಯಿಸುವ 'ನಾದಯೋಗಿ ಡಾ.ರಾಜ್ ಕುಮಾರ್' ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಲೇಖಕ ಆರ್. ಮಂಜುನಾಥ್ ಚವ್ಹಾಣ್ ಮಾತನಾಡಿ, ''ಡಾ. ರಾಜ್‌ಕುಮಾರ್ ಅವರಿಗಿದ್ದ ಸಂಗೀತ ಜ್ಞಾನವನ್ನು ಪುಸ್ತಕ ರೂಪದಲ್ಲಿ ಎಲ್ಲರಿಗೂ ಪರಿಚಯಿಸುವ ಉದ್ದೇಶದಿಂದ 'ನಾದಯೋಗಿ ಡಾ ರಾಜ್‌ಕುಮಾರ್' ಎಂಬ ಪುಸ್ತಕವನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಬರೆದಿದ್ದೇನೆ,'' ಎಂದರು.

ಡಾ. ರಾಜ್‌ಕುಮಾರ್ ಸಹೋದರ ವರದಪ್ಪ ಅವರ ಪುತ್ರಿ ಡಾ.ಲತಾ, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಲಹರಿ ಸಂಸ್ಥೆಯ ಮನೋಹರ ನಾಯ್ಡು, ಲಹರಿ ವೇಲು ಸಮಾರಂಭದಲ್ಲಿ ಭಾಗವಹಿಸಿದ್ದರು.

'ಕೆಲಸ ನೋಡಿ ಅನುದಾನ ಕೊಡಿ'

ಬೆಂಗಳೂರು: ಸಂಸ್ಕಾರವಿದ್ದರೆ ನಮಸ್ಕಾರ ತಾನಾಗಿಯೇ ಬರುತ್ತದೆ. ಒಂದು ಸರಕಾರ ಮಾಡಬಹುದಾದ ಎಲ್ಲಾ ಕೆಲಸಗಳನ್ನು ಒಂದು ಸಮಾಜ ಸೇವಾ ಸಂಸ್ಥೆ ಮಾಡುತ್ತಿದೆ ಎಂದು ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ಉದಯಭಾನು ಕಲಾಸಂಘದ ವಜ್ರ ಮಹೋತ್ಸವ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಭಾನುವಾರ ಅವರು ಮಾತನಾಡಿದರು. ''ಸರಕಾರವು ಉದಯಭಾನು ಕಲಾ ಸಂಘದಿಂದ ಅರ್ಜಿ ಪಡೆದು ಅನುದಾನ ನೀಡುವ ಅವಶ್ಯಕತೆ ಇಲ್ಲ. ಅದರ ಕಾರ್ಯಗಳನ್ನು ಗುರುತಿಸಿ ಅನುದಾನ ನೀಡಬೇಕು. ಆದರಿಂದ ಸರಕಾರಕ್ಕೇ ಗೌರವ,'' ಎಂದರು.

ಕಾರ್ಯಕ್ರಮದಲ್ಲಿ ವಿದ್ವಾನ್ ಆರ್. ಕೆ. ಶಂಕರ್ ಮತ್ತು ತಂಡದವರಿಂದ 'ವೀಣಾ ನಾದ ವೈಭವ' ಕಛೇರಿ ಏರ್ಪಡಿಸಲಾಗಿತ್ತು. ಉದಯಭಾನು ಕಲಾಸಂಘದ ಸಂಸ್ಥಾಪಕ ಗೌರವಾಧ್ಯಕ್ಷ ಎಂ. ನರಸಿಂಹ, ಸಹಾಯಕ ಕಾರ್ಯದರ್ಶಿ ಎಚ್.ಎಸ್. ಕಪಿನಯ್ಯ, ಕೋಶಾಧ್ಯಕ್ಷ ಡಾ.ಎಸ್. ಅನಿಲ್ ಕುಮಾರ್, ದಾಕ್ಷಾಯಿಣಿ ಇದ್ದರು.

'ವನ್ಯಜೀವಿ ಸಂರಕ್ಷಣೆಗೆ ಆಸಕ್ತಿ, ಮನಸ್ಸು ಮುಖ್ಯ'

■ ವಿಕ ಸುದ್ದಿಲೋಕ ಬೆಂಗಳೂರು



ಇತ್ತೀಚಿನವರು ವನ್ಯಜೀವಿ ಸಂರಕ್ಷಣೆಯನ್ನು 'ಕೆರಿಯರ್' ಆಗಿ ನೋಡುತ್ತಿದ್ದಾರೆ. ಆದರೆ, ಇದರಲ್ಲಿ ತೊಡಗಲು ನಿಜವಾದ ಆಸಕ್ತಿ ಮತ್ತು ಮನಸ್ಸು ಇರಬೇಕು ಎಂದು ವನ್ಯಜೀವಿ ಸಂರಕ್ಷಕ, ಲೇಖಕ ಸಂಜಯ್ ಗುಬ್ಬಿ ಅಭಿಪ್ರಾಯಪಟ್ಟರು

ನಗರದ ಸುಚಿತ್ರಾ ಸಭಾಂಗಣದಲ್ಲಿ ಭಾನುವಾರ ಅಂಕಿತ ಪುಸ್ತಕ ಪ್ರಕಾಶನ, ಹೊಳೆಮತ್ತಿ ನೇಚರ್ ಫೌಂಡೇಶನ್ ಸಹಯೋಗದಲ್ಲಿ ಸಂಜಯ್ ಗುಬ್ಬಿ ರಚಿತ 'ಕಾಡಿನ ಗೆಳೆಯರ ಕಾಡುವ ಕಥೆಗಳು' ಮತ್ತು 'ಕಾಡಿನೊಳಗೊಂದು ಮನೆಯ ಮಾಡಿ' ಹೊಸ ಕೃತಿಗಳ ಬಿಡುಗಡೆ ಸಮಾರಂಭದ ಅಂಗವಾಗಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''1985ರ ಸಮಯದಲ್ಲಿ ನಾನು ಸ್ಕೌಟ್ಸ್‌ಗೆ ಸೇರಿದ್ದೆ. ಆಗ ಒಮ್ಮೆ ನಾಗರಹೊಳೆ ಕಾಡಿಗೆ ಟ್ರೆಕ್ಕಿಂಗ್‌ಗೆ ಹೋಗಿದ್ದೆ. ಅಲ್ಲಿ ಚಿಣ್ಣಪ್ಪ ಎಂಬ ವಲಯ ಅರಣ್ಯಾಧಿಕಾರಿ ಇದ್ದರು. ಅವರು ನೀವೇನು ಕಾಡು ನೋಡಲು ಬರುವುದು ಎಂದು ಬಯ್ಯುತ್ತಿದ್ದರು. ಆದರೂ, ಕಾಲ್ನಡಿಗೆಯಲ್ಲಿ ನಡೆದು ಕಾಡನ್ನು ನೋಡಿದೆ. ಅಲ್ಲಿಂದ ನನಗೆ ವನ್ಯಜೀವಿ, ನಾಗರಹೊಳೆ ಮತ್ತು ಕಾಡಿನ ಬಗ್ಗೆ ಆಸಕ್ತಿ ಬೆಳೆಯಿತು. ಅದಕ್ಕೂ ಮುನ್ನ ಕೇವಲ ಪಕ್ಷಿ ವೀಕ್ಷಕನಾಗಿದ್ದೆ. ನಾನು ವನ್ಯಜೀವಿ ವಿಜ್ಞಾನಿಯಲ್ಲ, ವನ್ಯಜೀವಿ ಸಂರಕ್ಷಕ. ಕಾಡು ಉಳಿಯಬೇಕು, ವನ್ಯಜೀವಿ ಉಳಿಯಬೇಕು ಎಂಬುದು ನನ್ನ ಮೂಲ ಉದ್ದೇಶ,'' ಎಂದರು.

''ಈಗ ಅನೇಕರು ವನ್ಯಜೀವಿ ಸಂರಕ್ಷಣೆ ಎಂಬುದು 'ಕೆರಿಯರ್' ಭಾವಿಸಿ, ಕೆಲಸ ಮಾಡುತ್ತಿದ್ದಾರೆ. ನಮಗೆಲ್ಲ ಅದು ಫ್ಯಾಷನ್, ಅದನ್ನು ಫ್ಯಾಷನ್ ಆಗಿಯೇ ಇಟ್ಟುಕೊಳ್ಳಬೇಕು. ಕನ್ನಡ ಭಾಷೆ, ರಾಜ್ಯ, ವನ್ಯಜೀವಿ, ಹಳ್ಳಿಗರು, ಅಲ್ಲಿನ ಕಲೆ-ಸಂಸ್ಕೃತಿ ಎಲ್ಲವನ್ನೂ ತಿಳಿದಿರುವುದು ವನ್ಯಜೀವಿ ಸಂರಕ್ಷಕರ ಅರ್ಹತೆ ಆಗಿರಬೇಕು. 20-30 ವರ್ಷಗಳಿಂದ ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿದ್ದೇವೆ ಎನ್ನುವವರು ಬೆಂಗಳೂರಿನಿಂದ ಹೊರಗೆ ಹೋಗುವಾಗ ಗೂಗಲ್ ಮ್ಯಾಪ್ ಇಲ್ಲದೆ ಹೋಗುವುದಿಲ್ಲ,'' ಎಂದರು.

ಪುಸ್ತಕ ಬಿಡುಗಡೆಗೊಳಿಸಿ, ಕೃತಿ ಕುರಿತು ಮಾತನಾಡಿದ ಹಿರಿಯ ಪರಿಸರ ಬರಹಗಾರ ನಾಗೇಶ್ ಹೆಗಡೆ, ''ಪ್ರತಿದಿನವೂ ವನ್ಯಜೀವಿಗಳ ಸುದ್ದಿ ಬರುತ್ತಿದ್ದು, ಹೆಚ್ಚಾಗಿ ಮಾನವ- ವನ್ಯಜೀವಿಗಳ ಸಂಘರ್ಷಗಳ ಸುದ್ದಿ ಕೇಳಿ ಬರುತ್ತಿದೆ. ಕನಿಷ್ಠ ಮನಸ್ಥಿತಿಯಲ್ಲಿಯಾದರೂ ನಾವು ಕಾಡಿನ ಮಿತ್ರರಾಗಿರಬೇಕು. ವನ್ಯಜೀವಿಗಳ ಒಲವಿನ ಬಗ್ಗೆ ಹೇಳಹೊರಟಿರುವ ಸಂಜಯ್ ಗುಬ್ಬಿಯವರಂತಹ ರಾಯಭಾರಿಗಳು ಅಗತ್ಯ ಹಾಗೂ ಪ್ರಕೃತಿಯ ಮಹತ್ವವನ್ನು ತಿಳಿಸಲು ಇಂತಹ ಕೃತಿಗಳು ಅತ್ಯಗತ್ಯ,'' ಎಂದರು.

ಪತ್ರಕರ್ತ ಕಟ್ಟೆ ಗುರುರಾಜ್, ಕೆ.ಎನ್. ಶಾಂತಕುಮಾರ್, ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶಕರಾದ ಪ್ರಕಾಶ್ ಕಂಬತ್ತಳ್ಳಿ ಉಪಸ್ಥಿತರಿದ್ದರು.

'ಸಂಬಳವಿಲ್ಲದೆ ಕೆಲಸ ಮಾಡಿದ್ದೇನೆ'

''ವನ್ಯಜೀವಿ ಸಂರಕ್ಷಣೆಗೆ ದೇಣಿಗೆ ಬರುತ್ತದೆ. ಆದರೆ, ಹಣದ ಹೊಳೆ ಹರಿಯುವುದಿಲ್ಲ. ಬರುವ ಹಣವು ಕಾನೂನಾತ್ಮಕವಾಗಿ ಬರುತ್ತದೆ. ಆ ಹಣದ ಮೇಲೆ ಸರಕಾರದ ಕಣ್ಣಿರುತ್ತದೆ. ಅಲ್ಲದೆ, ಸರಕಾರ ನಾವು ಮಾಡುವ ಕೆಲಸವನ್ನು ಮೌಲ್ಯಮಾಪನ ಮಾಡುತ್ತದೆ. ಸರಕಾರಕ್ಕೆ ಖರ್ಚು-ವೆಚ್ಚದ ಲೆಕ್ಕ ನೀಡಬೇಕು. ನಾನು ಇಂದಿಗೂ ಸಂಬಳದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಒಂದು ವರ್ಷ ದೇಣಿಗೆ ಇಲ್ಲದೆ, ಸಂಬಳವೂ ಇಲ್ಲದೆ ಕೆಲಸ ಮಾಡಿದ್ದೇನೆ,'' ಎಂದು ಸಂಜಯ್ ಗುಬ್ಬಿ ಹೇಳಿದರು.

'ಒಳ ಮೀಸಲು ಹಂಚಿಕೆಯಲ್ಲಿ ವಂಚನೆ'

ವಿದ್ಯಾರ್ಥಿಗಳಿಗೆ ಸನ್ಮಾನ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಸರಕಾರ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಅಲೆಮಾರಿ ಸಮುದಾಯಗಳಿಗೆ ಒಳ ಮೀಸಲು ಹಂಚಿಕೆಯಲ್ಲಿ ಶೇ.1 ಮೀಸಲು ನೀಡದೆ ದ್ರೋಹ ಮಾಡುತ್ತಿದೆ ಎಂದು ಅಲೆಮಾರಿ ಸುಡುಗಾಡು ಸಿದ್ಧರ ಮಹಾಸಭಾದ ರಾಜ್ಯಾಧ್ಯಕ್ಷ ಬಿ.ಎಲ್. ಹನುಮಂತಪ್ಪ ಬೇಸರ ವ್ಯಕ್ತಪಡಿಸಿದರು.

ಅಲೆಮಾರಿ ಸುಡುಗಾಡು ಸಿದ್ಧ ಮಹಾಸಭಾ ವತಿಯಿಂದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು. ''ಪ. ಜಾತಿಯ ಪಟ್ಟಿಯಲ್ಲಿರುವ 59 ಅಲೆಮಾರಿ ಸಮುದಾಯಗಳು ಅತಿ ಹಿಂದುಳಿದ ಸಮುದಾಯಗಳಾಗಿವೆ. ಆದರೆ, ರಾಜ್ಯ ಸರಕಾರ ನಮ್ಮನ್ನು ನಿರ್ಲಕ್ಷ್ಯ ಮಾಡಿದೆ ಮತ್ತು ಒಳ ಮೀಸಲು ಹಂಚಿಕೆಯಲ್ಲಿ ಅನ್ಯಾಯ ಮಾಡಿದೆ. ಅನೇಕ ಹೋರಾಟ ಮಾಡಿದರೂ ಕೇವಲ ಶೇ.1ರಷ್ಟು ಮೀಸಲು ನೀಡಿ ವಂಚಿಸಿದೆ. ಇದರಿಂದ ಉತ್ತಮ ಅಂಕ ಪಡೆದ ನಮ್ಮ ಸಮಾಜದ ಮಕ್ಕಳು, ವಿದ್ಯಾರ್ಥಿಗಳಿಗೆ ಸರಕಾರಿ ಉದ್ಯೋಗ ಮರೀಚಿಕೆಯಾಗಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳನ್ನು ಸನ್ಮಾನಿಸಿದ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕನಾಥ್, ''ಸಮುದಾಯದ ಪ್ರತಿಭಾವಂತರನ್ನು ಗುರುತಿಸಿ, ಪ್ರೋತ್ಸಾಹಿಸುವ ಕಾರ್ಯಕ್ರಮಗಳು ಹೆಚ್ಚಾಗಬೇಕು. ಉನ್ನತ ವ್ಯಾಸಂಗಕ್ಕೆ ಮಕ್ಕಳನ್ನು ಉತ್ತೇಜಿಸಬೇಕು. ಸಂಘಟಿತರಾಗಬೇಕು,'' ಎಂದು ಸಲಹೆ ನೀಡಿದರು. ಮಹಾಸಭಾದ ರಾಜ್ಯ ಕಾರ್ಯದರ್ಶಿ ಹುಸೇನಪ್ಪ, ಮಹೇಶ್ ಗಂಟೆ ಸೇರಿದಂತೆ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಸಂಘದ ಪದಾಧಿಕಾರಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಲವಲVK

ಬಹುನಿರೀಕ್ಷಿತ 'ರಾಮಾಯಣ ಭಾಗ-1' ಸಿನಿಮಾ ಈಗಾಗಲೇ ನಿಗದಿಯಾಗಿರುವಂತೆ ಈ ವರ್ಷದ ದೀಪಾವಳಿ ಹಬ್ಬಕ್ಕೂ ಒಂದು ವಾರ ಮೊದಲು ಅಂದರೆ ಅಕ್ಟೋಬರ್ 30ರಂದು ತೆರೆಗೆ ಬರುವ ಸಾಧ್ಯತೆ ಇದೆ.

ಕಾನ್ಸ್‌ನಲ್ಲಿ ಐಶ್ವರ್ಯಾ ಮೆಲೊಡಿ

ಬಾಲಿವುಡ್ ನಟಿ ಐಶ್ವರ್ಯಾ ರೈ ಈ ಬಾರಿಯೂ ತಮ್ಮ ಅದ್ಭುತ ಡಿಸೈನರ್ ಉಡುಪುಗಳ ಮೂಲಕ ತಾವೇ ಕಾನ್ಸ್ ಕ್ವೀನ್ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಚೆಲುವಿನ ಖನಿ ಐಶ್ವರ್ಯಾ ರೈ ಕಾನ್ಸ್ ಚಲಚಿತ್ರೋತ್ಸವ 2026ರ ರೆಡ್ ಕಾರ್ಪೆಟ್‌ನಲ್ಲಿ ಕೊನೆಗೂ ಕಾಣಿಸಿಕೊಂಡು ತಮ್ಮ ಅಸಂಖ್ಯಾತ ಅಭಿಮಾನಿಗಳಿಗೆ ಮೋಡಿ ಮಾಡಿದ್ದಾರೆ. ಈ ಬಾರಿಯ ಗ್ರ್ಯಾಂಡ್ ಎಂಟ್ರಿಯ ಮೂಲಕ ಅವರು 24 ವರ್ಷಗಳಿಂದ ಕಾನ್ಸ್ ಅಂಗಳದಲ್ಲಿ ತಪ್ಪದೇ ಭಾಗಿಯಾಗುತ್ತಿರುವ ಏಕೈಕ ಭಾರತೀಯ ನಟಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಐಶ್ವರ್ಯಾ ರೈ 2002ರಲ್ಲಿ ತಮ್ಮ ನಟನೆಯ 'ದೇವದಾಸ್' ಸಿನಿಮಾ ಪ್ರೀಮಿಯರ್‌ಗಾಗಿ ಮೊದಲ ಬಾರಿಗೆ ಕಾನ್ಸ್ ಚಿತ್ರೋತ್ಸವಕ್ಕೆ ಶಾರುಖ್ ಖಾನ್‌ರೊಂದಿಗೆ ಹೆಜ್ಜೆ ಇಟ್ಟಿದ್ದರು. ಅಂದಿನಿಂದ ಈ ಚಿತ್ರದ ಮೂಲಕ ಭಾರತೀಯ ಸಿನಿಮಾಗಳಿಗೆ ಪ್ರತಿಷ್ಠಿತ ಕಾನ್ಸ್ ಅಂಗಳದಲ್ಲಿ ವಿಶೇಷ ಸ್ಥಾನಮಾನ ದೊರೆಯಿತು ಎಂದು ಹೇಳಲಾಗುತ್ತಿದೆ. 2004ರಿಂದ 2007ರವರೆಗೆ ಸಿನಿಮಾ ಕೆಲಸಗಳಲ್ಲಿ ಬಿಝಿ ಆಗಿದ್ದ ಐಶ್ 2007ರಲ್ಲಿ ಮತ್ತೆ ಕಾನ್ಸ್‌ಗೆ ಗ್ರ್ಯಾಂಡ್ ಎಂಟ್ರಿ ನೀಡಿದರು. ಆ ಬಳಿಕ ನಿರಂತರವಾಗಿ ಅವರು ಕಾನ್ಸ್ ಅಂಗಳದಲ್ಲಿ ತಮ್ಮ ವಿಭಿನ್ನ ಫ್ಯಾಷನಬಲ್ ಡಿಸೈನರ್ ವೇರ್‌ಗಳ ಮೂಲಕ ಬಾಲಿವುಡ್ ಹಾಗೂ ಗ್ಲೋಬಲ್ ಸಿನಿಮಾಗಳ ನಡುವಿನ ಸೇತುವೆಯಾಗಿ, ಅಂತಾರಾಷ್ಟ್ರೀಯ ಸಿನಿಮಾ ವೇದಿಕೆಯಲ್ಲಿ ಭಾರತೀಯ ಸಾಂಸ್ಕೃತಿಕ ರಾಯಭಾರಿಯಾಗಿ ಗಮನ ಸೆಳೆಯುತ್ತಿದ್ದಾರೆ.

2016ರಲ್ಲಿ ಐಶ್ವರ್ಯಾರ ಕಾನ್ಸ್ ಲುಕ್‌ನಲ್ಲಿ ಅವರು ಹಚ್ಚಿಕೊಂಡಿದ್ದ ನೇರಳೆ ಬಣ್ಣದ ಲಿಪ್‌ಸ್ಟಿಕ್ ಹೆಚ್ಚು ಗಮನ ಸೆಳೆದಿತ್ತು. ಕಳೆದ ವರ್ಷ ಅವರು ಆಪರೇಷನ್ ಸಿಂದೂರದ ಪ್ರತೀಕವಾಗಿ ಹಣೆಗೆ ಸಿಂಧೂರವಿಟ್ಟು ಪಾಲ್ಗೊಂಡಿದ್ದು ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ಬಾರಿ ಅವರು ಮೊದಲ ರೆಡ್ ಕಾರ್ಪೆಟ್ ಎಂಟ್ರಿಗೆ ಕಡು ನೀಲಿ ಬಣ್ಣದ ಮರ್ಮೈಡ್ ಗೌನ್ ಧರಿಸಿದ್ದರು. ಇದಕ್ಕೆ ಅದೇ ಬಣ್ಣದ ಉದ್ದನೆಯ ಶಾಲು, ಕೊರಳಿಗೆ ನೀಲಿ ಹರಳಿನ ನೆಕ್ ಪೀಸ್ ಹಾಕಿ, ಕೂದಲನ್ನು ಇಳಿಬಿಟ್ಟಿದ್ದ ಅವರ ಫೋಟೊ ಮತ್ತು ವಿಡಿಯೊಗಳು ಸೂಪರ್ ವೈರಲ್ ಆಗಿವೆ.

ಕಾನ್ಸ್‌ನ ಎರಡನೇ ಲುಕ್‌ನಲ್ಲಿ ಐಶ್ವರ್ಯಾ ರೈ ತಮ್ಮ ಮಗಳು ಆರಾಧ್ಯಾ ಜತೆಗೆ ಹೊರಾಂಗಣದಲ್ಲಿ ಬ್ಲಶ್ ಪಿಂಕ್ ಬಣ್ಣದ ಕ್ರಿಸ್ಟಲ್ ಫ್ಲೋರಲ್ ಚಿತ್ತಾರಗಳಿದ್ದ ಗೌನ್‌ನಲ್ಲಿ ಕಂಗೊಳಿಸಿದರು. ಈ ಸ್ಯಾಟಿನ್ ಗೌನ್‌ಗೆ ಅವರು ಉದ್ದನೆಯ ಕೇಪ್ ಧರಿಸಿದ್ದು ವಿಶೇಷವಾಗಿತ್ತು. ಮೂರನೇ ಲುಕ್‌ನಲ್ಲಿ ಅವರು ಬಿಳಿ ಬಣ್ಣದ ಪ್ಯಾಂಟ್ ಸೂಟ್‌ಗೆ ಬಿಳಿ ಬಣ್ಣದ ಫೆದರ್ ರ‍್ಯಾಪ್ ಸುತ್ತಿ ಸ್ಟೈಲಿಶ್ ಲುಕ್‌ನಲ್ಲಿ ಪೋಸ್ ನೀಡಿದರು. ■

ಯು ಟರ್ನ್ ಕಾಣದ ಶ್ರದ್ಧಾ

ಕನ್ನಡದಲ್ಲಿ 'ಯು ಟರ್ನ್' ಎಂಬ ಯಶಸ್ವಿ ಸಿನಿಮಾ ಮೂಲಕ ವೃತ್ತಿಜೀವನ ಆರಂಭಿಸಿದ್ದ ನಟಿ ಶ್ರದ್ಧಾ ಶ್ರೀನಾಥ್ ಕಳೆದ 10 ವರ್ಷಗಳಲ್ಲಿ ಪಂಚಭಾಷಾ ತಾರೆಯಾಗಿ ಮಿಂಚುತ್ತಿದ್ದಾರೆ. ತಮ್ಮ ಸಿನಿ ಜರ್ನಿ ಕುರಿತು ಅವರು ಲವಲvkಯೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ.

ಕಿರಣ್ ಚಂದ್ರ
kiran.b@timesofindia.com

ಕನ್ನಡತಿ ಶ್ರದ್ಧಾ ಶ್ರೀನಾಥ್ ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿಯಲ್ಲಿ ಈವರೆಗೆ 25ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದು, ವೆಬ್ ಸರಣಿ ಲೋಕದ ಬೇಡಿಕೆಯ ನಟಿಯಾಗಿದ್ದಾರೆ. ಭಾರತದ ಅತ್ಯುತ್ತಮ ಕಲಾವಿದರೊಂದಿಗೆ ನಟಿಸಿ ಉತ್ತಮ ಅನುಭವ ಪಡೆದಿರುವ ಅವರು ತಮ್ಮ ಸಿನಿ ಬದುಕಿನಲ್ಲಿ ಇನ್ನಷ್ಟು ಹೊಸ ಕನಸುಗಳನ್ನು ಹೊಂದಿದ್ದಾರೆ.

ಹತ್ತು ವರ್ಷಗಳ ನಿಮ್ಮ ಸಿನಿ ಜರ್ನಿ ಹೇಗನಿಸುತ್ತಿದೆ?

ನನ್ನ ಸಿನಿ ಬದುಕಿಗೆ 10 ವರ್ಷಗಳಾಗಿವೆ ಎನ್ನುವುದನ್ನು ನಂಬಲಾಗುತ್ತಿಲ್ಲ. ಆರಂಭದಲ್ಲಿ ಇಷ್ಟು ವರ್ಷ ನಾನು ಚಿತ್ರರಂಗದಲ್ಲಿ ಉಳಿಯುತ್ತೇನೆಯೇ, ಪ್ರೇಕ್ಷಕರು ನನ್ನನ್ನು ಒಪ್ಪಿಕೊಳ್ಳುವರೇ ಎಂಬ ಅನುಮಾನದಲ್ಲಿಯೇ ಇದ್ದೆ. ಆದರೆ ಈಗ ಈ ಜರ್ನಿಗೆ ದಶಕದ ಸಂಭ್ರಮ. ನನ್ನ ಈ ಏಕಾಂಗಿ ಪಯಣದಲ್ಲಿ ನಾನು ಪಟ್ಟಿರುವ ಕಷ್ಟಗಳು ನನಗೆ ಮಾತ್ರ ಗೊತ್ತು. ಕಷ್ಟ ಇಷ್ಟಗಳೇನೇ ಇದ್ದರೂ ಈಗ ಹೆಮ್ಮೆ ಅನ್ನಿಸುತ್ತದೆ. ಒಳ್ಳೆಯ ಸಿನಿಮಾಗಳನ್ನು ಮಾಡಿದರೆ ಜನರು ಖಂಡಿತಾ ಇಷ್ಟಪಡುತ್ತಾರೆ, ಇನ್ನಷ್ಟು ಅವಕಾಶಗಳು ಸಿಗುತ್ತವೆ ಎನ್ನುವುದಕ್ಕೆ ನಾನೇ ಬೆಸ್ಟ್ ಉದಾಹರಣೆ. ನಾನು ಬಯಸಿದ್ದಕ್ಕಿಂತ ಹೆಚ್ಚು ಉತ್ತಮ ಸಿನಿಮಾಗಳು ನನಗೆ ಸಿಕ್ಕಿವೆ. ಮುಂದೆ ನನ್ನ ಜರ್ನಿ ಹೇಗಿರುತ್ತದೆ ಎಂಬ ಕುತೂಹಲದಲ್ಲಿ ಈಗ ಅವಕಾಶಗಳನ್ನು ಎದುರು ನೋಡುತ್ತಿದ್ದೇನೆ.

ಲವಲVK INTERVIEW

ಈ ಹತ್ತು ವರ್ಷಗಳಲ್ಲಿ ಚಿತ್ರರಂಗದಲ್ಲಿ ನೀವು ಕಂಡ ಬದಲಾವಣೆ?

ನನ್ನ ನಟನೆಯ ಮೊದಲ ಸಿನಿಮಾ ಅತ್ಯಂತ ಸಣ್ಣ ಬಜೆಟ್‌ನದ್ದು ಹಾಗೂ ಅದಕ್ಕೆ ಕ್ರೌಡ್ ಫಂಡಿಂಗ್ ಮಾಡಲಾಗಿತ್ತು. ಅದರ ಜತೆಗೆ ಬಿಗ್ ಪ್ರೊಡಕ್ಷನ್‌ನ ಬಿಗ್ ಸಿನಿಮಾಗಳಲ್ಲಿ ನಟಿಸಿದ್ದೇನೆ. ಈಗ ಎಲ್ಲರೂ ದೊಡ್ಡ ಬಜೆಟ್‌ನ ದೊಡ್ಡ ಸಿನಿಮಾಗಳಲ್ಲೇ ನಟಿಸಲು ಯೋಚಿಸುತ್ತಾರೆ. ಚಿಕ್ಕ ಕಥೆಗಳ ಸಿನಿಮಾ ಜತೆಗೆ ಪ್ಯಾನ್ ಇಂಡಿಯಾ, ಪ್ಯಾನ್ ವರ್ಲ್ಡ್ ಸಿನಿಮಾಗಳು ಕನ್ನಡ ನೆಲದಿಂದಲೇ ನಿರ್ಮಾಣವಾಗುತ್ತಿವೆ. ಈಗ ನಮ್ಮ ಕನ್ನಡ ಚಿತ್ರೋದ್ಯಮವನ್ನು ಕನ್ನಡಕಕ್ಕಷ್ಟೇ ಸೀಮಿತ ಎನ್ನಲಾಗದು. 'ಕಾಂತಾರ', 'ಕೆಜಿಎಫ್', 'ಟಾಕ್ಸಿಕ್'ನಂತಹ ದೊಡ್ಡ ಸಿನಿಮಾಗಳು ಇಲ್ಲಿಂದಲೇ ನಿರ್ಮಾಣವಾಗಿ ಜಾಗತಿಕ ಮನ್ನಣೆ ಪಡೆದಿವೆ. ಇಲ್ಲಿ ಹೊಸದನ್ನು ಮಾಡುವ ತುಡಿತವಂತೂ ಮೊದಲಿಗಿಂತಲೂ ಹೆಚ್ಚು ಕಾಣುತ್ತಿದೆ.

ದೊಡ್ಡ ಹಾಗೂ ಸಣ್ಣ ಸಿನಿಮಾಗಳಿಗೆ ನಿಮಗೆ ಸಿಗುವ ಪ್ರತಿಕ್ರಿಯೆ ಎಷ್ಟು ವಿಭಿನ್ನ?

ಜನರ ಪ್ರತಿಕ್ರಿಯೆಯ ಮೇಲೆ ನಾವು ನಮ್ಮ ಖುಷಿಯನ್ನು ಅವಲಂಬಿಸಲಾಗದು. ಕೆಲವೊಮ್ಮೆ ಅನಿರೀಕ್ಷಿತವಾಗಿ ಒಳ್ಳೆಯ ಪ್ರತಿಕ್ರಿಯೆ ಸಿಗುತ್ತದೆ. ಇದರಲ್ಲಿ ನಾವು ಎಷ್ಟು ಶ್ರದ್ಧೆ, ಆಸಕ್ತಿಯಿಂದ ಕೆಲಸ ಮಾಡುತ್ತೇವೆ, ಪಾತ್ರಗಳನ್ನು ಗಮನವಿಟ್ಟು ಎಷ್ಟು ಸೂಕ್ಷ್ಮವಾಗಿ ಆಯ್ಕೆ ಮಾಡುತ್ತಿದ್ದೇವೆ ಎನ್ನುವುದು ಮುಖ್ಯವಾಗುತ್ತದೆ. ನಾನು ಆಯ್ಕೆ ಮಾಡಿದ ಪಾತ್ರವು ಶೂಟಿಂಗ್ ಮುಗಿಯುವ ದಿನವೇ ನಾನು ಅಂದುಕೊಂಡಂತೆ ಮೂಡಿಬಂದಿದೆ ಎಂದು ಅನಿಸಿದಾಗಲೇ ತೃಪ್ತಿ ಮತ್ತು ಖುಷಿಯಾಗಿರುತ್ತದೆ. ಅಲ್ಲಿಂದ ನಾವು ಸಿನಿಮಾ ಸೇಲ್ಸ್‌ಮ್ಯಾನ್‌ಗಳಾಗುತ್ತೇವೆ. ಮಾರ್ಕೆಟಿಂಗ್‌ನವರಂತೆ ಸಿನಿಮಾ ಸೇಲ್ ಮಾಡಲು ಆರಂಭಿಸುತ್ತೇವೆ. ನಟಿಯಾಗಿ ನನ್ನ ಕೆಲಸ ಕೊನೆಯ ದಿನದ ಶೂಟಿಂಗ್‌ಗೆ ಮುಗಿದಿರುತ್ತದೆ. ಉಳಿದಿದ್ದೆಲ್ಲವೂ ಪ್ರೇಕ್ಷಕರ ಕೈಯಲ್ಲಿರುತ್ತದೆ.

ನಿಮ್ಮ ಮುಂದಿನ ಯೋಜನೆಯಲ್ಲಿ ನಿರ್ದೇಶನವಿದೆಯೇ?

ದೊಡ್ಡ ಜವಾಬ್ದಾರಿಯಾಗಿರುವ ಅದಕ್ಕೆ ಸಾಕಷ್ಟು ಶ್ರಮ ವಹಿಸಬೇಕಾಗುತ್ತೆ. ಹಾಗಂತ ನನ್ನ ಕೈಯಲ್ಲಿ ಡೈರೆಕ್ಷನ್ ಮಾಡಲು ಆಗಲ್ಲ ಎಂದೇನಿಲ್ಲ, ಅವಕಾಶ ಸಿಕ್ಕರೆ ಖಂಡಿತವಾಗಿ ಮಾಡಬಲ್ಲೆ ಎಂಬ ಆತ್ಮವಿಶ್ವಾಸವಿದೆ. ಸದ್ಯಕ್ಕೆ ನಾನು ನಟನೆಯ ಮೇಲೆ ಹೆಚ್ಚು ಗಮನವಿಟ್ಟಿದ್ದೇನೆ. ಈವರೆಗೆ ನಾನು ಮಾಡಿರದ ಪಾತ್ರಗಳು ಇನ್ನು ಮುಂದೆ ಸಿಗಲಿವೆ ಎಂಬ ಭರವಸೆ ಇದೆ. ಯಾವುದೇ ಪಾತ್ರವನ್ನು ನಿಭಾಯಿಸಬಲ್ಲೆ ಎಂಬುದನ್ನು ನಾನು ಇನ್ನೂ ಸಾಬೀತು ಮಾಡಬೇಕಿದೆ. ರೊಮ್ಯಾಂಟಿಕ್ ಪಾತ್ರ, 'ಪೊನ್ನಿಯಿನ್ ಸೆಲ್ವನ್'ನಂಥ ಪಿರಿಯಾಡಿಕ್ ಸಿನಿಮಾ, ಭಾರತದಲ್ಲಿ ಪ್ರಚಲಿತವಿಲ್ಲದ ಸೈನ್ಸ್ ಫಿಕ್ಷನ್‌ಗಳು ಸೇರಿದಂತೆ ಎಲ್ಲಾ ಬಗೆಯ ಪಾತ್ರಗಳನ್ನು ಮಾಡಲು ಕಾತರಳಾಗಿದ್ದೇನೆ. ಸದ್ಯಕ್ಕೆ ತೆಲುಗಿನಲ್ಲಿ 'ಗಲ್ಲಿ' ಸೇರಿದಂತೆ ಇನ್ನೊಂದು ಟೈಟಲ್ ಅಂತಿಮವಾಗದ ವೆಬ್ ಸಿರೀಸ್‌ನಲ್ಲಿ ನಟಿಸುತ್ತಿದ್ದೇನೆ. ■

ಮಲ್ಲಿಗೆ ಮೊಗ್ಗಿನ ಸೀರೆ ಸೆರಗು

ನಟಿ ಆಲಿಯಾ ಭಟ್ ಇತ್ತೀಚೆಗೆ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಧರಿಸಿದ್ದ ಮಲ್ಲಿಗೆ ಮೊಗ್ಗುಗಳ ಸೀರೆ ಫ್ಯಾಷನ್ ಲೋಕದಲ್ಲಿ ಸಂಚಲನ ಸೃಷ್ಟಿಸಿದೆ. ಸಾಂಪ್ರದಾಯಿಕ ಮತ್ತು ಆಧುನಿಕತೆಯ ಅದ್ಭುತ ಸಂಯೋಜನೆಯಾಗಿರುವ ಇಂಥ ಸೀರೆ ಮುಂಬರುವ ವೆಡ್ಡಿಂಗ್ ಸೀಸನ್‌ನಲ್ಲಿ ಟ್ರೆಂಡಿಯಾಗಲಿದೆ ಎನ್ನಲಾಗುತ್ತಿದೆ.

ಲವಲvk ಸುದ್ದಿ ಲೋಕ
feedbacklvk@vijaykarnataka.com

ಫ್ಯಾಷನಬಲ್ ಸೀರೆಪ್ರಿಯರ ವಲಯದಲ್ಲಿ ಸದ್ಯಕ್ಕೆ ನಟಿ ಆಲಿಯಾ ಭಟ್ ಇತ್ತೀಚೆಗೆ ಧರಿಸಿದ್ದ ಬಿಳಿ ಬಣ್ಣದ ಪ್ಲೈನ್ ಸ್ಯಾಟಿನ್ ಸಿಲ್ಕ್ ಸೀರೆಯದ್ದೇ ಸುದ್ದಿ. ಪ್ರತಿಬಾರಿಯೂ ತಾವು ಉಡುವ ಸೀರೆಯಲ್ಲಿ ಏನಾದರೊಂದು ವಿಶೇಷತೆ ತೋರಿಸುವ ಅವರು ಈ ಬಾರಿ ಮೋಗ್ರಾ ಪಲ್ಲು ಸೀರೆ ಧರಿಸಿ ಕಾಣಿಸಿಕೊಂಡಿದ್ದಾರೆ. ಮೋಗ್ರಾ ಪಲ್ಲು ಅಂದರೆ ಮಲ್ಲಿಗೆ ಹೂವಿನ ಸೆರಗು. ಈ ಮೂಲಕ ಅವರು ಮುಂಬರುವ ಮದುವೆ ಸೀಸನ್‌ಗೆ ಹೊಸ ಟ್ರೆಂಡನ್ನು ಪ್ರಸ್ತುತಪಡಿಸಿದ್ದಾರೆ.

ಮೊಗ್ಗಿನ ಕಲಾಕೃತಿ

ಮಲ್ಲಿಗೆ ಮೊಗ್ಗಿನ ಸೀರೆಯಲ್ಲಿ ಸಾಂಪ್ರದಾಯಿಕ ಸೆರಗಿನ ಅಂಚುಗಳಿಗೆ ನೈಜವಾಗಿ ಕಾಣುವ ಸುಂದರ ಮಲ್ಲಿಗೆ ಮೊಗ್ಗುಗಳನ್ನು ಕಲಾತ್ಮಕವಾಗಿ ಜೋಡಿಸಲಾಗಿರುತ್ತದೆ. ಸೆರಗಿನೊಂದಿಗೆ ಭುಜದವರೆಗೆ ಬರುವ ಮಲ್ಲಿಗೆ ಮಾಲೆ ಬೆನ್ನ ಹಿಂದೆ ಇಳಿಯುವ ಸೆರಗಿನಿಂದ ಬೇರ್ಪಟ್ಟು ತೂಗಾಡುತ್ತದೆ. ಹೂವಿನ ಮೊಗ್ಗುಗಳು ಸೆರಗಿನ ಕೆಳಭಾಗದಲ್ಲಿ ಕುಚ್ಚುಗಳಾಗಿ, ಅಂಚಿನಲ್ಲಿ ಜುಮ್ಕಿಯಂತೆ ತೂಗಾಡಿ ನವಿರಾಗಿ ಕಾಣಿಸುತ್ತವೆ. ಆಲಿಯಾ ಭಟ್ ಈ ಆಕರ್ಷಕ ಮಲ್ಲಿಗೆ ಮೊಗ್ಗಿನ ಸೆರಗಿನ ಸೀರೆಗೆ ಮುತ್ತುಗಳನ್ನು ಪೋಣಿಸಿದ ಡೀಪ್ ನೆಕ್ ಸ್ಲೀವ್‌ಲೆಸ್ ಬ್ಲೌಸ್ ಧರಿಸುವ ಮೂಲಕ ಸೀರೆಯ ಸಾಂಪ್ರದಾಯಿಕ ಲುಕ್ ಮತ್ತು ಬ್ಲೌಸ್‌ನ ಆಧುನಿಕ ನೋಟವನ್ನು ಸಮತೋಲಿತಗೊಳಿಸಿದ್ದರು.

ಹೊಸ ಟ್ರೆಂಡ್

ಆಲಿಯಾ ಭಟ್‌ರಿಂದ ಗಮನ ಸೆಳೆದಿರುವ ಮಲ್ಲಿಗೆ ಮೊಗ್ಗಿನ ಸೆರಗಿನ ಸೀರೆ ಮುಂದಿನ ದಿನಗಳಲ್ಲಿ ಹೊಸ ಟ್ರೆಂಡ್ ಆಗಲಿದೆ ಎಂದು ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಬ್ರೈಡಲ್ ಸೀರೆ, ಬ್ರೈಡ್ಸ್‌ಮೇಡ್ ಸೀರೆ, ಎಂಗೇಜ್ಮೆಂಟ್ ಸೀರೆ ಇತ್ಯಾದಿಗೆ ಇದು ಹೇಳಿಮಾಡಿಸಿದ ವಿನ್ಯಾಸವಾಗಿದೆ. ಸೀಕ್ವಿನ್ಸ್ ಅಥವಾ ಹೆವಿ ವರ್ಕ್‌ನ ಸೀರೆಗಳಿಂದ ಸ್ವಲ್ಪ ಸರಳ, ಫ್ಯಾಷನಬಲ್ ಮತ್ತು ವಿಭಿನ್ನ ಡಿಸೈನ್ ಟ್ರೈ ಮಾಡಲು ಬಯಸುವವರಿಗೆ ಮಲ್ಲಿಗೆ ಮೊಗ್ಗಿನ ಸೀರೆ ಅತ್ಯುತ್ತಮ ಆಯ್ಕೆಯಾಗಿದೆ.

ಸಾಫ್ಟ್ ಲುಕ್

ಪ್ರಸ್ತುತ ದಿನಗಳಲ್ಲಿ ತಮಗೆ ಕಂಫರ್ಟಬಲ್ ಅನಿಸುವ ಮತ್ತು ಅಷ್ಟೇ ಆಕರ್ಷಕವಾಗಿ ಕಾಣುವ ಸೀರೆಗಳತ್ತ ಯುವತಿಯರ ಒಲವು ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಆಲಿಯಾ ಭಟ್ ಅವರ ಮಲ್ಲಿಗೆ ಮೊಗ್ಗಿನ ಸೆರಗಿನ ಸೀರೆ ಉತ್ತಮ ಪ್ರಯೋಗವಾಗಿದೆ. ಅದ್ಧೂರಿ ವಿನ್ಯಾಸಗಳಿಂದ ಹೊರತಾಗಿರುವ ಈ ಸೀರೆಯ ವಿನ್ಯಾಸ, ನವಿರಾದ ಟೆಕ್ಸ್ಚರ್ ಮತ್ತು ಸಾಫ್ಟ್ ಲುಕ್ ಎಲ್ಲಿ ಹೋದರೂ ಹೈಲೈಟ್ ಆಗುತ್ತವೆ. ಇಂಥ ಸೀರೆಯ ಸರಳತೆಯೇ ಧರಿಸುವವರಿಗೆ ರಿಚ್ ಲುಕ್ ನೀಡುತ್ತದೆ. ಆದ್ದರಿಂದ ಮುಂಬರುವ ವಿಶೇಷ ಸಮಾರಂಭಗಳಿಗೆ ವಿಭಿನ್ನ ಸೀರೆ ಧರಿಸಲು ಬಯಸುವವರು ಇಂಥ ಸೀರೆ ಧರಿಸಿ ಅಪ್ರತಿಮ ಸೌಂದರ್ಯವನ್ನು ತಮ್ಮದಾಗಿಸಿಕೊಳ್ಳಬಹುದು. ■

ತಲ್ಪಾಡೆಗೆ ಕಾಜಲ್ ಜೋಡಿ

ನಟಿ ಕಾಜಲ್ ಅಗರ್ವಾಲ್ 'ದ ಇಂಡಿಯನ್ ಸ್ಟೋರಿ: ಸ್ಲೋ ಪಾಯ್ಸನ್ ಇನ್ ಪ್ರೋಗ್ರೆಸ್' ಸಿನಿಮಾದಲ್ಲಿ ಬಾಲಿವುಡ್ ನಟ ಶ್ರೇಯಸ್ ತಲ್ಪಾಡೆಗೆ ಜತೆಯಾಗಲಿದ್ದಾರೆ. ಈ ಸೋಶಿಯೊ-ನ್ಯಾಷನಲ್ ಡ್ರಾಮಾ ಚಿತ್ರವನ್ನು ಚೆಟ್ಟನ್ ಡಿಕೆ ನಿರ್ದೇಶಿಸುತ್ತಿದ್ದು, ಇದು ಜಗತ್ತಿನಾದ್ಯಂತ ಜುಲೈ 24ರಂದು ಹಿಂದಿ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.

ಕಾಜಲ್ ಮತ್ತು ಶ್ರೇಯಸ್ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾ ಕಥೆಯು ಕೃಷಿಗೆ ಬಳಸುವ ಕೀಟನಾಶಕಗಳ ಕುರಿತಾಗಿದ್ದು, ಈಗಾಗಲೇ ಸಾಕಷ್ಟು ಕುತೂಹಲ ಮೂಡಿಸಿದೆ. ಭಾರತದಲ್ಲಿ ರಾಸಾಯನಿಕ ವಸ್ತುಗಳ ಮುಖ್ಯವಾಗಿ ಕೃಷಿಯಲ್ಲಿ ಕೀಟನಾಶಕಗಳ ದುರ್ಬಳಕೆ ಮತ್ತು ಅವುಗಳು ಸಾರ್ವಜನಿಕರ ಆರೋಗ್ಯದ ಮೇಲೆ ಬೀರುವ ಪರಿಣಾಮಗಳನ್ನು ತೋರಿಸುವ ಪ್ರಯತ್ನ ಇದರಲ್ಲಿದೆ ಎನ್ನಲಾಗಿದೆ. ಇದರ ಪೋಸ್ಟರ್ ಕೂಡ ಸಾಕಷ್ಟು ಗಮನ ಸೆಳೆದಿದೆ.

'ದ ಇಂಡಿಯನ್ ಸ್ಟೋರಿ' ಸಿನಿಮಾ ದೇಶಾದ್ಯಂತ ಅಸಂಖ್ಯಾತ ಜೀವಗಳ ಮೇಲೆ ದುಷ್ಪರಿಣಾಮ ಬೀರುವ ಬೃಹತ್ ಸಮಸ್ಯೆ ಮತ್ತು ಈ ಕುರಿತು ಅಗತ್ಯವಾಗಿ ಮೂಡಬೇಕಿರುವ ಜನಜಾಗೃತಿಯ ಅಗತ್ಯವನ್ನು ಸಂಕೇತಿಸಲಿದೆ. ಈ ಚಿತ್ರದ ಮೂಲಕ ಕಾಜಲ್ ಅಗರ್ವಾಲ್ ಮತ್ತು ಶ್ರೇಯಸ್ ತಲ್ಪಾಡೆ ಇದೇ ಮೊದಲ ಬಾರಿಗೆ ತೆರೆಯಲ್ಲಿ ಜತೆಯಾಗುತ್ತಿದ್ದಾರೆ. ■

ಶ್ರುತಿಗೆ ಒಲಿದ ಹೆಲ್ಲೆಲ್ಲೆಲ್ಲೋ

ಬಹುನಿರೀಕ್ಷಿತ 'ಪೆದ್ದಿ' ಸಿನಿಮಾದಲ್ಲಿ ರಾಮ್ ಚರಣ್ ತೇಜ, ಶ್ರುತಿ ಹಾಸನ್, ಜಾಹ್ನವಿ ಕಪೂರ್ ಡಾನ್ಸ್ ಮಾಡಿರುವ, ಎ.ಆರ್. ರೆಹಮಾನ್ ಸಂಗೀತ ಸಂಯೋಜನೆಯಲ್ಲಿ ಮೂಡಿರುವ ಸ್ಪೆಶಲ್ ಸಾಂಗ್ 'ಹೆಲ್ಲೆಲ್ಲೆಲ್ಲೋ' ಜನರಿಂದ ಉತ್ತಮ ಪ್ರತಿಕ್ರಿಯೆ ಪಡೆದಿದೆ. ಈ ಹಿಂದೆ 'ಎವಡು' ಚಿತ್ರದಲ್ಲಿ ರಾಮ್ ಚರಣ್‌ಗೆ ಜೋಡಿಯಾಗಿದ್ದ ಶ್ರುತಿ ಈಗ ಬರೋಬ್ಬರಿ 12 ವರ್ಷಗಳ ನಂತರ 'ಪೆದ್ದಿ'ಯಲ್ಲಿ ರಾಮ್ ಚರಣ್ ಜತೆಗೆ ಸ್ಕ್ರೀನ್ ಶೇರ್ ಮಾಡುತ್ತಿದ್ದಾರೆ.

ಟಾಲಿವುಡ್‌ನ ಫೇವರಿಟ್ ಡಾನ್ಸ್ ಮಾಸ್ಟರ್ ಜಾನಿ ಮಾಸ್ಟರ್ ಕೊರಿಯೊಗ್ರಫಿಯಲ್ಲಿ ಬಂದಿರುವ ಈ ಹಾಡನ್ನು ರಕ್ಷಿತಾ ಸುರೇಶ್ ಹಾಡಿದ್ದು, ಅನಂತ ಶ್ರೀರಾಮ್ ಬರೆದಿದ್ದಾರೆ. ಈ ಹಾಡಿನಲ್ಲಿ ಡಾನ್ಸ್ ಮಾಡಲು ಮೃಣಾಲ್ ಠಾಕೂರ್, ಶಾರ್ವರಿ ವಾಘ್, ಸಂಯುಕ್ತಾ ಮೆನನ್, ಮಾನಸಾ ವಾರಣಾಸಿ, ತಮನ್ನಾ ಭಾಟಿಯ ಮುಂತಾದವರ ಹೆಸರು ಕೇಳಿಬಂದಿತ್ತು. ಅಂತಿಮವಾಗಿ ಈ ಅವಕಾಶ ಶ್ರುತಿ ಹಾಸನ್‌ಗೆ ಸಿಕ್ಕಿದೆ. ಬುಚ್ಚಿ ಬಾಬು ಸನಾ ನಿರ್ದೇಶನದ ಮಲ್ಟಿಸ್ಟಾರ್ ಸ್ಪೋರ್ಟ್ಸ್ ಸಿನಿಮಾ 'ಪೆದ್ದಿ' ಈಗಾಗಲೇ ಟ್ರೇಲರ್ ಹಾಗೂ ಹಾಡುಗಳಿಂದ ಗಮನ ಸೆಳೆದಿದೆ. ■

RNI No. KARKAN/2016/71628
Vol. 11 Issue no. 144
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.

ರಾಜ್ಯದಲ್ಲಿ ಬೆಳೆ ವ್ಯಾಪ್ತಿ ವಿಸ್ತರಿಸಲು ತೋಟಗಾರಿಕೆ ಇಲಾಖೆ ಚಿಂತನೆ

ತೆಂಗಿನ ಹೈಬ್ರಿಡ್ ತಳಿ ಬೀಜೋತ್ಪಾದನೆ

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ಎತ್ತರದ ತೆಂಗಿನ ಮರಗಳಿಗೆ ಪರಾಗಸ್ಪರ್ಶ ಹಾಗೂ ಕಾಯಿ ಕೀಳುವುದು, ನುಸಿ ಪೀಡೆ ತಡೆಯುವುದು ತೆಂಗು ಬೆಳೆಗಾರರಿಗೆ ತಲೆನೋವಿನ ಕೆಲಸ. ಇದರಿಂದಾಗಿ ಅಡಕೆ ಬೆಳೆಯತ್ತ ಮುಖ ಮಾಡಿರುವ ರೈತರನ್ನು ತೆಂಗು ಬೆಳೆಯತ್ತ ಸೆಳೆಯಲು ರಾಜ್ಯ ತೋಟಗಾರಿಕೆ ಇಲಾಖೆ ಚಿಂತನೆ ನಡೆಸಿದ್ದು, ಈ ಸಂಬಂಧ ತೆಂಗಿನ ಸಂಕರ (ಹೈಬ್ರಿಡ್) ತಳಿಗಳ ಬೀಜೋತ್ಪಾದನೆಗಾಗಿ ಹೆಚ್ಚುವರಿ ತೆಂಗು ತೋಟಗಳನ್ನು ನಿರ್ಮಿಸಲು ನಿರ್ಧರಿಸಿದೆ. ಈ ಸಂಬಂಧ ತೆಂಗು ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲು ಮುಂದಾಗಿದೆ.

ಎತ್ತರದ ಮರಗಳಲ್ಲಿ ಎಳನೀರು ಮತ್ತು ತೆಂಗಿನಕಾಯಿ ಕೀಳಿಸುವುದು ಕಷ್ಟ. ಅಲ್ಲದೆ, ಇತ್ತೀಚೆಗೆ ತೆಂಗಿಗೆ ರೋಗ ಬಾಧೆಗಳು ಹೇರಳವಾಗಿವೆ. ಹೀಗಾಗಿ, ರಾಜ್ಯದಲ್ಲಿ ತೆಂಗು ಬೆಳೆ ಪ್ರದೇಶ ಕ್ಷೀಣಿಸುತ್ತಿರುವುದು ಹಾಗೂ ತೆಂಗಿನಕಾಯಿ ಉತ್ಪಾದನೆ ಕುಂಠಿತಗೊಂಡಿರುವುದರಿಂದ ಬೆಳೆ ಅಭಿವೃದ್ಧಿ ಹಾಗೂ ಉತ್ಪಾದನೆ ಹೆಚ್ಚಳಕ್ಕೆ ಮಂಡಳಿಯು ಸಂಕರ ತಳಿಗಳ ಮೊರೆ ಹೋಗಿದೆ.

ಈ ನಿಟ್ಟಿನಲ್ಲಿ ವಿಶಿಷ್ಟ ಗುಣಗಳ ತೆಂಗು ಸಂಕರ ತಳಿಗಳನ್ನು ತೆಂಗು ಅಭಿವೃದ್ಧಿ ಮಂಡಳಿಯು ಅಭಿವೃದ್ಧಿಪಡಿಸಲಿದೆ. ಅವುಗಳನ್ನು ತೆಂಗು ತೋಟಗಳಲ್ಲಿ ಬೆಳೆಸಿ ಬೀಜೋತ್ಪಾದನೆ ಮಾಡಿ, ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಕೊಟ್ಟು ತೆಂಗು ಬೆಳೆಯನ್ನು ವಿಸ್ತರಣೆ ಮಾಡುವ ಗುರಿಯನ್ನು ತೋಟಗಾರಿಕೆ ಇಲಾಖೆ ಹೊಂದಿದೆ. ಸದ್ಯ ರಾಜ್ಯದಲ್ಲಿ ತೆಂಗು ಮಂಡಳಿಗೆ ಪ್ರತಿವರ್ಷ 1 ಲಕ್ಷ ಸಸಿಗಳನ್ನು ಮಾತ್ರ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತಿದೆ. ಹೀಗಾಗಿ, ಮುಂದಿನ ಐದು ವರ್ಷಗಳಲ್ಲಿ 15 ಲಕ್ಷ ಸಸಿಗಳನ್ನು ಅಭಿವೃದ್ಧಿಪಡಿಸಿ ವಿತರಿಸುವ ಗುರಿ ಹಾಕಿಕೊಂಡಿದೆ.

ಎಲ್ಲೆಲ್ಲಿ ತೋಟಗಳಿಗೆ ಪ್ರಸ್ತಾವನೆ

ಕೆಆರ್‌ಎಸ್‌ನಲ್ಲಿ ಹೈಬ್ರಿಡ್ ತಳಿಗಳ ಅಭಿವೃದ್ಧಿಪಡಿಸುವ ತೋಟವಿದೆ. ಇದರೊಂದಿಗೆ ಮಂಡ್ಯದ ನಾಗಮಂಗಲ ತಾಲೂಕಿನಲ್ಲಿ ಒಂದು ಕೇಂದ್ರ, ಹಾಸನ ತಾಲೂಕಿನಲ್ಲಿ ಒಂದು, ಮೈಸೂರಿನಲ್ಲಿ ಯಾವುದಾದರೂ ಒಂದು ಫಾರ್ಮ್‌ನಲ್ಲಿ ಸಂಕರ ತಳಿಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ತೀರ್ಮಾನಿಸಿ, ಈ ಸಂಬಂಧ ತೋಟಗಾರಿಕೆ ಇಲಾಖೆಯು ತೆಂಗು ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿದೆ.

ಸರಕಾರದಿಂದ ಸಹಾಯಧನ

ಹಳೆಯ ತೆಂಗಿನ ತೋಟಗಳ ಮರುನಾಟಿ ಮತ್ತು ಹೊಸ ಪ್ರದೇಶಗಳಲ್ಲಿ ತೆಂಗು ಕೃಷಿ ವಿಸ್ತರಣೆಗೆ ಸಹಾಯಧನ ನೀಡಲಾಗುತ್ತಿದೆ. ಹೆಕ್ಟೇರ್‌ಗೆ 15-28 ಸಾವಿರ ರೂ.ವರೆಗೆ ಸಹಾಯಧನ ಲಭ್ಯವಿದೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ರೈತರಿಗೆ ಉಚಿತವಾಗಿ ತೆಂಗಿನ ಸಸಿಗಳನ್ನು ವಿತರಿಸುವ ಕಾರ್ಯಕ್ರಮಗಳೂ ನಡೆಯುತ್ತಿವೆ. ತೆಂಗಿಗೆ ತಗಲುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆಗೆ ಸಹಾಯಧನ (ಶೇ. 75ರಷ್ಟು) ಒದಗಿಸಲಾಗುತ್ತಿದೆ. ಕೇವಲ ತೆಂಗಿನಕಾಯಿ ಮಾರಾಟವಲ್ಲದೆ, ನೀರಾ, ಕೊಬ್ಬರಿ, ತೆಂಗಿನ ನಾರು ಮುಂತಾದ ಉಪ ಉತ್ಪನ್ನಗಳ ತಯಾರಿಕೆ ಮತ್ತು ಮೌಲ್ಯವರ್ಧನೆಗೆ ತಜ್ಞರಿಂದ ತರಬೇತಿ ಹಾಗೂ ಪ್ರೋತ್ಸಾಹ ನೀಡಲಾಗುತ್ತಿದೆ.

ದಶಕದಿಂದೀಚೆಗೆ ಅಡಕೆ ಬೆಳೆಗೆ ಉತ್ತಮ ಬೆಲೆಯಿದೆ. ಹೀಗಾಗಿ, ಇತ್ತೀಚಿನ ವರ್ಷಗಳಲ್ಲಿ ರೈತರು ತೆಂಗು ತೆಗೆದು, ಅಡಕೆ ಬೆಳೆ ಹಾಕಿದ್ದರು. ಎರಡು ವರ್ಷಗಳಿಂದೀಚೆಗೆ ರಾಜ್ಯದಲ್ಲಿ 5-6 ಲಕ್ಷಕ್ಕೂ ಹೆಚ್ಚು ತೆಂಗಿನ ಮರಗಳನ್ನು ಕಡವಲಾಗಿದೆ. ಹೀಗಾಗಿ, ತೆಂಗಿನ ಬೆಳೆಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸುವ ಗುರಿಯಿದೆ.

-ಕೆ.ಎಂ. ಪರಶಿವಮೂರ್ತಿ
ಕಾರ್ಯನಿರ್ವಾಹಕ ನಿರ್ದೇಶಕ, ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಸಂಸ್ಥೆ

ವಿಮೆ ಸೌಲಭ್ಯವೂ ಉಂಟು

ಇನ್ನು, ತೆಂಗು ಅಭಿವೃದ್ಧಿ ಮಂಡಳಿಯಿಂದ ತೆಂಗು ಉತ್ಪಾದನೆಯಲ್ಲಿ ತೊಡಗಿಸಿಕೊಂಡವರು, ಕಾರ್ಮಿಕರಿಗೆ ವಿಮೆ ಸೌಲಭ್ಯವನ್ನೂ ಕಲ್ಪಿಸಲಾಗುತ್ತಿದೆ. ಕಾಯಿ ಕೀಳುವವರು, ಕಾಯಿ ಸುಲಿಯುವವರೂ ಸೇರಿದಂತೆ ತೆಂಗು ತೋಟ ನಿರ್ವಹಣೆ ಹಾಗೂ ಕಾಯಕದಲ್ಲಿ ತೊಡಗಿಸಿಕೊಂಡಿರುವ ವರ್ಗಕ್ಕೆ ವೈಯಕ್ತಿಕ ವಿಮೆ ಸೌಲಭ್ಯವನ್ನು ಮಂಡಳಿ ಕಲ್ಪಿಸುತ್ತಿದ್ದು, 7 ಲಕ್ಷ ರೂ. ವರೆಗೂ ಪರಿಹಾರ ದೊರೆಯಲಿದೆ.

ರಾಜ್ಯದಲ್ಲಿ 24.76 ಲಕ್ಷ ಟನ್ ಉತ್ಪಾದನೆ

ರಾಜ್ಯದಲ್ಲಿ ತುಮಕೂರು ಜಿಲ್ಲೆ ತೆಂಗು ಬೆಳೆಯಲ್ಲಿ ಮುಂಚೂಣಿಯಲ್ಲಿದೆ. ರಾಜ್ಯಾದ್ಯಂತ 5.64 ಲಕ್ಷಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ವಾರ್ಷಿಕ ಸರಾಸರಿ 24.76 ಲಕ್ಷ ಟನ್ ಉತ್ಪಾದನೆಯಾಗುತ್ತಿದೆ. ತೆಂಗು ಅಭಿವೃದ್ಧಿ ಮಂಡಳಿ ಪ್ರಕಾರ, ತೆಂಗು ಬೆಳೆಯಲ್ಲಿ ಕೇರಳ ಪ್ರಥಮ ಸ್ಥಾನ. ಕರ್ನಾಟಕ ದ್ವಿತೀಯ ಹಾಗೂ ತಮಿಳುನಾಡು ಮೂರನೇ ಸ್ಥಾನದಲ್ಲಿದೆ.

ಕಾಂಗ್ರೆಸ್ ನಮ್ಮ ಬೆನ್ನಿಗೆ ಚೂರಿ ಹಾಕಿದೆ

ಚೆನ್ನೈ: ತಮಿಳುನಾಡು ವಿಧಾನಸಭೆ ಪ್ರತಿಪಕ್ಷ ನಾಯಕ ಉದಯನಿಧಿ ಸ್ಟಾಲಿನ್ ಅವರು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ''ಕಾಂಗ್ರೆಸ್ ನಮ್ಮ ಬೆನ್ನಿಗೆ ಚೂರಿ ಹಾಕಿದೆ. ಆ ಪಕ್ಷವನ್ನು ಮತ್ತೆ ಎಂದಿಗೂ ನಂಬಬಾರದು,'' ಎಂದು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಡಿಎಂಕೆ ಯುವ ಘಟಕದ ಸಭೆಯಲ್ಲಿ ಮಾತನಾಡಿದ ಅವರು, ''20 ವರ್ಷಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ಪಕ್ಷವು ಡಿಎಂಕೆಯ ಬೆಂಬಲದಿಂದ ರಾಜಕೀಯ ಲಾಭ ಪಡೆಯಿತು. ಆದರೆ ಈಗ ಅದೇ ಪಕ್ಷ ನಮ್ಮ ವಿರುದ್ಧ ನಡೆದುಕೊಂಡಿದೆ. ಇದನ್ನು ಯಾರೂ ಮರೆಯಬಾರದು,'' ಎಂದರು. ''ಬಿಜೆಪಿಯ ನಿರಂತರ ಚುನಾವಣಾ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಕಾರಣರೆಂದು ಭಾವಿಸಿದ್ದೆವು. ಆದರೆ ಬಿಜೆಪಿಯ ಗೆಲುವಿಗೆ ಕಾಂಗ್ರೆಸ್ ಪಕ್ಷದ ದುರ್ಬಲ ರಾಜಕಾರಣವೇ ಪ್ರಮುಖ ಕಾರಣ ಎಂಬುದು ಈಗ ಸ್ಪಷ್ಟವಾಗಿದೆ,'' ಎಂದು ಅವರು ಟೀಕಿಸಿದರು.

''ವಿಜಯ್ ಸಿಎಂ ಆಗದಂತೆ ತಡೆಯಲು ನಡೆಸಿದ ಪ್ರಯತ್ನಗಳು ವಿಫಲಗೊಂಡಿದ್ದರಿಂದ ಡಿಎಂಕೆ ಹತಾಶೆಯಿಂದ ವರ್ತಿಸುತ್ತಿದೆ,'' ಎಂದು ಕಾಂಗ್ರೆಸ್ ಸಂಸದ ಬಿ. ಮಾಣಿಕಂ ಟ್ಯಾಗೋರ್ ತಿರುಗೇಟು ನೀಡಿದ್ದಾರೆ.

ಮಹದೇಶ್ವರ ಬೆಟ್ಟ ಮಾರ್ಗದಲ್ಲಿ ಆನೆ ಪ್ರತ್ಯಕ್ಷ

■ **ವಿಕ ಸುದ್ದಿಲೋಕ** ಹನೂರು (ಚಾಮರಾಜನಗರ)

ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವ ಮಾರ್ಗದಲ್ಲಿ ಭಾರಿ ಗಾತ್ರದ ಕಾಡಾನೆಯೊಂದು ಕಾಣಿಸಿಕೊಂಡು ದಿಗಿಲು ಹುಟ್ಟಿಸಿತ್ತು.

ಆನೆ ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳ ನಡುವೆ ಸಂಚರಿಸಿದ್ದರಿಂದ ಭಕ್ತರು ಹಾಗೂ ವಾಹನ ಸವಾರರಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು. ಕಾಡಾನೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗುವ ವೇಳೆ ರಸ್ತೆ ದಾಟಿದ್ದು, ಈ ಸಂದರ್ಭದಲ್ಲಿ ಆನೆ ರಸ್ತೆ ಮಧ್ಯೆ ಕೆಲಕಾಲ ನಿಂತ ಕಾರಣ ಚಾಲಕರು ವಾಹನಗಳನ್ನು ನಿಲ್ಲಿಸಿದ್ದರು.

ಬಳಿಕ ಆನೆ ನಿಧಾನವಾಗಿ ಕಾಡಿನೊಳಗೆ ತೆರಳಿದ ನಂತರ ವಾಹನ ಸಂಚಾರ ಸುಗಮವಾಯಿತು.

ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುವ ಪ್ರಮುಖ ಮಾರ್ಗದಲ್ಲಿ ಕಾಡಾನೆಯೊಂದು ಕಾಣಿಸಿಕೊಂಡಿತ್ತು.

ಪಿಯು ಪಾಸಾದ ವಿದ್ಯಾರ್ಥಿಗಳಿಗೆ ಡಿಜಿಟಲ್ ವರ್ಗಾವಣೆ ಪತ್ರ

■ **ವಿಕ ಸುದ್ದಿಲೋಕ** ಬೆಂಗಳೂರು

ದ್ವಿತೀಯ ಪಿಯು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿಗೆ ಡಿಜಿಟಲ್ ವರ್ಗಾವಣೆ ಪ್ರಮಾಣಪತ್ರ ವಿತರಣೆಗೆ ಅನುಮತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ಪದ್ಮಿನಿ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪ್ರಕಟಿಸಿರುವ ಫಲಿತಾಂಶದ ದತ್ತಾಂಶ ಬಳಸಿಕೊಂಡು ಸ್ವಯಂಚಾಲಿತವಾಗಿ ಡಿಜಿಟಲ್ ವರ್ಗಾವಣೆ ಪತ್ರ ರಚಿಸಲಾಗಿದ್ದು, ಡಿಜಿಲಾಕರ್ ಮೂಲಕ ವಿದ್ಯಾರ್ಥಿಗಳಿಗೆ ಇದು ಲಭ್ಯವಾಗಲಿದೆ. ಹೊಸ ಡಿಜಿಟಲ್ ವರ್ಗಾವಣೆ ಪ್ರಮಾಣಪತ್ರದಲ್ಲಿ ಹಳೆಯ ನಮೂನೆಯಲ್ಲಿದ್ದ ಶುಲ್ಕ ಬಾಕಿ, ವಿದ್ಯಾರ್ಥಿ ವೇತನ, ಹಾಜರಾತಿ ಲೆಕ್ಕಾಚಾರದ ಮಾಹಿತಿಗಳನ್ನು ಕೈಬಿಡಲಾಗಿದೆ. ವಿದ್ಯಾರ್ಥಿಯ ಶೈಕ್ಷಣಿಕ ದಾಖಲೆಗಳ ಜೋಡಣೆಗಾಗಿ ಸ್ಯಾಟ್ಸ್ ಸಂಖ್ಯೆಯ ಜತೆಗೆ, ಪರೀಕ್ಷಾ ನೋಂದಣಿ ಸಂಖ್ಯೆ, ಅಪಾರ್ ಐಡಿಯನ್ನು ಕೂಡ ಅಳವಡಿಸಲಾಗಿದೆ. ವಿದ್ಯಾರ್ಥಿಯ ನಡವಳಿಕೆ ಪತ್ರ ನೀಡಲು ಪ್ರಾಂಶುಪಾಲರಿಗೆ ಕಾಲಾವಕಾಶ ನೀಡಲಿದ್ದು, ನಿಗದಿತ ಸಮಯದ ಒಳಗಾಗಿ ಪ್ರತಿಕ್ರಿಯೆ ಸಿಗದಿದ್ದರೆ 'ಉತ್ತಮ' ಎಂದು ನಮೂದಿಸುವ ವ್ಯವಸ್ಥೆ ಮಾಡಲಾಗಿದೆ.

ಪ್ರಥಮ ಹಂತದಲ್ಲಿ ದತ್ತಾಂಶದ ನಿಖರತೆಗಾಗಿ ಕೇವಲ ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ 'ಫ್ರೆಶರ್ಸ್' ವಿದ್ಯಾರ್ಥಿಗಳಿಗೆ ಮಾತ್ರ ಈ ಡಿಜಿಟಲ್ ವರ್ಗಾವಣೆ ಪತ್ರ ಲಭ್ಯವಾಗಲಿದೆ. ಈ ಡಿಜಿಟಲ್ ಟಿಸಿ ಕ್ಯೂಆರ್ ಕೋಡ್ ಹೊಂದಿರಲಿದ್ದು, ವಿಶ್ವವಿದ್ಯಾಲಯಗಳು ಸುಲಭವಾಗಿ ಅಭ್ಯರ್ಥಿಯ ನೈಜತೆ ಪರಿಶೀಲಿಸಲು ಅವಕಾಶವಿರಲಿದೆ. ಫಲಿತಾಂಶ ಪ್ರಕಟವಾದಾಗಲೇ ವಿದ್ಯಾರ್ಥಿಗಳು ಡಿಜಿಟಲ್ ವರ್ಗಾವಣೆ ಪತ್ರ ಪಡೆಯುವುದರಿಂದ ಭೌತಿಕ ವರ್ಗಾವಣೆ ಪತ್ರಕ್ಕಾಗಿ ಶಾಲಾ-ಕಾಲೇಜುಗಳಿಗೆ ಅಲೆದಾಡುವ ಸಮಸ್ಯೆ ತಪ್ಪಲಿದೆ. ಮುಂದಿನ ವಿದ್ಯಾಭ್ಯಾಸಕ್ಕಾಗಿ ಈ ಡಿಜಿಟಲ್ ವರ್ಗಾವಣೆ ಪತ್ರದ ಮೂಲಕ ಪ್ರವೇಶ ಪಡೆಯಲು ಸಾಧ್ಯವಾಗಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಸರಕಾರಿ ಆಸ್ಪತ್ರೆ ದೂರಿಗೆ ವಾಟ್ಸ್ಆ್ಯಪ್

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರಿ ಆಸ್ಪತ್ರೆಗಳಲ್ಲಿನ ಕುಂದುಕೊರತೆ ಬಗ್ಗೆ ಮಾಹಿತಿ ಅಥವಾ ಸಲಹೆ ನೀಡಲು ಸಾರ್ವಜನಿಕರಿಗೆ ವಾಟ್ಸ್ಆ್ಯಪ್ ಮೂಲಕ ಸಂಪರ್ಕಿಸುವ ವಿನೂತನ ವ್ಯವಸ್ಥೆಯನ್ನು ಆರೋಗ್ಯ ಇಲಾಖೆ ಜಾರಿಗೊಳಿಸಿದೆ.

ರಾಜ್ಯದ ಆಸ್ಪತ್ರೆಗಳಲ್ಲಿ ಸ್ವಚ್ಛತೆ, ನೀರು, ವೈದ್ಯರು ಹಾಗೂ ವೈದ್ಯಕೀಯೇತರ ಸಿಬ್ಬಂದಿ ನಿರ್ಲಕ್ಷ್ಯ, ಚಿಕಿತ್ಸೆ ಸೇರಿ ಯಾವುದೇ ಸಮಸ್ಯೆ ಇದ್ದರೂ ಜನತೆ ಸಂದೇಶ ಕಳಿಸಬಹುದು. ಅಗತ್ಯವಿದ್ದರೆ ಫೋಟೊ, ವಿಡಿಯೊವನ್ನು ಕಳಿಸಬಹುದು. ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯೇ ನೇರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಿದ್ದಾರೆ.

ಜತೆಗೆ, ದೂರು ನೀಡಿದವರ ಹೆಸರನ್ನು ಬಹಿರಂಗಪಡಿಸುವುದಿಲ್ಲ ಎಂದು ಆಶ್ವಾಸನೆ ನೀಡಲಾಗಿದೆ. ಕೇವಲ ಸಂದೇಶ ಮಾತ್ರ ಸ್ವೀಕರಿಸಲಿದ್ದೇವೆ, ಕರೆ ಸ್ವೀಕರಿಸಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಜನತೆ ದೂರು ಅಥವಾ ಸಲಹೆ ನೀಡಲು ವಾಟ್ಸ್ಆ್ಯಪ್ ಸಂಖ್ಯೆ: 9449843001 ಸಂಪರ್ಕಿಸಬಹುದು.

ಜೂನ್ 19ರಂದು ಬೆಳ್ಳಿತೆರೆ ಮೇಲೆ ಜನ ನಾಯಗನ್

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ನಟನೆಯ ಕೊನೆಯ ಹಾಗೂ ಬಹು ನಿರೀಕ್ಷಿತ ಸಿನಿಮಾ 'ಜನ ನಾಯಗನ್' ಜೂನ್ 19 ರಂದು ಬಿಡುಗಡೆಯಾಗಲಿದೆ ಎಂದು ತಿಳಿದು ಬಂದಿದೆ.



ಸಿಬಿಎಫ್‌ಸಿ ಪ್ರಮಾಣಪತ್ರ ಪಡೆಯುವ ವಿಚಾರದಲ್ಲಿ ಎದುರಾದ ತೊಡಕು, ಕಾನೂನು ಹೋರಾಟದ ಬಳಿಕ ಐದು ತಿಂಗಳು ತಡವಾಗಿ ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಸಿನಿಮಾ ಬಿಡುಗಡೆ ದಿನಾಂಕ ಕುರಿತು ಚಿತ್ರ ತಂಡ ಯಾವುದೇ ಮಾಹಿತಿ ನೀಡಿಲ್ಲ, ಆದರೆ, ಟಿಕೆಟ್ ವೆಬ್‌ಸೈಟ್‌ಗಳಲ್ಲಿ ಜು.19 ರಂದು ಸಿನಿಮಾ ತೆರೆ ಕಾಣಲಿದೆ ಎಂಬ ಮಾಹಿತಿ ಹಂಚಿಕೊಳ್ಳಲಾಗಿದ್ದು, ಟಿಕೆಟ್ ಬುಕಿಂಗ್‌ಗೆ ಅವಕಾಶ ನೀಡಲಾಗಿದೆ.

ಕೆವಿಎನ್ ಪ್ರೊಡಕ್ಷನ್ ಅಡಿಯಲ್ಲಿ ವೆಂಕಟ್ ಕೆ. ನಾರಾಯಣ ಅವರು 'ಜನ ನಾಯಗನ್' ಸಿನಿಮಾ ನಿರ್ಮಿಸಿದ್ದು, ಎಚ್.ವಿನೋದ್ ನಿರ್ದೇಶನ ಮಾಡಿದ್ದಾರೆ. ವಿಜಯ್ ಜತೆ ಪೂಜಾ ಹೆಗ್ಡೆ, ಮಮಿತಾ ಬೈಜು ನಟಿಸಿದ್ದಾರೆ. ವಿಜಯ್ ನಟನೆಯ ಕೊನೆಯ ಚಿತ್ರವಾಗಿರುವ 'ಜನ ನಾಯಗನ್' ಜನವರಿ 9ರಂದು ಬಿಡುಗಡೆಯಾಗಬೇಕಿತ್ತು. ಸಿಬಿಎಫ್‌ಸಿ ಪ್ರಮಾಣಪತ್ರ ಪಡೆಯುವ ವಿಷಯವಾಗಿ ಎದುರಾದ ತೊಡಕಿನಿಂದ ಬಿಡುಗಡೆ ವಿಳಂಬವಾಗಿದೆ.

ಕವನ ಸಂಕಲನ ಆಹ್ವಾನ

ಬೆಂಗಳೂರು: ಕರಿಬಸವನಗೌಡ ತೂಲಹಳ್ಳಿ ಕಾವ್ಯ ಪುರಸ್ಕಾರಕ್ಕೆ ಕನ್ನಡ ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ. ಕನ್ನಡ ಕವನ ಸಂಕಲನಗಳು ಜನವರಿ 2025ರಿಂದ ಡಿಸೆಂಬರ್ 2025ರೊಳಗೆ ಪ್ರಥಮ ಆವೃತ್ತಿಯಲ್ಲಿ ಪ್ರಕಟವಾಗಿರಬೇಕು. ಯಾವುದೇ ವಯಸ್ಸಿನ ಕವಿಗಳು ತಮ್ಮ ಕವನ ಸಂಕಲಗಳನ್ನು ಕಳುಹಿಸಬಹುದು.

2026ರ ಜುಲೈ 31ರೊಳಗಾಗಿ (ಕೊರಿಯರ್ ಸೌಲಭ್ಯ ಇಲ್ಲದಿರುವುದರಿಂದ) ಅಂಚೆಯ ಮೂಲಕ ಮೂರು ಪ್ರತಿಗಳನ್ನು ಕಳಿಸಬೇಕು. ವಿಜೇತ ಕೃತಿಗಳಿಗೆ 5 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಈ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದಿಲ್ಲ, ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಪ್ರಶಸ್ತಿ ಮೊತ್ತವನ್ನು ಕಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕವನ ಸಂಕಲನಗಳನ್ನು ಕಳುಹಿಸಬೇಕಾದ ವಿಳಾಸ: ಮಲ್ಲಿಕಾರ್ಜುನಗೌಡ ತೂಲಹಳ್ಳಿ 239/2-38, -ಬ್ಲಾಕ್, 1, 1 ಪಟೇಲ್ ನಗರ, ಶಾಮನೂರು. ದಾವಣಗೆರೆ (ಜಿ) 577 004.